ವಿಶ್ವವಾಣಿ
ವಿಶ್ವಾಸವೇ ವಿಶ್ವ

ಖ್ಯಾತ ಬಾಲಿವುಡ್ ಗಾಯಕಿ ಆಶಾ ಭೋಸ್ಲೆಗೆ ಹೃದಯಾಘಾತ

ಖ್ಯಾತ ಬಾಲಿವುಡ್ ಗಾಯಕಿ ಆಶಾ ಭೋಸ್ಲೆ (92) ಅವರಿಗೆ ಶನಿವಾರ ಸಂಜೆ ಹೃದಯಾಘಾತವಾಗಿದ್ದು, ಅವರನ್ನು ತಕ್ಷಣ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅಭಿಮಾನಿಗಳು ಅವರ ಶೀಘ್ರ ಚೇತರಿಕೆಗಾಗಿ ಪ್ರಾರ್ಥಿಸುತ್ತಿದ್ದಾರೆ.

ಸೊಂಪಾದ ಪುಟಗಳು

ನಡೆಯುವಾಗ ನಮ್ಮ ಶೂಲೇಸ್ ತನ್ನಷ್ಟಕ್ಕೆ ಬಿಚ್ಚಿಕೊಳ್ಳುತ್ತದಲ್ಲ, ಏಕೆ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಸ್ವಮೂತ್ರ ಪಾನಿ ಪ್ರಧಾನಿಯಿಂದಾದ ಪ್ರಮಾದಗಳು

ಒಳನೋಟ
ಲೀನಾ ಜೋಶಿ 7

ದಾರಿದೀಪೋಕ್ತಿ

ನಿಮ್ಮ ಸಿಟ್ಟನ್ನು ವ್ಯಕ್ತಪಡಿಸುವ ಬದಲು ಅದನ್ನು ವಿವರಿಸುವುದನ್ನು, ವಿಶ್ಲೇಷಿಸುವುದನ್ನು ರೂಢಿಸಿಕೊಂಡರೆ, ವಾದ ಮಾಡುವ ಬದಲು ಪರಿಹಾರ ಕಂಡು ಹಿಡಿಯುವ ಮಾರ್ಗ ತನ್ನಷ್ಟಕ್ಕೆ ತೆರೆದು ಕೊಳ್ಳುತ್ತದೆ. ನಿಮ್ಮ ಸಿಟ್ಟು ನಿಮಗೆ ಅರ್ಥವಾಗುವಂತಿರಬೇಕು.

ವಕ್ರತುಂಡೋಕ್ತಿ

ನಿಸರ್ಗದಲ್ಲಿ ಏಳು ಬಣ್ಣಗಳಿವೆ ಅಂತಾರೆ. ಆದರೆ ಸೀರೆ ಮತ್ತು ನೇಲ್ ಪಾಲಿಶ್ ಅಂಗಡಿಗೆ ಹೋದಾಗ ಹಾಗೆ ಅನಿಸುವುದಿಲ್ಲ.

ಕಾರ್ಕಳದ ಆಯುಷ್ ಶೆಟ್ಟಿ ಚಿನ್ನದ ಸನಿಹ

ಬೀಜಿಂಗ್: ಇಲ್ಲಿ ನಡೆಯುತ್ತಿರುವ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಹೆಮ್ಮೆ, ಕಾರ್ಕಳದ ಆಯುಷ್ ಶೆಟ್ಟಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಅವರು, ವಿಶ್ವದ ಅಗ್ರಮಾನ್ಯ ಆಟಗಾರ ಥಾಯ್ಲೆಂಡ್‌ನ ಕುನ್ಲಾವುಟ್ ವಿಟಿಡ್ಸಾರ್ನ್ ಅವರನ್ನು ಮಣಿಸಿ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಮೊದಲ ಗೇಮ್‌ನಲ್ಲಿ 10-21ರಿಂದ ಭಾರೀ ಹಿನ್ನಡೆ ಅನುಭವಿಸಿದರೂ ಎದೆಗುಂದದ ಆಯುಷ್, ನಂತರದ ಎರಡು ಗೇಮ್‌ಗಳಲ್ಲಿ 21-19 ಮತ್ತು 21-17 ರಿಂದ ಗೆಲುವು ಸಾಧಿಸಿ ಜಯಭೇರಿ ಬಾರಿಸಿದರು. ಭಾನುವಾರ ಬೆಳಗ್ಗೆ ಭಾರತೀಯ ಕಾಲಮಾನ ಸುಮಾರು 7:30ಗೆ ನಡೆಯಲಿರುವ ಫೈನಲ್ ಹಣಾಹಣಿಯಲ್ಲಿ ಆಯುಷ್ ಶೆಟ್ಟಿ ಅವರು ಚೀನಾದ ಬಲಿಷ್ಠ ಆಟಗಾರ ಶಿಯು ಕ್ವಿ ಅವರನ್ನು ಎದುರಿಸಲಿದ್ದಾರೆ.

ಬೆಂಗಳೂರು, ಮುಂಬೈ ವಂದೇ ಭಾರತ್‌ಗೆ ಅಸ್ತು

ಬೆಂಗಳೂರು: ಬಹುನಿರೀಕ್ಷಿತ ಬೆಂಗಳೂರು ಮತ್ತು ಮುಂಬೈ ನಗರಗಳ ನಡುವೆ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಈ ಸಂಬಂಧ ಬೆಂಗಳೂರಿನ ಸೆಂಟ್ರಲ್ ಕ್ಷೇತ್ರದ ಲೋಕಸಭೆ ಸದಸ್ಯ ಪಿ.ಸಿ. ಮೋಹನ್ ಅವರಿಗೆ ಬರೆದ ಪತ್ರದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಪಾಕ್‌ಗೆ ನೆರವು: ಇಬ್ಬರ ಬಂಧನ

ದೆಹಲಿ: ಉತ್ತರಪ್ರದೇಶ ಉಗ್ರ ನಿಗ್ರಹ ದಳ (ಎಟಿಎಸ್) ಬಿಜನೋರ್‌ನಲ್ಲಿ ಇಬ್ಬರನ್ನು ಬಂಧಿಸಿದೆ. ಪಾಕಿಸ್ತಾನದ ಹ್ಯಾಂಡ್ಲರ್‌ಗಳು ಸಾಮಾಜಿಕ ತಾಣಗಳ ಮೂಲಕ ಭಾರತದಲ್ಲಿ ಉಗ್ರಕೃತ್ಯ ಪ್ರಚೋದಿಸಲು ನಡೆಸುತ್ತಿರುವ ಉಗ್ರ ಜಾಲಕ್ಕೆ ಇವರು ಸಹಾಯಕರಾಗಿದ್ದರು ಎನ್ನಲಾಗಿದೆ. ಬಂಧಿತರನ್ನು ಉವೈದ್ ಮಲಿಕ್, ಜಲಾಲ್ ಹೈದರ್ ಎಂದು ಗುರ್ತಿಸಲಾಗಿದೆ. ಇನ್ನೂ ಇಬ್ಬರ ಬಂಧನಕ್ಕೆ ಬಲೆ ಬೀಸಲಾಗಿದೆ. ಇಂತಹದ್ದೇ ಇನ್ನೊಂದು ಪ್ರಕರಣದಲ್ಲಿ ಇತ್ತೀಚೆಗೆ 11 ಉಗ್ರರ ತಂಡವನ್ನು ದೆಹಲಿ ಮತ್ತು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ. ಇವರು ಪಾಕಿಸ್ತಾನಕ್ಕೆ ಸಿಸಿಟಿವಿ ಮೂಲಕ ಭಾರತೀಯ ಸೇನೆಯ ರಹಸ್ಯ ಮಾಹಿತಿ ರವಾನಿಸುತ್ತಿದ್ದರು.

ಕೈ ಶಾಸಕರ ಮಂತ್ರಿಯಾತ್ರೆ

ಸಂಪುಟ ಪುನಾರಚನೆಯನ್ನು ಮಾಡಿ, ನಮಗೂ ಅವಕಾಶ ಕೊಡಿ
35ಕ್ಕೂ ಅಧಿಕ ಹಿರಿಯ ಶಾಸಕರಿಂದ ಇಂದು, ನಾಳೆ ದೆಹಲಿ ಯಾತ್ರೆ
ನಮಗೂ ಪಟ್ಟ ಬೇಕು: ಕಿರಿಯರಿಂದಲೂ ಹೈಕಮಾಂಡ್‌ಗೆ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಸಭಾ ಉಪಚುನಾವಣೆ ಮುಗಿದು ಫಲಿತಾಂಶಕ್ಕೆ ಕೆಲ ದಿನಗಳಿರುವಂತೆಯೇ ಕಾಂಗ್ರೆಸ್ ಪಕ್ಷದೊಳಗೆ ಮತ್ತೆ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ನಾಯಕತ್ವದ ಬದಲಾವಣೆಯಾಗಬೇಕು ಎಂಬ ಕೂಗಿನ ನಡುವೆಯೇ, ಸಂಪುಟ ಪುನಾರಚನೆಯಾದರೆ ತಮಗೆ ಅವಕಾಶ ನೀಡುವಂತೆ ಕೋರಿ ಕಾಂಗ್ರೆಸ್‌ನ ಹಿರಿಯ ಶಾಸಕರು ದೆಹಲಿ ಯಾತ್ರೆಗೆ ಮುಂದಾಗಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಎರಡೂವರೆ ಮುಗಿದು, 3 ವರ್ಷಕ್ಕೆ ಸನಿಹವಾಗುತ್ತಿದೆ. ಸಂಪುಟ ಪುನಾರಚಿಸಿ 3 ಮತ್ತು 4 ಬಾರಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿರುವ ಹಿರಿಯ ಶಾಸಕರಿಗೆ ಮಂತ್ರಿ ಸ್ಥಾನ ನೀಡಿ ಎಂಬ ಬೇಡಿಕೆಯನ್ನಿಟ್ಟುಕೊಂಡು ಹಿರಿಯ ಶಾಸಕರು ಹೈಕಮಾಂಡ್ ಅನ್ನು ಭಾನುವಾರ ಅಥವಾ ಸೋಮವಾರ ಭೇಟಿಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಕಾಂಗ್ರೆಸ್ ಪಕ್ಷದಲ್ಲಿ ಹಿರಿಯ ಶಾಸಕರಿಗೆ ಅವಕಾಶ ಸಿಕ್ಕಿಲ್ಲ. ಈಗಲಾದರೂ ಕನಿಷ್ಠ 7-8 ಹಿರಿಯ ಶಾಸಕರನ್ನು ಮಂತ್ರಿ ಮಾಡಬೇಕು ಎಂದು ಹೈಕಮಾಂಡ್ ಮುಂದೆ ಹಿರಿಯ ಶಾಸಕರು ಮನವಿ ಮಾಡಲಿದ್ದಾರೆ. ಸುಮಾರು 35ಕ್ಕೂ ಹೆಚ್ಚು ಶಾಸಕರ ನಿಯೋಗ ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾರನ್ನು ಹಿರಿಯ ಶಾಸಕರು ಭೇಟಿ ಮಾಡಿ ಸಂಪುಟ ಪುನಾರಚಿಸಿ, ನಮಗೆ ಸಚಿವ ಸ್ಥಾನ ಕೊಡಿ ಎಂದು ಮನವಿ ಮಾಡಲಿದ್ದಾರೆ ಎನ್ನಲಾಗಿದೆ.

ಬಜೆಟ್ ಅಧಿವೇಶನ ನಡೆಯುತ್ತಿರುವಾಗಲೇ ಕಾಂಗ್ರೆಸ್‌ನ ಹಿರಿಯ ಶಾಸಕರು ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿ ಮಂತ್ರಿ ಸ್ಥಾನ ಬೇಡಿಕೆ ಇಡುವ ಬಗ್ಗೆ ಚರ್ಚೆ ನಡೆಸಿದ್ದರು. ಇದರ ಜತೆಗೆ ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವವರು ಸಹ ಪ್ರತ್ಯೇಕ ಸಭೆ ನಡೆಸಿ ತಮಗೂ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಟ್ಟಿದ್ದರು. ಅಧಿವೇಶನದ ಬಳಿಕ ದೆಹಲಿಗೆ ಹೋಗಲು ನಿರ್ಧರಿಸಿದ್ದರು. ಆದರೆ ಅಧಿವೇಶನ ಸಂದರ್ಭದಲ್ಲೇ ರಾಜ್ಯದ ಎರಡು ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆಯಾಗಿದ್ದರಿಂದ ಈ ಶಾಸಕರುಗಳ ದೆಹಲಿ ಭೇಟಿ ಮುಂದಕ್ಕೆ ಹೋಗಿತ್ತು. ಈಗ ಉಪಚುನಾವಣೆಗಳು ಮುಗಿದಿರುವುದರಿಂದ ಸಚಿವ ಸ್ಥಾನಕ್ಕಾಗಿ ಶಾಸಕರು ದೆಹಲಿ ಭೇಟಿಗೆ ಮುಂದಾಗಿದ್ದಾರೆ. ಹೀಗಿದ್ದರೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯಾಗಲಿ ಹಾಗೂ ರಾಹುಲ್ ಗಾಂಧಿ ತಮ್ಮ ಕೆಲಸಗಳಲ್ಲಿ ತಲ್ಲೀನರಾಗಿದ್ದು, ಭೇಟಿಗೆ ನಿಗದಿತ ಸಮಯ ನೀಡಿಲ್ಲ ಎಂದು ತಿಳಿದು ಬಂದಿದೆ.

ಏನಿದು ಬೆಳವಣಿಗೆ?

- ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು 3 ವರ್ಷ ಸಮೀಪಿಸುತ್ತಿದೆ. ನಮಗೂ ಅವಕಾಶ ಬೇಕು
- 3,4 ಬಾರಿ ಚುನಾವಣೆ ಗೆದ್ದಿರುವ ಹಿರಿಯ ಶಾಸಕರ ಆಗ್ರಹ, ಹೈಕಮಾಂಡ್ ಭೇಟಿಯಾಗಲು ಸಿದ್ಧತೆ
- 35 ಮಂದಿ ಪೈಕಿ 7-8 ಮಂದಿಗಾದರೂ ಅವಕಾಶ ಕೊಡಿ, ಯಾರನ್ನು ತೆಗೆಯಬೇಕೆಂದು ನೀವೇ ನಿರ್ಧರಿಸಿ
- ರಾಹುಲ್, ಸೋನಿಯಾ, ಖರ್ಗೆ, ಸುರ್ಜೇವಾಲ, ವೇಣುಗೋಪಾಲ್‌ಗೆ ಹಿರಿಯ ಶಾಸಕರಿಂದ ಮನವಿ

ಬಜೆಟ್ ವೇಳೆಯೇ ನಿರ್ಧಾರ: ಟಿಬಿಜೆ

ಹಿರಿಯ ಶಾಸಕರ ದೆಹಲಿ ಭೇಟಿ ಬಗ್ಗೆ ಮಾಹಿತಿ ನೀಡಿದ ಶಾಸಕ ಟಿ.ಬಿ.ಜಯಚಂದ್ರ ಅವರು, ಯಾರ ನೇತೃತ್ವದಲ್ಲೂ ನಾವು ದೆಹಲಿಗೆ ಹೋಗುತ್ತಿಲ್ಲ. ಬಜೆಟ್ ಅಧಿವೇಶನ ನಡೆಯುವಾಗಲೇ ಹಿರಿಯ ಶಾಸಕರು ಸೇರಿ ಚರ್ಚೆ ಮಾಡಿದ್ದೆವು. ವರಿಷ್ಠರನ್ನು ಭೇಟಿ ಮಾಡಿ ಅವರ ಗಮನಕ್ಕೆ ಕೆಲ ವಿಚಾರ ತರಬೇಕು ಎಂದು ತೀರ್ಮಾನಿಸಿದ್ದೆವು. ಉಪಚುನಾವಣೆ ಹಿನ್ನೆಲೆಯಲ್ಲಿ ಅದು ಮುಂದೂಡಿಕೆಯಾಗಿತ್ತು. ಭಾನುವಾರ ಇಲ್ಲವೇ ಸೋಮವಾರ ಸಾಮೂಹಿಕವಾಗಿ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡುತ್ತೇವೆ. ಮುಂದಿನ ಸಂಪುಟ ಪುನಾರಚನೆ ವೇಳೆ ನಮ್ಮನ್ನು ಪರಿಗಣಿಸಬೇಕು ಎಂದು ಮನವಿ ಮಾಡುತ್ತೇವೆ ಎಂದು ತಿಳಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುತ್ತೇವೆ. ಎಷ್ಟು ಜನರಿಗೆ ಸಂಪುಟದಲ್ಲಿ ಅವಕಾಶ ಸಿಗುತ್ತದೋ ಗೊತ್ತಿಲ್ಲ. ಆದರೆ ನಾವು 40 ಶಾಸಕರು ದೆಹಲಿಗೆ ಹೋಗುತ್ತೇವೆ. ಅನುಭವಿಗಳಿಗೆ ಅವಕಾಶ ಕೊಡಿ ಎಂದು ಕೇಳುತ್ತೇವೆ. ಇಂಥವರನ್ನು ಸಚಿವ ಸ್ಥಾನದಿಂದ ಕೈ ಬಿಡಿ ಎಂದು ಹೇಳುವುದಿಲ್ಲ. ಹೈಕಮಾಂಡ್ ಎಲ್ಲವನ್ನು ತೀರ್ಮಾನಿಸುತ್ತದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರದ ಬಗ್ಗೆ ಚರ್ಚಿಸಲು ನಾವು ದೆಹಲಿಗೆ ಹೋಗುತ್ತಿಲ್ಲ. ಹೈಕಮಾಂಡ್ ಜತೆ ಮಾತನಾಡುವಾಗ ಏನೆಲ್ಲಾ ಚರ್ಚೆ, ಪ್ರಶ್ನೆ, ಉದ್ಭವಿಸುತ್ತದೋ ಅದನ್ನು ನೋಡಿಕೊಂಡು ಮಾತನಾಡುತ್ತೇವೆ ಎಂದು ಜಯಚಂದ್ರ ಹೇಳಿದ್ದಾರೆ.

ಉಪಚುನಾವಣೆ ಬೇಗೆ ಕಾಂಗ್ರೆಸ್ ಹುದ್ದೆಗೆ ಜಬ್ಬಾರ್ ವಿದಾಯ

ಮತದಾನ ಮುಗಿದ ಬೆನ್ನಲ್ಲೇ ಕಾಂಗ್ರೆಸ್‌ನಲ್ಲಿ ಭಿನ್ನಮತ
ಅಲ್ಪಸಂಖ್ಯಾತ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ
ಭಿನ್ನಮತದಿಂದ ದಾವಣಗೆರೆಯಲ್ಲಿ ಪಕ್ಷಕ್ಕೆ ಸೋಲುವ ಭೀತಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉಪಚುನಾವಣೆಯ ಮುಗಿದ ಬೆನ್ನಲ್ಲೇ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಭಿನ್ನಮತ ಸ್ಫೋಟಗೊಂಡಿದೆ. ಪಕ್ಷದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ರಾಜೀನಾಮೆ ಸಲ್ಲಿಸಿದ್ದಾರೆ. ಇದೇ ವೇಳೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮತ್ತೋರ್ವ ನಾಯಕರಿಗೆ ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ಸೂಚಿಸಿದೆ ಎಂದು ಮೂಲಗಳು ಹೇಳಿವೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅಬ್ದುಲ್ ಜಬ್ಬಾರ್, ಒಂದೇ ಮನೆಗೆ ಸೇರಿದ ನಾಲ್ವರಿಗೆ ಟಿಕೆಟ್ ನೀಡಲಾಗಿದೆ. ಅದನ್ನು ಪ್ರಶ್ನಿಸಿದ್ದೇ ತಪ್ಪಾ? ನನ್ನಿಂದ ಅಂತಹ ತಪ್ಪು ಏನಾಗಿದೆ ಎಂದು ಕೇಳಿದ್ದಾರೆ.

ಉಪಚುನಾವಣಾ ಸಂದರ್ಭದಲ್ಲಿ ಪಕ್ಷದ ಆಂತರಿಕ ಬೆಳವಣಿಗೆಗಳು ಮತ್ತು ನಾಯಕರ ನಡುವಿನ ಮುನಿಸು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಅಡ್ಡಿಯಾಗಬಹುದು ಎಂದು ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ವರದಿ ನೀಡಿದ್ದರು. ಈ ವರದಿ ಬಂದ ಬೆನ್ನಲ್ಲೇ ಕಾಂಗ್ರೆಸ್ ಹೈಕಮಾಂಡ್ ಕಠಿಣ ಕ್ರಮಕ್ಕೆ ಮುಂದಾಗಿದೆ. ತನ್ನನ್ನು ಅಮಾನತು ಮಾಡುತ್ತಾರೆ ಎಂಬ ಸೂಚನೆ ಸಿಗುತ್ತಿದ್ದಂತೆಯೇ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮತ್ತು ಎಂಎಲ್‌ಸಿ ಅಬ್ದುಲ್ ಜಬ್ಬಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದಲ್ಲದೆ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಅಲ್ಪಸಂಖ್ಯಾತ ಶಾಸಕರಿಂದ ದೂರು ದಾಖಲಾದ ಹಿನ್ನೆಲೆಯಲ್ಲಿ ಶಿಸ್ತುಕ್ರಮದ ಭೀತಿ ಎದುರಾಗಿದೆ. ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿರುವ ನಡುವೆಯೇ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಖಾನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚನೆ ನೀಡಿದೆ ಎನ್ನಲಾಗಿದೆ. ಹೈಕಮಾಂಡ್ ಸೂಚನೆ ಮೇರೆಗೆ ಶೀಘ್ರದಲ್ಲೇ ನಜೀರ್ ಅವರು ಸಿಎಂ ಸಿದ್ದರಾಮಯ್ಯಗೆ ರಾಜೀನಾಮೆ ಸಲ್ಲಿಸಲಿದ್ದಾರೆ ಎನ್ನಲಾಗಿದೆ. → 4

ಸಚಿವ ಸ್ಥಾನ ಕೊಡಿ ಎಂದಿಲ್ಲ: ಜಬ್ಬಾರ್

ಏಪ್ರಿಲ್ 3ರಂದೇ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವೆ. ಪಕ್ಷದ ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಂಡರೂ ಅದಕ್ಕೆ ಬದ್ಧ. ನನ್ನಿಂದ ಅಂತಹ ತಪ್ಪು ಏನಾಗಿದೆ ಎಂದು ಗೊತ್ತಿಲ್ಲ ಎಂದು ಅಬ್ದುಲ್ ಜಬ್ಬಾರ್ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷ ಬಿಟ್ಟು ನಾನು ಬೇರೆ ಪಕ್ಷದ ಕಡೆ ಯೋಚನೆ ಮಾಡಲ್ಲ. ಕೆಲವರು ಸಚಿವ ಸ್ಥಾನಕ್ಕಾಗಿಯೇ ಒಡಕು ಮೂಡಿಸುತ್ತಿದ್ದಾರೆ. ನನಗೆ ಸಚಿವ ಸ್ಥಾನ ಕೊಡಿ ಅಂತಾ ಕೇಳಿಲ್ಲ. ಅಲ್ಪಸಂಖ್ಯಾತರಿಗೆ ಸಚಿವ ಸ್ಥಾನ ಕೊಡಿ ಎಂದು ಪತ್ರ ಬರೆದಿದ್ದೇವೆ ಎಂದು ಜಬ್ಬಾರ್ ಹೇಳಿದ್ದಾರೆ.

ಜೆಡಿಎಸ್ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಕಾರ್ಯಕ್ರಮವನ್ನು ಕೇಂದ್ರ ರಾಜ್ಯ ಸಚಿವ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಇದ್ದರು.

ಜೆಡಿಎಸ್ ಜನತಾ ಸಮಾವೇಶ, ಬೆಳ್ಳಿಹಬ್ಬದಲ್ಲಿ ಮಾಜಿ ಪ್ರಧಾನಿ
ಸಿದ್ದು ವಿರುದ್ಧ ಸಿಡಿದ ದೇವೇಗೌಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಸಾಮಾಜಿಕ ನ್ಯಾಯವನ್ನು ವ್ಯವಸ್ಥಿತವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ. ನಿಜವಾಗಿ ಸಾಮಾಜಿಕ ನ್ಯಾಯದ ಪರ ಇದ್ದಾರೆಯೇ ಇಲ್ಲವೇ ಎಂಬುದನ್ನು ಅವರು ತಮ್ಮ ಆತ್ಮಕ್ಕೆ ಪ್ರಶ್ನಿಸಿಕೊಳ್ಳಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಬೆಂಗಳೂರಿನ ಕೊಮ್ಮಘಟ್ಟದ ನೈಸ್ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಜೆಡಿಎಸ್ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಹಿಂದ ನಾಯಕರು ಕುಮಾರಸ್ವಾಮಿ ಅವರ ಸರಕಾರ ತೆಗೆದರು. ಹಾಗೆಯೇ ನಮ್ಮ ಪಕ್ಷ ಮುಗಿಸುವ ವ್ಯವಸ್ಥಿತ ಹುನ್ನಾರವನ್ನೂ ನಡೆಸಿದರು. ಇಂತಹ ಶಕ್ತಿಗಳಿಗೆ ಪಾಠ ಕಲಿಸಲೇ ಬೇಕೆಂದು ನಿರ್ಧರಿಸಿ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳಲು ಕುಮಾರಸ್ವಾಮಿಗೆ ನಾನೇ ಅನುಮತಿ ಕೊಟ್ಟೆ ಎಂದಿದ್ದಾರೆ. ಒಮ್ಮೆ ಜೆಡಿಎಸ್‌ಗೆ ಪೂರ್ಣ ಅಧಿಕಾರ ಕೊಡಿ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ವಿವರ ಪುಟ → 4

15 ಜಿಲ್ಲೆಗಳ ಸರಕಾರಿ ಶಾಲೆಗಳಲ್ಲಿ ಪ್ರಾಯೋಗಿಕ ಪರೀಕ್ಷೆ
ಈ ವರ್ಷವೇ ದ್ವಿಭಾಷಾ ನೀತಿ ಜಾರಿ

ಬೆಂಗಳೂರು: ಸರಕಾರಿ ಶಾಲಾ ಮಕ್ಕಳನ್ನು ಜಾಗತಿಕವಾಗಿ ಸಜ್ಜುಗೊಳಿಸಲು ರಾಜ್ಯ ಸರಕಾರ ಸಜ್ಜಾಗಿದೆ. ಈ ಸಂಬಂಧ 2026-27ನೇ ಸಾಲಿನಲ್ಲಿ ರಾಜ್ಯದ 15 ಜಿಲ್ಲೆಗಳ ಎಲ್ಲ ಸರಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ನೀತಿ ಆರಂಭಿಸಲು ಸಿದ್ಧತೆ ನಡೆಸಿದೆ. ಎಲ್ಲ ಸರಕಾರಿ ಶಾಲೆಗಳ ಪ್ರಾಥಮಿಕ ಶಾಲಾ ಶಿಕ್ಷಕರು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿ ನಡೆಸಲಿದ್ದಾರೆ. ಈ ಮೂಲಕ ರಾಜ್ಯ ಸರಕಾರ ಅಧಿಕೃತವಾಗಿ ದ್ವಿಭಾಷಾ ನೀತಿ ಯತ್ತ ಹೆಜ್ಜೆಯಿಟ್ಟಿದೆ ಎಂದು ವಿಶ್ಲೇಷಿಸಲಾಗಿದೆ.ಇತ್ತೀಚೆಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಿಂದ ಹಿಂದಿ ಭಾಷೆ ಅಂಕಗಳನ್ನು ಕೈಬಿಡುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಿಸಿದ್ದರು. → 4

ನೀತಿ ಮತ್ತು ಆತಂಕ

- ಈಗಾಗಲೇ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಿಂದ ಹಿಂದಿ ಅಂಕ ಕೈಬಿಡುವುದಾಗಿ ರಾಜ್ಯ ಸರಕಾರ ತೀರ್ಮಾನ
- ಪೋಷಕರು, ಮಕ್ಕಳು ಸಿಟ್ಟಾಗಿರುವಾಗಲೇ, ತ್ರಿಭಾಷಾ ಸೂತ್ರ ಕೈಬಿಡಲು ಹೆಜ್ಜೆಯಿಟ್ಟ ಸರಕಾರ
- 3ನೇ ಭಾಷೆಗಿಲ್ಲ ಅವಕಾಶ. ಕನ್ನಡ, ಇಂಗ್ಲಿಷ್ ಭಾಷೆಗಳಿಗೆ ಸ್ಥಾನ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಪಾಠದ ತರಬೇತಿ ಕೊಡಲು ಆರಂಭ
- ಹಿಂದಿ ದೂರವಿಡಲು ಲೆಕ್ಕಾಚಾರ, ಆದರೆ ಇದು ಕನ್ನಡ ಭಾಷೆಗೂ ಮಾರಕ, ಮಕ್ಕಳು ಕನ್ನಡವನ್ನೇ ತೃತೀಯ ಭಾಷೆ ಮಾಡಿಕೊಳ್ಳಬಹುದು: ತಜ್ಞರು

ಚಂದ್ರನಿಂದ ಭೂಮಿಗೆ ಬಂದ ಆರ್ಟೆಮಿಸ್ 2

ವಾಷಿಂಗ್ಟನ್: ಸುಮಾರು ಅರ್ಧಶತಮಾನದ ನಂತರ ಕೈಗೊಳ್ಳಲಾಗಿದ್ದ ಮೊಟ್ಟಮೊದಲ ಮಾನವಸಹಿತ ಚಂದ್ರಯಾನವನ್ನು ಯಶಸ್ವಿಯಾಗಿ ಮುಗಿಸಿದ 'ಆರ್ಟೆಮಿಸ್ 2' ಗಗನಯಾತ್ರಿಗಳು ಶುಕ್ರವಾರದಂದು ಶಾಂತಸಮುದ್ರಕ್ಕೆ (ಪೆಸಿಫಿಕ್ ಮಹಾಸಾಗರ) ಬಂದಿಳಿದಿದ್ದಾರೆ. ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೊ ಕರಾವಳಿ ಪ್ರಾಂತ್ಯದ ಶಾಂತಸಾಗರದಲ್ಲಿ ಸ್ಥಳೀಯ ಕಾಲಮಾನ ಸಂಜೆ 5:07ಕ್ಕೆ ಆರ್ಟೆಮಿಸ್ 2 ಆಕಾಶಕಾಯದ ಓರಿಯಾನ್ ಕ್ಯಾಪ್ಸೂಲ್ ಬಂದಿಳಿಯಿತು. ಅದರಲ್ಲಿ, ಕಮಾಂಡರ್ ರೀಡ್ ವೈಸ್‌ಮನ್, ಪೈಲಟ್ ವಿಕ್ಟರ್ ಗೋವರ್, ಕ್ರಿಸ್ಟಿನಾ ಕೋಚ್, ಕೆನಡಾದ ಜೆರೆಮಿ ಹ್ಯಾನ್ಸೆನ್‌ರನ್ನು ಹೊರಕ್ಕೆ ಕರೆತರಲಾಯಿತು.

- ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೊ ಬಳಿಯ ಪೆಸಿಫಿಕ್ ಸಮುದ್ರದಲ್ಲಿ ಸುರಕ್ಷಿತ ಇಳಿಕೆ
- 3 ದೈತ್ಯ ಪ್ಯಾರಾಚೂಟ್ ಮೂಲಕ ಶಾಂತಸಮುದ್ರದಲ್ಲಿ ಸ್ಪ್ಲಾಷ್‌ಡೌನ್
- 10 ದಿನಗಳ ಪ್ರಯಾಣ; 4 ಲಕ್ಷ ಕಿ.ಮೀ. ಕ್ರಮಿಸಿ ಬಂದ ಯಾತ್ರಿಗಳು

ಕರ್ನಾಟಕ ಪತ್ರಕರ್ತರ ಸಂಘದ 40ನೇ ಸಮ್ಮೇಳನ
ಊಹಾ ಪತ್ರಿಕೋದ್ಯಮ ಅಪಾಯಕಾರಿ: ಸಿಎಂ

ಬೀದರ್: ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೀವಾ ಎಂದು ಪತ್ರಕರ್ತರು ತಮ್ಮನ್ನು ತಾವು ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಊಹಾ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು ಎಂದರು. ಹಾರಕುಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಸಾನ್ನಿಧ್ಯ ವಹಿಸಿದ್ದರು. ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ, ಶರಣ ಪ್ರಕಾಶ್ ಪಾಟೀಲ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಪಾಲ್ಗೊಂಡಿದ್ದರು. ವಿವರ ಪುಟ → 5

ಇಸ್ಲಾಮಾಬಾದ್‌ನಲ್ಲಿ ಕದನವಿರಾಮ ಮಾತುಕತೆ ಶುರು | ತನ್ನ ನಿಧಿಗಳ ಮೇಲಿನ ನಿರ್ಬಂಧ ತೆರವು ಮಾಡಿ: ಇರಾನ್ ಪಟ್ಟು
ಈ ನಡುವೆ ಹೊರ್ಮುಜ್ ದಾಟಲು ಹೋದ ಅಮೆರಿಕ ಸೇನಾ ನೌಕೆಗೆ ಇರಾನ್‌ನಿಂದ ದಾಳಿಯ ಎಚ್ಚರಿಕೆ, ನೌಕೆ ದಿಢೀರ್ ವಾಪಸ್
ನಾನು ಕೊಡಲ್ಲ, ಬಿಡಲ್ಲಗಳ ಮಧ್ಯೆ ಅಮೆರಿಕ-ಇರಾನ್ ಮಾತುಕತೆ

ಷರತ್ತುಗಳೇನು?

1. ಲೆಬನಾನ್‌ನಲ್ಲಿ ಕದನ ವಿರಾಮಕ್ಕೆ ಇರಾನ್ ಆಗ್ರಹ. ಮಾರ್ಚ್‌ನಲ್ಲಿ ಸಂಘರ್ಷ ಪ್ರಾರಂಭವಾದಾಗಿನಿಂದ ಇರಾನ್ ಬೆಂಬಲಿತ ಹೆಜ್ಬುಲ್ಲಾ ಬಂಡುಕೋರರ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸುಮಾರು 2,000 ಜನರು ಮೃತ
2. ತನ್ನ ಮೇಲಿನ ಆರ್ಥಿಕ ನಿರ್ಬಂಧವನ್ನು ತೆರವು ಮಾಡಲು ಇರಾನ್ ಒತ್ತಾಯ. ಇರಾನ್ ತನ್ನ ಪರಮಾಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳಿಂದ ಹಿಂದೆ ಸರಿಯಲು ಅಮೆರಿಕ ಆಗ್ರಹ
3. ಹೊರ್ಮುಜ್ ಜಲಸಂಧಿಯ ಮೇಲೆ ತನ್ನ ಅಧಿಕಾರವನ್ನು ಒಪ್ಪಿಕೊಳ್ಳಬೇಕೆಂದು ಇರಾನ್ ಬಯಕೆ. ಅಲ್ಲಿ ಶುಲ್ಕ ಸಂಗ್ರಹ, ಪ್ರವೇಶ ನಿಯಂತ್ರಣ ಅದರ ಉದ್ದೇಶ. ಸುಂಕ ಮುಕ್ತವಾಗಿ ಹಡಗು ಸಂಚಾರಕ್ಕೆ ಅವಕಾಶ ನೀಡಬೇಕೆಂದು ಅಮೆರಿಕ ಬೇಡಿಕೆ
4. ಆರು ವಾರಗಳ ಯುದ್ಧದಲ್ಲಿ ಉಂಟಾದ ಎಲ್ಲಾ ಹಾನಿಗಳಿಗೆ ಇರಾನ್‌ನಿಂದ ಪರಿಹಾರಕ್ಕೆ ಆಗ್ರಹ. ಅಮೆರಿಕದಿಂದ ಪ್ರತಿಕ್ರಿಯೆ ಇಲ್ಲ
5. ಯುರೇನಿಯಂ ಗುಣಮಟ್ಟ ವೃದ್ಧಿಸುತ್ತೇವೆ, ಇದಕ್ಕೆ ವಿರೋಧ ಬೇಡ: ಇರಾನ್. ಅಮೆರಿಕದಿಂದ ಇದಕ್ಕೆ ಪ್ರಬಲ ವಿರೋಧ
6. ತನ್ನ ಪಕ್ಕದ ರಾಷ್ಟ್ರಗಳಲ್ಲಿ ಅಮೆರಿಕ ನಿಯೋಜಿಸಿರುವ ಸೈನ್ಯವನ್ನು ಹಿಂಪಡೆಯಬೇಕು ಎಂದು ಇರಾನ್ ಪಟ್ಟು, ಇದಕ್ಕೆ ಅಮೆರಿಕ ಒಪ್ಪುವುದು ಅಸಾಧ್ಯ

ಇಸ್ಲಾಮಾಬಾದ್: ಹತ್ತಾರು ಗೊಂದಲಗಳ ನಡುವೆಯೇ ಅಮೆರಿಕ-ಇರಾನ್ ನಡುವೆ ಶಾಂತಿ ಮಾತುಕತೆ ಶನಿವಾರ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಆರಂಭವಾಗಿದೆ. ಹತ್ತಾರು ಷರತ್ತುಗಳನ್ನು ಹಾಕಿ ಎರಡೂ ದೇಶಗಳು ಮಾತುಕತೆಗೆ ಕೂತಿವೆ. ಇರಾನ್ ಬಗ್ಗದಿದ್ದರೆ ಬಲವಾದ ದಾಳಿ ನಡೆಸುವುದಾಗಿ ಅಮೆರಿಕ ಬೆದರಿಸುತ್ತಲೇ ಮಾತುಕತೆ ನಡೆಸುತ್ತಿದೆ. ಅಮೆರಿಕ ಮತ್ತು ಇರಾನ್ ಎರಡೂ ಪಾಕಿಸ್ತಾನಕ್ಕೆ ಅನಿವಾರ್ಯ ದೇಶಗಳಾಗಿರುವುದರಿಂದ, ಅದು ಈ ವಿಚಾರದಲ್ಲಿ ಬಹಳ ಆಸ್ಥೆ ವಹಿಸಿ ಮಧ್ಯಸ್ಥಿಕೆಗೆ ಮುಂದಾಗಿದೆ. ಇಡೀ ಇಸ್ಲಾಮಾಬಾದ್‌ಗೆ 2 ದಿನ ರಜೆ ಘೋಷಿಸಲಾಗಿದೆ. ಅದು ಕೋಟೆಯಂತೆ ಬದಲಾಗಿದೆ.

ಶನಿವಾರ ಮಾತುಕತೆ 5 ಗಂಟೆ ತಡವಾಗಿ ಆರಂಭವಾಗಿದೆ. ಬಹಳ ಪ್ರಗತಿ ಕಂಡುಬಂದಿಲ್ಲ ಎಂದು ಮೂಲಗಳು ಹೇಳಿವೆ. ಇತ್ತ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ಆರಂಭವಾಗುತ್ತಿದ್ದಂತೆ ಅಮೆರಿಕದ ಸೇನಾ ಹಡಗೊಂದು ಹೊರ್ಮುಜ್ ಜಲಸಂಧಿಯನ್ನು ದಾಟಲು ಮುಂದಾಗಿತ್ತು. ಈ ಸಾಹಸಕ್ಕೆ ಮುಂದಾದರೆ ಅರ್ಧಗಂಟೆಯಲ್ಲಿ ನೌಕೆಯನ್ನು ಹೊಡೆದುಹಾಕುವುದಾಗಿ ಇರಾನ್ ಎಚ್ಚರಿಕೆ ನೀಡಿತು. ಕೂಡಲೇ ಅಮೆರಿಕದ ಹಡಗು ವಾಪಸಾಗಿದೆ. ಮಾತುಕತೆ ವೇಳೆ ಕತಾರ್ ಮತ್ತು ಇತರೆ ದೇಶ ಗಳಲ್ಲಿರುವ ಇರಾನ್‌ನ ಆಸ್ತಿ ಮತ್ತು ನಿಧಿಗಳ ಮೇಲಿನ ನಿರ್ಬಂಧವನ್ನು ತೆರವುಗೊಳಿಸಲು ಅಮೆರಿಕ ಒಪ್ಪಿಕೊಂಡಿದೆ ಎಂದು ಮೂಲಗಳು ವರದಿ ಮಾಡಿದೆ. ಆದರೆ ಇದನ್ನು ಅಮೆರಿಕ ನಿರಾಕರಿಸಿದೆ. ಹೊರ್ಮುಜ್ ಅನ್ನು ತೆರವು ಗೊಳಿಸುವುದೇ ಮಾತುಕತೆಯ ಕೇಂದ್ರವಾಗಿದೆ. ಅದಕ್ಕೆ ಬದಲಿಯಾಗಿ ಇತರೆ ದೇಶಗಳಲ್ಲಿರುವ ಇರಾನ್‌ನ ಆಸ್ತಿಯನ್ನು ಬಳಕೆಗೆ ಮುಕ್ತಗೊಳಿಸಲು ಅಮೆರಿಕ ಸಿದ್ಧವಾಗಿದೆ ಎನ್ನಲಾಗಿದೆ. → 4

ಹೊರ್ಮುಜ್‌ನಲ್ಲೇ ಸಿಲುಕಿವೆ ಇನ್ನೂ 3200 ಹಡಗುಗಳು

ಇರಾನ್‌ನ ಹೊರ್ಮುಜ್ ಜಲಸಂಧಿಯಲ್ಲಿ ವಿಶ್ವದ ವಿವಿಧ ದೇಶಗಳಿಗೆ ಸೇರಿದ 3200 ಹಡಗುಗಳು ಸಿಲುಕಿಕೊಂಡಿವೆ. 2000ಕ್ಕೂ ಅಧಿಕ ಸಿಬ್ಬಂದಿ ಈ ನೌಕೆಗಳಲ್ಲಿದ್ದಾರೆ. 800ಕ್ಕೂ ಅಧಿಕ ಟ್ಯಾಂಕರ್‌ಗಳು ಹತಾಶ ಸ್ಥಿತಿಯಲ್ಲಿವೆ. ಕದನವಿರಾಮವಿದ್ದರೂ ಹಡಗುಗಳ ಸಂಚಾರ ಸುಗಮವಾಗಿ ಸಾಗಿಲ್ಲ.

ಏ.14ಕ್ಕೆ ಇಸ್ರೇಲ್ ಜತೆ ಮಾತುಕತೆ: ಲೆಬನಾನ್ ಅಧ್ಯಕ್ಷ

ಏ.14ರಂದು ಲೆಬನಾನ್ ಹಾಗೂ ಇಸ್ರೇಲ್ ನೇರ ಮಾತುಕತೆ ನಡೆಸಲಿವೆ ಎಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹೇಳಿಕೆ ನೀಡಿದ್ದಾರೆ. ಅಮೆರಿಕದೊಂದಿಗೆ ಲೆಬನಾನ್ ಔನ್ ಮಾತುಕತೆ ನಡೆಸಿದ ಬಳಿಕ ಈ ಹೇಳಿಕೆ ಹೊರಬಿದ್ದಿದೆ. ಇಸ್ರೇಲ್ ಹಾಗೂ ಹೆಜ್ಬುಲ್ಲಾ ಬಂಡುಕೋರರ ನಡುವೆ ಯುದ್ಧ ಕೊನೆಗಾಣಿಸುವ ನಿಟ್ಟಿನಲ್ಲಿ ಬೈರೂತ್ ನೇರ ಮಾತುಕತೆಗೆ ಮುಂದಾಗಿದೆ.

ಮೊಜ್ತಬಾ ಮುಖವಿರೂಪ

ಇರಾನ್ ಮೇಲೆ ನಡೆಸಿದ ಅಮೆರಿಕ-ಇಸ್ರೇಲ್ ಜಂಟಿ ಕ್ಷಿಪಣಿ ದಾಳಿಯಲ್ಲಿ ಇರಾನ್ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಗಾಯಗಳಿಂದ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಆದರೆ, ಸುಟ್ಟ ಗಾಯಗಳಿಂದಾಗಿ ಅವರ ಮುಖ ವಿರೂಪಗೊಂಡಿದೆ, ಅವರು ಚಿಕಿತ್ಸೆ ಪಡೆಯುತ್ತಿದ್ದಾರೆನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಕ್ಯಾಬ್ ಚಾಲಕನಿಗೆ ಮಹಿಳೆಯಿಂದ ಕಿರಿಕ್

ಬೆಂಗಳೂರು: ವೈಟ್‌ಫೀಲ್ಡ್ ಬಳಿ ಕ್ಯಾಬ್ ಚಾಲಕ ಮತ್ತು ಮಹಿಳೆ ನಡುವೆ ತೀವ್ರ ವಾಗ್ವಾದ ನಡೆದಿರುವ ಘಟನೆ ಬೆಳಕಿಗೆ ಬಂದಿದೆ. ಕ್ಯಾಬ್ ಬುಕ್ ಮಾಡಿದ ಬಳಿಕ ಮಹಿಳೆ ಚಾಲಕನನ್ನು ಅರ್ಧ ಗಂಟೆ ಕಾಯಿಸಿರುವ ಆರೋಪ ಕೇಳಿ ಬಂದಿದೆ. ಚಾಲಕ ಹೇಳುವ ಪ್ರಕಾರ, ಮಹಿಳೆಗೆ ಮೂರು ಬಾರಿ ಕರೆ ಮಾಡಿದ್ದರೂ ಬರುತ್ತಿದ್ದೇನೆ, ಬರುತ್ತಿದ್ದೇನೆ ಎಂದು ಹೇಳಿ ಸುಮಾರು ಅರ್ಧಗಂಟೆ ಕಾಯಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಮಹಿಳೆ ಕೂಡ ಚಾಲಕನ ಮೇಲೆ ಆರೋಪ ಮಾಡಿದ್ದು, ಅರ್ಧಗಂಟೆ ಲೇಟ್ ಎಂದ ಕಾರಣಕ್ಕೆ ನಿಮ್ಮ ಜತೆ ಪ್ರಯಾಣ ಮಾಡುವುದು ಸೇಫ್ ಅಲ್ಲ ಎಂದು ಹೇಳಿದ್ದಾರೆ. ಇಬ್ಬರೂ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿಕೊಳ್ಳುತ್ತಾ ಟಾಕ್ ವಾರ್ ನಡೆದಿದ್ದು, ಕ್ಯಾಬ್ ಕ್ಯಾನ್ಸಲ್ ಮಾಡದೇ ಅನಗತ್ಯವಾಗಿ ಕಾಯಿಸಿ ಕಿರಿಕ್ ಮಾಡಿದರೆಂದು ಚಾಲಕ ಆರೋಪಿಸಿದ್ದಾರೆ.

ಪಿಗ್ಮಿ ಏಜೆಂಟ್‌ಗಳ ವೇತನಕ್ಕೆ ಜಿಎಸ್‌ಟಿ ಅನ್ವಯವಾಗದು

ಬೆಂಗಳೂರು: ಪಿಗ್ಮಿ ಏಜೆಂಟ್‌ಗಳು (ಬ್ಯಾಂಕ್‌ನ ಠೇವಣಿ ಸಂಗ್ರಹಕಾರರು) ಬ್ಯಾಂಕಿನ ನೌಕರರೇ ಆಗಿದ್ದು, ಅವರಿಗೆ ನೀಡುವ ಸಂಬಳಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಲಾಗುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.



ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತರು ನೀಡಿದ್ದ ಶೋಕಾಸ್ ಪ್ರಶ್ನಿಸಿ ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಶೋಕಾಸ್ ನೋಟಿಸ್ ರದ್ದುಪಡಿಸಿ ಆದೇಶಿಸಿದೆ.

ಪಿಗ್ಮಿ ಏಜೆಂಟ್‌ಗಳ ಕಾರ್ಯ ವೈಖರಿಯ ಮೇಲೆ ಬ್ಯಾಂಕ್‌ಗಳು ಸಂಪೂರ್ಣ ನಿಯಂತ್ರಣ ಹೊಂದಿರುತ್ತವೆ. ಏಜೆಂಟ್‌ಗಳು ತಮ್ಮ ಭದ್ರತಾ ಠೇವಣಿಗಳನ್ನು ಬ್ಯಾಂಕ್‌ನಲ್ಲಿಡಬೇಕಾಗುತ್ತದೆ. ಜತೆಗೆ, ಕನಿಷ್ಠ ಸಂಬಳ ನೀಡುವ ಭರವಸೆಯಿರಲಿದೆ. ಗ್ರ್ಯಾಚ್ಯುಟಿಯಂತಹ ಹಲವು ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ಇವೆಲ್ಲವೂ ನೌಕರರಿಗೆ ಇರುವ ಲಕ್ಷಣಗಳೇ ಆಗಿವೆ ವಿನಃ ಗುತ್ತಿಗೆದಾರರಾಗಿರುವ ಸೂಚನೆಗಳಲ್ಲ ಎಂದು ಪೀಠ ಹೇಳಿದೆ.

ಪಿಗ್ಮಿ ಏಜೆಂಟ್‌ಗಳು ನೀಡುವ ಸೇವೆ ಉದ್ಯೋಗ ಸಂಬಂಧಿತವಾಗಿರಲಿವೆ. ಜಿಎಸ್‌ಟಿ ಕಾಯ್ದೆಯ ಶೆಡ್ಯೂಲ್-3 ಅಡಿಯಲ್ಲಿ ತೆರಿಗೆ ವಿನಾಯಿತಿ ಇರಲಿದೆ. ಆದ್ದರಿಂದ ಅವರ ಸೇವೆಗೆ ಜಿಎಸ್‌ಟಿ ವಿಧಿಸಲಾಗುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪಿಗ್ಮಿ ಏಜೆಂಟ್‌ಗಳು ಬ್ಯಾಂಕ್‌ನ ನಿಯಂತ್ರಣ, ಶಿಸ್ತು ಮತ್ತು ಆಡಳಿತ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಾರೆ. ಅವರಿಗೆ ನೀಡುವ ವೇತನವನ್ನು ಕಮಿಷನ್ ಎಂಬುದಾಗಿ ಪರಿಗಣಿಸಲಾಗುವುದಿಲ್ಲ. ವಾಸ್ತವದಲ್ಲಿ ಅದು ವೇತನವೆನಿಸಲಿದೆ. ಪಿಗ್ಮಿ ಏಜೆಂಟ್‌ಗಳ ಕರ್ತವ್ಯಗಳ ಸ್ವರೂಪವು ಸ್ಪಷ್ಟವಾಗಿ ಉದ್ಯೋಗಿ-ಉದ್ಯೋಗದಾತ ನಡುವಿನ ಸಂಬಂಧ ಇರಲಿದೆ. ಆರ್‌ಬಿಐ ಮಾನ್ಯತೆ ಪಡೆದಿರುವಂತ ಮಧ್ಯವರ್ತಿಗಳಲ್ಲ, ಅವರ ಸೇವೆ ಬ್ಯಾಂಕಿನ ಪಿಗ್ಮಿ ಠೇವಣಿ ಯೋಜನೆಯಡಿ ಠೇವಣಿಗಳ ಸಂಗ್ರಹಕ್ಕೆ ಸೀಮಿತವಾಗಿರಲಿದೆ. ಅದರ, ಅವರ ಸೇವೆಯನ್ನು ಗ್ರಾಹಕರಿಗೆ ಸೇವೆಗಳನ್ನು ತಲುಪಿಸುವ ಮಧ್ಯವರ್ತಿಗಳ ವರ್ಗಕ್ಕೆ ಸೇರಿಸುವ ಪ್ರಯತ್ನ ತಪ್ಪಾಗಲಿದೆ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ

ಪಿಗ್ಮಿ ಏಜೆಂಟ್‌ಗಳಿಗೆ ನೀಡುವ ಕಮಿಷನ್ ಮೇಲೆ ರಿವರ್ಸ್ ಚಾರ್ಜ್ ವ್ಯವಸ್ಥೆಯಡಿ ಜಿಎಸ್‌ಟಿ ಪಾವತಿಸುವ ಸಂಬಂಧ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತರು ನೀಡಿದ್ದ ಶೋಕಾಸ್ ನೋಟಿಸ್ ಜಾರಿ ಮಾಡಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ್ ಹೈಕೋರ್ಟ್ ಮೆಟ್ಟಿಲೇರಿತ್ತು.

ರೇಣುಕಾಸ್ವಾಮಿ ಕೊಲೆ: ಐವರ ಜಾಮೀನು ರದ್ದತಿಗೆ ಕೋರಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸಹ ಆರೋಪಿಯಾಗಿರುವ ಸ್ಟೋನಿ ಬ್ರೂಕ್ ರೆಸ್ಟೋರೆಂಟ್ ಮಾಲೀಕ ವಿನಯ್, ಮೊದಲನೇ ಆರೋಪಿ ಪವಿತ್ರಗೌಡ ಸಹಾಯಕ ಪವನ್ ಸೇರಿ ಐವರಿಗೆ ಮಂಜೂರು ಮಾಡಿರುವ ಜಾಮೀನು ರದ್ದುಪಡಿಸುವಂತೆ ಕೋರಿ ರಾಜ್ಯ ಸರಕಾರ ಸಲ್ಲಿಸಿರುವ ಅರ್ಜಿಗಳ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಪ್ರಮುಖ ಆರೋಪಿಗಳಾದ ನಟ ದರ್ಶನ್, ಪವಿತ್ರಾ ಗೌಡ ಸೇರಿ ಏಳು ಮಂದಿಗೆ ಸುಪ್ರೀಂ ಕೋರ್ಟ್ ಕಳೆದ ವರ್ಷ ಜಾಮೀನು ರದ್ದುಪಡಿಸಿತ್ತು. ಇದೇ ರೀತಿ ರಾಜ್ಯ ಸರಕಾರ ಮತ್ತೆ ಪ್ರತ್ಯೇಕ ಅರ್ಜಿ ಸಲ್ಲಿಸಿತ್ತು. ಇದರಲ್ಲಿ 9ನೇ ಆರೋಪಿ ವಿನಯ್, 3ನೇ ಆರೋಪಿ ಪವನ್, ಚಿತ್ರದುರ್ಗದ ದರ್ಶನ್ ಅಭಿಮಾನಿ ಬಳಗದ ಅಧ್ಯಕ್ಷನಾಗಿರುವ 4ನೇ ಆರೋಪಿ ರಾಘವೇಂದ್ರ, 5ನೇ ಆರೋಪಿ ನಂದೀಶ್, 9ನೇ ಆರೋಪಿ ಧನರಾಜ್ ಅಲಿಯಾಸ್ ರಾಜು ಅಲಿಯಾಸ್ ಡಿ.ಧನರಾಜುಗೆ ಬೆಂಗಳೂರಿನ ಸತ್ರ ನ್ಯಾಯಾಲಯ 2024ರ ಡಿ.24ರಂದು ಮಂಜೂರು ಮಾಡಿರುವ ಜಾಮೀನು ರದ್ದುಪಡಿಸುವಂತೆ ಕೋರಿ ಕಾಮಾಕ್ಷಿಪಾಳ್ಯ ಪೊಲೀಸರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿರುವ ನ್ಯಾಯಮೂರ್ತಿ ಎಸ್.ರಾಚಯ್ಯ ಅವರ ಏಕಸದಸ್ಯ ಪೀಠವು ಆದೇಶ ಕಾಯ್ದಿರಿಸಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಸಂಬಂಧ ಜೂನ್ 11ರಂದು ದರ್ಶನ್ ಮತ್ತಿತರರನ್ನು ಕಾಮಾಕ್ಷಿ ಪಾಳ್ಯ ಪೊಲೀಸರು ಬಂಧಿಸಿದ್ದರು. ಜೂನ್ 22ರಂದ ದರ್ಶನ್ ಹಾಗೂ ಇತರೆ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. ದರ್ಶನ್‌ಗೆ ಅಕ್ಟೋಬರ್ 30ರಂದು ಹೈಕೋರ್ಟ್ ವೈದ್ಯಕೀಯ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಅಕ್ಟೋಬರ್ 14ರಂದು ವಿಚಾರಣಾಧೀನ ನ್ಯಾಯಾಲಯವು ದರ್ಶನ್, ಪವಿತ್ರಾ ಗೌಡ, ನಾಗರಾಜು ಮತ್ತು ಲಕ್ಷ್ಮಣ್‌ಗೆ ಜಾಮೀನು ನಿರಾಕರಿಸಿತ್ತು. 8ನೇ ಆರೋಪಿ ರವಿಶಂಕರ್ ಅಲಿಯಾಸ್ ರವಿ, 13ನೇ ಆರೋಪಿ ದೀಪಕ್ ಕುಮಾರ್ ಅಲಿಯಾಸ್ ದೀಪಕ್‌ಗೆ ಜಾಮೀನು ಮಂಜೂರು ಮಾಡಿತ್ತು. ಅದಕ್ಕೂ ಮುನ್ನ, ಕಾರ್ತಿಕ್ ಅಲಿಯಾಸ್ ಕಪ್ಪೆ, ಕೇಶವಮೂರ್ತಿ ಮತ್ತು ನಿಖಿಲ್ ನಾಯಕ್‌ಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿತ್ತು. 2024ರ ಡಿಸೆಂಬರ್ 13ರಂದು ದರ್ಶನ್, ಪವಿತ್ರಾಗೌಡ, ಆರ್.ನಾಗರಾಜು, ಎಂ.ಲಕ್ಷ್ಮಣ್, ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ, ಪ್ರದೋಷ್ ರಾವ್ ಅವರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಇದರ ಬೆನ್ನಿಗೇ 2024ರ ಡಿಸೆಂಬರ್ 24ರಂದು ಬೆಂಗಳೂರಿನ ಸತ್ರ ನ್ಯಾಯಾಲಯವು ಪವನ್, ವಿನಯ್ ಮತ್ತಿತರ ಜಾಮೀನು ಮಂಜೂರು ಮಾಡಿತ್ತು. 2025ರ ಜ. 14ರಂದು ಸುಪ್ರೀಂಕೋರ್ಟ್ 2ನೇ ಆರೋಪಿ ದರ್ಶನ್, 1ನೇ ಆರೋಪಿ ಪವಿತ್ರಾ ಗೌಡ, 11ನೇ ಆರೋಪಿ ಆರ್.ನಾಗರಾಜು, 7ನೇ ಆರೋಪಿ ಅನುಕುಮಾರ್, 12ನೇ ಆರೋಪಿ ಎಂ.ಲಕ್ಷ್ಮಣ್, 6ನೇ ಆರೋಪಿ ಜಗದೀಶ್, 14ನೇ ಆರೋಪಿ ಪ್ರದೋಷ್ ಎಸ್. ರಾವ್ ಅಲಿಯಾಸ್ ಪ್ರದೋಷ್‌ಗೆ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ರದ್ದುಪಡಿಸಿತ್ತು. ಇದನ್ನು ಆಧರಿಸಿ ರಾಜ್ಯ ಸರಕಾರವು ಪವನ್, ವಿನಯ್ ಮತ್ತಿತರ ಜಾಮೀನು ರದ್ದತಿಗೆ ಮನವಿ ಮಾಡಿತ್ತು. ಇದರ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್
ಕರ್ನಾಟಕ ಗ್ರಾಮೀಣ ಬ್ಯಾಂಕ್ KARNATAKA GRAMEENA BANK
"ಸರಕಾರದ ಸ್ವಾಮ್ಯದ ಶೆಡ್ಯೂಲ್ ಬ್ಯಾಂಕ್"
ಪ್ರಾದೇಶಿಕ ಕಛೇರಿ: ಬೆಂಗಳೂರು (ಆರ್ & ಎಲ್ ವಿಭಾಗ)
ನಂ.19-19/1, 2ನೇ ಮಹಡಿ, ಸೌತ್ ಎಂಡ್ ರಸ್ತೆ, ಬಸವನಗುಡಿ, ಬೆಂಗಳೂರು-560004.
ದೂ: 080-23186095 /23217079,
ಇ-ಮೇಲ್ ಐಡಿ: roblr.rlw@kgbk.in

ಸ್ಥಿರಾಸ್ತಿ ಸ್ವತ್ತಿನ ಈ-ಹರಾಜು/ ಮಾರಾಟ ಸೂಚನೆ

ಸರ್ಫೇಸಿ ಕಾಯ್ದೆ 2002 ಮತ್ತು ಸೆಕ್ಯೂರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) & 9 ರ ನಿಬಂಧನೆಗಳನ್ನು ಒಳಗೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಮಾರಾಟ ಸೂಚನೆ

ನಿರ್ದಿಷ್ಟವಾಗಿ ಈ ಕೆಳಕಂಡ ಸಾಲಗಾರ/ರಿಗೆ, ಅಡಮಾನದಾರ/ರುಗಳಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಸಾಲಗಾರರು ಆದ **ಕರ್ನಾಟಕ ಗ್ರಾಮೀಣ ಬ್ಯಾಂಕ್** ಇವರಿಗೆ ಅಡಮಾನ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು, ಇದರ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನ ಪಡೆದುಕೊಂಡಿದ್ದು, ಭದ್ರತಾ ಸಾಲಗಾರರಾದ ಇವರಿಗೆ ಬರಬೇಕಾಗಿರುವ ಬಾಕಿ ವಸೂಲಿಗಾಗಿ **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೊ ಹಾಗೆ"** ಮತ್ತು **"ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ"** ಅದರ ಆಧಾರದ ಮೇಲೆ ದಿನಾಂಕ: **30.04.2026** ರಂದು ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಹರಾಜು ದಿನಾಂಕ : 30.04.2026 ರಂದು ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯವರೆಗೆ
ಇಎಂಡಿ ಸಲ್ಲಿಸಲು ಕೊನೆ ದಿನಾಂಕ : 29.04.2026 ರಂದು ಸಂಜೆ 4.00 ಗಂಟೆಯ ಒಳಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್

ಶಾಖೆ: ದೇವನಹಳ್ಳಿ

1. ಸಾಲಗಾರರ ಹೆಸರು ಮತ್ತು ವಿಳಾಸ : 1. ಶ್ರೀ ಸಿ ಗೋವಿಂದರಾಜು ಬಿನ್ ಚಿಕ್ಕಮುನಿಶಾಮಪ್ಪ, **2. ಶ್ರೀಮತಿ. ನಾರಾಯಣಮ್ಮ** ಕೋಂ ಚಿಕ್ಕಮುನಿಶಾಮಪ್ಪ, **ಜಾಮೀನುದಾರರು: 3. ಶ್ರೀ ಹನುಮಂತರಾಯಪ್ಪ** ಬಿನ್ ಆಂಜನಪ್ಪ, **ಇವರೆಲ್ಲರ ವಿಳಾಸ:** ಅಣ್ಣೇಶ್ವರ (ವಿ), & (ಪಿ), ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು-562110.
ಬರಬೇಕಾದ ಬಾಕಿ ಮೊತ್ತ: ರೂ.14,10,032/- (ರೂಪಾಯಿ ಹದಿನಾಲ್ಕು ಲಕ್ಷದ ಹತ್ತು ಸಾವಿರದ ಮೂವತ್ತೆರಡು ಮಾತ್ರ) ದಿನಾಂಕ: 29.03.2026 ರಂತೆ **ದಿನಾಂಕ: 29.03.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಸ್ಥಿರಾಸ್ತಿಯ ಸ್ವತ್ತಿನ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ಥಿಯ ಖಾಲಿ ನಿವೇಶನ (ಈಗ ವಸತಿ ಗೃಹ ನಿರ್ಮಿಸಲಾಗಿದೆ) ಜಂಜಾರ್ ನಂ.16 ಮತ್ತು ಆಸ್ತಿ ನಂ.24/1 ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9 ಮೀಟರ್ಸ್, ಉತ್ತರದಿಂದ ದಕ್ಷಿಣಕ್ಕೆ: 10 ಮೀಟರ್ಸ್, ಆಸ್ತಿಯು ಶ್ರೀ ಸಿ ಗೋವಿಂದರಾಜು ಬಿನ್ ಚಿಕ್ಕಮುನಿಶಾಮಪ್ಪ ರವರ ಹೆಸರಿನಲ್ಲಿದೆ. ಈ ಆಸ್ತಿಯು ಅಣ್ಣೇಶ್ವರ (ವಿ), & (ಪಿ), ಕಸಬಾ ಹೋಬಳಿ, ದೇವನಹಳ್ಳಿ-562110 ತಾಲ್ಲೂಕಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ: ಚಿಕ್ಕಮುನಿಶಾಮಪ್ಪನವರ ಮನೆ, ಪಶ್ಚಿಮಕ್ಕೆ: ಮುನಿಶಾಮಪ್ಪನವರ ಮನೆ, ಉತ್ತರಕ್ಕೆ : ಚಿಕ್ಕಮುನಿಶಾಮಪ್ಪನವರ ಮನೆ, ದಕ್ಷಿಣಕ್ಕೆ: ನಾಗಪ್ಪನವರ ಮನೆ.
ಮೀಸಲು ಬೆಲೆ : ರೂ. 48,00,000/- **ಇಎಂಡಿ : ರೂ. 4,80,000/-**

ಶಾಖೆ: ಹೆಸರಘಟ್ಟ

2. ಸಾಲಗಾರರ ಹೆಸರು ಮತ್ತು ವಿಳಾಸ : (1) ಶ್ರೀ. ಉದಯ್ ಕುಮಾರ್ ಬಿನ್ ವೆಂಕಟಾಚಲಪತಿ, **(2) ಶ್ರೀಮತಿ. ರತ್ನಮ್ಮ** ಕೋಂ ವೆಂಕಟಾಚಲಪತಿ, **ಇವರಿಬ್ಬರ ವಿಳಾಸ:** ಪಟೇಲ್ ಮುನಿಯಪ್ಪ ಲೇಔಟ್, 3ನೇ ಎ ಕ್ರಾಸ್, ತೋಟದಗುಡ್ಡದಹಳ್ಳಿ, ನಾಗಸಂದ್ರ ಪೋಸ್ಟ್, ದಾಸನಪುರ ಹೋಬಳಿ, ಬೆಂಗಳೂರು-560073. **ಜಾಮೀನುದಾರರು: ಶ್ರೀ. ಮುನಿರಾಜು ಎನ್** ಬಿನ್ ನಂಜುಂಡಪ್ಪ ಎಂ, **ವಿಳಾಸ:** ನಂ.418/3, ಎ ಸೆಕ್ಟರ್, ಯಲಹಂಕ ನ್ಯೂ ಟೌನ್, 1ನೇ ಕ್ರಾಸ್, ಯಲಹಂಕ, ಬೆಂಗಳೂರು ನಗರ ಜಿಲ್ಲೆ-560106.
ಬರಬೇಕಾದ ಬಾಕಿ ಮೊತ್ತ: ರೂ.60,73,247/- (ರೂಪಾಯಿ ಅರವತ್ತು ಲಕ್ಷದ ಎಪ್ಪತ್ತಮೂರು ಸಾವಿರದ ಇನ್ನೂರ ನಲವತ್ತೇಳು ಮಾತ್ರ) ದಿನಾಂಕ: 30.03.2026 ರಂತೆ **ದಿನಾಂಕ: 30.03.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಸ್ಥಿರಾಸ್ತಿಯ ಸ್ವತ್ತಿನ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಮನೆಯ ದಕ್ಷಿಣ ಭಾಗದ ನಿವೇಶನ ನಂ.9, ಹಳೆ ಖಾತಾ ನಂ.8/313, ಹೊಸ ಖಾತಾ ನಂ.1905, ಪಿಐಡಿ-150200201700402197, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ, ಉತ್ತರದಿಂದ ದಕ್ಷಿಣಕ್ಕೆ: 20 ಅಡಿ, ಈ ಆಸ್ತಿಯು ಶ್ರೀ. ಉದಯ್ ಕುಮಾರ್ ಬಿನ್ ವೆಂಕಟಾಚಲಪತಿರವರ ಹೆಸರಿನಲ್ಲಿದೆ, ಈ ಆಸ್ತಿಯು ತೋಟದಗುಡ್ಡದಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: 20 ಅಡಿ ರಸ್ತೆ, ಪಶ್ಚಿಮಕ್ಕೆ: ಇತರರ ಆಸ್ತಿ, ಉತ್ತರಕ್ಕೆ: ಉತ್ತರ ಭಾಗದ ನಿವೇಶನ ನಂ.9, ದಕ್ಷಿಣಕ್ಕೆ: ನಿವೇಶನ ನಂ.8.
ಮೀಸಲು ಬೆಲೆ : ರೂ. 30,00,000/- **ಇಎಂಡಿ : ರೂ. 3,00,000/-**

ಶಾಖೆ: ಬೆಳ್ಳಂದೂರು

3. ಸಾಲಗಾರರ ಹೆಸರು ಮತ್ತು ವಿಳಾಸ : 1. ಶ್ರೀಮತಿ ತುಳಸಿ ಬಾಯಿ ಕೋಂ. ರಾಜೇಂದ್ರ ಸಿಂಗ್ 2. ಶ್ರೀ. ಆರ್.ಪ್ರದೀಪ್ ಸಿಂಗ್ ಬಿನ್ ರಾಜೇಂದ್ರ ಸಿಂಗ್ **3. ಶ್ರೀ. ಆರ್.ಮೋಹನ್ ಸಿಂಗ್** ಬಿನ್ ರಾಜೇಂದ್ರ ಸಿಂಗ್, **ಇವರೆಲ್ಲರ ವಿಳಾಸ:** ನಂ.128, ಚಿನ್ನು ಸಿಂಗ್ ಕಾಂಪೌಂಡ್, ಒಪಿಎಚ್ ರಸ್ತೆ, ಕಾಡುಗೋಡಿ, ಬೆಂಗಳೂರು-560067. **ಜಾಮೀನುದಾರರು: ಶ್ರೀ. ಶಿವರಾಮ್ ಎಂ** ಬಿನ್ ರಾಜು ಎಂ.ವಿ. ನಂ.192, ರಾಮಯ್ಯ ಗಾರ್ಡನ್, ರಾಯಲ್ ಸ್ಕೂಲ್ ಹತ್ತಿರ, ಕಾಡುಗೋಡಿ, ಬೆಂಗಳೂರು-560067.
ಬರಬೇಕಾದ ಬಾಕಿ ಮೊತ್ತ: ರೂ.26,62,678/- (ರೂಪಾಯಿ ಇಪ್ಪತ್ತಾರು ಲಕ್ಷದ ಅರವತ್ತೆರಡು ಸಾವಿರದ ಆರುನೂರ ಎಪ್ಪತ್ತೆಂಟು ಮಾತ್ರ) ದಿನಾಂಕ: 19.03.2026 ರಂದು ಇದ್ದಂತೆ **ದಿನಾಂಕ: 19.03.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಸ್ಥಿರಾಸ್ತಿಯ ಸ್ವತ್ತಿನ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಸತಿ ಮನೆ ಹೊಂದಿರುವ ನಿವೇಶನ ಸಂಖ್ಯೆ 12, ಸರ್ವೆ ನಂ.291/6ರಲ್ಲಿನ ಭೂಮಿಯನ್ನು ವಾಸಯೋಗ್ಯವಾಗಿ ಪರಿವರ್ತಿಸಲಾಗಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ, ಇದು ಕಾಡುಗೋಡಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿದೆ, ಈ ಆಸ್ತಿಯು ಶ್ರೀಮತಿ ತುಳಸಿ ಬಾಯಿ ಕೋಂ. ರಾಜೇಂದ್ರ ಸಿಂಗ್, ಶ್ರೀ.ಆರ್.ಪ್ರದೀಪ್ ಸಿಂಗ್ ಬಿನ್ ರಾಜೇಂದ್ರ ಸಿಂಗ್, ಶ್ರೀ.ಆರ್.ಮೋಹನ್ ಸಿಂಗ್ ಬಿನ್ ರಾಜೇಂದ್ರ ಸಿಂಗ್‌ರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ನಂ.11, ಪಶ್ಚಿಮಕ್ಕೆ : ಕೆ.ಎಂ.ಚಿನ್ನು ಸಿಂಗ್ ಅವರಿಗೆ ಸೇರಿದ ಪರಿವರ್ತಿತ ಸರ್ವೆ ಸಂಖ್ಯೆ 291/6, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ.8.
ಮೀಸಲು ಬೆಲೆ: ರೂ.90,00,000/- **ಇಎಂಡಿ: ರೂ.9,00,000/-**

ಶಾಖೆ: ಬ್ಯಾಡರಹಳ್ಳಿ

4. ಸಾಲಗಾರರ ಹೆಸರು ಮತ್ತು ವಿಳಾಸ : ಶ್ರೀ ಚಂದ್ರಕಾಂತ್ @ ಕಾಂತಣ್ಣ ಬಿನ್ ಸೋಪಾನ್ ರಾವ್, **ವಿಳಾಸ:** ಫ್ಲಾಟ್ ನಂ.3036, 2ನೇ ಕ್ರಾಸ್, 3ನೇ ಬ್ಲಾಕ್, ಜನಪ್ರಿಯಾ ಟೌನ್‌ಶಿಪ್, ಕಡಬಗೆರೆ ಗ್ರಾಮ, ಮಾಚೋಹಳ್ಳಿ ಪಂಚಾಯಿತಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ (ಜಿಲ್ಲೆ) 562123. **ಜಾಮೀನುದಾರರು: ಶ್ರೀ ಗೋವಿಂದರಾಜು** ಬಿನ್ ವೆಂಕಟೇಶಪ್ಪ, ವಿಳಾಸ: ನಂ.123, ಮಂಗನಹಳ್ಳಿ, ಬೆಂಗಳೂರು-560060.
ಬರಬೇಕಾದ ಬಾಕಿ ಮೊತ್ತ: ರೂ.26,64,290/- (ರೂಪಾಯಿ ಇಪ್ಪತ್ತಾರು ಲಕ್ಷದ ಅರವತ್ತನಾಲ್ಕು ಸಾವಿರದ ಇನ್ನೂರ ತೊಂಭತ್ತು ಮಾತ್ರ) ದಿನಾಂಕ: 08.04.2026 ರಂತೆ **ದಿನಾಂಕ: 08.04.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಸ್ಥಿರಾಸ್ತಿಯ ಸ್ವತ್ತಿನ ವಿವರ:- ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಫ್ಲಾಟ್ ನಂ.3036, 2ನೇ ಮಹಡಿ, 3ನೇ ಬ್ಲಾಕ್, ಖಾತಾ ನಂ.1151/513/3036/1448/789/3036, ಇ-ಖಾತಾ ನಂ.150200201400220259 ಜೊತೆಗೆ ಜನಪ್ರಿಯ ಟೌನ್‌ಶಿಪ್ ಕಟ್ಟಡದಲ್ಲಿ 675 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನೊಳಗೊಂಡಿದೆ & 150.70 ಚದರ ಅಡಿ ಅವಿಭಾಜಿತ ಭಾಗ ಭೂಮಿಯನ್ನು ಒಳಗೊಂಡಿದ್ದು, ಸರ್ವೆ ನಂ.10/1, ಖಾತಾ ನಂ.192 & 193, ಒಟ್ಟು ವಿಸ್ತೀರ್ಣ 26990 ಚದರ ಅಡಿಯನ್ನು ಒಳಗೊಂಡಿದ್ದು, ಶ್ರೀ ಚಂದ್ರಕಾಂತ್ @ ಕಾಂತಣ್ಣರವರ ಹೆಸರಿನಲ್ಲಿದ್ದು ಈ ಆಸ್ತಿಯು ಕಡಬಗೆರೆ ಗ್ರಾಮ, ಮಾಚೋಹಳ್ಳಿ ಪಂಚಾಯತ್, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಸ್ಟೇರ್‌ಕೇಸ್‌ಗೆ ದಾರಿ, ಪಶ್ಚಿಮಕ್ಕೆ: 4ನೇ ಬ್ಲಾಕ್‌ನ ಫ್ಲಾಟ್‌ಗಳು, ಉತ್ತರಕ್ಕೆ: ಫ್ಲಾಟ್ ನಂ.3033, ದಕ್ಷಿಣಕ್ಕೆ: ಆಕಾಶಕ್ಕೆ ತೆರೆದ ಜಾಗ.
ಮೀಸಲು ಬೆಲೆ : ರೂ. 22,50,000/- **ಇಎಂಡಿ : ರೂ. 2,25,000/-**

ಶಾಖೆ: ಹಾವನೂರು ಎಕ್ಸ್‌ಟೆನ್ಷನ್

5. ಸಾಲಗಾರರ ಹೆಸರು ಮತ್ತು ವಿಳಾಸ : ಶ್ರೀ. ಮೋಹನ್ ಎನ್ ಬಿನ್ ನರಸಪ್ಪ, ನಂ 281, ಜನತಾ ಕಾಲೋನಿ, ತರಬನಹಳ್ಳಿ, ಚಿಕ್ಕಬಾಣಾವರ ಅಂಚೆ, ಬೆಂಗಳೂರು-560090.
ಬರಬೇಕಾದ ಬಾಕಿ ಮೊತ್ತ: ರೂ.45,03,011/- (ರೂಪಾಯಿ ನಲವತ್ತೈದು ಲಕ್ಷದ ಮೂರು ಸಾವಿರದ ಹನ್ನೊಂದು ಮಾತ್ರ) ದಿನಾಂಕ: 30.03.2026 ರಂತೆ **ದಿನಾಂಕ: 30.03.2026** ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.
ಸ್ಥಿರಾಸ್ತಿಯ ಸ್ವತ್ತಿನ ವಿವರ:- ವಾಸಯೋಗ್ಯ ಹೌಸ್ ನಂ. 281, ಖಾತಾ ನಂ. 272, ಸರ್ವೆ ನಂ. 49/10, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 31.5 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 41.5 ಅಡಿ, ಆಸ್ತಿಯು ಶ್ರೀ. ಮೋಹನ್.ಎನ್ ಬಿನ್ ನರಸಪ್ಪ ರವರ ಹೆಸರಿನಲ್ಲಿದೆ. ಈ ಆಸ್ತಿಯು ತರಬನಹಳ್ಳಿ, ಚಿಕ್ಕಬಾಣಾವರ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಸರ್ಕಾರಿ ಆಸ್ತಿ, ಪಶ್ಚಿಮಕ್ಕೆ : ಜಾನ್ ಮ್ಯಾಥ್ಯೂ ರವರ ಆಸ್ತಿ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಜನತಾ ಕಾಲೋನಿ.
ಮೀಸಲು ಬೆಲೆ : ರೂ. 28,72,000/- **ಇಎಂಡಿ : ರೂ. 2,87,200/-**

ಸರ್ಫೇಸಿ ಕಾಯ್ದೆಯ ಅಡಿಯಲ್ಲಿ ಶಾಸನಬದ್ಧ 15 ದಿನಗಳ ಮಾರಾಟ ಸೂಚನೆ
ಸದರಿ ನೋಟೀಸ್ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ಮೇಲೆ ತಿಳಿಸಿರುವ ಸಾಲದ ಬಾಕಿ ಮೊತ್ತವನ್ನು ಪಾವತಿ ಮಾಡುವಂತೆ, ಇಲ್ಲದಿದ್ದರೆ ಸರ್ಫೇಸಿ ಕಾಯ್ದೆ 2002ರಲ್ಲಿ ತಿಳಿಸಿರುವ ಉಪಬಂಧಗಳ ಅನ್ವಯ ಸ್ವತ್ತನ್ನು ಬ್ಯಾಂಕ್ ಮಾರಾಟ ಮಾಡುವುದೆಂದು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ಸಲಹೆ ನೀಡಲಾಗಿದೆ.

ಇ-ಹರಾಜು ಮಾರಾಟದ ನಿಯಮಗಳು ಮತ್ತು ನಿಬಂದನೆಗಳು :
1. ಹರಾಜು/ಬಿಡ್ಡನ್ನು "ಆನ್‌ಲೈನ್ ಎಲೆಕ್ಟ್ರಾನಿಕ್ ಮೋಡ್" ಮೂಲಕ ನಡೆಸಲಾಗುವುದು. ಬ್ಯಾಂಕ್ ಅನುಮೋದಿತ ಸೇವಾ ಪೂರೈಕೆದಾರರಾದ **M/s. 4 Closure India** ವೆಬ್‌ಸೈಟ್ **BankAuctions.in** ಮತ್ತು **ForeclosureIndia.com** ಇವರ ಮೂಲಕ ಇ-ಹರಾಜು ನಡೆಸಲಾಗುವುದು.
2. ಬಿಡ್‌ದಾರರು ತಮ್ಮ ಆಯ್ಕೆಯ ಸ್ಥಳದಿಂದ ಬಿಡ್ಡಿಂಗ್‌ಗಾಗಿ ಇ-ಹರಾಜಿನಲ್ಲಿ ಭಾಗವಹಿಸಬಹುದು. ಬಿಡ್‌ದಾರರು ಸ್ವತಃ ತಾವೇ ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರಬೇಕು. ಬ್ಯಾಂಕ್/ಸೇವೆ ಪೂರೈಕೆದಾರರು ಇಂಟರ್‌ನೆಟ್ ಸಂಪರ್ಕ, ನೆಟ್‌ವರ್ಕ್ ವ್ಯತ್ಯಯ, ಸಿಸ್ಟಮ್ ಕ್ರ್ಯಾಷ್, ವಿದ್ಯುತ್ ವ್ಯತ್ಯಯ ಮುಂತಾದ ಸೌಲಭ್ಯಗಳು ಬ್ಯಾಂಕ್/ಸೇವೆ ಪೂರೈಕೆದಾರರು ಭರಿಸುವುದಿಲ್ಲ / ಜವಬ್ದಾರರಾಗಿರುವುದಿಲ್ಲ ಹಾಗೂ ನಿರೀಕ್ಷಿತ ಬಿಡ್‌ದಾರರು ಹೆಚ್ಚಿನ ವಿವರಗಳು, ಸಹಾಯ, ಕಾರ್ಯವಿಧಾನ, ನೋಂದಣಿ, ಹರಾಜು ಬಿಡ್ ಫಾರಂಗಳು, ಮಾರಾಟದ ನಿಯಮಗಳು ಮತ್ತು ನಿಬಂಧನೆಗಳು ಮತ್ತು ಇ-ಹರಾಜಿನ ಆನ್‌ಲೈನ್ ತರಬೇತಿ ಇವೆಲ್ಲವು ಬ್ಯಾಂಕ್ ಅನುಮೋದಿತ ಸೇವಾ ಪೂರೈಕೆದಾರರಾದ **M/s. 4 Closure India** ವೆಬ್‌ಸೈಟ್ **BankAuctions.in** ಮತ್ತು **ForeclosureIndia.com** ಇವರನ್ನು ಸಂಪರ್ಕಿಸಬಹುದು ಮತ್ತು ವಿವರವಾದ ನಿಯಮಗಳು ಮತ್ತು ನಿಬಂಧನೆಗಳು ಬಿಡ್ ಫಾರಂನಲ್ಲಿ ಲಗತ್ತಿಸಲಾಗಿದೆ.
3. ಬಳಕೆದಾರರು ಐಡಿ ಮತ್ತು ಪಾಸ್‌ವರ್ಡ್ ಪಡೆಯತಕ್ಕದ್ದು. ಅದನ್ನು ಸ್ವೀಕರಿಸಿದ ನಂತರ ಪಾಸ್‌ವರ್ಡ್ ಅನ್ನು ಮಾತ್ರ ಬದಲಾಯಿಸಬಹುದು.
4. ಬಿಡ್‌ದಾರರು ಮಾರಾಟ ಹರಾಜಿನ ಷರತ್ತು ಮತ್ತು ನಿಬಂಧನೆಗಳ ವಿವರಗಳು ತಿಳಿಸಿರುವ **BankAuctions.in** ಗೆ ವೀಕ್ಷಿಸಬಹುದು ಮತ್ತು ತಮ್ಮ ಬಿಡ್‌ಗಳನ್ನು ಸಲ್ಲಿಸುವ ಮೊದಲು ಹರಾಜು ಅರ್ಜಿ ನಮೂನೆಯನ್ನು ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
5. ಒಮ್ಮೆ ಮಾಡಿದ ಬಿಡ್‌ಗಳನ್ನು ರದ್ದುಗೊಳಿಸಲಾಗುವುದಿಲ್ಲ ಅಥವಾ ಹಿಂಪಡೆಯಲಾಗುವುದಿಲ್ಲ. ಬಳಕೆದಾರ ಐಡಿ ಯಿಂದ ಮಾಡಿದ ಎಲ್ಲಾ ಬಿಡ್‌ಗಳು ಬಿಡ್‌ದಾರರಿಗೆ ನೀಡಲಾಗಿದ್ದು, ಅವನು/ಅವಳು ಮಾಡಿದ ಎಂದು ಪರಿಗಣಿಸಲಾಗುವುದು.
6. ಎಲ್ಲಾ ಬಿಡ್‌ದಾರರು ಮಾರಾಟದ ಷರತ್ತು ಮತ್ತು ನಿಯಮಗಳು ಓದಿ ಮತ್ತು ಅರ್ಥಮಾಡಿಕೊಂಡಿರುವುದು ಎಂದು ಪರಿಗಣಿಸಲಾಗುವುದು ಮತ್ತು ಅವರೇ ಬದ್ಧರಾಗಬೇಕು.

ಇತರೆ ನಿಯಮಗಳು ಮತ್ತು ನಿಬಂಧನೆಗಳು:
1. ಹರಾಜಿನಲ್ಲಿ ಭಾಗವಹಿಸಲು, ಉದ್ದೇಶಿತ ಬಿಡ್‌ದಾರರು ನಿಗದಿತ ಫಾರಂನಲ್ಲಿ ಮೊಹರಾದ ಲಕೋಟೆಯಲ್ಲಿ, ಮೇಲೆ ತಿಳಿಸಿರುವ ಷೆಡ್ಯೂಲ್ಡ್ ಬ್ಯಾಂಕ್ ಹೆಸರಲ್ಲಿ ಪಡೆದ ಪಿಒ/ಡಿಡಿ/ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಮೀಸಲು ಬೆಲೆಯ 10% ರಂತೆ ತಿಳಿಸಿರುವ ಸಮಯ ಮತ್ತು ದಿನಾಂಕದ ಒಳಗೆ ಇಎಂಡಿ ಮೊತ್ತವನ್ನು ಪಾವತಿ ಮಾಡಬೇಕು. ಇಎಂಡಿ ಮೊತ್ತದ ಮೇಲೆ ಯಾವುದೇ ಬಡ್ಡಿ ಇರುವುದಿಲ್ಲ.
2. ಮಾರಾಟವನ್ನು **"ಹೇಗಿದೆಯೋ ಹಾಗೆ ಮತ್ತು ಎಲ್ಲಿದೆಯೋ ಹಾಗೆ ಅದರ ಆಧಾರದ"** ಮೇಲೆ ಮಾಡಲಾಗುವುದು.
3. ಸ್ವತ್ತನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.
4. ಒಂದು ವೇಳೆ ಬಿಡ್‌ದಾರರು ಕಂಪನಿಯಾಗಿದ್ದರೆ, ಮಂಡಳಿಯು ಅಂಗೀಕರಿಸಿದ ನಿರ್ಣಯದ ಪ್ರತಿಯನ್ನು ಕಂಪನಿಯ ಪರವಾಗಿ ಹರಾಜಿನಲ್ಲಿ ಭಾಗವಹಿಸಲು ಅಧಿಕೃತ ಅಧಿಕಾರಿಯವರಿಂದ ಪಡೆದ ಪ್ರತಿಯನ್ನು ಸಲ್ಲಿಸಬೇಕು.
5. ಬಿಡ್ ಮೊತ್ತವನ್ನು **ರೂ.10,000/-** ಕ್ಕಿಂತ ಹೆಚ್ಚು ನಿಗದಿಪಡಿಸಲಾಗಿದೆ ಮತ್ತು ಈ ಸ್ವತ್ತನ್ನು ಅತಿ ಹೆಚ್ಚು ಬಿಡ್‌ದಾರರಿಗೆ ಮಾರಾಟ ಮಾಡಲಾಗುತ್ತದೆ.
6. ಯಶಸ್ವಿಯಾದ ಬಿಡ್‌ದಾರರು ಹರಾಜು ಮಾರಾಟವಾದ ತಕ್ಷಣ ಅದೇ ದಿನ ಮಾರಾಟ ಬೆಲೆಯ 25% ಹಣವನ್ನು (ಇಎಂಡಿ ಸೇರಿದಂತೆ) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ತಿಳಿಸಿರುವ ಆಯಾ ಶಾಖೆಗಳ: (1) **ದೇವನಹಳ್ಳಿ ಶಾಖೆ: A/C ನಂ. 121951013050189, ಶಾಖೆ IFSC: PKGB0012195, (2) ಹೆಸರಘಟ್ಟ ಶಾಖೆ: A/C ನಂ. 124041013050189, ಶಾಖೆ IFSC: PKGB0012404, (3) ಬೆಳ್ಳಂದೂರು ಶಾಖೆ : A/C No. 122001013050189, ಶಾಖೆ IFSC: PKGB0012200,** (4) **ಬ್ಯಾಡರಹಳ್ಳಿ ಶಾಖೆ: A/C ನಂ. 122231013050189, ಶಾಖೆ IFSC: PKGB0012223, (5) ಹಾವನೂರು ಶಾಖೆ : A/C No. 122021013050189, ಶಾಖೆ IFSC: PKGB0012202,** ತಿಳಿಸಿರುವ ಖಾತೆ ಸಂಖ್ಯೆಗೆ ಸಂದಾಯ ಮಾಡಬೇಕು ಮತ್ತು ಮಾರಾಟ ಬೆಲೆಯ ಉಳಿದ 75% ಬಾಕಿ ಹಣವನ್ನು ಮಾರಾಟ ಸ್ಥಿರೀಕರಣವಾದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಒಂದು ವೇಳೆ ಹಣ ಪಾವತಿಸಲು ಯಶಸ್ವಿ ಬಿಡ್‌ದಾರರು ತಪ್ಪಿದರೆ ಅವರಿಗೆ ಸೂಚನೆ ನೀಡದೆ ಅವರು ಇದುವರೆಗೆ ಪಾವತಿ ಮಾಡಿರುವ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸ್ವತ್ತನ್ನು ಮರುಹರಾಜಿಗೆ ಇಡಲಾಗುವುದು.
7. ಅಧಿಕೃತ ಅಧಿಕಾರಿಯಿಂದ ಮಾರಾಟದ ದೃಢೀಕರಣದ ಮತ್ತು ಪಾವತಿಯ ನಿಯಮಗಳ ಅನುಸಾರದ ಮೇಲೆ, ಮಾರಾಟದ ಅಧಿಕಾರವನ್ನು ಚಲಾಯಿಸುವ ಅಧಿಕೃತ ಅಧಿಕಾರಿ ರೂಪದಲ್ಲಿ ಖರೀದಿದಾರರ ಪರವಾಗಿ ಸೆಕ್ಯೂರಿಟೈಸೇಷನ್ 2002ರ ಕಾಯ್ದೆ, ಅಪೆಂಡಿಕ್ಸ್ 5 ಇದರ ಅನುಸಾರ ನೀಡಲಾಗುವುದು.
8. ಯಶಸ್ವಿಯಾಗದ ಬಿಡ್‌ದಾರರ ಹೆಸರಿಗೆ ಮಾರಾಟದ ಪ್ರತಿಯನ್ನು ನೀಡಲಾಗುವುದು ನೋಂದಾಯಿಸಲಾಗುವುದು ಹಾಗೂ ಮಾರಾಟದ ಪ್ರತಿಯನ್ನು ನೀಡುವುದಕ್ಕಿಂತ ಮುಂಚೆ ನಿಮ್ಮ ಪಾನ್ ಕಾರ್ಡ್ ಐಡಿ ಪೂಫ್ ಅನ್ನು ಪಾವತಿಸಬೇಕು.
9. ವಿಫಲವಾದ ಬಿಡ್ ದಾರರಿಗೆ ಇಎಂಡಿ ಮೊತ್ತವನ್ನು ಹರಾಜು ತೀರ್ಮಾನಿಸಿದ ತಕ್ಷಣವೇ ಹಿಂತಿರುಗಿಸಲಾಗುವುದು.
10. ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳು ಬಿಡ್/ಆಫರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಮತ್ತು / ಅಥವಾ ಹರಾಜು ಮಾರಾಟವನ್ನು ಮುಂದೂಡುವ/ ಮುಂದಕ್ಕೆ ಹಾಕುವ ರದ್ದುಪಡಿಸುವ ಸಂಪೂರ್ಣ ಹಕ್ಕನ್ನು ಅಧಿಕೃತ ಅಧಿಕಾರಿಯವರು ಹೊಂದಿರುವರು ಮತ್ತು ಮುಂಚಿತವಾಗಿ ಸೂಚನೆ ನೀಡದೆ ಮಾರಾಟದ ಯಾವುದೇ ಅಥವಾ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ ಅಧಿಕಾರವನ್ನು ಹೊಂದಿರುವರು.
11. ಯಶಸ್ವಿ ಖರೀದಿದಾರರು ಬಿಡ್‌ದಾರರು ಶಾಸನ ಬದ್ಧ ಬಾಕಿಗಳು/ತೆರಿಗೆಗಳು/ಶುಲ್ಕಗಳ/ಸ್ವತ್ತಿನ ತೆರಿಗೆ/ನೋಂದಣಿ ಶುಲ್ಕ/ಟಿಡಿಎಸ್/ ಬೆಸ್ಕಾಂ ಶುಲ್ಕಗಳು ನೀರಿನ ಶುಲ್ಕಗಳು/ ವರ್ಗಾವಣೆ ಖರ್ಚುಗಳಾದ ಮುದ್ರಾಂಕ ಸುಂಕ, ನೋಂದಣಿ ಶುಲ್ಕ ಇತ್ಯಾದಿಯನ್ನು ಭರಿಸಬೇಕು. ಬಿಡ್ ದಾರರು ಗುರುತಿನ ಚೀಟಿ, ವಿಳಾಸ/ಪ್ಯಾನ್ ಕಾರ್ಡ್ ಪ್ರತಿಯನ್ನು ಸಲ್ಲಿಸಬೇಕು.
12 ಹರಾಜಿನ ಅಡಿಯಲ್ಲಿ ತಿಳಿಸಿರುವ ಸ್ವತ್ತನ್ನು ಸ್ವತ್ತುಗಳನ್ನು ಎಲ್ಲಾ ಹೊರೆಗಳಿಂದ ಮುಕ್ತಗೊಂಡಿದೆ. ಸಾಲಗಾರರು ಭದ್ರತಾ ಸಾಲಗಾರರ ಸೂಚನೆಯಿಲ್ಲದೆ ಯಾವುದಾದರೂ ಹೊರೆಗಳನ್ನು ರಚಿಸಿದ್ದರೆ, ಯಶಸ್ವಿ ಬಿಡ್ ದಾರರ ಮೇಲೆ ಗಮನಿಸಲ್ಪಡಲಾಗುತ್ತದೆ.
13. ಘೋಷಿಸಿದ ಹರಾಜಿನಲ್ಲಿ ಯಾವುದೇ ದೋಷ, ತಪ್ಪು ಹೇಳಿಕೆಯನ್ನು ಕಂಡುಬಂದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. ಇತರೆ ನಿಯಮಗಳು ಮತ್ತು ನಿಬಂಧನೆಗಳು ಯಾವುದಾದರೂ ಇದ್ದರೆ ಹರಾಜು ನಡೆಯುವ ಸ್ಥಳದಲ್ಲಿ ತಿಳಿಸಲಾಗುವುದು.
14. ಹೆಚ್ಚಿನ ವಿವರಗಳಿಗಾಗಿ ಮೇಲಿನ ವಿಳಾಸದಲ್ಲಿ ಶಾಖಾ ವ್ಯವಸ್ಥಾಪಕರನ್ನು **ಕರ್ನಾಟಕ ಗ್ರಾಮೀಣ ಬ್ಯಾಂಕ್, (1) ದೇವನಹಳ್ಳಿ ಶಾಖೆ: ದೂರವಾಣಿ ಸಂಖ್ಯೆ: 9916850790 (2) ಹೆಸರಘಟ್ಟ ಶಾಖೆ: ದೂರವಾಣಿ ಸಂಖ್ಯೆ: 9845612839, (3) ಬೆಳ್ಳಂದೂರು ಶಾಖೆ : ದೂರವಾಣಿ ಸಂಖ್ಯೆ: 9590023800, (4) ಬ್ಯಾಡರಹಳ್ಳಿ ಶಾಖೆ: ದೂರವಾಣಿ ಸಂಖ್ಯೆ: 7406369989, (5) ಹಾವನೂರು ಎಕ್ಸ್‌ಟೆನ್ಷನ್: ದೂರವಾಣಿ ಸಂಖ್ಯೆ: 8147885809 ಅಥವಾ ಶ್ರೀ. ವಿಲ್ಸನ್ ದೇವದಾಸ್ ಪ್ರಾದೇಶಿಕ ಕಚೇರಿ, ದೂರವಾಣಿ ಸಂಖ್ಯೆ. 9980629010** ಅವರನ್ನು ಬೆಳಗ್ಗೆ **11.00 ಮತ್ತು ಸಂಜೆ 5.00** ರ ನಡುವಿನ ಯಾವುದೇ ಕೆಲಸದ ದಿನಗಳಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸುವುದು.
15. ಸ್ವತ್ತು ಮತ್ತು ಇತರೆ ವಿವರಗಳ ಪರಿಶೀಲನೆಗಾಗಿ, ಉದ್ದೇಶಿತ ಬಿಡ್ಡುದಾರರು ತಮ್ಮ ಸ್ವತ್ತನ್ನು ತಪಾಸಣೆ/ಮೌಲ್ಯಮಾಪನ ವಿಚಾರಣೆ ಇವೆಲ್ಲವು ಮಾಡುವ ಸ್ವಾತಂತ್ರವನ್ನು ಹೊಂದಿರುತ್ತಾರೆ.
16. ಸಾಲಗಾರದ/ ಜಾಮೀನುದಾರರಿಗೆ ಅಗತ್ಯ ಕ್ರಮಕ್ಕಾಗಿ ಸೂಚನೆಯನ್ನು ಈ ನೋಟೀಸಿನಲ್ಲಿ ತಿಳಿಸಲಾಗಿದೆ.
17 ಶಾಸನಬದ್ಧ ಅಧಿಕಾರಿಗಳು ಹರಾಜಿನ ದಿನಾಂಕದಂದು ರಜಾದಿನವನ್ನು ಘೋಷಿಸಿದರೆ, ಹರಾಜು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ನಡೆಯಲಾಗುವುದು.

ದಿನಾಂಕ : 10.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ಕಛೇರಿ, ಬೆಂಗಳೂರು.

6 ಹಸು ಸಜೀವ ದಹನ ಪ್ರಕರಣ ಆರೋಪಿಗಳು ಪೊಲೀಸರ ಬಲೆಗೆ

ಬೆಂಗಳೂರು: 6 ಹಸುಗಳ ಸಜೀವ ದಹನಕ್ಕೆ ಕಾರಣವಾಗಿದ್ದ ಆರೋಪಿಯನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಆರೋಪಿ ಮೊಹಮ್ಮದ್ ಇಮ್ರಾನ್ (49) ಎಂಬಾತನನ್ನು ಬಂಧಿಸಲಾಗಿದೆ. ಡಿ.ಜೆ ಹಳ್ಳಿ ಬಳಿಯ ಶಾಂಪುರ ರಸ್ತೆಯಲ್ಲಿ ಎ. 7ರಂದು ಆರೋಪಿ ಎಸಗಿದ ಕೃತ್ಯದಿಂದ ಶ್ರೀನಿವಾಸ್ ಎಂಬುವರ ಆರು ಹಸುಗಳು ಸಾವನ್ನಪ್ಪಿದ್ದವು. ಶಾಂಪುರ ರಸ್ತೆಯಲ್ಲಿನ ಪ್ಲೈವುಡ್ ಅಂಗಡಿಯಲ್ಲಿ ಮಂಗಳವಾರ ಬೆಳಗಿನ ಜಾವ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಪಕ್ಕದಲ್ಲಿದ್ದ ಶ್ರೀನಿವಾಸ್ ಎಂಬುವರಿಗೆ ಸೇರಿದ ದನದ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಆರು ಹಸುಗಳು ಹೊರಬರಲಾಗದೆ ನಿಂತಲ್ಲೇ ಸಜೀವ ದಹನವಾಗಿದ್ದವು. ಬೆಂಕಿ ಅವಘಡ ಆಕಸ್ಮಿಕವಲ್ಲ, ಬದಲಾಗಿ ಕಿಡಿಗೇಡಿಯೊಬ್ಬನ ಕೃತ್ಯ ಎಂಬುದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಜಿ ಹಳ್ಳಿ ನಿವಾಸಿಯಾದ ಆರೋಪಿ, ಮನೆಯಲ್ಲಿ ಯಾರೂ ಇಲ್ಲ ಎಂದು ರಾತ್ರಿ ವೇಳೆ ಓಡಾಡುವುದನ್ನು ಮಾಡುತ್ತಿದ್ದ. ಹಾಗೆ ಓಡಾಡುವಾಗ ನಾಯಿಗಳು ನನ್ನನ್ನು ಅಟ್ಟಾಡಿಸಿದ್ದವು, ಅವುಗಳನ್ನು ಹೆದರಿಸಲು ರಸ್ತೆಯ ಬದಿಯಲ್ಲಿದ್ದ ಕಸಕ್ಕೆ ಬೆಂಕಿ ಹಚ್ಚಿದೆ. ಹಸುಗಳನ್ನು ಕೊಲ್ಲುವ ಉದ್ದೇಶ ಇರಲಿಲ್ಲ ಎಂದು ಪೊಲೀಸರ ತನಿಖೆ ವೇಳೆ ಆರೋಪಿ ಹೇಳಿಕೊಂಡಿದ್ದಾನೆ. ಸದ್ಯ ತನಿಖೆ ಮುಂದುವರೆದಿದ್ದು ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.

ತಾಯಿಯ ಮೇಲೆ ಮಕ್ಕಳಿಂದಲೇ ಮಾರಣಾಂತಿಕ ಹಲ್ಲೆ: ಆರೋಪ

ಬೆಂಗಳೂರು: ಬೆಂಗಳೂರಿನಲ್ಲೊಂದು ಮನ ಕಲುಕುವಂತಹ ಘಟನೆ ಒಂದು ಬೆಳಕಿಗೆ ಬಂದಿದೆ. ವೃದ್ಧ ತಾಯಿಯನ್ನು ಸಾಕಬೇಕೆಂದು ತಾಯಿಯ ಮೇಲೆಯೇ ಮಕ್ಕಳು ಮತ್ತು ಮೊಮ್ಮಕ್ಕಳು ಮಾರಣಾಂತಿಕ ಹಲ್ಲೆ ಆರೋಪ ಕೇಳಿಬಂದಿದೆ.

ಗೌರಮ್ಮ ಹಲ್ಲೆಗೊಳಗಾದ ತಾಯಿ. ತಾಯಿಯನ್ನು ಸಾಕಲು ಸಾಧ್ಯವಿಲ್ಲ ಎಂಬ ನೆಪದಲ್ಲಿ ಪುತ್ರರು ಹಲ್ಲೆ ನಡೆಸುತ್ತಿರುವುದಾಗಿ ಆರೋಪಿಸಲಾಗಿದೆ. ಪುತ್ರರಾದ ನಾಗೇಶ್, ಚೇತನ್ ಮತ್ತು ಆಕಾಶ್ ಎಂಬುವವರು ಲಾಂಗು, ಮಚ್ಚುಗಳಂತಹ ಆಯುಧಗಳನ್ನು ಬಳಸಿಕೊಂಡು ಹಲ್ಲೆ ನಡೆಸಿರುವುದಾಗಿ ತಿಳಿದುಬಂದಿದೆ. ಜತೆಗೆ, ಮೊಮ್ಮಕ್ಕಳು ಕೂಡ ಮಚ್ಚು-ಲಾಂಗು ಹಿಡಿದು ರೀಲ್ಸ್ ಮಾಡುತ್ತಾ ವೃದ್ಧೆಯನ್ನು ಭಯಭೀತಳನ್ನಾಗಿಸುತ್ತಿರುವ ಆರೋಪ ಕೇಳಿಬಂದಿದೆ.

ಇದಲ್ಲದೆ, ರೌಡಿಶೀಟರ್ ಸಂಪರ್ಕ ಹೊಂದಿರುವ ವ್ಯಕ್ತಿಗಳ ಜತೆಗೂಡಿ ಅಜ್ಜಿಯ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂಬ ಗಂಭೀರ ಆರೋಪವೂ ಕೇಳಿಬಂದಿದೆ. ಈ ದೌರ್ಜನ್ಯದಿಂದ ಬೇಸತ್ತ ಗೌರಮ್ಮ ಅವರು ಕೊನೆಗೂ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಪ್ರಕರಣ ಸಂಬಂಧ ದೂರದ ಸಂಬಂಧಿ ಹಾಗೂ ವಕೀಲ ಕೇಶವ್ ಅವರ ಮೂಲಕ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಕರಣದ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದು, ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

ರಾಯ್ ಆತ್ಮಹತ್ಯೆ: ಎಸ್‌ಐಟಿ ತನಿಖೆ ಪೂರ್ಣ

ಬೆಂಗಳೂರು: ಕಾನ್ಫಿಡೆಂಟ್ ಗ್ರೂಪ್ ಸಂಸ್ಥೆಯ ಮುಖ್ಯಸ್ಥ ಸಿ.ಜೆ. ರಾಯ್ ಆತ್ಮಹತ್ಯೆ ಪ್ರಕರಣದ ತನಿಖೆ ಪೂರ್ಣಗೊಂಡಿದೆ. ಮಾನಸಿಕ ಖಿನ್ನತೆಯಿಂದ ಸಿ.ಜೆ.ರಾಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ತೀರ್ಮಾನಕ್ಕೆ ವಿಶೇಷ ತನಿಖಾ ತಂಡ ಬಂದಿದೆ. ಆದಾಯ ತೆರಿಗೆ ಅಧಿಕಾರಿಗಳ ಒತ್ತಡಕ್ಕೆ ರಾಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಸರಕಾರ ಈ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ವಹಿಸಿತ್ತು. ಎಸ್‌ಐಟಿ ತನಿಖೆಯ ವೇಳೆ ಹಲವು ವಿಚಾರಗಳು ಬೆಳಕಿಗೆ ಬಂದಿದೆ. ಸಿ.ಜೆ. ರಾಯ್ ಅವರು ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದರು. ಈ ಸಂಬಂಧ ಹಲವು ತಿಂಗಳ ಕಾಲ ಖಿನ್ನತೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಕೆಲ ತಿಂಗಳಿನಿಂದ ಚಿಕಿತ್ಸೆ ಪಡೆಯುವುದನ್ನು ನಿಲ್ಲಿಸಿದ್ದರು. ಮೃತಪಡುವ ಒಂದು ತಿಂಗಳ ಹಿಂದೆಯಿಂದ ಮಾತ್ರೆ ಸೇವನೆ ಮಾಡುತ್ತಿರಲಿಲ್ಲ, ಈ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನಸಿಕ ಖಿನ್ನತೆಗೆ ನಿಖರವಾದ ಕಾರಣ ಪತ್ತೆಯಾಗಿಲ್ಲ. ಆತ್ಮಹತ್ಯೆಗೆ ಯಾವುದೇ ಒತ್ತಡವೂ ಕಾರಣವಲ್ಲ ಎನ್ನುವುದು ತನಿಖೆಯ ವೇಳೆ ಬೆಳಕಿಗೆ ಬಂದಿದೆ. ಈಗಾಗಲೇ ತನಿಖೆ ಪೂರ್ಣಗೊಂಡಿದ್ದು ಶೀಘ್ರವೇ ಎಸ್‌ಐಟಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ ಮಾಡುವ ಸಾಧ್ಯತೆಯಿದೆ.

ಮಳೆಗಾಲ: ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚನೆ

ಬೆಂಗಳೂರು: ಮುಂಬರುವ ಮಳೆಗಾಲ ಗಮನದಲ್ಲಿಟ್ಟುಕೊಂಡು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಬಿಗಿಗೊಳಿಸಲು ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶನಿವಾರ ಬೆಳಗ್ಗೆ ಕೆಂಗೇರಿ, ಮೈಸೂರು ರಸ್ತೆ, ರಾಜರಾಜೇಶ್ವರಿ ನಗರ, ಹೊಸಕೇರೆಹಳ್ಳಿ, ನಾಯಂಡಹಳ್ಳಿ ಜಂಕ್ಷನ್, ಗಾಳಿ ಆಂಜನೇಯ ದೇವಸ್ಥಾನ, ವಿಜಯನಗರ ಹಾಗೂ ಗೋವಿಂದರಾಜನಗರ ಪ್ರದೇಶಗಳಲ್ಲಿ ಕ್ಷೇತ್ರ ಪರಿಶೀಲನೆ ನಡೆಸಿದ ಆಯುಕ್ತರು ರಾಜಕಾಲುವೆಗಳ ಸ್ವಚ್ಛತೆ, ರಸ್ತೆ ಕಾಮಗಾರಿಗಳು ಹಾಗೂ ನೀರು ನಿಲ್ಲುವ ಸಮಸ್ಯೆಗಳ ಬಗ್ಗೆ ಪರಿಶೀಲಿಸಿದರು.

ಕೆಂಗೇರಿ-ಮೈಸೂರು ರಸ್ತೆಯ ರಾಜಕಾಲುವೆಗಳಲ್ಲಿ ಒತ್ತುವರಿ ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಅವರು, ಮೈಸೂರು ರಸ್ತೆಯಲ್ಲಿರುವ ಅನಧಿಕೃತ ಮಳಿಗೆಗಳನ್ನು ಗುರುತಿಸಿ ದಂಡ ವಿಧಿಸಲು, ಕೆಂಗೇರಿ ಬಸ್ ನಿಲ್ದಾಣದ ಸಮೀಪದ ಸ್ಕೈವಾಕ್‌ಗೆ ಭೇಟಿ ನೀಡಿ ಅಗತ್ಯ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಸ್ವಚ್ಛತಾ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳುವಂತೆ ಸೂಚಿಸಿದ ಆಯುಕ್ತರು, ಕಾಲುವೆಗಳಲ್ಲಿ ತ್ಯಾಜ್ಯ ಹಾಗೂ ಮರದ ಕೊಂಬೆಗಳು ಸೇರುವುದನ್ನು ತಡೆಯಲು ಮತ್ತು ಅನಧಿಕೃತ ಕಟ್ಟಡಗಳಿಗೆ ನೋಟಿಸ್ ನೀಡಿ ಕಾನೂನು ಕ್ರಮ ಕೈಗೊಳ್ಳುವಂತೆ ಎಚ್ಚರಿಸಿದರು. ಹೊಸಕೇರೆಹಳ್ಳಿ ಕೆರೆಯ ಸಮೀಪದ ರಸ್ತೆ ಕಾಮಗಾರಿಗಳ ಪರಿಶೀಲಿಸಿದರು.

ಕೆಂಗೇರಿ-ಮೈಸೂರು ರಸ್ತೆ ಪ್ರದೇಶದಲ್ಲಿ ರಾಜಕಾಲುವೆ ಸ್ವಚ್ಛತಾ ಕಾಮಗಾರಿಯನ್ನು ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಪರಿಶೀಲಿಸಿದರು. ಈ ವೇಳೆ ಮುಖ್ಯ ಅಭಿಯಂತರ ಸ್ವಯಂಪ್ರಭಾ, ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರ ಜಯಶಂಕರ್, ಮಹೇಶ್ ಸೇರಿ ಇನ್ನಿತರ ಉಪಸ್ಥಿತರಿದ್ದರು.

ಜಯನಗರದ 42 ರಸ್ತೆಗಳಲ್ಲಿ ಪಾರ್ಕಿಂಗ್ ನೀತಿ ಜಾರಿಗೆ ಕ್ರಮ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರದ 42 ರಸ್ತೆಗಳಲ್ಲಿ ಪಾರ್ಕಿಂಗ್ ನೀತಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಕನಕಪುರ ರಸ್ತೆಯ ಎಚ್.ಎಂ. ತಾಂಬೂರಿನ್ ಅಪಾರ್ಟ್‌ಮೆಂಟ್‌ನಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪ್ರಮುಖ ರಸ್ತೆಗಳಲ್ಲಿ ಹಂತ ಹಂತವಾಗಿ ಪಾರ್ಕಿಂಗ್ ನೀತಿ ಜಾರಿಗೆ ತರಲಾಗುತ್ತಿದ್ದು, ಈಗಾಗಲೇ ಜಯನಗರ ವಿಭಾಗದ 42 ರಸ್ತೆಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ದೇಶದ ಅಭಿವೃದ್ಧಿಗೆ ಜನಗಣತಿ ಮಹತ್ವದ್ದು, ಪ್ರತಿಯೊಬ್ಬರೂ ಭಾರತ ಸರಕಾರದ ಜನಗಣತಿ 2026-27ರ ಸ್ವಯಂ ಗಣತಿಯಲ್ಲಿ ಭಾಗವಹಿಸಬೇಕು. ಸಾರ್ವಜನಿಕರು ರಸ್ತೆ ಗುಂಡಿ, ಘನತ್ಯಾಜ್ಯ ನಿರ್ವಹಣೆಯ ಸಮಸ್ಯೆ, ಸಂಚಾರ ದಟ್ಟಣೆ, ಅಣ್ಣಯ್ಯಪ್ಪ ಕೆರೆ ಉದ್ಯಾನವನದ ಶೌಚಾಲಯ ನಿರ್ವಹಣೆ, ಸಾರಕ್ಕಿ ಕೆರೆ ಬಫರ್ ಝೋನ್ ಸಮಸ್ಯೆ ಹಾಗೂ ಅಕ್ರಮ ಪಾರ್ಕಿಂಗ್ ಮತ್ತು ಪಬ್‌ಗಳ ಹಾವಳಿ ಸೇರಿದಂತೆ ಇತರ ಸಮಸ್ಯೆಗಳು ದಕ್ಷಿಣ ಪಾಲಿಕೆಯ ವ್ಯಾಪ್ತಿಯಲ್ಲಿ ಹೆಚ್ಚಾಗಿದೆ ಎಂದು ದೂರು ನೀಡಿದ್ದಾರೆ ಎಂದರು.

ಸಿಬ್ಬಂದಿ ಕೊರತೆಯಿಂದ ಕೆಲ ಕಾಮಗಾರಿಗಳು ವಿಳಂಬವಾಗುತ್ತಿದ್ದು, ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು. ಜತೆಗೆ, ಆಧುನಿಕ ತಂತ್ರಜ್ಞಾನ ಬಳಸಿ ಕಸ ನಿರ್ವಹಣೆ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ನಿವಾಸಿಗಳ ಸಂಘಗಳು ಮುಂದಾದರೆ ಪಾಲಿಕೆ ಸಹಕಾರ ನೀಡಲಿದೆ. ಪಬ್‌ಗಳ ಹಾವಳಿ ಮತ್ತು ಪಾರ್ಕಿಂಗ್ ಸಮಸ್ಯೆಗಳ ಕುರಿತು ಪೊಲೀಸ್ ಇಲಾಖೆಯೊಂದಿಗೆ ಚರ್ಚಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾರಕ್ಕಿ ಕೆರೆಯ ಬಫರ್ ಝೋನ್ ಕುರಿತು ನ್ಯಾಯಾಲಯದ ಆದೇಶದಂತೆ ಸರ್ವೆ ನಡೆಯುತ್ತಿದೆ ಎಂದರು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ರವರ ನ್ಯಾಯಾಲಯ ಮತ್ತು ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್ ನಂ. 235/2026
ಅರ್ಜಿದಾರರು: 1) ಶ್ರೀ ಮುನಿಮಂಚೇಗೌಡ ಬಿನ್.ಲೇ ಮುನಿಸಿದ್ದೇಗೌಡ, ವಯಸ್ಸು 75 ವರ್ಷ, ವಾಸ: ಕಡವಕೆರೆದೊಡ್ಡಿ ಕಸಬಾ ಹೋಬಳ ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿಅರ್ಜಿದಾರರು : 1) ಜನನ ಮತ್ತು ಮರಣ ನೋಂದಾಣಾಧಿಕಾರಿಗಳು ತಹಸಿಲ್ದಾರ್ ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ. 2) ಗ್ರಾಮ ಲೇಕ್ಕಾಧಿಕಾರಿ. ಎಂ.ಮಣಿಯಂಬಾಳ್ ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 7 ರವರ ತಂದೆ, ಶ್ರೀ ಮುನಿದ್ದೇಗೌಡ ಬಿನ್ ಲೇಟ್ ಮುನಿಮಂಚೆಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಸುಂಡಘಟ್ಟ ಗ್ರಾಮದಲ್ಲಿ ದಿನಾಂಕ 02/10/1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಕಾಂತರವಾಗಲಿ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 15/06/2026 ರ ಬೆಳಿಗ್ಗೆ ಸರಿಯಾಗಿ 11 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 09-04-2026 ರಂದು ನನ್ನ ಸ್ವ-ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಕನಕಪುರ
ಅರ್ಜಿದಾರರ ಪರ ವಕೀಲರು
ರಮೇಶ್. ಎಸ್ & ಶ್ರೀಕಾಂತ್. ಜಿ ಜೆ ವಕೀಲರು
ಸ್ಥಳ: ಕನಕಪುರ
ದಿನಾಂಕ: 01/04/2026

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.251/2026
ಅರ್ಜಿದಾರರು : 1. ಶ್ರೀಮತಿ ಜಯಮ್ಮ ಕೋಂ ಲೇಟ್ ದೊಡ್ಡತಮ್ಮಯ್ಯ, ವಯಸ್ಸು 76 ವರ್ಷ ವಾಸ: ನಿಟ್ಟೂರು ಗ್ರಾಮ, ನಿಟ್ಟೂರ್ ಹಲಸಹಳ್ಳಿ ಅಂಚೆ, ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು ಇತರರು
ವಿರುದ್ಧ
ಎದುರುದಾರರು : 1. ತಹಶೀಲ್ದಾರ್‌ರವರು ಜನನ & ಮರಣ ನೋಂದಣಾಧಿಕಾರಿಗಳು ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಕಂದಾಯ ಗ್ರಾಮ ಲೆಕ್ಕಾಧಿಕಾರಿ, ಗುರುವಿನಪುರ ಗ್ರಾಮ. ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2ನೇ ಅರ್ಜಿದಾರರ ಮಾವ ಮತ್ತು 3 ಮತ್ತು 4 ನೇ ಅರ್ಜಿದಾರರ ತಾತನಾದ ಶ್ರೀ ದೊಡ್ಡತಮ್ಮಯ್ಯ ಬಿನ್ ಲೇಟ್ ಕುಳ್ಳಯ್ಯನವರು ಇದೇ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗುರುವಿನಪುರ ಗ್ರಾಮದಲ್ಲಿ ದಿನಾಂಕ: 04-06-2015 ರಂದು ಮರಣಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 15/06/2026ರ ಬೆಳಿಗ್ಗೆ ಸರಿಯಾಗಿ 11-00 ಗಂಟೆಗೆ ನ್ಯಾಯಾಲಯದ ಮಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 08ನೇ ಏಪ್ರಿಲ್ 2026 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಶಿವಶಂಕರ ಟಿ.ಎನ್. ವಕೀಲರು
ಸ್ಥಳ : ಕನಕಪುರ
ದಿನಾಂಕ: 08/04/2026

ಕ್ರೀಡಾಕೂಟ ಆಯೋಜನೆ ಅತ್ಯಗತ್ಯ

ಪೌರಕಾರ್ಮಿಕರ ಕ್ರೀಡಾಕೂಟಕ್ಕೆ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಚಾಲನೆ ನೀಡಿದರು. ಈ ವೇಳೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್, ಕಂದಾಯ ಅಪರ ಆಯುಕ್ತ ಕೆ. ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೆಂಗಳೂರು: ನಗರ ಸ್ವಚ್ಛತೆಗೆ ಶ್ರಮಿಸುತ್ತಿರುವ ಪೌರಕಾರ್ಮಿಕರ ಮನೋಸ್ಥೈರ್ಯ ಹೆಚ್ಚಿಸಲು ಕ್ರೀಡಾಕೂಟಗಳ ಆಯೋಜನೆ ಅತ್ಯಗತ್ಯ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ದಿನಾಚರಣೆ ಅಂಗವಾಗಿ ಕೇಂದ್ರ ನಗರ ಪಾಲಿಕೆ ವತಿಯಿಂದ ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಪೌರಕಾರ್ಮಿಕರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ನಗರದ ಸ್ವಚ್ಛತೆಗಾಗಿ ದಿನನಿತ್ಯ ಶ್ರಮಿಸುವ ಸಿಬ್ಬಂದಿಗೆ ಇಂತಹ ಕ್ರೀಡಾಕೂಟಗಳು ಅಗತ್ಯ. ಇದರಿಂದ ಅವರು ಕೆಲಸದ ಒತ್ತಡದಿಂದ ಹೊರಬಂದು ಉತ್ಸಾಹದಿಂದ ಭಾಗವಹಿಸಿ, ತಂಡಭಾವನೆ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಕ್ರೀಡಾಕೂಟದ ಮೊದಲ ದಿನ ಗಾಂಧಿನಗರ, ಚಿಕ್ಕಪೇಟೆ ಹಾಗೂ ಚಾಮರಾಜಪೇಟೆ ವಿಭಾಗಗಳ ಪೌರಕಾರ್ಮಿಕರು, ಗ್ಯಾಂಗ್‌ಮೆನ್‌ಗಳು, ತೋಟಗಾರಿಕೆ ಮಾಲಿಗಳು ಮತ್ತು ವಾಟರ್ ಮೆನ್‌ಗಳು ಭಾಗವಹಿಸಿ ಕ್ರೀಡಾಸ್ಪರ್ಧೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇಂದು ನಡೆಯುವ ಎರಡನೇ ದಿನದ ಕ್ರೀಡಾಕೂಟದಲ್ಲಿ ಶಾಂತಿನಗರ, ಶಿವಾಜಿನಗರ ಮತ್ತು ಸಿ.ವಿ. ರಾಮನ್ ನಗರ ವಿಭಾಗಗಳ ಸಿಬ್ಬಂದಿ ಫ್ರೆಜರ್ ಟೌನ್‌ನ ಈಸ್ಟ್ ಫುಟ್‌ಬಾಲ್ ಮೈದಾನದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕ್ರೀಡಾಕೂಟ ಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಈ ವೇಳೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್, ಕಂದಾಯ ಅಪರ ಆಯುಕ್ತ ಕೆ. ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಬಾಹ್ಯಾಕಾಶ ಸಾಧನೆ: ಅಂಚೆ ಚೀಟಿ ಬಿಡುಗಡೆ

ಬೆಂಗಳೂರು: ಭಾರತೀಯ ಅಂಚೆ ಇಲಾಖೆ ಕರ್ನಾಟಕ ಅಂಚೆ ವೃತ್ತವು ಏ.12 ರಂದು ನಗರದ ಜಿಪಿಒಯ ಮೇಘದೂತ್ ಸಭಾಂಗಣದಲ್ಲಿ ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಮಹತ್ವ ಗುರುತಿಸಿ ಅಂಚೆ ಚೀಟಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ತಿಳಿಸಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನೇತೃತ್ವದಲ್ಲಿ ಸಾಗುತ್ತಿರುವ ಮಾನವ ಬಾಹ್ಯಾಕಾಶ ಯೋಜನೆಯ ಸಾಧನೆಗಳನ್ನು ಈ ಅಂಚೆಚೀಟಿಗಳು ಪ್ರತಿಬಿಂಬಿಸಲಿವೆ. 1962ರಲ್ಲಿ ಡಾ. ವಿಕ್ರಮ್ ಎ. ಸಾರಾಭಾಯ್ ಅವರ ದೂರದೃಷ್ಟಿಯಿಂದ ಆರಂಭವಾದ ಭಾರತದ ಬಾಹ್ಯಾಕಾಶ ಪಯಣವು ಇಂದು ಜಾಗತಿಕ ಮಟ್ಟದಲ್ಲಿ ಹೆಮ್ಮೆಪಡುವ ಹಂತ ತಲುಪಿದೆ. ಚಂದ್ರಯಾನ-3, ಆದಿತ್ಯ-ಎಲ್1 ಸೇರಿದಂತೆ ಹಲವು ಮಹತ್ವದ ಯೋಜನೆಗಳ ಮೂಲಕ ಇಸ್ರೋ ಹೊಸ ಮೈಲಿಗಲ್ಲುಗಳನ್ನು ನಿರ್ಮಿಸಿದೆ ಈ ವಿಶೇಷ ಸ್ಮರಣಾರ್ಥ ಅಂಚೆಚೀಟಿಗಳನ್ನು ಬಿಡುಗಡೆ ಮಾಡಲಿದ್ದು, ಕಾರ್ಯಕ್ರಮದಲ್ಲಿ ಇಸ್ರೋ ಅಧ್ಯಕ್ಷ ಡಾ. ವಿ. ನಾರಾಯಣನ್, ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುನರ್ವಸು ಪಿಯು ಕಾಲೇಜು ಸಾಧನೆ

ಬೆಂಗಳೂರು: ನಗರದ ಅರಿಸಿನಕುಂಟೆ ಯಲ್ಲಿರುವ ಪುನರ್ವಸು ಪಿಯು ಕಾಲೇಜಿನ ವಿದ್ಯಾರ್ಥಿಗಳು 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಧೃತಿ ಭಟ್ ಶೇ.99.16 ಅಂಕಗಳನ್ನು ಪಡೆಯುವ ಮೂಲಕ ರಾಜ್ಯ ಮಟ್ಟದಲ್ಲಿ ಸ್ಥಾನ ಗಳಿಸುವುದಲ್ಲದೆ, ನೆಲಮಂಗಲ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ. ವಾಣಿಜ್ಯ ವಿಭಾಗದ ಇತರ ವಿದ್ಯಾರ್ಥಿಗಳಾದ ಪುನೀತ್ ಶೇ.95.5 ಮತ್ತು ಅಭಿಜ್ಞಾ ಶೇ.90.67ರಷ್ಟು ಅಂಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲೂ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಮಾನಸ ಕೆ. ಎಲ್. ಶೇ.93.8 ಹಾಗೂ ಜ್ಞಾನೇಶ್ ಶೇ.91.5 ಅಂಕಗಳನ್ನು ಪಡೆದು ಕಾಲೇಜಿನ ಯಶಸ್ಸಿನ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದುಕೊಂಡಿದ್ದು, ವಿದ್ಯಾರ್ಥಿಗಳ ಈ ಗಮನಾರ್ಹ ಸಾಧನೆಗೆ ಪುನರ್ವಸು ಪಿ.ಯು. ಕಾಲೇಜಿನ ಅಧ್ಯಕ್ಷ ಅಜಿತ್ ಹರೀಶ್ ರವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಶ್ರಮ ಮತ್ತು ಬೋಧಕ ವರ್ಗದ ಶಿಸ್ತುಬದ್ಧ ಮಾರ್ಗದರ್ಶನ ಈ ಯಶಸ್ಸಿಗೆ ಕಾರಣ ಎಂದು ಅವರು ಶ್ಲಾಘಿಸಿ, ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಸಿಎಂಆರ್ ಮಕ್ಕಳಿಂದ ಉತ್ತಮ ಸಾಧನೆ

ಬೆಂಗಳೂರು: ನಗರದ ವಿವಿಧೆಡೆ ಇರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜುಗಳ ವಿದ್ಯಾರ್ಥಿಗಳು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಎಚ್ಆರ್ ಬಿಆರ್‌ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವಿದ್ಯಾರ್ಥಿ ಶೇಖ್ ಮುಹಮ್ಮದ್ ಝೈದ್ ಶೇ.97.30ರಷ್ಟು ಅಂಕಗಳನ್ನು ಪಡೆದರೆ, ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿ ದೀಪೇಶ್ ಆರ್ ಶೇ.97.5ರಷ್ಟು ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ನಗರದ ಐಟಿಪಿಎಲ್‌ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವಿದ್ಯಾರ್ಥಿನಿ ಜೋನ್ನಾ ಮೇರಿ ಗ್ರೇಸನ್ ಶೇ.97.2ರಷ್ಟು ಅಂಕಗಳನ್ನು ಪಡೆದರೆ, ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿ ಲಲಿತ್ ಸಾಗರ್‌ಮತ್ತು ಎಸ್ ಆದಿತ್ಯ ಸುಬ್ರಹ್ಮಣ್ಯ ಶೇ.98.17ರಷ್ಟು ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಉಪನ್ಯಾಸಕರ ಗುಣಾತ್ಮಕ ಬೋಧನೆ, ಆಡಳಿತ ಮಂಡಳಿಯ ಸಕಾರಾತ್ಮಕ ಪ್ರೋತ್ಸಾಹದಿಂದ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡಲು ಸಾಧ್ಯವಾಯಿತು ಎಂದು ಸಿಎಂಆರ್ ಸಮೂಹ ಕಾಲೇಜುಗಳ ಪ್ರಾಂಶುಪಾಲರು ಸಂತೋಷ ವ್ಯಕ್ತಪಡಿಸಿದ್ದಾರೆ.

ಬಿಐಇಸಿನಲ್ಲಿ ಟ್ರೇಡ್ ಸಮಾವೇಶ ನಾಳೆಯಿಂದ

ಬೆಂಗಳೂರು: ಭಾರತದ ಪ್ರಮುಖ ಬಿ2ಬಿ ಪ್ರದರ್ಶನ ಆಯೋಜಕರಾದ ಮೀಡಿಯಾ ಡೇ ಮಾರ್ಕೆಟಿಂಗ್ ಸಂಸ್ಥೆಯು ಬಿಐಇಸಿಯಲ್ಲಿ ಏಪ್ರಿಲ್ 13ರಿಂದ 15ರವರೆಗೆ ಆರು ಪ್ರಮುಖ ಟ್ರೇಡ್ ಎಕ್ಸ್ಪೋಗಳನ್ನು ಏಕಕಾಲದಲ್ಲಿ ಆಯೋಜಿಸುತ್ತಿದೆ. ಮುದ್ರಣ, ಪ್ಯಾಕೇಜಿಂಗ್, ಪೇಪರ್, ಲೇಬಲ್, ಬಾರ್ಕೋಡ್, ಪೇಂಟ್ ಕೋಟಿಂಗ್, ವಾಲ್-ಫ್ಲೋರ್-ಸೀಲಿಂಗ್, ಅಡ್ವಾನ್ಸ್ಡ್ ಬಿಲ್ಡಿಂಗ್ ಮೆಟೀರಿಯಲ್ಸ್ ಸೇರಿದಂತೆ ಹಲವು ಕ್ಷೇತ್ರಗಳ ಕೈಗಾರಿಕಾ ಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ಸೇರಲಿದ್ದಾರೆ. ಕಾರ್ಯಕ್ರಮವು ಏಪ್ರಿಲ್ 13ರಂದು ಉದ್ಘಾಟನೆಯಾಗಲಿದ್ದು, ವಿವಿಧ ಕೈಗಾರಿಕಾ ಸಂಘಟನೆಗಳ ಗಣ್ಯರು ಮತ್ತು ಮುಖಂಡರು ಭಾಗವಹಿಸಲಿದ್ದಾರೆ. ಏಪ್ರಿಲ್ ತಿಂಗಳಲ್ಲಿ ನಡೆಯುವ ಈ ಪ್ರದರ್ಶನಕ್ಕೆ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಕೈಗಾರಿಕಾ ವಲಯದ ಎಲ್ಲಾ ಪಾಲುದಾರರಿಗೆ ಇದು ಒಂದು ಮಹತ್ವದ ಅವಕಾಶವಾಗಿದೆ. ಮುದ್ರಣ, ಪ್ಯಾಕೇಜಿಂಗ್, ಲೇಬಲಿಂಗ್ ಮತ್ತು ಬಾರ್ಕೋಡ್ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರದರ್ಶನಗಳು ಸರಪಳಿ ನಿರ್ವಹಣೆ, ಟ್ರ್ಯಾಕಿಂಗ್ ತಂತ್ರಜ್ಞಾನ ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಹೊಸ ಪರಿಹಾರಗಳನ್ನು ಪರಿಚಯಿಸಲಿವೆ. ಬಾರ್ಕೋಡ್ ಮತ್ತು ಲೇಬಲ್ ಎಕ್ಸ್‌ಪೋಗೆ ಮಸ್ಟೆಕ್ ಟೆಕ್ನಾಲಜೀಸ್ ಇಂಡಿಯಾ ಪ್ರಾಯೋಜಕತ್ವ ನೀಡಿದೆ.

ವಿರಾಮ
ಪ್ರತಿ ಭಾನುವಾರ

ಲೋಕಾಯುಕ್ತ ವರದಿಯಲ್ಲಿ ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಹತ್ತಾರು ಮುಖಗಳು ಅನಾವರಣ

ಬೋಗಸ್ ದಾಖಲೆಗಳನ್ನು ಸೃಷ್ಟಿಸಿ ನೂರಾರು ಸಿಎಲ್ 7 ಮಂಜೂರು

ಬೆಂಗಳೂರು: ಹಫ್ತಾ ವಸೂಲಿ, ಕಾಸಿಗಾಗಿ ಪೋಸ್ಟಿಂಗ್ ದಂಧೆ, ಕಿಕ್‌ಬ್ಯಾಕ್, ಹೋಟೆಲ್ ಮತ್ತು ವಸತಿಗೃಹ (ಸಿಎಲ್-7) ಮಂಜೂರಾತಿಗೆ ಕೋಟ್ಯಂತರ ರು. ಲಂಚ ವಸೂಲಿ ಮತ್ತು ಮಧ್ಯವರ್ತಿಗಳ ಹಾವಳಿ ಸೇರಿ ಒಂದಿಲ್ಲೊಂದು ಅಕ್ರಮ ನಡೆಯುತ್ತಿರುವ ಅಬಕಾರಿ ಇಲಾಖೆಯಲ್ಲಿ ನಿಯಮಬಾಹಿರವಾಗಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೆಲ ಅಧಿಕಾರಿಗಳು ನೂರಾರು ಸಿಎಲ್-7 ಮಂಜೂರಾತಿ ಮಾಡಿರುವುದು ಲೋಕಾಯುಕ್ತ ವರದಿಯಲ್ಲಿ ಬಹಿರಂಗವಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಅಬಕಾರಿ ವಲಯ ಬಿಯುಡಿ-8 ವ್ಯಾಪ್ತಿಯಡಿ ಬರುವ ಕೆ.ಆರ್.ಪುರದ ಮೇದಹಳ್ಳಿ, ಕೌದೇನಹಳ್ಳಿ, ಬೀದರಹಳ್ಳಿ, ರಾಮಪುರ ಸೇರಿ ಇತರ ಪ್ರದೇಶಗಳಲ್ಲಿ ನಿಯಮಬಾಹಿರವಾಗಿ ನೂರಾರು ಸಿಎಲ್-7 ಮಂಜೂರಾತಿ ಮಾಡಲಾಗಿದೆ. ಬಾರ್ ಅ್ಯಂಡ್ ರೆಸ್ಟೋರೆಂಟ್‌ನಲ್ಲಿ(ಸಿಎಲ್-9)ಮದ್ಯ ಸೇವನೆಗೆ ಇರುವ ಕಂಪಾರ್ಟ್‌ಮೆಂಟ್‌ಗಳನ್ನೇ ಸಿಎಲ್-7 ಕೊಠಡಿಗಳೆಂದು ನೀಲನಕಾಶೆ ತಯಾರಿಸಿರುವುದು, ಬೇರೆ ಕಟ್ಟಡದ ಕಿಚನ್, ರೂಂಗಳು, ಡೈನಿಂಗ್ ಹಾಲ್, ರೆಸ್ಟೋರೆಂಟ್ ಛಾಯಚಿತ್ರ ನೀಡಿರುವುದು, ಪಾರ್ಕಿಂಗ್ ವ್ಯವಸ್ಥೆಗೆ ಕೆರೆ ಜಾಗ ತೋರಿಸಿರುವುದು, ಸುಳ್ಳು ಟ್ರೇಡ್ ಲೈಸೆನ್ಸ್ ಕೊಟ್ಟಿರುವುದು, ಅಸ್ತಿತ್ವದಲ್ಲಿರುವ ಸಿಎಲ್-9 ಕಟ್ಟಡ ಮತ್ತು ಅದರ ವಿಳಾಸವನ್ನು ನಕಲಿ ದಾಖಲೆ ಸೃಷ್ಟಿಸಿ ನೂರಾರು ಸಿಎಲ್-7 ಲೈಸೆನ್ಸ್ ಮಂಜೂರಾತಿ ಮಾಡಲಾಗಿದೆ.

ಕೆಲವೊಮ್ಮೆ ಕಟ್ಟಡಗಳು ಇಲ್ಲದಿದ್ದರೂ ಬೋಗಸ್ ದಾಖಲೆ ಸೃಷ್ಟಿಸಿ ಸಿಎಲ್-7 ಲೈಸೆನ್ಸ್ ಮಂಜೂರಾತಿ ಮಾಡಲಾಗಿದೆ. ಅಬಕಾರಿ ಉಪ ಆಯುಕ್ತರು, ಉಪ ಅಧೀಕ್ಷಕರು ಮತ್ತು ನಿರೀಕ್ಷಕ ಅಧಿಕಾರಿಗಳು ಕಾನೂನುಬಾಹಿರವಾಗಿ ಸಿಎಲ್-7 ಲೈಸೆನ್ಸ್ ನೀಡಿರುವುದು ವರದಿಯಲ್ಲಿ ತಿಳಿದುಬಂದಿದೆ. ಕೆಲವೆಡೆ ಸಿಎಲ್-7 ಸನ್ನದು ಮಂಜೂರಾಗಿರುವ ಕಟ್ಟಡದಲ್ಲಿರುವ ಸಿಎಲ್-9 ಸನ್ನದುಗಳನ್ನು ಸಿಎಲ್-7 ಸನ್ನದುಗಳು ಮಂಜೂರಾದ ನಂತರ ಬೇರೆ ಕಡೆಗೆ ಸ್ಥಳಾಂತರ ಮಾಡಿ ಆ ಕಟ್ಟಡವನ್ನು ಸಿಎಲ್-7 ಕಟ್ಟಡ ಎಂಬುದಾಗಿ ತೋರಿಸಲಾಗಿದೆ. ಸಿಎಲ್-9 ಕಟ್ಟಡ ಹಾಗೂ ಅದೇ ವಿಳಾಸಕ್ಕೆ ನಕಲಿ ದಾಖಲೆ ಸೃಷ್ಟಿಸಿ ಕರಾಮತ್ತು ತೋರಿರುವ ಈ ಅಧಿಕಾರಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ವರದಿ ಕೊಟ್ಟು ಯಾಮಾರಿಸಿದ್ದಾರೆ. ಈ ಕುರಿತು ವಕೀಲ ಡಾ.ಹರಿಪ್ರಸಾದ್ ಎಂಬುವರು ಕೊಟ್ಟಿರುವ ದೂರಿನ ಮೇರೆಗೆ ಲೋಕಾಯುಕ್ತರು ನಡೆಸಿದ್ದ ತನಿಖೆಯಲ್ಲಿ ಅಧಿಕಾರಿಗಳು ಹೇಗೆಲ್ಲಾ ಅಕ್ರಮ ಎಸಗಿರುವುದು ಸಾಬೀತಾಗಿದೆ.

ಬೆಂಗಳೂರಲ್ಲೇ ಬಿಡುಬಿಟ್ಟಿರುವ ಅಧಿಕಾರಿಗಳು

ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ಜಿಲ್ಲೆಗಳಲ್ಲೇ ಕೆಲ ಉಪ ಆಯುಕ್ತರು 30 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರು ಮತ್ತು ಅದರ ಸುತ್ತಮುತ್ತ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಬಕಾರಿ ಉಪ ಆಯುಕ್ತರನ್ನು ಬೇರೆ ಜಿಲ್ಲೆಗಳಿಗೆ ವರ್ಗಾಯಿಸಬೇಕೆಂಬ ನಿಯಮ ಇದೆ. ಆದರೆ, ಸಾರ್ವತ್ರಿಕ ವರ್ಗಾವಣೆ ಸೇರಿ ಇತರ ಸಂದರ್ಭದಲ್ಲಿ ಕೆಲ ಉಪ ಆಯುಕ್ತರು ಸಿಂಡಿಕೇಟ್ ಮಾಡಿಕೊಂಡು ಆಯಕಟ್ಟಿನ ಜಾಗಕ್ಕೆ ಕೂರಲು ಕೋಟ್ಯಂತರ ರು. ಲಂಚ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಉಪ ಆಯುಕ್ತರು ವರ್ಗಾವಣೆ ಪ್ರಕ್ರಿಯೆ ನಡೆಯಲಿದ್ದು, ಬೆಂಗಳೂರು ನಗರ ವ್ಯಾಪ್ತಿಯ ಅಬಕಾರಿ ವಲಯದಲ್ಲೇ ಉಳಿದುಕೊಳ್ಳಲು ಆರೋಪಿತ ಅಧಿಕಾರಿಗಳು ಯತ್ನಿಸುತ್ತಿದ್ದಾರೆ.

ದೇವರ ದರ್ಶನ ಪಡೆಯಲು ಮುಚ್ಚಳಿಕೆ ನೀಡುವುದು ವಾಡಿಕೆ

ಬೆಂಗಳೂರು: ದರ್ಶನ್ ಹಿಂದೂ ಎಂದು ಮುಚ್ಚಳಿಕೆ ನೀಡಿರುವುದಕ್ಕೆ ಅವರಿಗೆ ಸದಸ್ಯತ್ವ ನೀಡಲಾಗಿದೆ. ಅನ್ಯ ಧರ್ಮೀಯರು, ಅವರ ಕುಟುಂಬದ ಸದಸ್ಯರು ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿರುವ ಬಗ್ಗೆ ತಿರುಪತಿ ತಿರುಮಲ ದೇವಸ್ಥಾನ ಪರಿಶೀಲಿಸಲಿದೆ ಎಂದು ಟಿಟಿಡಿ ಸದಸ್ಯ ಎಸ್.ನರೇಶ್ ಕುಮಾರ್ ತಿಳಿಸಿದರು.

ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ದರ್ಶನ್ ಅವರ ಕುಟುಂಬ ಸದಸ್ಯರು ಚರ್ಚ್‌ಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಬಗ್ಗೆ ನನಗೆ ಇನ್ನೂ ಯಾವುದೇ ಮಾಹಿತಿ ಇಲ್ಲ. ಈ ಕುರಿತು ಸಾಮಾಜಿಕ ಮಾಧ್ಯಮ ಗಳಲ್ಲಿ ಸುದ್ದಿ ಹರಿದಾಡುತ್ತಿದೆ. ಹಿಂದೂ ಧರ್ಮದವರಿಗೆ ಮಾತ್ರವೇ ಸದಸ್ಯತ್ವ ನೀಡಲು ಅವಕಾಶವಿದ್ದು, ದರ್ಶನ್ ಕೂಡ ಹಿಂದೂ ಧರ್ಮದವರಾಗಿದ್ದಾರೆ. ಈ ಪ್ರಕರಣದ ಬಗ್ಗೆ ಮಂಡಳಿ ಪರಿಶೀಲಿಸಲಿದೆ ಎಂದರು.

ಮಂಡಳಿ ನಿಯಮದ ಪ್ರಕಾರ ಹಿಂದೂಗಳಿಗೆ ಮಾತ್ರವೇ ಸದಸ್ಯತ್ವ ನೀಡಲು ಅವಕಾಶವಿದೆ. ದರ್ಶನ್ ಸದಸ್ಯತ್ವ ಪಡೆಯುವ ವೇಳೆಯಲ್ಲಿ ಹಿಂದೂ ಎಂದು ಮುಚ್ಚಳಿಕೆ ನೀಡಿದ್ದಾರೆ. ಇದೀಗ ಅವರ ಕುಟುಂಬದ ಸದಸ್ಯರು ಚರ್ಚ್ ಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದಾರೆ ಎಂದು ಕೆಲವು ಸಾಮಾಜಿಕ ಹಾಗೂ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅದರ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಇಲ್ಲ.

> **ಮಂಡಳಿಯ ಅಧ್ಯಕ್ಷರಾಗಿ ನಾಯ್ಡು ಅವರು ಅಧಿಕಾರ ವಹಿಸಿಕೊಂಡ ಬಳಿಕ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಹಿಂದೂವಲ್ಲದ ಸಿಬ್ಬಂದಿ ವಜಾಗೊಳಿಸಲಾಯಿತು. ಹೀಗಾಗಿ ಮಂಡಳಿ ಸದಸ್ಯತ್ವ ಮಾತ್ರವಲ್ಲ, ಮಂಡಳಿ ಯಲ್ಲಿ ಸಿಬ್ಬಂದಿಯಾಗು ವುದಕ್ಕೂ ಹಿಂದೂ ಧರ್ಮ ಕಡ್ಡಾಯವಾಗಿದೆ. ಎಲ್ಲಿಯೂ ಕೂಡ ಅನ್ಯ ಧರ್ಮಿಯರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ.**
> **- ಎಸ್.ನರೇಶ್ ಕುಮಾರ್ ಟಿಟಿಡಿ ಸದಸ್ಯ**

ಈ ಹಿಂದೆ ದಿವಂಗತ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಕೂಡ ತಮ್ಮ ಧರ್ಮದ ಬಗ್ಗೆ ಮುಚ್ಚಳಿಕೆ ನೀಡಿದ ಮೇಲೆ ನಾವು ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಈ ನಿಯಮ ಎಲ್ಲರಿಗೂ ಕಡ್ಡಾಯವಾಗಿ ಅನ್ವಯವಾಗುವಂತೆ ಮಂಡಳಿ ನೋಡಿಕೊಳ್ಳುತ್ತಿದೆ. ಇಂತಹ ವೇಳೆಯಲ್ಲಿ ದರ್ಶನ್ ಎಂಬುವರ ಕುಟುಂಬದ ಸದಸ್ಯರು ಚರ್ಚ್‌ಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದಾರೆ ಎನ್ನುವುದರ ಬಗ್ಗೆ ಮಂಡಳಿಗೆ ಯಾವುದೇ ಅಧಿಕೃತ ದಾಖಲೆಗಳು ಸಿಕ್ಕಿಲ್ಲ. ಆದರೆ, ದೂರು ಬಂದ ಹಿನ್ನೆಲೆಯಲ್ಲಿ ಈ ಪ್ರಕರಣ ಕುರಿತು ಸತ್ಯಾಸತ್ಯತೆ ತಿಳಿಯುವ ಕೆಲಸವನ್ನು ಮಂಡಳಿ ನಿರ್ಧಾರ ಮಾಡಿದೆ ಎಂದರು.

ಟ್ರೆಂಡ್ ಅನುಸರಿಸುವುದಕ್ಕಿಂತ ಉದ್ದೇಶ ಅನುಸರಿಸಿ

ಬೆಂಗಳೂರು: ವಿದ್ಯಾರ್ಥಿಗಳು ಟ್ರೆಂಡ್‌ಗಳನ್ನು ಅನುಸರಿಸುವುದಕ್ಕಿಂತ ಉದ್ದೇಶ ಅನುಸರಿಸಿ, ನೈತಿಕತೆ ಮತ್ತು ಜವಾಬ್ದಾರಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಆಂಧ್ರ ಪ್ರದೇಶದ ಐಟಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ನಾರಾ ಲೋಕೇಶ್ ತಿಳಿಸಿದರು.

ನಗರದ ಸರ್ಜಾಪುರದಲ್ಲಿರುವ ಗ್ರೀನ್ ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಐಬಿ ಡಿಪ್ಲೊಮಾ ವಿದ್ಯಾರ್ಥಿಗಳ ಪದವಿ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಶಿಕ್ಷಣ ಎನ್ನುವುದು ನೀವು ಏನು ಕಲಿಯುತ್ತೀರಿ ಎನ್ನುವುದು ಮಾತ್ರವಲ್ಲ, ಬದಲಿಗೆ ನೀವು ಹೇಗೆ ಆಲೋಚಿಸುತ್ತೀರಿ ಎನ್ನುವುದರ ಕುರಿತಾಗಿದೆ.

ಈ ವ್ಯವಸ್ಥೆಯು ನಿಮ್ಮನ್ನು ಬರೀ ಪರೀಕ್ಷೆಗಳಿಗೆ ಮಾತ್ರವಲ್ಲ, ಬದಲಿಗೆ ಜೀವನಕ್ಕೆ ಸಜ್ಜುಗೊಳಿಸುತ್ತಿದೆ. ಕಾರ್ಯಕ್ರಮ ಕೇವಲ ಪದವಿ ಕಾರ್ಯಕ್ರಮವಲ್ಲ, ಇದು ಸ್ಮರಣೆಗಳು ಕನಸುಗಳನ್ನು ಸಂಧಿಸುವ ಮತ್ತು ವಿದ್ಯಾರ್ಥಿಗಳು ಭವಿಷ್ಯದ ನಾಯಕರಾಗುವ ವಿಶೇಷ ಕ್ಷಣವಾಗಿದೆ.

ಅವರು ವಿದ್ಯಾರ್ಥಿಗಳನ್ನು ತಮ್ಮ ಜೀವನದ ಮುಂದಿನ ಹಂತಕ್ಕೆ ಸ್ಪಷ್ಟತೆ ಮತ್ತು ದೃಢ ನಿಶ್ಚಯದಿಂದ ಸಜ್ಜಾಗಬೇಕು ಎಂದರು.

ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಐಬಿ ಡಿಪ್ಲೊಮಾ ವಿದ್ಯಾರ್ಥಿಗಳ ಪದವಿ ಸಮಾರಂಭ ಕಾರ್ಯಕ್ರಮ ನಡೆಯಿತು. ಈ ವೇಳೆ ಆಂಧ್ರ ಪ್ರದೇಶದ ಐಟಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ನಾರಾ ಲೋಕೇಶ್, ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ನಿರು ಅಗರ್‌ವಾಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಈ ವೇಳೆ ಗ್ರೀನ್ ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್ ವ್ಯವಸ್ಥಾಪಕ ಟ್ರಸ್ಟಿ ನಿರು ಅಗರ್‌ವಾಲ್ ಮಾತನಾಡಿ, ಈ ಪದವಿ ಸಮಾರಂಭ ದಿನಾಚರಣೆಯು ಅಂತ್ಯವಲ್ಲ, ಬದಲಿಗೆ ಮಹತ್ವಾಕಾಂಕ್ಷೆ, ಉದ್ದೇಶ ಮತ್ತು ಸಾಧ್ಯತೆಯಿಂದ ರೂಪುಗೊಳ್ಳುವ ಭವಿಷ್ಯದ ಪ್ರಾರಂಭವಾಗಿದೆ. ಕ್ಲಾಸ್ ಆಫ್ 2026ರ ಸಾಧನೆಗಳು ಬರೀ ಶೈಕ್ಷಣಿಕ ಶ್ರೇಷ್ಠತೆ ಬಿಂಬಿಸುವುದು ಮಾತ್ರವಲ್ಲ, ಬದಲಿಗೆ ಸದೃಢತೆ, ಸಮಗ್ರತೆ ಮತ್ತು ಗುಣದ ಸದೃಢ ಭಾವನೆ ಹೊಂದಿದೆ. ಗ್ರೀನ್ ವುಡ್ ಹೈನಲ್ಲಿ ನಾವು ದೊಡ್ಡ ಕನಸು ಕಾಣುವುದಲ್ಲದೆ ಅರ್ಥಪೂರ್ಣ ಯಶಸ್ಸಿಗೆ ಮೌಲ್ಯಗಳನ್ನು ಅನುಸರಿಸುವುದು ಮೂಲಭೂತವಾಗಿದೆ ಎಂದರು.

ಪಿಯುಸಿಯಲ್ಲಿ ಉತ್ತಮ ಸಾಧನೆ

ಆನೇಕಲ್: ಶ್ರೀ ಸಾಯಿ ರಾಮ್ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಶೇಕಡ ನೂರರಷ್ಟು ಫಲಿತಾಂಶದೊಂದಿಗೆ ಉತ್ತೀರ್ಣರಾಗಿ ಕಾಲೇಜಿಗೆ ಉನ್ನತವಾದ ಕೀರ್ತಿ ತಂದುಕೊಟ್ಟಿದ್ದಾರೆ.

ಪರೀಕ್ಷೆಯನ್ನು ಬರೆದ ಒಟ್ಟು 292 ವಿದ್ಯಾರ್ಥಿಗಳಲ್ಲಿ 163 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಮತ್ತು 129 ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

ವಿಜ್ಞಾನ ವಿಭಾಗದ ಜೆ. ತನುಶ್ರೀ ಎಂಬ ವಿದ್ಯಾರ್ಥಿ 600 ಕ್ಕೆ 591 ಅಂಕಗಳೊಂದಿಗೆ ರಾಜ್ಯಕ್ಕೆ 8ನೇ ಸ್ಥಾನ ಪಡೆದುಕೊಂಡಿದ್ದಾರೆ. ವಾಣಿಜ್ಯ ವಿಭಾಗದ ಚೈತ್ರ ಶ್ರೀ ಎಂಬ ವಿದ್ಯಾರ್ಥಿ 600 ಕ್ಕೆ 593 ಅಂಕಗಳೊಂದಿಗೆ ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾರೆ. ಮೋನಿಷಾ .ಕೆ (587) , ನಿಖಿಲ್ ಬಮ್ಮಿಗಟ್ಟಿ (584) , ನಂದಿತಾ. ಯು (583), ಟಿ ಪೂಜಶ್ರೀ (583) ಆರ್.ಎಂ.ಹೇಮಾ ಶ್ರೀ (582), ಬಿ.ಹುಸೇನ್ (573), ಎಸ್ .ಪ್ರಿಯದರ್ಶಿನಿ (573), ಸೇರಿ 163 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವಿಷಯವಾರು ಒಟ್ಟು 21 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿದ್ದಾರೆ . ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಆಡಳಿತ ಮಂಡಳಿ ಅವರ ಸಮ್ಮುಖದಲ್ಲಿ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಿಒಓ ಡಾ. ಅರುಣ್ ಕುಮಾರ್, ಕಾಲೇಜಿನ ಟ್ರಸ್ಟಿ ಕೆ. ಪಟೇಲ್, ಮತ್ತು ಕಾಲೇಜಿನ ಪ್ರಾಂಶುಪಾಲ ಆನಂದರಾಜು ಭಾಗವಹಿಸಿದ್ದರು.

ಅಂಬೇಡ್ಕರ್ ಜನ್ಮದಿನಾಚರಣೆ 14ಕ್ಕೆ

ಪ್ರೆಸ್‌ಕ್ಲಬ್‌ಬಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದಿ.ಬೆಂಗಳೂರು ಸಿಟಿ ಕಾರ್ಪೋರೇಶನ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷರಾದ ಡಾ.ಬಾಬುರವರು, ಜೈ ಭಾರತ ಮಾತಾ ಸೇವ ಸಮಿತಿ ವೈಜನಾಥ್ ಝಳಕಿ, ಮಲ್ಲಿಕಾರ್ಜುನ್ ಸಾರವಾಡ್, ಎಸ್.ವಿ.ಅವಂಟಿ ನಿವೃತ್ತ ಡಿ.ವೈ.ಎಸ್.ಪಿ ಮತ್ತು ಗುರುಸಿದ್ದಪ್ಪ, ಗಣೇಶ್ ಬೀದರ್, ದೊರೈ, ಶಿವಶರಣ ಸುತ್ತಾರ್ ಇದ್ದರು.

ಬೆಂಗಳೂರು: ದಿ.ಬೆಂಗಳೂರು ಸಿಟಿ ಕಾರ್ಪೋರೇಶನ್ ವರ್ಕರ್ಸ್ ಫೆಡರೇಷನ್ ಮತ್ತು ಜೈ ಭಾರತ ಮಾತಾ ಸೇವ ಸಮಿತಿ ವತಿಯಿಂದ ಭಾರತರತ್ನ, ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ರವರ 135ನೇ ವರ್ಷದ ಜನ್ಮದಿನಾಚರಣೆಯ ಮತ್ತು ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ರವರ ಜಯಂತಿಯನ್ನು ಏಪ್ರಿಲ್ 14ರಂದು ಫ್ರೀಡಂ ಪಾರ್ಕ್‌ನಲ್ಲಿ ಅಚರಿಸಲಾಗುತ್ತಿದೆ. ಸುದ್ದಿಗೋಷ್ಠಿಯಲ್ಲಿ ಡಾ.ಬಾಬುರವರು ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರು, ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪ ಪ್ರಧಾನಿ ಬಾಬು ಜನಜೀವನ್ ರಾಮ್ ಅವರು ಜಯಂತಿ ಪ್ರಯುಕ್ತ ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿ ಇಬ್ಬರು ಮಹನೀಯರುಗಳ ಭಾವಚಿತ್ರಕ್ಕೆ ಮುಖ್ಯ ಆಯುಕ್ತರು ಮತ್ತು ಐದು ಪಾಲಿಕೆಗಳ ಆಯುಕ್ತರು ದೀಪ ಬೆಳಗಿಸಿ, ಪುಷ್ಪನಮನ ಸಲ್ಲಿಸಿ ಯಾತ್ರೆಗೆ ಚಾಲನೆ ನೀಡಲಿದ್ದಾರೆ.

ಜೈ ಭಾರಕ ಮಾತಾ ಸೇವಾ ಸಮಿತಿ ಸಂಸ್ಥಾಪಕ ಅಧ್ಯಕ್ಷ ಹವಾಮಲ್ಲಿನಾಥ ಮಹಾರಾಜ ನಿರಗುಡಿ ಅವರ ದಿವ್ಯಸಾನಿಧ್ಯ ವಹಿಸಲಿದ್ದಾರೆ. ಜಿಬಿಎ ಕೇಂದ್ರ ಕಛೇರಿಯಿಂದ ಫ್ರೀಡಂ ಪಾರ್ಕ್‌ವರಗೆ ಭವ್ಯ ಮರವಣಿಗೆ ಮತ್ತು ವಿವಿಧ ಕಲಾತಂಡಗಳ ಭಾಗವಹಿಸಲಿದೆ. ಕನ್ನಡ ಸಂಘ ಸಂಸ್ಥೆಗಳು ದಲಿತ ಪರ ಸಂಘಟನೆ ಭಾಗವಹಿಸಲಿದೆ. ಹಾಗೂ ಕನ್ನಡ ಹೋರಾಟಗಾರರು, ಪೌರ ಕಾರ್ಮಿಕರು , ಸೈನಿಕರಿಗೆ, ಹಿರಿಯ ನಾಗರಿಕರಿಗೆ, ಶ್ರಮಿಕ ವರ್ಗದವರಿಗೆ ಸನ್ಮಾನಿಸಲಾಗುವುದು. ಫ್ರೀಡಂ ಪಾರ್ಕ್‌ನಿಂದ ಕೆ.ಆರ್.ಸರ್ಕಲ್, ವಿಧಾನಸೌಧ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂಭಾಗ ಶಾಂತಿನಗರ, ಎಂ.ಜಿ.ರಸ್ತೆ, ಬ್ರಿಗೇಡ್ ರೋಡ್ ಭವ್ಯ ಮೆರವಣಿಗೆ ಸಾಗಲಿದೆ ಎಂದು ಹೇಳಿದರು.

ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಗೆ ಗಾಳ ಹಾಕಿದ್ದ ಖದೀಮರು

ಸೈಬರ್ ವಂಚಕರು ಪೊಲೀಸ್ ಬಲೆಗೆ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ವಂಚನೆ ಜಾಲಗಳು ಹೆಚ್ಚಾಗಿದೆ. ಸಾಮಾನ್ಯರಿಂದ ಹಿಡಿದು, ದೊಡ್ಡ ವ್ಯಕ್ತಿಗಳನ್ನು ಈ ಜಾಲದಲ್ಲಿ ಸಿಲುಕಿಸಲಾಗುತ್ತಿದೆ. ಇದೀಗ ಸಿಬಿಐ ಅಧಿಕಾರಿಗಳೆಂದು ನಂಬಿಸಿ ಉದ್ಯಮಿಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಭೀತಿಯಲ್ಲಿಟ್ಟು ಬರೋಬ್ಬರಿ 15 ಕೋಟಿ 45 ಲಕ್ಷ ರುಪಾಯಿ ದೋಚಿದ್ದ ಇಬ್ಬರು ಆರೋಪಿಗಳನ್ನು ಸೈಬರ್ ಕಮಾಂಡ್ ಪೊಲೀಸರು ಬಂಧಿಸಿದ್ದಾರೆ. ಹೈದರಾಬಾದ್ ಮೂಲದ ವೆಂಕದೋತ್ ನಾಯಿಕ, ಮತ್ತು ದೇವಾವತ್ ಶ್ರೀಪಾದ್ ನಾಯಿಕ ಬಂಧಿತ ಆರೋಪಿಗಳು. ಪ್ರಕರಣದ ರುವಾರಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ.

ಬೆಳಗಾವಿ ಮೂಲದ ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಕಳೆದ ಫೆಬ್ರವರಿ 7 ರಂದು ಅಪರಿಚಿತ ಕರೆ ಬಂದಿತ್ತು. ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ನಿರ್ದೇಶಕ ಕೆ.ಸುಬ್ರಹ್ಮಣ್ಯಂ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳು ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿವೆ. ನಿಮ್ಮ ಖಾತೆಯಿಂದ 25 ಲಕ್ಷ ರು. ವರ್ಗಾವಣೆ ಆಗಿದ್ದು, ನಿಮಗೆ 5 ಲಕ್ಷ ರು. ಕಮಿಷನ್ ಸಂದಾಯವಾಗಿದೆ ಎಂದು ಹೆದರಿಸಿದ್ದ.

ಬಂಧನದ ಭೀತಿ ಹುಟ್ಟಿಸಿದ ವಂಚಕರು, ಉದ್ಯಮಿಯನ್ನು ವಿಡಿಯೋ ಕಾಲ್ ಮೂಲಕ ಸುಮಾರು ಒಂದು ತಿಂಗಳ ಕಾಲ (30 ದಿನಗಳು) ನಿರಂತರವಾಗಿ ಕಣ್ಗಾವಲಿನಲ್ಲಿಟ್ಟಿದ್ದರು. ತನಿಖೆಗೆ ಸಹಕರಿಸದಿದ್ದರೆ ಜೈಲಿಗೆ ಹಾಕುವುದಾಗಿ ಬೆದರಿಸಿ, ಫೆಬ್ರವರಿ 9 ರಂದು ಅಜಿತ್ ಗೋಪಾಲಕೃಷ್ಣ ಅವರಿಂದ ವಿವಿಧ ಬ್ಯಾಂಕ್ ಖಾತೆಗಳಿಗೆ 15,45,00,000 ರುಪಾಯಿಗಳನ್ನು ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿಕೊಂಡಿದ್ದರು.

ವಂಚನೆಗೊಳಗಾದ ಉದ್ಯಮಿ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದರು. ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೋಹಂತಿ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಸಿಸಿಬಿಯ ಸೈಬರ್ ವಿಭಾಗದ ತಂಡ, ಆರೋಪಿಗಳು ಬಳಸಿದ್ದ 10ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಪತ್ತೆಹಚ್ಚಿದೆ. ಹೈದರಾಬಾದ್‌ನ ಗಚ್ಚಿಬೌಲಿ ಹಾಸ್ಟೆಲ್‌ನಲ್ಲಿ ಅಡಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, 2 ಕೋಟಿ ರು. ಹಣ ಫ್ರೀಜ್ ಮಾಡಲಾಗಿದೆ. ಈ ಪ್ರಕರಣದ ಮುಖ್ಯ ಆರೋಪಿ ಸದ್ಯ ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ಮುಂದುವರಿಸಿದ್ದಾರೆ.

4 ವರ್ಷದಲ್ಲಿ 1695 ಪ್ರಕರಣ ದಾಖಲು

ಡಿಜಿಟಲ್ ಅರೆಸ್ಟ್, ಆನ್‌ಲೈನ್ ವಂಚನೆಯ ಒಂದು ಸ್ವರೂಪ ಇದು. ಎಲ್ಲೋ ಕುಳಿತು ಕೊಂಡು ಯಾರದ್ದೂ ಹೆಸರಿನಲ್ಲಿ ಅಮಾಯಕರನ್ನು ಬಲಿಪಡೆದುಕೊಳ್ಳುತ್ತಾರೆ. ಸೈಬರ್ ಖದೀಮರ ಇಂತಹ ಕೃತ್ಯಕ್ಕೆ ಅಮಾಯಕರು ಬಲಿಯಾಗುತ್ತಿದ್ದಾರೆ. ಕುತೂಹಲವೆಂದರೆ ಸುಶಿಕ್ಷಿತರು, ಟೆಕ್ಕಿಗಳು, ನಿವೃತ್ತ ನೌಕರರರು ಇಂತಹ ಸೈಬರ್ ಖದೀಮರ ಟಾರ್ಗೆಟ್ ಆಗುತ್ತಿದ್ದಾರೆ. ಸೈಬರ್ ವಂಚನೆ, ಡಿಜಿಟಲ್ ಅರೆಸ್ಟ್ ಬಗ್ಗೆ ಸಾಕಷ್ಟು ತಿಳುವಳಿಗೆ ನೀಡುತ್ತಿದ್ದರೂ ಕೃತ್ಯಗಳಿಗೆ ಕಡಿವಾಣ ಬಿದ್ದಿಲ್ಲ. ಹೊಸ ಸ್ವರೂಪದ ವಂಚನೆಗಳು ದಿನಕ್ಕೊಂದರಂತೆ ಬಯಲಾಗುತ್ತಿದೆ. ರಾಜ್ಯದಲ್ಲಿ ಕಳೆದ 4 ವರ್ಷಗಳಲ್ಲಿ 1695 ಪ್ರಕರಣ ಬೆಳಕಿಗೆ ಬಂದಿದೆ. ಒಟ್ಟು 468 ಕೋಟಿ ರು.ಗೂ ಅಧಿಕ ವಂಚನೆ ಆಗಿದೆ. ಕೆಲವು ಪ್ರಕರಣಗಳಲ್ಲಿ ಗೋಲ್ಡನ್ ಅವರ್ ಒಳಗಾಗಿ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ವಂಚನೆ ಕೈತಪ್ಪಿದೆ.

> **ಹೈದರಾಬಾದ್ ಮೂಲದ ವೆಂಕದೋತ್ ನಾಯಿಕ, ಮತ್ತು ದೇವಾವತ್ ಶ್ರೀಪಾದ್ ನಾಯಿಕ ಬಂಧಿತ ಆರೋಪಿಗಳು. ಪ್ರಕರಣದ ರುವಾರಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ. ಬೆಳಗಾವಿ ಮೂಲದ ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಕಳೆದ ಫೆ.7 ರಂದು ಅಪರಿಚಿತ ಕರೆ ಬಂದಿತ್ತು. ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳು ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿವೆ. ನಿಮ್ಮ ಖಾತೆಯಿಂದ 25 ಲಕ್ಷ ರೂ. ವರ್ಗಾವಣೆ ಆಗಿದ್ದು, ನಿಮಗೆ 5 ಲಕ್ಷ ರು. ಕಮಿಷನ್ ಸಂದಾಯವಾಗಿದೆ ಎಂದು ಹೆದರಿಸಿದ್ದ.**
> **- ಡಾ.ಪ್ರಣವ್ ಮೋಹಾಂತಿ ಸೈಬರ್ ಕಮಾಂಡ್ ವಿಭಾಗದ ಡಿಜಿಪಿ**

ಏಪ್ರಿಲ್ 20ಕ್ಕೆ ಯುವೋತ್ಸವ, ಉದ್ಯೋಗ ಮೇಳ

ಬೆಂಗಳೂರು: ಬಸವ ಜಯಂತಿಯ ಅಂಗವಾಗಿ ಯುವೋತ್ಸವ-ಉದ್ಯೋಗ ಮೇಳವನ್ನು ಮಲ್ಲೇಶ್ವರದ ಎಸ್ ಎಚ್‌ವಿಎನ್‌ಎಂ ಸರಕಾರಿ ಮಹಿಳಾ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ತಿಳಿಸಿದರು.

ಮಲ್ಲೇಶ್ವರದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಯಕವೇ ಕೈಲಾಸ ಎಂಬ ತತ್ವವನ್ನು ಜಗತ್ತಿಗೆ ನೀಡಿದ ಭಕ್ತಿ ಭಂಡಾರಿ ಬಸವಣ್ಣನವರನ್ನು ನಾವು ಪೂಜಿಸುತ್ತೇವೆ, ಆರಾಧಿಸುತ್ತೇವೆ. ಆದ್ದರಿಂದ ಅವರ ಜಯಂತಿಯ ಅಂಗವಾಗಿ ಈ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮಲ್ಲೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಹಲವು ವರ್ಷದಿಂದ ಉದ್ಯೋಗಮೇಳ ಆಯೋಜನೆ ಮಾಡುತ್ತಾ ಬಂದಿದ್ದೇವೆ. ಇದರಿಂದ ಸಾಕಷ್ಟು ಉದ್ಯೋಗಾಕಾಂಕ್ಷಿಗಳಿಗೆ ಸಹಾಯವಾಗಿದೆ. ಈ ಬಾರಿ ಬೆಳಗ್ಗೆ 8.30 ರಿಂದ ಸಂಜೆ 4.30 ಉದ್ಯೋಗ ಮೇಳ ಆಯೋಜನೆ ಮಾಡಿದ್ದೇವೆ. ಸರ್ವರಿಗೂ ಉದ್ಯೋಗ ಎಂಬ ಧ್ಯೇಯವಾಕ್ಯದಲ್ಲಿ ಈ ಉದ್ಯೋಗಮೇಳವು ನಡೆಯಲಿದೆ. ಭಾರತ್ ಕರಿಯರ್ ಕನೆಕ್ಟ್ ಈ ಮೇಳಕ್ಕೆ ಕೈ ಜೋಡಿಸಿದೆ ಎಂದರು.

ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ವಿದ್ಯಾರ್ಹತೆ ಇರುವವರು, ಸದ್ಯ ಈ ಕೋರ್ಸ್ ಮಾಡುತ್ತಿರುವವರು ಭಾಗವಹಿಸಬಹುದು. ಕನಿಷ್ಠ ಸಾವಿರ ಆಕಾಂಕ್ಷಿಗಳಿಗೆ ಕೌಶಲ್ಯ ಅಭಿವೃದ್ಧಿ, ಕೌಶಲ್ಯ ಉನ್ನತೀಕರಣ, ಪ್ರಶಿಕ್ಷಣ, ಸ್ವಯಂ ಉದ್ಯೋಗ, ಉದ್ಯಮಶೀಲತೆ, ಜೀವನೋಪಾಯ ಮತ್ತು ಇತರ ಕ್ಷೇತ್ರಗಳಲ್ಲಿ ಯುವಕರಿಗೆ ಅನುಕೂಲ ಒದಗಿಸುವುದು ಈ ಮೇಳದ ಮುಖ್ಯ ಉದ್ದೇಶ. ಮೇಳದಲ್ಲಿ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದವರು ಮಾತ್ರವಲ್ಲದೇ ಎಲ್ಲಾ ಕಡೆಯವರು ಭಾಗವಹಿಸಬಹುದು. ಉದ್ಯೋಗಾಕಾಂಕ್ಷಿಗಳಿಗೆ ಉಟೋಪಚಾರ ಎಲ್ಲ ಸೌಲಭ್ಯವನ್ನು ಒದಗಿಸಲಾಗುವುದು. ಅಂಗವಿಕಲರಿಗೂ ಉದ್ಯೋಗ ಅವಕಾಶದ ಮಾಹಿತಿ ನೀಡಲಾಗುವುದು ಎಂದರು.

ಉದ್ಯೋಗ ಮೇಳದಲ್ಲಿ ಭಾರತ ಸರಕಾರದಿಂದ ಪ್ರಾದೇಶಿಕ ಕೌಶಲ್ಯ ಅಭಿವೃದ್ಧಿ ನಿರ್ದೇಶನಾಲಯ, ಜನಶಿಕ್ಷಣ ಸಂಸ್ಥಾನ್, ಎನ್‌ಎಸ್‌ಡಿಐ, ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ, ಅಂಚೆ ಇಲಾಖೆ ಸೇರಿದಂತೆ ವಿವಿಧ ಸ್ಟಾಲ್‌ಗಳು ಇರಲಿವೆ ಎಂದರು.



ಶಾಸಕ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ಅವರು ಮಲ್ಲೇಶ್ವರದ ಕಚೇರಿಯಲ್ಲಿ ಯುವೋತ್ಸವ, ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು.

ವಿವಿಧ ಕ್ಷೇತ್ರಗಳ 100ಕ್ಕೂ ಹೆಚ್ಚು ಕಂಪನಿಗಳು ಭಾಗಿ

ಯುವ ಸಬಲೀಕರಣಕ್ಕೆ ಸಹಾಯವಾಗಬಲ್ಲ ವೃತ್ತಿ ಮಾರ್ಗದರ್ಶನ, ಕೌಶಲ್ಯ ಅಭಿವೃದ್ಧಿ ತರಬೇತಿ, ಉದ್ಯೋಗಮೇಳ, ಉದ್ಯಮಶೀಲತಾ ಅಭಿವೃದ್ಧಿ ಮತ್ತು ಆರ್ಥಿಕ ಸೇರ್ಪಡೆ ಇವುಗಳ ಕುರಿತು ಮಾಹಿತಿ ನೀಡಲಾಗುವುದು. ಉದ್ಯೋಗಾಕಾಂಕ್ಷಿಗಳಿಗೆ ಅಗತ್ಯವಾದ ನೇರಸಂವಾದ, ನೇಮಕಾತಿ, ವೃತ್ತಿ ಅನ್ವೇಷಣೆಗೆ ಸಾಮಾನ್ಯ ವೇದಿಕೆಯನ್ನು ಈ ಮೇಳ ಒದಗಿಸಲಿದೆ. ಐಟಿ, ಉತ್ಪಾದನೆ, ಬ್ಯಾಂಕಿಂಗ್, ಆರೋಗ್ಯ, ಚಿಲ್ಲರೆ ವ್ಯಾಪಾರ, ಲಾಜಿಸ್ಟಿಕ್ ಮತ್ತು ಸೇವಾ ಕ್ಷೇತ್ರಗಳ ಸುಮಾರು 100ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ ಎಂದು ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ಹೇಳಿದರು

ವಿಶ್ವವಾಣಿ ಏಜೆಂಟ್ ತ್ಯಾಗರಾಜ್ ನಿಧನ

ಬೆಂಗಳೂರು: ವಿಶ್ವವಾಣಿ ಪತ್ರಿಕೆ ಏಜೆಂಟ್ ತ್ಯಾಗರಾಜ್ ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ. ಕಳೆದ 40 ವರ್ಷಗಳಿಂದ ವಿವಿಧ ಪತ್ರಿಕೆ ಗಳ ಏಜೆಂಟರ್ ಹಾಗೂ ವಿಶ್ವವಾಣಿಯ ಯಶವಂತಪುರ ವಲಯದ ಪತ್ರಿಕಾ ವಿತರಕರಾಗಿ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಶ್ರೀಯುತರು ಪತ್ನಿ, ಮಕ್ಕಳು, ಅಪಾರ ಬಂಧು ಬಳಗ, ಮಿತ್ರಕೂಟವನ್ನು ಅಗಲಿದ್ದಾರೆ.

ಜಿಬಿಎ ಬೆಂಗಳೂರು ಪೂರ್ವ ನಗರ ಪಾಲಿಕೆಯ ವೈಟ್‌ಫೀಲ್ಡ್ ಉಪವಿಭಾಗದ ಮಹದೇವಪುರ ವಲಯದ ಸಹಾಯಕ ಕಂದಾಯ ಕಚೇರಿಯಲ್ಲಿ ನಡೆದ ಭ್ರಷ್ಟಾಚಾರ ಹಾಗೂ ನಕಲಿ ಖಾತಾಗಳನ್ನು ರದ್ದುಪಡಿಸಿ ಭಾಗಿಯಾದ ಅಧಿಕಾರಿಗಳನ್ನು ಅಮಾನತುಗೊಳಿಸಿ ಎಂದು ಎಸ್‌ಎಸ್ ಡಿ ಯುವ ಘಟಕದಿಂದ ಪೂರ್ವ ನಗರ ಪಾಲಿಕೆಯ ಅಪರ ಆಯುಕ್ತ ಡಾ. ಪ್ರಜ್ಞಾ ಅಮ್ಮೆಂಬಳ ಅವರಿಗೆ ಮನವಿ ಪತ್ರ ನೀಡಲಾಯಿತು. ಈ ವೇಳೆ ಸಂಸ್ಥೆ ಅಧ್ಯಕ್ಷ ಡಾ.ಎಂ.ನಾಗೇಶ್, ರಾಷ್ಟ್ರೀಯ ಅಂಬೇಡ್ಕರ್ ಸೇನೆಯ ರಾಷ್ಟ್ರಾಧ್ಯಕ್ಷ ಅರ್ಜುನ್ ಗೋಪಾಲಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮುಳ್ಳಂದಿ ಪ್ರತಿದಾಳಿಗೆ ಚಿರತೆ ಸಾವು

ಚಾಮರಾಜನಗರ: ಬೇಟೆಯಾಡಲು ಬಂದ ಚಿರತೆ ಮೇಲೆ ಮುಳ್ಳುಹಂದಿ ಪ್ರತಿದಾಳಿ ನಡೆಸಿದ ಪರಿಣಾಮ ತೀವ್ರವಾಗಿ ಗಾಯಗೊಂಡು ಚಿರತೆ ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಬೊಮ್ಮನಹಳ್ಳಿಯಲ್ಲಿ ನಡೆದಿದೆ. ಬೊಮ್ಮನಹಳ್ಳಿ ಗ್ರಾಮದ ಜಮೀನೊಂದರ ಸಮೀಪ ಅಂದಾಜು 1-2 ವರ್ಷದ ಗಂಡು ಚಿರತೆ ಮೃತದೇಹ ಪತ್ತೆಯಾಗಿದೆ. ಚಿರತೆಯ ಎದೆ, ಪಕ್ಕೆಲುಬು, ಮುಖಕ್ಕೆ ಮುಳ್ಳುಹಂದಿಯ ಮುಳ್ಳುಗಳು ಚುಚ್ಚಿಕೊಂಡಿವೆ. ಈ ಕುರಿತು, ಬಂಡೀಪುರ ಎಸಿಎಫ್ ನವೀನ್ ಕುಮಾರ್ ಪ್ರತಿಕ್ರಿಯಿಸಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ಅರಣ್ಯ ವಲಯದಲ್ಲಿ ಚಿರತೆ ಕಳೇಬರ ಪತ್ತೆಯಾಗಿದೆ. ಮುಳ್ಳು ಹಂದಿಯೊಂದಿಗಿನ ಕಾದಾಟದಲ್ಲಿ ಗಾಯಗೊಂಡು ಚಿರತೆ ಸಾವನ್ನಪ್ಪಿರುವುದು ಮೇಲ್ನೋಟಕ್ಕೆ ದೃಢವಾಗಿದೆ. ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿ ಅಂಗಾಂಗಗನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಇಲಾಖೆಯ ಮಾರ್ಗಸೂಚಿಯಂತೆ ಚಿರತೆಯ ಕಳೇಬರವನ್ನು ಸುಡಲಾಗುವುದು ಎಂದು ತಿಳಿಸಿದರು.

ಕಾಡಾನೆಗಳು ಪ್ರತ್ಯಕ್ಷ ಸ್ಥಳೀಯರಲ್ಲಿ ಆತಂಕ

ಮಂಗಳೂರು: ಕಡಬ ತಾಲೂಕಿನ ಕೋಡಿಂಬಾಲ ಸಮೀಪದ 102 ನೆಕ್ಕಿಲಾಡಿ ಕೋರಿಯರ್‌ದಲ್ಲಿ ಶನಿವಾರ ಬೆಳಗ್ಗೆ ಕಾಡಾನೆಗಳ ಹಿಂಡು ಪ್ರತ್ಯಕ್ಷವಾಗಿದ್ದು, ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿದೆ. ಕುಮಾರಧಾರಾ ನದಿ ಪಾತ್ರದಲ್ಲಿ ಕಾಡಾನೆಗಳು ಸಂಚರಿಸುತ್ತಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾರೆ. ವಿಷಯ ತಿಳಿದು ಸುಬ್ರಹ್ಮಣ್ಯ ಮತ್ತು ಪಂಜ ವಲಯದ ಅರಣ್ಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ಆನೆಗಳ ಚಲನವಲನದ ಮೇಲೆ ತೀವ್ರ ನಿಗಾ ಇಟ್ಟಿದ್ದಾರೆ. ಜನವಸತಿ ಪ್ರದೇಶದಿಂದ ಅವುಗಳನ್ನು ಸುರಕ್ಷಿತವಾಗಿ ಅರಣ್ಯದತ್ತ ಓಡಿಸಲು ಕಾರ್ಯಾಚರಣೆ ಕೈಗೊಂಡಿದ್ದಾರೆ. ಸ್ಥಳೀಯರು ಕಾಡಾನೆಗಳ ಕಂಡು ಚೀರಾಟ, ಕೂಗಾಟ, ಫೋಟೊ, ವಿಡಿಯೊ ಮಾಡಬಾರದು ಎಂದು ಅರಣ್ಯ ಇಲಾಖೆ ಎಚ್ಚರಿಸಿದೆ. ಹಿಂಡು ಕಂಡರೆ ಇಲಾಖೆಗೆ ಮಾಹಿತಿ ನೀಡಲು ಸೂಚನೆ ನೀಡಲಾಗಿದೆ.

ಉಪಚುನಾವಣೆ ಬೇಗೆ: ಅಲ್ಪಸಂಖ್ಯಾತ ಅಧ್ಯಕ್ಷ ಜಬ್ಬಾರ್ ವಿದಾಯ

← ಮೊದಲ ಪುಟದಿಂದ

ದಾವಣಗೆರೆ ಚುನಾವಣೆ ಪ್ರಚಾರದಲ್ಲಿ ನಡೆದ ಘಟನೆಗಳು ಹಾಗೂ ಸಂಪೂರ್ಣ ಆಂತರಿಕ ವರದಿ ಕಾಂಗ್ರೆಸ್ ಹೈಕಮಾಂಡ್ ಕೈಸೇರಿದೆ. ಉಪಚುನಾವಣಾ ಸಂದರ್ಭದಲ್ಲಿ ಪಕ್ಷದ ಆಂತರಿಕ ಬೆಳವಣಿಗೆಗಳು ಮತ್ತು ನಾಯಕರ ನಡುವಿನ ಮುನಿಸು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಅಡ್ಡಿಯಾಗಬಹುದು ಎಂಬ ಆತಂಕವನ್ನು ವರದಿ ಎತ್ತಿ ತೋರಿಸಿದೆ. ಪ್ರಮುಖವಾಗಿ ಅಲ್ಪಸಂಖ್ಯಾತ ಸಮುದಾಯದ ಕೆಲವು ಶಾಸಕರೇ ಸಚಿವ ಜಮೀರ್ ಅಹ್ಮದ್ ಅವರ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದ್ದು, ಸಚಿವ ಸಂಪುಟ ಪುನಾರಚನೆ ವೇಳೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ ಎನ್ನಲಾಗಿದೆ.ಸದ್ಯದ ಬೆಳವಣಿ ಗೆಗಳು ಸಚಿವ ಜಮೀರ್ ಅಹ್ಮದ್ ಅವರನ್ನೇ ಗುರಿಯಾಗಿಸಿ ಕೊಂಡಿವೆ. ಈ ಬೆಳವಣಿಗೆಯಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಂತರ ಕಾಯ್ದುಕೊಂಡಿದ್ದಾರೆ. ದಾವಣಗೆರೆ ವಿದ್ಯಮಾನ ಮತ್ತು ರಾಜೀನಾಮೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ನನಗೇನೂ ಗೊತ್ತಿಲ್ಲ ಎನ್ನುವ ಮೂಲಕ ಜಾಣಮೌನ ವಹಿಸಿದ್ದಾರೆ.

ರಾಜ್ಯಕ್ಕೆ ಹಿಡಿದಿರುವ ಕಾಂಗ್ರೆಸ್ ಗ್ರಹಣ ದೂರ ಮಾಡುತ್ತೇವೆ | ಜೆಡಿಎಸ್ ಬೆಳ್ಳಿಹಬ್ಬದ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಎಚ್‌ಡಿಡಿ-ಎಚ್‌ಡಿಕೆ ಕಿಡಿ

ಕಾಂಗ್ರೆಸ್‌ನ ವಿಶ್ವಾಸದ್ರೋಹಕ್ಕೆ ಎನ್‌ಡಿಎ ಜತೆ ಮೈತ್ರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜೆಡಿಎಸ್ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್.ಡಿ ಕುಮಾರ್ ಸ್ವಾಮಿ ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು.

ಸಿಎಂ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ಪರ ಅಲ್ಲ. ತಮ್ಮ 60 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರಕಾರ ನೋಡಿಲ್ಲ.

ಕಾಂಗ್ರೆಸ್ ವಿಶ್ವಾಸ ದ್ರೋಹದಿಂದಲೇ ಜೆಡಿಎಸ್ -ಎನ್‌ಡಿಎ ಮೈತ್ರಿಗೆ ಸೇರಬೇಕಾಯಿತು ಎಂದು ಪ್ರಧಾನಿ ಎಚ್.ಡಿ ದೇವೇಗೌಡ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಇದೇ ವೇಳೆ ಕೇಂದ್ರ ಸಚಿವ ಎಚ್‌ಡಿಕೆ ಮಾತನಾಡಿ, ಒಮ್ಮೆ ಸಂಪೂರ್ಣ ಬಹುಮತ ನೀಡಿ, ರಾಜ್ಯಕ್ಕೆ ಹಿಡಿದಿರುವ ಗ್ರಹಣವನ್ನು ದೂರ ಮಾಡುತ್ತೇನೆ. ಬೆಂಗಳೂರಿನ ಅಭಿವೃದ್ಧಿ ಕುಂಠಿತವಾಗಿದ್ದು, ಕಸ, ನೀರು ಹಾಗೂ ಮೂಲಭೂತ ಸಮಸ್ಯೆಗಳು ಹೆಚ್ಚಾಗಿವೆ. ರಾಜ್ಯದಲ್ಲಿ ಅಭಿವೃದ್ಧಿಗಿಂತ ವಸೂಲಿ ರಾಜಕಾರಣ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರಿನ ಜನ ಈಗ ಕೆಂಡದಂತ ಬೇಸಿಗೆ ನೋಡುತ್ತಿದ್ದಾರೆ. ಅನೇಕ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ನಗರ ಅಗಾಧವಾಗಿ ಬೆಳೆಯುತ್ತಿದೆ, ಆದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಈ ಸರ್ಕಾರ ವಿಫಲವಾಗಿದೆ. ದೇವೇಗೌಡರು ತಾವು ಪ್ರಧಾನಿಯಾಗಿದ್ದಾಗಲೇ ನಗರದ ಬಗ್ಗೆ ದೂರದೃಷ್ಟಿ ಇಟ್ಟುಕೊಂಡು ಮುಂದಿನ ವರ್ಷಗಳಲ್ಲಿ ಬೆಂಗಳೂರು ಹೇಗೆ ಬೆಳೆಯುತ್ತದೆ ಎಂದು ಯೋಚಿಸಿ ಕಾವೇರಿ ನೀರನ್ನು ನಗರಕ್ಕೆ ಹಂಚಿಕೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಬೆಂಗಳೂರಿನ ಜನ ಈ ಸಾಧನೆಯನ್ನು ಮರೆಯಬಾರದು ಎಂದು ನಾನು ಮನವಿ ಮಾಡುತ್ತೇನೆ ಎಂದರು.

ಸಮಾವೇಶದಲ್ಲಿ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಜವರಾಯಿಗೌಡ, ಎಸ್.ಎಲ್.ಭೋಜೇಗೌಡ, ಮಂಜೇಗೌಡ, ಶಾಸಕಿ ಕರೆಮ್ಮ ನಾಯಕ್, ವಿವೇಕಾನಂದ, ಮಾಜಿ ಸಚಿವ ಬಂಡೆಪ್ಪ ಕಾಶಂಪುರ್, ವೆಂಕಟರಾವ್ ನಾಡಗೌಡ, ಎಚ್.ಕೆ. ಕುಮಾರಸ್ವಾಮಿ, ಆಲ್ಕೋಡ್ ಹನುಮಂತಪ್ಪ, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಪ್ರಮುಖರು ಇದ್ದರು.

ಬೆಂಗಳೂರಿನ ಕೊಮ್ಮಘಟದಲ್ಲಿ ನಡೆದ ಜೆಡಿಎಸ್ ಬೆಳ್ಳಿಹಬ್ಬದ ಸಮಾವೇಶವನ್ನು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಉದ್ಘಾಟಿಸಿದರು.

ಹಳೇ ಮೈಸೂರು ಭಾಗದ ಶಾಸಕರ ವಿರುದ್ಧ ಎಚ್‌ಡಿಕೆ ಕಿಡಿ

ಹಳೇ ಮೈಸೂರು ಭಾಗದ ಶಾಸಕ ತನ್ನ ರಾಜಕೀಯಕ್ಕೆ ಯಾವ ಪಕ್ಷವಾದರೇನು ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಬೇಕಿದ್ದರೆ ನಾನು ಕಾಂಗ್ರೆಸ್‌ನಿಂದ ಬೇಕಾದರೂ ನಿಲ್ಲುತ್ತೇನೆ ಅಥವಾ ಬಿಜೆಪಿಯಿಂದ ಬೇಕಾದರೂ ನಿಲ್ಲುತ್ತೇನೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ಆ ವ್ಯಕ್ತಿ ಜೆಡಿಎಸ್ ಹೆಸರನ್ನು ಮಾತ್ರ ಹೇಳುತ್ತಿಲ್ಲ. ಅವರಿಗೆ ಗೊತ್ತಿರಲಿ, ಜೆಡಿಎಸ್ ಮಾರಾಟದ ಪಕ್ಷವಲ್ಲ. ಹಾಲಿ ವಿಧಾನ ಪರಿಷತ್ ಸದಸ್ಯರಾದ ಜವರಾಯಿಗೌಡರು ನಾಲ್ಕು ಬಾರಿ ಸೋತಿದ್ದಾರೆ. ಕೆಲವರಿಂದ ಅವರಿಗೆ ಅನ್ಯಾಯ ಆಗಿದೆ. ಅದನ್ನು ಸರಿಪಡಿಸುವ ಪ್ರಯತ್ನ ನಾನು ಮಾಡಿದ್ದೇನೆ ಎಂದರು.

ಹೆಸರು ಬದಲಾಯಿಸಿದ್ದೇ ಸಾಧನೆ: ನಿಖಿಲ್

ಬಿಬಿಎಂಪಿ ಹೆಸರು ಬದಲಾಯಿಸಿದ್ದು ಈ ಸರಕಾರದ ಸಾಧನೆ. ಜಿ ಅಂದ್ರೆ, ಗಾರ್ಬೇಜ್, ಬಿ ಎಂದರೆ ಬ್ಯಾಡ್ ರೋಡ್ , ಎ ಎಂದರೆ ಎ ಖಾತಾ ಸ್ಕ್ಯಾಮ್ ಎಂದು ನಿಖಿಲ್ ಕುಮಾರಸ್ವಾಮಿ ಅವರು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.ಬೆಂಗಳೂರು ಜನತೆ ಅಭಿವೃದ್ಧಿ ವಂಚಿತ ಆಗಿದ್ದಾರೆ. ಬೆಂಗಳೂರು ಅಭಿವೃದ್ಧಿಗೆ ಮಾಜಿ ಪ್ರಧಾನಿ ದೇವೇಗೌಡರು ತೆಗೆದುಕೊಂಡ ಐತಿಹಾಸಿಕ ನಿರ್ಣಯಗಳು ಜನರ ಮನಸ್ಸಿನಲ್ಲಿ ಉಳಿದಿವೆ. ಸಿಂಗಾಪೂರ ಸರಕಾರದ ಜತೆ ಮಾತಾಡಿ ವೈಟ್ ಫೀಲ್ಡ್ ನಲ್ಲಿ 40 ಸಾವಿರ ಉದ್ಯೋಗ ನೀಡುವ ಕಂಪನಿ ಆರಂಭಿಸಿದರು. ಬೆಂಗಳೂರು ವಿಶ್ವವಿಖ್ಯಾತಿ ಪಡೆಯಲು ದೇವೇಗೌಡರು ಕಾರಣ. ಬಿಬಿಎಂಪಿ ರಚನೆ ಮಾಡಿದ್ದು ಕುಮಾರಣ್ಣ. ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಅನೇಕ ಯೋಜನೆ ಜಾರಿಗೆ ತಂದರು. ಮೆಟ್ರೋಗೆ ಹಸಿರು ನಿಶಾನೆ ತೋರಿದರು. ಆದರೆ ಕಾಂಗ್ರೆಸ್ ಆಡಳಿತದಲ್ಲಿ ಇವತ್ತು ಅಭಿವೃದ್ಧಿ ಕುಸಿಯುತ್ತಿದೆ ಎಂದು ಸಿಎಂ, ಡಿಸಿಎಂ ವಿರುದ್ಧ ವಾಗ್ದಾಳಿ ನಡೆಸಿದರು.

ಜಾತಿ ಮುಕ್ತ ಸಮಾಜಕ್ಕೆ ವೈಚಾರಿಕ ಚಿಂತನೆ ಬೇಕು

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಸಮಾಜದಲ್ಲಿರುವ ಜಾತಿ ವ್ಯವಸ್ಥೆ ಮತ್ತು ಮೂಢನಂಬಿಕೆಗಳನ್ನು ತೊಡೆದುಹಾಕಲು ವೈಚಾರಿಕತೆ ಹಾಗೂ ವೈಜ್ಞಾನಿಕ ಹಿನ್ನೆಲೆಯ ಶಿಕ್ಷಣ ಅತ್ಯಗತ್ಯ. ಶ್ರೀ ಭೋಜಲಿಂಗೇಶ್ವರರ ಆಶಯದಂತೆ ನಾವೆಲ್ಲರೂ ಭಾವೈಕ್ಯತೆಯಿಂದ ಬದುಕಿದಾಗ ಮಾತ್ರ ದೇವಸ್ಥಾನ ಉದ್ಘಾಟನೆಗೆ ಸಾರ್ಥಕತೆ ದೊರೆಯುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಭಿಪ್ರಾಯಪಟ್ಟರು.

ಚಿತ್ತಾಪುರ ತಾಲೂಕಿನ ಸೂಗೂರು (ಎನ್) ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಭೋಜಲಿಂಗೇಶ್ವರ ದೇವಸ್ಥಾನ ಲೋಕಾರ್ಪಣೆ, ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಧರ್ಮ ದ್ವೇಷ ಮಾಡಲು ಹೇಳುವುದಿಲ್ಲ. ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವಗಳು ಸಮಾನತೆಯ ಸಮಾಜಕ್ಕೆ ಭದ್ರ ಬುನಾದಿ. ಕಷ್ಟಪಟ್ಟು ದುಡಿಯುವ ಹಾಗೂ ಬಂದಿದ್ದನ್ನು ಎಲ್ಲರಿಗೂ ಹಂಚುವ ಮನೋಭಾವ ಬೆಳೆಯಬೇಕು. ಪ್ರತಿಯೊಬ್ಬರಿಗೂ ಆರ್ಥಿಕ ಶಕ್ತಿ ಬಂದಾಗ ಮಾತ್ರ ನಿಜವಾದ ಸಮಾನತೆ ಸಾಧ್ಯ ಎಂದರು.

ಅಭಿವೃದ್ಧಿಗೆ ಬದ್ಧ: ಮಠದ ವತಿಯಿಂದ ವಸತಿ ನಿಲಯ ಹಾಗೂ ಯಾತ್ರಿ ನಿವಾಸ ನಿರ್ಮಾಣಕ್ಕೆ ಬಂದ ಮನವಿಗೆ ಸ್ಪಂದಿಸಿದ ಸಿಎಂ, ಸರಕಾರದಿಂದ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮಠದ ಶೈಕ್ಷಣಿಕ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಸಿಎಂ ಘೋಷಿಸಿರುವ 1 ಕೋಟಿ ರೂಪಾಯಿ ಅನುದಾನದ ಜತೆಗೆ ಹೆಚ್ಚುವರಿ ಅನುದಾನ ಒದಗಿಸುವ ಜವಾಬ್ದಾರಿ ತಮ್ಮದಾಗಿದೆ ಎಂದು ಘೋಷಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಸೂಗೂರು ಗ್ರಾಮದ ಶ್ರೀ ಭೋಜಲಿಂಗೇಶ್ವರ ಸಂಸ್ಥಾನ ಮಠದ ಶೈಕ್ಷಣಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರವು ಸಂಪೂರ್ಣ ಸಹಕಾರ ನೀಡಲಿದೆ. ಮಠದ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳು ಈಗಾಗಲೇ ಘೋಷಿಸಿರುವ 1 ಕೋಟಿ ರೂಪಾಯಿ ಅನುದಾನವನ್ನು ತಕ್ಷಣ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ವೇದಿಕೆಯ ಮೇಲೆ ಭೋಜಲಿಂಗೇಶ್ವರ ಸಿದ್ಧ ಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಹಿರಗಪ್ಪ ತಾತನವರು, ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್, ಶಾಸಕರಾದ ಎಂ.ವೈ ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ಪಾಟೀಲ ತುನ್ನೂರು, ಎಂ.ಎಲ್.ಸಿ ಗಳಾದ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಮಾಲಾ ನಾರಾಯಣರಾವ್, ಮೆಹಬೂಬ್ ಸಾಹೇಬ್ ಚಿಸ್ತಿ, ಬಾಬು ಹೊನ್ನಾನಾಯಕ್, ಲಿಂಗಾರೆಡ್ಡಿ ಬಾಸರೆಡ್ಡಿ, ಹನುಮೇಗೌಡ ಬೀರನಕಲ್, ಮಹೇಶ್ ರೆಡ್ಡಿ ಮುದ್ನಾಳ್ ಸೇರಿದಂತೆ ಹಲವರಿದ್ದರು.

ಚಿತ್ತಾಪುರ ತಾಲೂಕಿನ ಸೂಗೂರು (ಎನ್) ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಭೋಜಲಿಂಗೇಶ್ವರ ದೇವಸ್ಥಾನದ ಲೋಕಾರ್ಪಣೆಯನ್ನು ಸಿಎಂ ಸಿದ್ದರಾಮಯ್ಯ ಅವರು ಶನಿವಾರ ನೆರವೇರಿಸಿದರು.

> **ದೇವಾಲಯಕ್ಕೆ ಹೋದಾಗ ಕೇವಲ ನಮಗಷ್ಟೇ ಅಲ್ಲದೆ ಇಡೀ ಸಮಾಜಕ್ಕೆ ಒಳ್ಳೆಯದು ಮಾಡು ಎಂದು ಪ್ರಾರ್ಥಿಸಿ. ಇವನಾರವ ಇವನಾರವ ಎನ್ನದೆ 'ಇವ ನಮ್ಮವ' ಎಂದು ಎಲ್ಲರನ್ನೂ ಪ್ರೀತಿಸಿದಾಗ ಮಾತ್ರ ಮಾನವ ಸಮಾಜ ನಿರ್ಮಾಣ ಸಾಧ್ಯ.**
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾನು ಕೊಡಲ್ಲ, ಬಿಡಲ್ಲಗಳ ಮಧ್ಯೆ ಅಮೆರಿಕ-ಇರಾನ್ ಮಾತುಕತೆ

← ಮೊದಲ ಪುಟದಿಂದ

ಪ್ರಸ್ತುತ ಕತಾರ್ ಖಾತೆಗಳಲ್ಲಿ ಇರಾನ್‌ಗೆ ಸೇರಿದ 6 ಬಿಲಿಯನ್ ಡಾಲರ್ (56000 ಕೋಟಿ ರು.) ಮೊತ್ತ ಯಾರ ಬಳಕೆಗೂ ಅವಕಾಶವಿಲ್ಲದಂತೆ ಉಳಿದುಕೊಂಡಿದೆ. ಇದೂ ಸೇರಿ ಇನ್ನೂ ಹಲವೆಡೆ ಸಿಲುಕಿಕೊಂ ಡಿರುವ ಹಣ ಇನ್ನು ಚಲಾವಣೆಗೆ ಬರಲಿದೆ ಎಂಬ ಆಶಾವಾದ ಇರಾನ್‌ಗಿದೆ. ನಿಯೋಗಗಳಿಗೆ ಬಿಗಿಭದ್ರತೆ: ಅಮೆರಿಕ ನಿಯೋಗದ ನೇತೃತ್ವವನ್ನು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಟ್ರಂಪ್ ಅಳಿಯ, ಉದ್ಯಮಿ ಜೇರ್ಡ್ ಕುಶ್ನರ್ ವಹಿಸಿದ್ದಾರೆ. ಇದಕ್ಕೆ ಪಾಕಿಸ್ತಾನದ ಪಿಎಎಫ್ ಎಫ್-16 ಯುದ್ಧವಿಮಾನಗಳು ಬಿಗಿಭದ್ರತೆ ನೀಡಿದವು. ಅಮೆರಿಕದ ಬೋಯಿಂಗ್ ಸಿ-32ಎ ಯುದ್ಧವಿಮಾನಗಳನ್ನು ಈ ವಿಮಾನಗಳು ಸುತ್ತುವರಿದವು. ಇರಾನ್ ನಿಯೋಗದ ನೇತೃತ್ವವನ್ನು ಅಲ್ಲಿನ ಸಂಸತ್ ಸಭಾಧ್ಯಕ್ಷ ಮೊಹಮ್ಮದ್ ಬಘೇರ್ ಖಲಿಬಾಫ್ ವಹಿಸಿಕೊಂಡಿದ್ದಾರೆ. ಈ ತಂಡವನ್ನು ಬರ ಮಾಡಿಕೊಳ್ಳುವುದು ಪಾಕಿಸ್ತಾನಕ್ಕೆ ಅತಿದೊಡ್ಡ ಸವಾಲಾಗಿತ್ತು. ಎರಡೂ ನಿಯೋಗಗಳು ಆರಂಭದಲ್ಲಿ ಪಾಕ್ ಪ್ರಧಾನಿ ಶೆಹಬಾಜ್ ಶರೀಫ್‌ರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದವು.

ನೆಲಬಾಂಬ್ ಪತ್ತೆ ಇರಾನ್‌ಗೆ ಸವಾಲು: ಇರಾನ್‌ಗೆ ಹೊರ್ಮುಜ್ ಜಲಸಂಧಿಯಲ್ಲಿ ಅಡಗಿಸಿಟ್ಟಿರುವ ನೆಲಬಾಂಬ್‌ಗಳೇ ದೊಡ್ಡ ಸಮಸ್ಯೆಯಾಗಿವೆ. ಅದಕ್ಕೆ ಅದನ್ನು ಹುಡುಕಿ ತೆಗೆದು ನಾಶಪಡಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿಗಳು ಹೇಳಿವೆ. ಯುದ್ಧದ ವೇಳೆ ಜಲಸಂಧಿಯಲ್ಲಿ ವಾಣಿಜ್ಯ ನೌಕೆಗಳು ಮುಂದೆ ಸಾಗದಂತೆ ತಡೆಯಲು ಇರಾನ್, ನೀರಿನೊಳಗೇ ಬಾಂಬ್‌ಗಳನ್ನು ಅಳವಡಿಸಿತ್ತು.

ಈ ವರ್ಷವೇ ದ್ವಿಭಾಷಾ ನೀತಿ ಜಾರಿ

← ಮೊದಲ ಪುಟದಿಂದ

ವಿದ್ಯಾರ್ಥಿಗಳು ಪರೀಕ್ಷೆ ಬರೆಯಬಹುದು, ಆದರೆ ಅಂಕವನ್ನು ಪಟ್ಟಿಗೆ ಸೇರಿಸುವುದಿಲ್ಲ. ಅದರ ಬದಲು ಶ್ರೇಣಿಗಳನ್ನು (ಎ, ಬಿ ರೀತಿ) ಮಾತ್ರ ನೀಡಲಾಗುತ್ತದೆ ಎಂದಿದ್ದರು. ಇದು ವಿದ್ಯಾರ್ಥಿಗಳೂ ಸೇರಿ, ಪೋಷಕರ ಸಿಟ್ಟಿಗೆ ಕಾರಣವಾಗಿತ್ತು. ಮಕ್ಕಳ ಹಿತ ದೃಷ್ಟಿಯಿಂದ ದ್ವಿಭಾಷಾ ನೀತಿ ಜಾರಿ ಕುರಿತು ಹೇಳಿದ್ದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರದ್ದು ಏಕಪಕ್ಷೀಯ ನಿರ್ಧಾರವೆಂಬ ಟೀಕೆಗಳು ಕೇಳಿ ಬಂದಿದ್ದವು. ಇದರ ನಡುವೆ ಸರಕಾರ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ 15 ಜಿಲ್ಲೆಗಳ ಸರಕಾರಿ ಶಾಲೆಗಳಲ್ಲಿ ದ್ವಿಭಾಷಾ ನೀತಿ ಆರಂಭಿಸಲು ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದ್ದು, ಈ ಸಂಬಂಧ ಸರಕಾರಿ ಪ್ರಾಥಮಿಕ ಶಿಕ್ಷಕರಿಗೆ ಇಂಗ್ಲಿಷ್ ತರಬೇತಿ ನೀಡುತ್ತಿದೆ.

ದ್ವಿಭಾಷಾ ಮಾಧ್ಯಮ ಪ್ರಯುಕ್ತ 2026-27ನೇ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನ ಉದ್ದೇಶಿತ ಸರಕಾರಿ ಶಾಲೆಗಳಲ್ಲಿ ಬೋಧಿಸುತ್ತಿರುವ 1,55,950 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಮಾಧ್ಯಮ ಶಿಕ್ಷಕ ತರಬೇತಿ (ಇಎಂಟಿಟಿ) ಅನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ. ರಾಜ್ಯದ ಎಲ್ಲ ಹಲವು ಕಡೆ ಈ ತರಬೇತಿ ನಡೆಯುತ್ತಿದೆ. 3 ಹಂತಗಳಲ್ಲಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ.

ಪ್ರಾಥಮಿಕ ಶಾಲಾ ಶಿಕ್ಷಕರು ಇಂಗ್ಲಿಷ್ ನಲ್ಲಿ ಪಾಠ ಮಾಡುವುದನ್ನು ಹೇಳಿಕೊಡಲು ಅವರಿಗೆ ತರಬೇತಿ ನೀಡಲಾಗುತ್ತಿದೆ.

ಪರಿಣಿತರು ಈ ತರಗತಿ ತೆಗೆದುಕೊಂಡಿದ್ದಾರೆಂದು ಎಂದು ಸರಕಾರ ಹೇಳಿಕೊಂಡಿದೆ.

ಮೊದಲಿಗೆ ಪ್ರತಿ ಜಿಲ್ಲೆಯಿಂದ ರಾಜ್ಯದ ಒಬ್ಬರು ಡಯಟ್‌ನಿಂದ ನೋಡಲ್ ಅಧಿಕಾರಿಗಳಂತೆ ರಾಜ್ಯದ ಒಟ್ಟು 385 ಎಂಆರ್‌ಪಿಗಳಿಗೆ ಬೆಂಗಳೂರಿನ ಪ್ರತಿಷ್ಠಿತ ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆಯಾದ ದಕ್ಷಿಣ ಭಾರತ ಆರ್‌ಐಇಎಸ್‌ಐ ಅವರಿಂದ ತರಬೇತಿ ಕೊಡಿಸಲಾಗುತ್ತಿದೆ.

ಎರಡನೇ ಹಂತದಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಲಿದ್ದಾರೆ.

ಪ್ರತಿ ತಾಲೂಕುಗಳಿಂದ ತಲಾ 15 ಸಂಪನ್ಮೂಲ ವ್ಯಕ್ತಿಗಳಿಂದ ಒಟ್ಟು ರಾಜ್ಯದ 3060 ಎಂಆರ್‌ಪಿಗಳಿಗೆ ಜಿಲ್ಲಾ ಹಂತದಲ್ಲಿ ತರಬೇತಿ ಕೊಡಿಸುವ ಕಾರ್ಯಕ್ರಮ ಚಾಲ್ತಿಯಲ್ಲಿದೆ.

ವಿಧೇಯಕದ ವೇಗಕ್ಕೆ ರಾಜ್ಯಪಾಲರಿಂದ ನಿಯಂತ್ರಣ | ಸರಕಾರ ಹಾಗೂ ಲೋಕಭವನದ ನಡುವೆ ಸಂಘರ್ಷ

ಮತ್ತೊಂದು ಸುತ್ತಿನ ಬ್ಯಾಲೆಟ್ ಫೈಟ್

ಬೆಂಗಳೂರು: ಲೋಕಭವನ ಹಾಗೂ ಸರಕಾರದ ನಡುವೆ ಮತ್ತೊಂದು ಸುತ್ತಿನ ಸಂಘರ್ಷ ಪ್ರಾರಂಭವಾಗಿದ್ದು, ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಬ್ಯಾಲೆಟ್ ಪತ್ರದ ಮೂಲಕ ನಡೆಸುವುದಕ್ಕಾಗಿ ರಾಜ್ಯ ಸರಕಾರ ಕಳೆದ ಅಧಿವೇಶನದಲ್ಲಿ ಒಪ್ಪಿಗೆ ಪಡೆದಿದ್ದ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ವಿಧೇಯಕವನ್ನು ರಾಜ್ಯಪಾಲರು ಪರಿಶೀಲನೆಗಾಗಿ ಬಾಕಿ ಉಳಿಸಿಕೊಂಡಿದ್ದಾರೆ.

ಕಳೆದ ಅಧಿವೇಶನದಲ್ಲಿ ಅಂಗೀಕಾರಗೊಂಡ 11 ವಿಧೇಯಕಗಳ ಪೈಕಿ, 'ಇವ ನಮ್ಮವ ಇವ ನಮ್ಮವ' ವಿಧೇಯಕವೂ ಸೇರಿದಂತೆ 10 ವಿಧೇಯಕಕ್ಕೆ ಮಾತ್ರ ಅಂಕಿತ ಹಾಕಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಬ್ಯಾಲೆಟ್ ಪತ್ರದ ಮೂಲಕ ನಡೆಸುವುದಕ್ಕಾಗಿ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ವಿಧೇಯಕ ಹಾಗೆಯೇ ಉಳಿಸಿಕೊಂಡಿದ್ದಾರೆ.

ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ವಿಧಾನಸಭೆಯಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಮಧ್ಯೆ ಭಾರೀ ಸಂಘರ್ಷ ಏರ್ಪಟ್ಟಿತ್ತು. ಐಟಿಬಿಟಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಪ್ರತಿಪಕ್ಷಗಳು ತೀವ್ರ ತರಾಟೆಗೆ ತೆಗೆದುಕೊಂಡಿದ್ದವು. ಕಾಂಗ್ರೆಸ್ ಸರಕಾರ ರಾಜ್ಯವನ್ನು ಮತ್ತೆ ಶಿಲಾಯುಗದತ್ತ ಕರೆದೊಯ್ಯುತ್ತಿದೆ ಎಂದು ವಿಪಕ್ಷಗಳು ಆಕ್ಷೇಪ ಎತ್ತಿದ್ದವು.

ಆದರೆ, ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದ ಕಾಂಗ್ರೆಸ ಸರಕಾರ ವಿಧೇಯಕವನ್ನು ಧ್ವನಿಮತಕ್ಕೆ ಹಾಕಿ ಅಂಗೀಕಾರ ಪಡೆದುಕೊಂಡಿತ್ತು. ಕರ್ನಾಟಕ ಪೊಲೀಸ್ ಮಸೂದೆ, ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ, ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ., ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಮಸೂದೆ, ಕರ್ನಾಟಕ ಸರಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ, ಕರ್ನಾಟಕ ಧನ ವಿನಿಯೋಗ ಮಸೂದೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ ತಿದ್ದುಪಡಿ ಮಸೂದೆಗಳಿಗೆ ಅಂಕಿತ ಬಿದ್ದಿದೆ.

ಆದರೆ, ದೇಶದಲ್ಲಿ ಬಿಜೆಪಿ ಇವಿಎಂ ಮೂಲಕ ಜಯಗಳಿಸುತ್ತಿದೆ ಎಂದು ಕಾಂಗ್ರೆಸ್ ಹೈಕಮಾಂಡ್ ರಾಷ್ಟ್ರವ್ಯಾಪಿ ಹೋರಾಟ ನಡೆಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಬ್ಯಾಲೆಟ್ ಮೂಲಕ ನಡೆಸಲು ಮುಂದಾಗಿತ್ತು. ಈ ಹಿನ್ನೆಲೆಯಲ್ಲಿ ಸುಮಾರು ಒಂದು ವರ್ಷದ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ಕಾಯಿದೆ ತಿದ್ದುಪಡಿ ಮಾಡಲು ನಿರ್ಧಾರ ತೆಗೆದುಕೊಳ್ಳಲಾಗಿತ್ತು. ರಾಜ್ಯ ಸರಕಾರದ ಈ ತೀರ್ಮಾನದ ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವ ಲೆಕ್ಕಾಚಾರ ಇದೆ ಎಂಬ ವ್ಯಾಖ್ಯಾನವೂ ನಡೆದಿತ್ತು. ಆದರೆ, ಈಗ ವಿಧೇಯಕದ ವೇಗಕ್ಕೆ ರಾಜ್ಯಪಾಲರು ನಿಯಂತ್ರಣ ಹಾಕಿರುವುದರಿಂದ ಚರ್ಚೆಗೆ ಮತ್ತೊಂದು ರೂಪ ಪಡೆದುಕೊಂಡಿದೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿತ್ರದುರ್ಗ-577501

ಭುವನೇಶ್ವರಿಸರ್ಕಲ್, ಮುನ್ಸಿಪಾಲ್ ಕಾಲೋನಿ, 4ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಚಿತ್ರದುರ್ಗ 577501

ಫೋ:-08194-234113 ಇ-ಮೇಲ್:daochitradurga2021@gmail.com

ಸಂಖ್ಯೆ: ಜಿಆಕಚಿ/30/ಸಿಬ್ಬಂದಿ(2)/2025-26 ದಿನಾಂಕ: 10.04.2026

ಮರು ಇ-ಟೆಂಡರ್ ಅಧಿಸೂಚನೆ

2026-27 ನೇ ಸಾಲಿಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಅಧೀನದಲ್ಲಿ ಜಿಲ್ಲಾ ವಲಯದ ಸರ್ಕಾರಿ ಆಯುರ್ವೇದ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಎದುರಿಗೆ 01 ಡಾಟಾ ಎಂಟ್ರೀ ಆಪರೇಟರ್ 26 ಗ್ರೂಪ್-ಡಿ ಮತ್ತು 02 ಮಸಾಜಿಸ್ಟ್ ಹಾಗೂ ರಾಜ್ಯ ವಲಯದಡಿ 04 ಮಲ್ಟಿಪರ್ಪಸ್ ವರ್ಕರ್ ಮತ್ತು 01 ಗ್ರೂಪ್-ಡಿ ಒಟ್ಟು 34 ನೌಕರರ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ಅನ್ವಯ ಈ ಕೆಳಕಂಡಂತೆ ಮರು ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಇ-ಟೆಂಡರ್ ವಿವರಗಳು:- (1) ಟೆಂಡರ್ ಅಂದಾಜು ಮೊತ್ತ ರೂ. 80.00 ಲಕ್ಷಗಳು (2) ಇ.ಎಂ.ಡಿ. ಮೊತ್ತ (Through eprocurment Portal only) ಟೆಂಡರ್ ಮೊತ್ತಕ್ಕೆ ಶೇ.2% ರಂತೆ ರೂ. 1,60,000/- (3) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿ: 10.04.2026 (4) ಬಿಡ್ಡರ್ಸ್ ಪೂರ್ವಭಾವಿ ಸಭೆ (Pre Bid Meeting) 15.04.2026 ಬೆಳಿಗ್ಗೆ 11.30 ಗಂಟೆಗೆ (5) ಇ-ಪೋರ್ಟಲ್ ಮುಖಾಂತರ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 24.04.2026 ಸಂಜೆ 5.00 ಗಂಟೆ (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸ್ಥಳ 27.04.2026 ಪೂರ್ವಾಹ್ನ 11.00 ಗಂಟೆಗೆ (7) ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ ಜಿಲ್ಲಾ ಆಯುಷ್ ಕಛೇರಿ, ಚಿತ್ರದುರ್ಗ (8) ಇ-ಟೆಂಡರ್ ಪ್ರಕಟಿಸಿದ ಸಂಖ್ಯೆ AYD/2026-27/SE0212 ಟೆಂಡರ್ ದಾಖಲೆಗಳನ್ನು E-Procurement portal https://kppp.karnataka.gov.in ಮೂಲಕ ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ upload ಮಾಡಲು ಸೂಚಿಸಿದೆ.

DIPR/CTA/KSMCA/27/2026-27

ಸಹಿ/-
ಜಿಲ್ಲಾ ಆಯುಷ್ ಅಧಿಕಾರಿಗಳು, ಚಿತ್ರದುರ್ಗ

ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಬಗ್ಗೆ ಮುಂದಿನ 10 ದಿನ ಜಾಗೃತಿ

ಶೇ.33 ಮಹಿಳಾ ಮೀಸಲಾತಿ: ಪಕ್ಷಾತೀತವಾಗಿ ಬೆಂಬಲಿಸಿ

ಬೆಂಗಳೂರು: ಮಹಿಳಾ ಮೀಸಲಾತಿ ಜಾರಿ ಸಂಬಂಧ ಸಂಸತ್ ಅಧಿವೇಶನ ನಡೆಯಲಿದ್ದು, ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಬಗ್ಗೆ ಮುಂದಿನ 10 ದಿನ ಜಾಗೃತಿ ಮೂಡಿಸಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಯನ್ನು ಸ್ವೀಕಾರ ಮಾಡಿ ಎಂದು ರಾಜಕೀಯ ಪಕ್ಷಗಳಿಗೆ ಮನವಿ ಮಾಡಿದರು. ಮುಂದೆ ವಿವಿಧ ಕ್ಷೇತ್ರಗಳ ತಜ್ಞರನ್ನು ಗುರುತಿಸಿ ಅವರಿಗೆ ಟಿಕೆಟ್ ಕೊಡುವಂತಾಗಲಿದೆ. ಮಹಿಳಾ ಮೀಸಲಾತಿ ಎಂಬುದು ಬಹಳ ವರ್ಷಗಳಿಂದ ಒಂದು ಕೂಗು, ಅಪೇಕ್ಷೆ, ಬೇಡಿಕೆಯಾಗಿತ್ತು. ಅದು ಈಡೇರುವ ವಿಚಾರದಲ್ಲಿ ಸಂಶಯವಿತ್ತು. ಸುಮಾರು 15 ವರ್ಷಗಳ ಹಿಂದೆ ಇದು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷದವರು ಮಸೂದೆಯ ಹಾಳೆಯನ್ನು ಹರಿದು ಹಾಕಿ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು ಎಂದರು.

ಕರ್ನಾಟಕದ ಗ್ರಾಮ ಪಂಚಾಯಿತಿಗಳ ಅತ್ಯುತ್ತಮ ಸಾಧನೆ ಗಣನೆಗೆ ತೆಗೆದುಕೊಂಡರೆ ಮಹಿಳೆ ಅಧ್ಯಕ್ಷೆ ಆಗಿರುವ ಕಡೆ ಉತ್ಕೃಷ್ಟ ಸಾಧನೆ ಇತ್ತು. ಅಂಥಲ್ಲೇ ಪ್ರಶಸ್ತಿ ಲಭಿಸಿತ್ತು. ಸಂಸತ್ ಟಿಕೆಟ್ ವಿಚಾರದಲ್ಲಿ ಈಗಾಗಲೇ ಜನಪ್ರತಿನಿಧಿ ಆಗಿರುವವರಿಗೆ ಎಲ್ಲ ಪಕ್ಷಗಳು ಆದ್ಯತೆ ಕೊಡಲಿವೆ. ಈಗಿನಿಂದಲೇ ಗುರುತಿಸುವ ಕಾರ್ಯ ನಡೆಯಬೇಕಿದೆ ಎಂದು ಹೇಳಿದರು.

ಹಳದಿ ಗ್ಲಾಸ್ ಹಾಕಿಕೊಂಡ ಕಾಂಗ್ರೆಸ್: ಕಾಂಗ್ರೆಸ್ ಹಳದಿ ಗ್ಲಾಸ್ ಹಾಕಿಕೊಂಡಿದೆ. ಅದರಿಂದ ಯಾವುದನ್ನು ನೋಡಿದರೂ ಹಳದಿ, ಚುನಾವಣೆಯೇ ಅವರಿಗೆ ಗೋಚರಿಸುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಗಳ ಚುನಾವಣೆ ಮೇಲೆ ಪ್ರಭಾವ ಬೀರುವುದೆಂದು ನನಗೆ ಅನಿಸುತ್ತಿಲ್ಲ. ಮಲ್ಲಿಕಾರ್ಜುನ ಖರ್ಗೆಯವರು ಈ ಮಸೂದೆಗೆ ವಿರೋಧ ಇದ್ದಾರಾ ಅಥವಾ ಈಗ ಚರ್ಚೆ ಮಾಡುವುದಕ್ಕೆ ವಿರೋಧ ಇದ್ದಾರಾ ಎಂಬುದನ್ನು ಸ್ಪಷ್ಟಪಡಿಸಬೇಕು. ಇಂದಿರಾ ಗಾಂಧಿಯವರು ಪ್ರಧಾನಿ ಆಗಿದ್ದ ಪಕ್ಷದಲ್ಲಿ ಸೋನಿಯಾ ಗಾಂಧಿಯವರು ಯುಪಿಎ ಯನ್ನು ನಿಯಂತ್ರಿಸುತ್ತಿದ್ದಾಗ ಮಹಿಳಾ ಮೀಸಲಾತಿ ಕುರಿತು ಚರ್ಚೆ ನಡೆಯಿತು. ಆಗ ಮೊಸಳೆ ಕಣ್ಣೀರು ಸುರಿಸಿದ್ದರು. ಕೆಲವು ಬಾರಿ ವಿರೋಧಿಸಿದ್ದರು. ಅವರಿಗೆ ಮಹಿಳೆ ಎಂದರೆ ಈಗ ಪ್ರಿಯಾಂಕಾ ಗಾಂಧಿ ಮಾತ್ರ. ಬೇರೆ ಮಹಿಳೆಯರು ಬರುವುದು ಅವರಿಗೆ ಅಗತ್ಯ ಇಲ್ಲ. ಪ್ರಿಯಾಂಕಾ ಗಾಂಧಿ ಬೇಕು, ಬೇರೆ ಮಹಿಳೆಯರಿಗೆ ಅವಕಾಶ ಬೇಡ ಎಂಬುದು ಕಾಂಗ್ರೆಸಿನ ಮಾನಸಿಕತೆ. ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹೊರತುಪಡಿಸಿ ಸಾಮಾನ್ಯ ಮಹಿಳೆ ಯರು ಸಂಸತ್ತಿಗೆ ಬರುವುದು ಅವರಿಗೆ ಬೇಕಾಗಿಲ್ಲ. ಈ ಮಾನಸಿಕತೆಯನ್ನು ಅವರು ಬದಲಿ ಸಿಕೊಳ್ಳಲಿ ಎಂದು ಒತ್ತಾಯಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಮಾತನಾಡಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ರೂಪಾಲಿ ನಾಯಕ್, ರಾಜ್ಯ ವಕ್ತಾರರಾದ ಸುರಭಿ ಹೊದಿಗೆರೆ ಇದ್ದರು.

> **ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ವಿರೋಧಿ ಮಾನಸಿಕತೆ ಮತ್ತು ದಾಷ್ಟ್ರ್ಯ ಇವೆರಡನ್ನೂ ತೋರಿಸಲಾಗಿತ್ತು. ಬಳಿಕ ಈ ಮಸೂದೆ ನನೆಗುದಿಗೆ ಬಿದ್ದಿತ್ತು. ಯುಪಿಎ 10 ವರ್ಷಗಳ ಅಧಿಕಾರದ ಅವಧಿಯಲ್ಲಿ ಇದನ್ನು ಮುಂದಕ್ಕೆ ತರಲಾಗಲಿಲ್ಲ. ನರೇಂದ್ರ ಮೋದಿಯವರು ಈ ದೇಶದ ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದಾರೆ.**
> - ಶೋಭಾ ಕರಂದ್ಲಾಜೆ ಕೇಂದ್ರ ಸಚಿವೆ

ಸಹಿ ಸಂಗ್ರಹ, ಮಿಸ್ಡ್ ಕಾಲ್ ಅಭಿಯಾನ

ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಮಾತನಾಡಿ, ನಾರಿ ಶಕ್ತಿ ವಂದನ್ ಎಂಬ ಕಾಯ್ದೆ ತರಲು ಪ್ರಧಾನಿಯವರು ಮುಂದಾಗಿದ್ದು, ಅವರಿಗೆ ಅಭಿನಂದನೆಗಳು. ಈ ಸಂಬಂಧ ಎಲ್ಲ ಜಿಲ್ಲೆಗಳಲ್ಲಿ ಮಹಿಳಾ ಮೋರ್ಚಾದಿಂದ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಸಹಿ ಸಂಗ್ರಹವೂ ನಡೆಯಲಿದೆ. ಕೆ.ಆರ್.ಪುರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಸಹಿ ಸಂಗ್ರಹ ಆರಂಭವಾಗುತ್ತದೆ. ಇದು ರಾಜ್ಯದಾದ್ಯಂತ ನಡೆಯಲಿದೆ. ಮಸೂದೆ ಬೆಂಬಲಿಸಲು ಮಿಸ್ಡ್‌ಕಾಲ್ ಅಭಿಯಾನ ಮಾಡುತ್ತಿದ್ದೇವೆ. ಯುವ ಮೋರ್ಚಾದಿಂದ ಬೈಕ್, ಸ್ಕೂಟಿ ರ್‍ಯಾಲಿಗಳನ್ನು ಆಯೋಜಿಸಲಿದ್ದೇವೆ ಎಂದರು.

ಸಮಾಚಾರ ಸಣ್ಣದಲ್ಲ

ಬೆಟ್ಟಿಂಗ್‌ನಲ್ಲಿ ಸೋತ ವ್ಯಕ್ತಿ ಆತ್ಮಹತ್ಯೆ

ಕಲಬುರಗಿ: ಐಪಿಎಲ್ ಬೆಟ್ಟಿಂಗ್‌ನಲ್ಲಿ ನಿರಂತರವಾಗಿ ಲಕ್ಷಾಂತರ ರು. ಹಣ ಕಳೆದುಕೊಂಡು ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವ್ಯಕ್ತಿಯೊಬ್ಬರು ಬೆಣ್ಣೆತ್ತೊರಾ ಜಲಾಶಯದ ಹಿನ್ನಿರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ಜಿಲ್ಲೆಯ ಕಾಳಗಿ ತಾಲೂಕಿನಲ್ಲಿ ಶನಿವಾರ ನಡೆದಿದೆ.

ತಾಲೂಕಿನ ರುಮ್ಮನಗೂಡ್ ಗ್ರಾಮದ ನಿವಾಸಿಯಾದ ಚಂದ್ರಕಾಂತ ದೇಸಾಯಿ (40) ಮೃತ ವ್ಯಕ್ತಿ. ಐಪಿಎಲ್ ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದ ಚಂದ್ರಕಾಂತ ಅವರು ಸಾಲ ಮಾಡಿಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು ಎನ್ನಲಾಗಿದೆ. ಸಾಲಗಾರರ ಕಿರುಕುಳ ಮತ್ತು ಮಾನಸಿಕ ಒತ್ತಡ ತಾಳಲಾರದೆ, ನಾಗೂರ ಸೇತುವೆ ಬಳಿ ತನ್ನ ಬೈಕ್ ನಿಲ್ಲಿಸಿ ಮೊಬೈಲ್ ಇಟ್ಟು ಬೆಣ್ಣೆತ್ತೊರಾ ಜಲಾಶಯದ ಹಿನ್ನೀರಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಮಹಾಗಾಂವ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು-ದಿಬ್ರೂಗಢ ನಡುವೆ ವಿಶೇಷ ರೈಲು

ಮೈಸೂರು: ಬೇಸಿಗೆ ರಜೆ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ನೈರುತ್ಯ ರೈಲ್ವೆಯು ಮೈಸೂರು ದಿಬ್ರೂಗಢ ನಡುವೆ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ಕ್ರಮ ಕೈಗೊಂಡಿದೆ.ರೈಲು ಸಂಖ್ಯೆ 06253 ಮೈಸೂರಿನಿಂದ ಏ.12 ಮತ್ತು 26ರಂದು ಬೆಳಗ್ಗೆ 8ಕ್ಕೆ ಹೊರಡಲಿದೆ ಮತ್ತು ಬುಧವಾರ ಬೆಳಿಗ್ಗೆ 1.30ಕ್ಕೆ ದಿಬ್ರೂಗಢ ತಲುಪಲಿದೆ. ರೈಲು ಸಂಖ್ಯೆ 06254 ದಿಬ್ರೂಗಢದಿಂದ ಏ.16 ಮತ್ತು 30ರಂದು (ಮಂಗಳವಾರ) ಮುಂಜಾನೆ 1.30ಕ್ಕೆ ಹೊರಟು, ಶನಿವಾರ ಸಂಜೆ 4.15ಕ್ಕೆ ಮೈಸೂರಿಗೆ ಆಗಮಿಸಲಿದೆ. ಈ ರೈಲು ಮಾರ್ಗ ಮಧ್ಯದಲ್ಲಿ ಮಂಡ್ಯ, ಮದ್ದೂರು, ಕೆಂಗೇರಿ, ಕೆಎಸ್ ಆರ್ ಬೆಂಗಳೂರು, ಕೃಷ್ಣರಾಜಪುರಂ, ಬಂಗಾರಪೇಟೆ, ಜೋಲಾ ರಪೇಟೆ, ಕಟ್ಪಾಡಿ, ರೇಣಿಗುಂಟಾ, ಧನಕುಣಿ, ಮತಿ, ನಾರ್ತ್ ಲಖಿಮಪುರ್, ಧೇಮಾಜಿ ನಿಲ್ದಾಣಗಳಲ್ಲಿನಿಲುಗಡೆ ಹೊಂದಿ ರುತ್ತದೆ. ಈ ರೈಲು ಒಟ್ಟು 20 ಬೋಗಿಗಳನ್ನು ಹೊಂದಿರಲಿದೆ.

ಕಾಂಗ್ರೆಸ್ ಮುಖಂಡ ಫೈರೋಜ್‌ನ ಕೊಲೆ

ಧಾರವಾಡ: ಯುವ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ಫೈರೋಜ್ ಪಠಾಣ್ ಅವರನ್ನ ತಮ್ಮ ಮನೆಯಲ್ಲೇ ಕೊಲೆ ಮಾಡಿರುವ ಘಟನೆ ಧಾರವಾಡ ನಗರದ ಹಾಶ್ಮಿ ನಗರದಲ್ಲಿ ನಡೆದಿದೆ. ಧಾರವಾಡ ನಗರದ ಮನೆಯಲ್ಲೇ ಕೊಲೆ ನಡೆದಿದ್ದು, ಸ್ಥಳಕ್ಕೆ ಉಪನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಫೈರೋಜ್ ಪಠಾಣ್ ಈ ಮೊದಲು ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು ಎಂದು ತಿಳಿದುಬಂದಿದೆ. ಆದರೆ ಕೊಲೆ ಯಾರು ಮಾಡಿದ್ದಾರೆ? ಕಾರಣ ಏನು ಎಂಬುದು ತಿಳಿಯಬೇಕಿದೆ. ಸದ್ಯ ಫೈರೋಜ್ ಆಪ್ತರು ಸ್ಥಳಕ್ಕೆ ಆಗಮಿಸಿದ್ದಾರೆ. ಇತ್ತ ಫೈರೋಜ್ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಐಪಿಎಲ್‌ನಲ್ಲಿ ಬೌಲರ್‌ಗಳ ಬೆವರಿಳಿಸುತ್ತಿರುವ 15 ವರ್ಷದ ವೈಭವ್ ಸೂರ್ಯವಂಶಿ

ಸುದ್ದಿ



VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದಿನ ವಿಶೇಷ

12 ಏಪ್ರಿಲ್ 2026 ಭಾನುವಾರ

» ಸೂರ್ಯೋದಯ	: 6-25
» ಸೂರ್ಯಾಸ್ತ	: 6-35
» ತಿಥಿ	: ದಶಮಿ
» ನಕ್ಷತ್ರ	: ಶ್ರಾವಣ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ರಾಜ್ಯ ಸಮ್ಮೇಳನಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ

ಪತ್ರಕರ್ತರು ಸದಾಕಾಲ ಸಮಾಜದ ಪರವಾಗಿರಬೇಕು

ಬೀದರ್: ಪತ್ರಕರ್ತರು ಸದಾಕಾಲ ಜನಪರವಾಗಿ, ಸಮಾಜದ ಪರವಾಗಿರಬೇಕು. ಅಶಕ್ತರಿಗೆ ಶಕ್ತಿ ತುಂಬುವ ಕಾರ್ಯ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಸಮಾಜ ತಿದ್ದುವ, ಜನತೆಯನ್ನು ಜಾಗೃತಗೊಳಿಸುವ ಕಾರ್ಯ ಮಾಡಬೇಕು. ಧ್ವನಿ ಇಲ್ಲದವರಿಗೆ ಧ್ವನಿ ಆಗಬೇಕು. ನಮ್ಮ ಸಮಾಜದಲ್ಲಿ ಅನೇಕ ಜಾತಿಗಳು, ಧರ್ಮಗಳು, ಭಾಷೆಗಳಿವೆ. ಹಲವು ಸಂಸ್ಕೃತಿ ಇದೆ. ಇಂತಹ ಸಮಾಜದಲ್ಲಿ ನಾವು ಬದುಕಿದ್ದೇವೆ ಎಂಬುದನ್ನು ಅರಿತು ಎಲ್ಲರೂ ಒಪ್ಪುವ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದರು. ಸಂವಿಧಾನದ ಆಶಯಗಳು ಸಮಾಜದಲ್ಲಿ ಜಾರಿಯಾಗುತ್ತಿವೆಯಾ ಎಂಬುದನ್ನು ನೋಡುವ, ತಿಳಿಯುವ ಕಾರ್ಯವನ್ನು ಪತ್ರಕರ್ತರು ಮಾಡಬೇಕು ಎಂದರು.

ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರು ಸಹ ಪತ್ರಕರ್ತರಾಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ಪಡೆಯುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಗಾಂಧೀಜಿ, ಅಂಬೇಡ್ಕರ್ ಅವರು ಪತ್ರಿಕೆಯನ್ನು ಹೊರಡಿಸಿ ಧಮನಿತರ ಧ್ವನಿಯಾಗಿ ಕೆಲಸ ಮಾಡಿದರು. ಇಂದಿನ ಪತ್ರಕರ್ತರು ಗಾಂಧೀಜಿಯವರ, ಅಂಬೇಡ್ಕರ ಅವರ ಆಶಯಗಳನ್ನು ಅರಿತು ಅವರಂತೆ ಕಾರ್ಯನಿರ್ವಹಿಸಬೇಕು ಎಂದು ಸಲಹೆ ಮಾಡಿದರು.

ನಮ್ಮ ಮಕ್ಕಳಿಗೆ ವೈಚಾರಿಕತೆ, ವೈಜ್ಞಾನಿಕತೆ ಇಲ್ಲದ ಶಿಕ್ಷಣ ಸಿಗುತ್ತಿದೆ. ಬಸವಣ್ಣನವರು ಕರ್ಮ ಸಿದ್ಧಾಂತವನ್ನು ತಳ್ಳಿ ಹಾಕಿದರು. ಬಸವಣ್ಣನವರು ತಿಳಿಸಿದ ಸಮಾಜಮುಖಿ ವಿಚಾರ ಪಸರಿಸಬೇಕು. ನಾವೆಲ್ಲರೂ ಮಾನವರಾಗಿ ಬದುಕಬೇಕು. ಮಾನವೀಯತೆ ಇರಬೇಕು. ಮಾನವೀಯತೆ ಇದ್ದರೆ ಶೋಷಣೆಗೆ ಅವಕಾಶವಿರಲ್ಲ. ಸಮಾಜ ಒಡೆಯುವ ಪಟ್ಟಭದ್ರರನ್ನು ಹತ್ತಿಕ್ಕುವ ಕಾರ್ಯವನ್ನು ಪತ್ರಕರ್ತರು ಮಾಡಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಮಾತನಾಡಿ, ಕಳೆದ ಎರಡು ದಶಕಗಳ ನಂತರ ಬೀದರ್‌ದಲ್ಲಿ ಇದೇ ಮೊದಲ ಬಾರಿಗೆ ಇಂತಹ ರಾಜ್ಯಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. 1932 ರಿಂದ ಇಲ್ಲಿಯವರೆಗೆ 95 ವಸಂತಗಳ ಕಾಲ ಪತ್ರಕರ್ತರ ಏಳಿಗೆಗೆ ಶ್ರಮಿಸುತ್ತಿರುವ ಭರತ ಖಂಡದ ಏಕೈಕ ಸಂಘಟನೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವಾಗಿದೆ. ಸಾಮಾಜಿಕ ಪರಿಕಲ್ಪನೆಯೊಂದಿಗೆ ಅನೇಕ ಮಹನೀಯರು, ಪತ್ರಕರ್ತರು ಈ ಸಂಘಟನೆ ಕಟ್ಟಿ ಬೆಳೆಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಹಾರಕೂಡ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಭಾಲ್ಕಿಯ ಬಸವಲಿಂಗ ಪಟ್ಟದೇವರು, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ಸಂಸದ ಸಾಗರ ಖಂಡ್ರೆ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಇನ್ನಿತರರು ಗಣ್ಯರು ಉಪಸ್ಥಿತರಿದ್ದರು.



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

> ನೀನು ಬಡವನಾಗು ಎಂದು ಯಾವ ದೇವರೂ ಹೇಳುವುದಿಲ್ಲ. ದೇವರು ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾನೆ. ಆದರೆ ದೇವರ ಹೆಸರಿನಲ್ಲಿ ಶೋಷಣೆ ನಡೆಯುತ್ತಿದೆ. ಮನುವಾದಿಗಳು, ಪಟ್ಟಭದ್ರರು ಇರುವ ಕಾರಣಕ್ಕೆ ನಮಗೆ ವೈಚಾರಿಕ, ವೈಜ್ಞಾನಿಕ ಶಿಕ್ಷಣ ಸಿಗುವುದು ಕಷ್ಟವಾಗಿ ಪರಿಣಮಿಸಿದೆ. ಇಂತಹ ವಿಷಯಗಳನ್ನು ಪತ್ರಿಕೆಗಳು ತಿಳಿಸಿದರಷ್ಟೇ ಸಾಲದು, ಸಮಾಜ ಸುಧಾರಣೆ ಕಾರ್ಯಕ್ಕೆ ನಿರಂತರ ಹೋರಾಡಬೇಕು.
>
> -ಸಿದ್ದರಾಮಯ್ಯ, ಸಿಎಂ

ಪ್ರಸರಣ ಸಂಖ್ಯೆಗಿಂತ ವಿಶ್ವಾಸಾರ್ಹತೆ ಮುಖ್ಯ

ಸಮ್ಮೇಳನದಲ್ಲಿ ಪ್ರಧಾನ ಭಾಷಣ ಮಾಡಿದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ್ ಭಟ್ ಅವರು, ಒಂದು ಪತ್ರಿಕೆಗೆ ಪ್ರಸರಣ ಮುಖ್ಯವಲ್ಲ. ಸುದ್ದಿಯ ವಿಶ್ವಾಸಾರ್ಹತೆ ಮುಖ್ಯ. ಗಾಂಧೀಜಿ ಅವರು 6 ಪತ್ರಿಕೆಗಳನ್ನು ಆರಂಭಿಸಿದ್ದರು. ಇದರಲ್ಲಿ ಯಂಗ್ ಇಂಡಿಯಾ ಹಾಗೂ ಹರಿಜನ ಪತ್ರಿಕೆ ಹೆಚ್ಚು ಹೆಸರುವಾಸಿ. ಅವರ ಆರು ಪತ್ರಿಕೆಗಳು ಸೇರಿ 10 ಸಾವಿರಕ್ಕಿಂತ ಹೆಚ್ಚು ಪ್ರಸರಣ ಇರಲಿಲ್ಲ. ಆದರೆ ಗಾಂಧೀಜಿ ಅವರು ಬರೆದ ಲೇಖನಗಳನ್ನು ಇಡೀ ದೇಶವೇ ಓದುತ್ತಿತ್ತು. ಅಂಬೇಡ್ಕರ್ ಅವರ ಪತ್ರಿಕೆಗಳು ವಿಶ್ವಾಸಾರ್ಹತೆಗೆ ಹೆಸರಾಗಿದ್ದವು. ತಂತ್ರಜ್ಞಾನ ಬದಲಾದಂತೆ ಎಲ್ಲ ವೃತ್ತಿಗಳು ಬದಲಾಗಿವೆ. ಪತ್ರಿಕೋದ್ಯಮ ಕ್ಷೇತ್ರ ಮಾತ್ರ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಸೋಷಿಯಲ್ ಮೀಡಿಯಾಗಳಿಂದ ರೇಡಿಯೋ, ಟಿವಿ, ಪತ್ರಿಕೆಗಳ ಸ್ಥಾನಮಾನ ಕುಸಿಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿದ್ದ ಲೋಕಸಭೆ ಸದಸ್ಯ ಪಿ.ಸಿ.ಮೋಹನ್

ಬೆಂಗಳೂರು-ಮುಂಬೈ ಸ್ಲಿಪರ್ ರೈಲಿಗೆ ಅನುಮೋದನೆ

ಬೆಂಗಳೂರು: ಬೆಂಗಳೂರು ಮತ್ತು ಮುಂಬೈ ನಗರಗಳ ನಡುವೆ ವಂದೇ ಭಾರತ್ ಸ್ಲಿಪರ್ ರೈಲು ಸಂಚಾರಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ.

ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಈ ಸಂಬಂಧ ಬೆಂಗಳೂರಿನ ಸೆಂಟ್ರಲ್ ಕ್ಷೇತ್ರದ ಲೋಕಸಭೆ ಸದಸ್ಯ ಪಿ.ಸಿ.ಮೋಹನ್ ಅವರಿಗೆ ಬರೆದ ಪತ್ರದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಸಂಸದ ಪಿ.ಸಿ.ಮೋಹನ್ ಅವರು ಬೆಂಗಳೂರು ಮತ್ತು ಮುಂಬೈ ನಡುವೆ ಪ್ರಯಾಣಿಕರ ಸಂಚಾರಕ್ಕೆ ಅನುಕೂಲವಾಗುವಂತೆ ವಂದೇ ಭಾರತ್ ಸ್ಲಿಪರ್ ರೈಲಿನ ಸೌಲಭ್ಯ ಕಲ್ಪಿಸಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿದ್ದರು. ಡಿಸೆಂಬರ್ 2ರಂದು ನೈಋತ್ಯ ರೈಲ್ವೆಯ ಸ್ಥಾಯಿ ಸಮಿತಿಯ ಭೇಟಿ ಸಂದರ್ಭದಲ್ಲಿಯೂ ಈ ವಿಷಯ ಪ್ರಸ್ತಾಪಿಸಿದ್ದರು.

ಬೆಂಗಳೂರು-ಮುಂಬೈ ನಡುವೆ 976 ಕಿ.ಮೀ ಅಂತರವಿದೆ. ಈ ಎರಡು ಮಹಾನಗರಗಳ ನಡುವೆ ಈಗ ಸಂಚರಿಸುವ ರೈಲುಗಳು 24 ರಿಂದ 30 ತಾಸು ತೆಗೆದುಕೊಳ್ಳುತ್ತವೆ. ಆದರೆ ಬಸ್‌ಗಳಲ್ಲಿ ಪ್ರಯಾಣಿಸಲು 16 ರಿಂದ 18 ತಾಸು ಗಳು ಸಾಕಾಗುತ್ತವೆ. ಬಸ್‌ನಷ್ಟು ಕಡಿಮೆ ಅವಧಿಯಲ್ಲಿ ಎರಡು ನಗರಗಳ ನಡುವೆ ಸಂಚರಿಸಲು ಅನುಕೂಲವಾಗುವಂತೆ ವಂದೇ ಭಾರತ್ ಸ್ಲಿಪರ್ ರೈಲು ಸೌಲಭ್ಯ ಕಲ್ಪಿಸುವಂತೆ ಪಿ.ಸಿ.ಮೋಹನ್ ಆಗ್ರಹಿಸಿದ್ದರು

ಕೇಂದ್ರದ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರು ತಮಗೆ ಪತ್ರ ಬರೆದು ಬೆಂಗಳೂರು ಮತ್ತು ಮುಂಬೈ ನಡುವೆ ವಂದೇ ಭಾರತ್ ಸ್ಲಿಪರ್ ರೈಲು ಸಂಚಾರಕ್ಕೆ ಅನುಮೋದನೆ ನೀಡುರುವುದನ್ನು ತಿಳಿಸಿದ್ದಾರೆ. ಇದರಿಂದ ತಮಗೆ ಬಹಳ ಸಂತೋಷವಾಗಿದೆ ಎಂದು ಸಂಸದ ಪಿ.ಸಿ.ಮೋಹನ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ವಂದೇ ಭಾರತ್ ಸ್ಲಿಪರ್ ರೈಲಿನ ವೇಳಾಪಟ್ಟಿ ಮತ್ತು ಯಾವ ದಿನಾಂಕದಿಂದ ವಂದೇ ಭಾರತ್ ಸ್ಲಿಪರ್ ಟ್ರೈನ್ ಸಂಚಾರ ಆರಂಭಿಸಲಿದೆ ಎನ್ನುವ ಮಾಹಿತಿ ಸದ್ಯದಲ್ಲಿಯೇ ನೀಡುವುದಾಗಿ ತಿಳಿಸಿದ್ದಾರೆ.

ಈಗ ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಗಳ ಸಾವಿರಾರು ಪ್ರಯಾಣಿಕರು ಹಾಗೂ ಮಹಾರಾಷ್ಟ್ರದ ಪುಣೆ, ಮುಂಬೈ ಇನ್ನಿತರ ನಗರಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರಿಗೆ ತ್ವರಿತ ಹಾಗೂ ಆರಾಮದಾಯಕ ರೈಲು ಸಾರಿಗೆ ಸಿಕ್ಕಂತಾಗಿದೆ. ಕೇಂದ್ರದ ಈ ನಿರ್ಧಾರಕ್ಕಾಗಿ ಪಿ.ಸಿ.ಮೋಹನ್ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಪ್ರಯಾಣಿಕರ ಪರವಾಗಿ ಧನ್ಯವಾದ ತಿಳಿಸಿದ್ದಾರೆ.

ಯಾವ ಮಾರ್ಗದಲ್ಲಿ ಸಂಚಾರ?

ಸ್ಲಿಪರ್ ರೈಲು ಮಾರ್ಗವು ಬೆಂಗಳೂರು ಕೆಎಸ್‌ಆರ್ ನಿಲ್ದಾಣದಿಂದ ತುಮಕೂರು, ಅರಸೀಕೆರೆ, ದಾವಣಗೆರೆ, ಹುಬ್ಬಳ್ಳಿ, ಬೆಳಗಾವಿ, ಪುಣೆ, ಲೋನಾವಲ, ಕಲ್ಯಾಣ್ ಜಂಕ್ಷನ್ ಮಾರ್ಗವಾಗಿ ಮುಂಬೈನ ಪ್ರಸಿದ್ಧ ಛತ್ರಪತಿ ಶಿವಾಜಿ ರೈಲು ನಿಲ್ದಾಣ ತಲುಪಲಿದೆ. ಆದರೆ ಈ ಎಲ್ಲ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ ಎನ್ನಲಾಗಿದೆ. ಕರ್ನಾಟಕದ ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಜಿಲ್ಲೆಗಳು ಹಾಗೂ ಅಕ್ಕಪಕ್ಕ ಜಿಲ್ಲೆಗಳ ಸುದೀರ್ಘ ಪ್ರಯಾಣದ ಪ್ರಯಾಣಿಕರಿಗೆ ಈ ರೈಲಿನಿಂದ ಅನುಕೂಲವಾಗಲಿದೆ. ಶೈಕ್ಷಣಿಕ, ಉದ್ಯೋಗ, ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಕ್ಕಂತಾಗುತ್ತದೆ. ಮೀನುಗಾರಿಕೆ, ವ್ಯಾಪಾರ ವಹೀವಾಟು ವಿಚಾರದಲ್ಲೂ ಒಂದಷ್ಟು ಬೆಳವಣಿಗೆಗಳನ್ನು ನಿರೀಕ್ಷಿಸಲಾಗಿದೆ.

ಹುಬ್ಬಳ್ಳಿ ಬಳಿಕ ಕೊಪ್ಪಳದಲ್ಲಿ ನಡೀತಾ ಲವ್ ಜಿಹಾದ್?

ಕೊಪ್ಪಳ: ಹುಬ್ಬಳ್ಳಿ ಬಳಿಕ ಕೊಪ್ಪಳದಲ್ಲೊಂದು ಲವ್ ಜಿಹಾದ್ ಆರೋಪ ಕೇಳಿಬಂದಿದೆ. ಮುಸ್ಲಿಂ ಯುವಕನ ಮೊಬೈಲ್‌ನಲ್ಲಿ ಹಿಂದೂ ಯುವತಿಯರ ರಾಶಿ ರಾಶಿ ಫೋಟೊ ಹಾಗೂ ವಿಡಿಯೊಗಳು ಪತ್ತೆಯಾಗಿವೆ.

ಕೊಪ್ಪಳ ತಾಲೂಕಿನ ಕಂಪ್ಲಿ ಗ್ರಾಮದ ಮುಸ್ತಫಾ ವಿರುದ್ಧ ಲವ್ ಜಿಹಾದ್ ಆರೋಪ ಕೇಳಿಬಂದಿದೆ. ನರ್ಸಿಂಗ್ ಮಾಡುತ್ತಿದ್ದ ವಿದ್ಯಾರ್ಥಿನಿಯನ್ನು ಪುಸಲಾಯಿಸಿ, ಹಲವೆಡೆ ಸುತ್ತಾಡಿದ್ದಾನೆ. ಸದ್ಯ ಇದೇ ವಿದ್ಯಾರ್ಥಿನಿ ಲವ್ ಜಿಹಾದ್‌ಗೆ ಒಳಗಾಗಿದ್ದಾಳೆ ಎನ್ನಲಾಗಿದೆ. ಕಳೆದ ಮೂರು ದಿನಗಳ ಹಿಂದೆ ಇವರಿಬ್ಬರು ಜಿಲ್ಲಾಸ್ಪತ್ರೆ ಬಳಿ ಇದ್ದಾಗ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರ ಕೈಗೆ ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಮುಸ್ತಫಾ ಮೊಬೈಲ್ ಪರಿಶೀಲಿಸಿದಾಗ ಹತ್ತಾರು ಹಿಂದೂ ಯುವತಿಯರ ಜತೆಗೆ ಇರುವ ವಿಡಿಯೊಗಳು ಪತ್ತೆಯಾಗಿವೆ. ಇವುಗಳಲ್ಲಿ ಹಿಂದೂ ಯುವತಿಯರಿಗೆ ಬೀಯರ್ ಕುಡಿಸಿ, ಮಾಂಸ ಸೇವನೆ ಮಾಡಿಸಿದ್ದು, ಅರೆನಗ್ನಾವಸ್ಥೆಯಲ್ಲಿ ಇರುವ ವಿಡಿಯೋಗಳು ಪತ್ತೆಯಾಗಿವೆ. ಜತೆಗೆ ಗಾಂಜಾ, ಹುಕ್ಕಾ ಸಹ ಹೊಡೆಯುವ ವಿಡಿಯೊಗಳು ಸಹ ಪತ್ತೆಯಾಗಿವೆ. ಇನ್ನು ಮುಸ್ತಫಾ ಮಟ್ಕಾ ಬುಕ್ಕಿಯಾಗಿದ್ದಾನೆ ಎನ್ನಲಾಗಿದೆ. ಈ ಕುರಿತು ಹಿಂದೂ ಜಾಗರಣಾ ವೇದಿಕೆ ಹಾಗೂ ವಿಶ್ವ ಹಿಂದೂ ಪರಿಷತ್‌ನ ಮುಖಂಡರು, ಕಾರ್ಯಕರ್ತರು ಎಸ್ಪಿ ಡಾ.ರಾಮ್ ಅರಸಿದ್ದಿಯವರನ್ನು ಭೇಟಿಯಾಗಿ ಮುಸ್ತಾಫಾ ಬಗ್ಗೆ ತಿಳಿಸಿದ್ದಾರೆ.

ಉಪಚುನಾವಣೆಯಲ್ಲಿ ಗೆಲುವು ಖಚಿತ

ಬೆಳಗಾವಿ: ಬಾಗಲಕೋಟೆ ಹಾಗೂ ದಾವಣಗೆರೆ ಎರಡೂ ಕ್ಷೇತ್ರಗಳಿಗೆ ನಡೆದ ವಿಧಾನಸಭೆ ಉಪಚುನಾವಣೆಯಲ್ಲಿ ನಿಶ್ಚಿತವಾಗಿಯೂ ನಾವೇ ಗೆಲ್ಲುತ್ತೇವೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಷ್ಟು ಮತಗಳ ಅಂತರದಿಂದ ಗೆಲ್ಲುತ್ತೇವೆ ಎಂದು ಖಚಿತವಾಗಿ ಹೇಳಲಾಗದು. ಆದರೆ, ಎರಡೂ ಕಡೆ ಗೆಲ್ಲುವುದಂತೂ ಸ್ಪಷ್ಟ ಎಂದರು. ಈ ಹಿಂದೆ ಶಿಗ್ಗಾವಿ ಕ್ಷೇತ್ರಕ್ಕೆ ನಡೆದ ಉಪಚುನಾವಣೆಗೂ, ಬಾಗಲಕೋಟೆ ಉಪಚುನಾವಣೆಗೂ ಹೋಲಿಕೆ ಮಾಡಲಾಗದು. ಅಲ್ಲಿನ ಸಮಸ್ಯೆಗಳೇ ಬೇರೆ, ಇಲ್ಲಿನವೇ ಬೇರೆ. ಬಾಗಲಕೋಟೆಯಲ್ಲಿ ನಾವು ಗೆಲ್ಲುವುದು ಅನಿವಾರ್ಯವಾಗಿತ್ತು. ಇದು ಚುನಾವಣೆ ಅಷ್ಟೇ ಅಲ್ಲ; ಪಕ್ಷದ ಬಲ ಸಾಬೀತುಪಡಿಸುವ ವೇದಿಕೆ ಎಂದು ಹೇಳಿದರು.

ಧರ್ಮದ ವಿಚಾರವಾಗಿ ಮಾಜಿ ಸಚಿವ ಮುರಗೇಶ ನಿರಾಣಿ ಹೇಳಿಕೆಗೆ ತಿರುಗೇಟು ಕೊಟ್ಟ ಸತೀಶ ಜಾರಕಿಹೊಳಿ, ಸಾರ್ವಜನಿಕ ರಂಗದಲ್ಲಿ ಇರುವವರು ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಬೇಕು. ಕೇವಲ ಜಾತಿ, ಧರ್ಮ ನೋಡಬಾರದು. ಇಲ್ಲದಿದ್ದರೆ ಅದು ಒಮ್ಮೆ ಪರಿಣಾಮ ಬೀರಬಹುದು ಎಂದರು. ದೊಡ್ಡ ಸಭೆಗಳನ್ನೆಲ್ಲ ಮಾಡಿ 50 ಸಾವಿರ ಅಥವಾ 1 ಲಕ್ಷ ಜನರನ್ನು ಸೇರಿಸಿದರೆ ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂದು ಭಾವಿಸುವುದು ತಪ್ಪು. ಬಾಗಲಕೋಟೆಯಲ್ಲಿ ತಳಮಟ್ಟದಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸಿ ಗೆಲುವಿಗೆ ಶ್ರಮಿಸಿದ್ದೇವೆ ಎಂದರು. ದಾವಣಗೆರೆಯಲ್ಲಿ ಮುಸ್ಲಿಮರು ಹೆಚ್ಚಿದ್ದಾರೆ. ಹಾಗಾಗಿ ಆ ಸಮುದಾಯದವರು ಕಾಂಗ್ರೆಸ್‌ನಿಂದ ಟಿಕೆಟ್ ಕೇಳಿದ್ದರಲ್ಲಿ ತಪ್ಪಿಲ್ಲ. ಆದರೆ, ಪಕ್ಷದವರು ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದ್ದಾರೆ. ಮುಸ್ಲಿಮರ ಮುನಿಸಿನ ಕಾರಣಕ್ಕೆ ಅಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬರಬೇಕಿದ್ದ ಮತಗಳು ಶೇ.20ರಷ್ಟು ಕಡಿಮೆ ಆಗಲಿವೆ. ಆದರೆ, ಗೆಲ್ಲುವುದು ಖಂಡಿತ. ಮುಂದೆ ಮುಸ್ಲಿಮರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಸಚಿವ ಮಲ್ಲಿಕಾರ್ಜುನ ಮಾಡುತ್ತಾರೆ ಎಂದರು.

ಕಾಂಗ್ರೆಸ್‌ಗೆ ಅಹಿಂದ ವರ್ಗದ ಮತಗಳೇ ಭದ್ರ ಬುನಾದಿ. ಈ ಮತ ಗಟ್ಟಿಯಾದಷ್ಟು ಪಕ್ಷಕ್ಕೆ ಬಲ ಬರುತ್ತದೆ. ಬಾಗಲಕೋಟೆಯಲ್ಲಿ ಅಹಿಂದ ವರ್ಗದ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಕೈಹಿಡಿಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಒಂದೇ ಒಂದು ಕ್ಷೇತ್ರದಲ್ಲಿ ಸೋತರೂ ಬಿಜೆಪಿಯವರು ನಮ್ಮನ್ನು ಎರಡು ವರ್ಷ ಮಲಗಲು ಬಿಡುವುದಿಲ್ಲ. ನಾವೇ ಸಿಎಂ, ಮಂತ್ರಿಗಳು ಎನ್ನುತ್ತಾರೆ. ಹಾಗಾಗಿ ಚುನಾವಣೆಯಲ್ಲಿ ಗೆಲ್ಲಲು ವಿಶೇಷ ಆಸಕ್ತಿಯೊಂದಿಗೆ ಪ್ರಯತ್ನಿಸುತ್ತೇವೆ.
>
> - ಸತೀಶ್ ಜಾರಕಿಹೊಳಿ ಸಚಿವ

14 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ ಲೋಕಾಯುಕ್ತರ ತಂಡ

ಬೆಳಗಾವಿ: ಎಇಇ ಮನೆಯಲ್ಲಿ 5.9 ಕೆಜಿ ಚಿನ್ನ

ಬೆಳಗಾವಿ: ಇಲ್ಲಿನ ಜಿಲ್ಲಾ ನಗರಾಭಿವೃದ್ಧಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್(ಎಇಇ) ಮನೆ ಮೇಲೆ ಲೋಕಾಯುಕ್ತರು ಅಧಿಕಾರಿಗಳು ಕಳೆದ ಎರಡು ದಿನಗಳಿಂದ ದಾಳಿ ನಡೆಸಿದ್ದು, ಚಿನ್ನ, ಬೆಳ್ಳಿ, ಬ್ಯಾಂಕ್ ಠೇವಣಿ ಮತ್ತು ಆಸ್ತಿ ಸೇರಿದಂತೆ 14 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಎಇಇ ಅಜಯ್‌ಸಿಂಗ್ ಬಾಪುಸಿಂಗ್ ರಾಜಾಪುರ ಅವರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಶುಕ್ರವಾರ ರಾಜಾಪುರ ಅವರ ಮನೆ, ಕಚೇರಿ ಮತ್ತು ಬ್ಯಾಂಕ್ ಸೇರಿದಂತೆ ಏಳು ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಕಾರ್ಯಾಚರಣೆಯ ಸಮಯದಲ್ಲಿ, ಅಧಿಕಾರಿಗಳು ಬೆಳಗಾವಿಯಲ್ಲಿ ಮೂರು ಮನೆಗಳು, ಒಂದು ಕಚೇರಿ ಮತ್ತು ಬ್ಯಾಂಕ್ ಲಾಕರ್ ಅನ್ನು ಪರಿಶೀಲಿಸಿದ್ದಾರೆ. ಈ ವೇಳೆ ಸವದತ್ತಿ, ಹುಕ್ಕೇರಿ, ಹುಬ್ಬಳ್ಳಿಯಲ್ಲಿ 18 ನಿವೇಶನ ಪತ್ತೆಯಾಗಿದ್ದರೆ ಮನೆಯಲ್ಲಿ 5.96 ಕೆಜಿ ಮೌಲ್ಯದ ಚಿನ್ನ, 5 ಕೆಜಿ ಬೆಳ್ಳಿ, 3.12 ಕೋಟಿ ಡೆಪಾಸಿಟ್, ಐಷಾರಾಮಿ ಕಾರು, ಬೈಕ್‌ಗಳು ಪತ್ತೆಯಾಗಿವೆ. ಅಧಿಕಾರಿಗಳ ಪ್ರಕಾರ, ವಶಪಡಿಸಿಕೊಂಡ ಆಸ್ತಿಗಳಲ್ಲಿ 5.96 ಕೆಜಿ ಚಿನ್ನ, 5 ಕೆಜಿ ಬೆಳ್ಳಿ, 3.12 ಕೋಟಿ ರೂ. ಬ್ಯಾಂಕ್ ಠೇವಣಿ ಮತ್ತು ಐಷಾರಾಮಿ ಕಾರುಗಳು ಮತ್ತು ಬೈಕ್‌ಗಳು ಸೇರಿವೆ. ಒಟ್ಟಾರೆಯಾಗಿ, ಇಲ್ಲಿಯವರೆಗೆ 14 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಚರ ಮತ್ತು ಸ್ಥಿರ ಆಸ್ತಿಗಳು ಪತ್ತೆಯಾಗಿವೆ.

ಆದಾಯ ಮೀರಿ ಆಸ್ತಿ ಗಳಿಕೆ ಕಾಯಿದೆಯಡಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತರು ತಿಳಿಸಿದ್ದಾರೆ.

ದಿನಗೂಲಿ ನೌಕರನಾಗಿ ಸೇವೆ ಆರಂಭ

ಮೂಲತಃ ಹುಕ್ಕೇರಿಯವರಾದ ಅಜಯ ಸಿಂಗ್ ಅವರು 1992ರಲ್ಲಿ ದಿನಗೂಲಿ ನೌಕರನಾಗಿ ಸೇವೆ ಆರಂಭಿಸಿದ್ದನು. 2006ರವರೆಗೂ ದಿನಗೂಲಿ ನೌಕರನಾಗಿಯೇ ಮುಂದುವರಿದಿದ್ದು, 2008ರಲ್ಲಿ ಸರಕಾರ ಅವರ ಸೇವೆಯನ್ನು ಖಾಯಂಗೊಳಿಸಿತ್ತು. ಬಳಿಕ ಅಸಿಸ್ಟೆಂಟ್ ಎಂಜಿನಿಯರ್, ಜ್ಯೂನಿಯರ್ ಎಂಜಿನಿಯರ್ ಹೀಗೆ ಹಂತಹಂತವಾಗಿ ಬೆಳೆದ ಅಜಯಸಿಂಗ್ ಇದೀಗ ನಗರಾಭಿವೃದ್ಧಿ ಇಲಾಖೆ ಎಇಇ ಹುದ್ದೆವರೆಗೆ ಏರಿದ್ದಾರೆ. ಆದರೆ ಈ ಅವಧಿಯಲ್ಲಿ ಸುಳ್ಳು ಆದಾಯ ತೋರಿಸಿ ಕೋಟಿ ಕೋಟಿ ಅಕ್ರಮ ಆಸ್ತಿ ಸಂಪಾದನೆ ಮಾಡಿರುವ ಆರೋಪ ಅವರ ವಿರುದ್ಧ ಕೇಳಿಬಂದಿದೆ.

15,509 ದಶಲಕ್ಷ ಯುನಿಟ್ ಜಲ ವಿದ್ಯುತ್ ಉತ್ಪಾದನೆ | ದೇಶದಲ್ಲೇ ಕರ್ನಾಟಕ ಮುಂಚೂಣಿ

ಕೆಪಿಸಿಎಲ್‌ನಿಂದ ಹೊಸ ದಾಖಲೆ ಸೃಷ್ಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಿ ಸ್ವಾಮ್ಯದ ಕೆಪಿಸಿಎಲ್ 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯುನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ.

ಕೇಂದ್ರ ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಇತ್ತೀಚೆಗೆ ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್ ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ವರದಿ ನೀಡಿದ ಬೆನ್ನಲ್ಲೇ 2025-26ನೇ ಸಾಲಿನಲ್ಲಿ ಕೆಪಿಸಿಎಲ್ ಈ ದಾಖಲೆ ನಿರ್ಮಿಸಿರುವುದು ಹೆಚ್ಚು ಮಹತ್ವ ಪಡೆದಿದೆ. ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆಯಾಗಿದೆ. 2024-25ನೇ ಸಾಲಿನಲ್ಲಿ 13,853 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

ಹೊಸ ಮೈಲಿಗಲ್ಲು: ರಾಜ್ಯದಲ್ಲಿ ಅತಿ ಹೆಚ್ಚು ಜಲ ವಿದ್ಯುತ್ ಉತ್ಪಾದನೆಯಾಗುವ ಶರಾವತಿ ಮತ್ತು ವಾರಾಹಿ ಕಣಿವೆಯ ವಿದ್ಯುತ್ ಸ್ಥಾವರಗಳಲ್ಲೂ 2025-26ನೇ ಸಾಲಿನಲ್ಲಿ ಒಟ್ಟಾರೆ 8,696 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ನಿರ್ಮಿಸಲಾಗಿದೆ. ಶರಾವತಿ ಕಣಿವೆಯಲ್ಲಿ 2025-26ನೇ ಸಾಲಿಗೆ ಸಿಇಎ 4800 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ನಿಗದಿಪಡಿಸಿದ್ದರೆ ಅದನ್ನು ಮೀರಿ 5642 ಮಿಲಿಯನ್ ಯುನಿಟ್ (ಶೇ.17.54ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆಯಾಗಿದೆ. ಅದೇ ರೀತಿ ಮಹಾತ್ಮಾ ಗಾಂಧಿ ವಿದ್ಯುತ್ ಸ್ಥಾವರದಲ್ಲಿ ಸಿಇಎ 549 ದಶಲಕ್ಷ ಯುನಿಟ್ ಉತ್ಪಾದನೆ ನಿಗದಿಪಡಿಸಿದ್ದರೆ ಅದನ್ನು ಮೀರಿ 643 (ಶೇ.17.15ರಷ್ಟು ಹೆಚ್ಚು), ಗೇರುಸೊಪ್ಪದಲ್ಲಿ ಸಿಇಎ ಗುರಿ 1060 ದಶಲಕ್ಷ ಯುನಿಟ್ ಇದ್ದರೆ, ಅದನ್ನು ಮೀರಿ 644 ದಶಲಕ್ಷ ಯುನಿಟ್ (ಶೇ. 7.63ರಷ್ಟು ಹೆಚ್ಚು) ವರಾಹಿಯಲ್ಲಿ ಸಿಇಎ ಗುರಿ 1060 ದಶಲಕ್ಷ ಯುನಿಟ್ ಇದ್ದರೆ, 1599 ದಶಲಕ್ಷ ಯುನಿಟ್ (ಶೇ. 50.85ರಷ್ಟು ಹೆಚ್ಚು), ಭದ್ರಾನಲ್ಲಿ ಸಿಇಎ ಗುರಿ 55 ದಶಲಕ್ಷ ಯುನಿಟ್ ಇದ್ದರೆ, 68 ದಶಲಕ್ಷ ಯುನಿಟ್ (ಶೇ.25.39ರಷ್ಟು ಹೆಚ್ಚು), ಶಿಂಷಾದಲ್ಲಿ ಸಿಇಎ ಗುರಿ 47 ದಶಲಕ್ಷ ಯುನಿಟ್ ಇದ್ದರೆ, ಅದನ್ನು ಮೀರಿ 66 ದಶಲಕ್ಷ ಯುನಿಟ್ (ಶೇ.41.03 ರಷ್ಟು ಹೆಚ್ಚು) ಹಾಗೂ ಮಾಣಿಯಲ್ಲಿ ಸಿಇಎ ಗುರಿ 24 ದಶಲಕ್ಷ ಯುನಿಟ್ ಇದ್ದರೆ, 32 ದಶಲಕ್ಷ ಯುನಿಟ್ (ಶೇ.34.37ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

ಮೂರು ಮೂರು ಜಲ ವಿದ್ಯುತ್ ಸ್ಥಾವರಗಳ ವಿದ್ಯುತ್ ಉತ್ಪಾದನೆಯಲ್ಲಿ ಸಾರ್ವಕಾಲಿಕ ದಾಖಲೆ ಮಾಡಲಾಗಿದೆ. ಮಹಾತ್ಮಾ ಗಾಂಧಿ ವಿದ್ಯುತ್ ಸ್ಥಾವರದಲ್ಲಿ ಈ ಹಿಂದಿನ ಗರಿಷ್ಠ ದಾಖಲೆ 550 (2021-22ರಲ್ಲಿ) ದಶಲಕ್ಷ ಯುನಿಟ್ ಇದ್ದರೆ, 2025-26ನೇ ಸಾಲಿನಲ್ಲಿ 643 ದಶಲಕ್ಷ ಯುನಿಟ್ (ಶೇ.16.92 ರಷ್ಟು ಹೆಚ್ಚು), ಗೇರುಸೊಪ್ಪದಲ್ಲಿ ಈ ಹಿಂದಿನ ದಾಖಲೆ 641 (2007-08ರಲ್ಲಿ) ದಶಲಕ್ಷ ಯುನಿಟ್ ಇದ್ದರೆ, ಈಬಾರಿ 644 ದಶಲಕ್ಷ ಯುನಿಟ್ (0.39ರಷ್ಟು ಹೆಚ್ಚು) ಹಾಗೂ ವರಾಹಿಯಲ್ಲಿ ಈ ಹಿಂದಿನ ದಾಖಲೆ 1401 ದಶಲಕ್ಷ ಯುನಿಟ್ (2007-08 ಇದ್ದರೆ, ಆ ಬಾರಿ 1599 ದಶಲಕ್ಷ ಯುನಿಟ್ (ಶೇ.14.13ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

> ಕಳೆದ ವರ್ಷ ಸಾಕಷ್ಟು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ. ಹೊಸ ಸಾಧನೆಗೆ ಕಾರಣೀಕರ್ತರಾದ ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಎಲ್ಲ ಅಧಿಕಾರಿಗಳು, ಸಿಬ್ಬಂದಿ ಅಭಿನಂದನಾರ್ಹರು.
>
> -ಕೆ.ಜೆ.ಜಾರ್ಜ್, ಇಂಧನ ಸಚಿವರು

> ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸಿದ್ದು, ಶಿವನಸಮುದ್ರ, ಶಿಂಷಾ, ಶರಾವತಿ ಹಾಗೂ ಮಹಾತ್ಮ ಗಾಂಧಿ ಜಲ ವಿದ್ಯುತ್ ಕೇಂದ್ರದ ಕೆಲವು ಘಟಕಗಳು ರಾಜ್ಯದ ಅತ್ಯಂತ ಹಳೆಯ ಜಲವಿದ್ಯುತ್ ಕೇಂದ್ರಗಳಾಗಿದ್ದರೂ ಈ ಘಟಕಗಳ ಕಾರ್ಯಕ್ಷಮತೆ ಗಮನಾರ್ಹವಾಗಿದೆ. ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ.
>
> -ಗೌರವ್ ಗುಪ್ತ, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ

ಆಸ್ಪತ್ರೆ ಸೇವೆ: ವೈದ್ಯಕೀಯ ಕಾಲೇಜುಗಳ ಜತೆ ಒಪ್ಪಂದ

ಮಂಗಳೂರು: ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆ ಬಲಪಡಿಸಲು ವೈದ್ಯಕೀಯ ಕಾಲೇಜುಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮೊದಲ ಹಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕು ಆಸ್ಪತ್ರೆಗಳು, ಮೂಡುಬಿದಿರೆ ಮತ್ತು ವಿಟ್ಲ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ. ಎ. ಜೆ. ವೈದ್ಯಕೀಯ ಕಾಲೇಜು, ಆಳ್ವಾಸ್ ಹೆಲ್ತ್ ಸೆಂಟರ್ ಹಾಗೂ ಯೆನಪೋಯ ವೈದ್ಯಕೀಯ ಕಾಲೇಜುಗಳೊಂದಿಗೆ ಒಂದು ವರ್ಷಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದದಂತೆ, ಖಾಸಗಿ ಮತ್ತು ಸರಕಾರಿ ವೈದ್ಯಕೀಯ ಕಾಲೇಜುಗಳು ಸರಕಾರಿ ಆರೋಗ್ಯ ಕೇಂದ್ರಗಳಿಗೆ ಹೆಚ್ಚುವರಿ ವೈದ್ಯಕೀಯ ಸಿಬ್ಬಂದಿ, ಆಧುನಿಕ ವೈದ್ಯಕೀಯ ಉಪಕರಣಗಳನ್ನು ಒದಗಿಸಲಿವೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿ ಹೊಸ ಮೈಲುಗಲ್ಲು

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸ್ಥಳೀಯವಾಗಿ ಇರುವ ವೈದ್ಯಕೀಯ ಕಾಲೇಜುಗಳ ಜತೆ ಈ ರೀತಿಯ ಒಪ್ಪಂದ ಮಾಡಿಕೊಳ್ಳಲಾಗುವುದು. ತುಮಕೂರಿನಲ್ಲಿ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಜತೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಈ ಯೋಜನೆಯಿಂದ ಸರಕಾರಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಆಗದು. ವೈದ್ಯಕೀಯ ಕಾಲೇಜುಗಳೇ ಸ್ವಯಂ ಪ್ರೇರಣೆಯಿಂದ ಈ ಹೊಣೆ ನಿರ್ವಹಿಸಲಿವೆ. ಆರೋಗ್ಯ ಕೇಂದ್ರಗಳ ಆಡಳಿತಾತ್ಮಕ ನಿಯಂತ್ರಣ ಸರಕಾರಿ ವೈದ್ಯಾಧಿಕಾರಿಗಳ ಬಳಿ ಇರುತ್ತದೆ. ಒಪ್ಪಂದಕ್ಕೆ ಒಳಪಡುವ ಸರಕಾರಿ ಆಸ್ಪತ್ರೆಗಳಿಗೆ ವರ್ಷದೊಳಗೆ ರಾಷ್ಟ್ರ ಮಟ್ಟದ ಗುಣಮಟ್ಟದ ಮಾನ್ಯತೆ ಪಡೆಯುವ ಹೊಣೆಯನ್ನು ಸಂಬಂಧಿತ ವೈದ್ಯಕೀಯ ಕಾಲೇಜುಗಳಿಗೆ ನೀಡಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಇದು ಹೊಸ ಮೈಲುಗಲ್ಲು ಆಗಲಿದೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ನಡೆಯುವಾಗ ನಮ್ಮ ಶೂಲೇಸ್ ತನ್ನಷ್ಟಕ್ಕೆ ಬಿಚ್ಚಿಕೊಳ್ಳುತ್ತದಲ್ಲ, ಏಕೆ?

ಸಹಾರಾ ಮರುಭೂಮಿಯ ಸುಡುವ ಮರಳುಗಾಡಿನಲ್ಲಿ ಕೇವಲ ಚಿನ್ನ, ಡ್ರಗ್ಸ್ ಅಥವಾ ಶಸ್ತ್ರಾಸ್ತ್ರಗಳು ಮಾತ್ರ ಕಳ್ಳಸಾಗಣೆಯಾಗುವುದಿಲ್ಲ. ಬದಲಿಗೆ ನಾವು ಅಡುಗೆ ಮನೆಯಲ್ಲಿ ಬಳಸುವ 'ಸ್ಪಾಗೆಟ್ಟಿ' ಅಥವಾ ಪಾಸ್ತಾದಂಥ ಪದಾರ್ಥಗಳು ಕೂಡ ಭಾರಿ ಪ್ರಮಾಣದಲ್ಲಿ ಅಕ್ರಮವಾಗಿ ಗಡಿ ದಾಟುತ್ತವೆ! ಮನುಷ್ಯನ ಅಜಾಗರೂಕತೆ, ಜಾಗತಿಕ ವ್ಯಾಪಾರ ಮತ್ತು ಪ್ರಕೃತಿಯ ವಿಚಿತ್ರ ಹೊಂದಾಣಿಕೆ ಹೇಗೆ ಒಂದು ಸಣ್ಣ ಜೀವಿಯನ್ನು ಜಾಗತಿಕವಾಗಿ ಆಕ್ರಮಣಕಾರಿಯನ್ನಾಗಿ ಮಾಡಿದೆ ಎಂಬುದು ಕುತೂಹಲಕಾರಿ.



ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ನಿಮಗೂ ಅನಿಸಿರಬಹುದು, ನಾವು ನಡೆಯುತ್ತಿರುವಾಗ ಶೂಲೇಸ್‌ಗಳು ತಾವಾಗಿಯೇ ಬಿಚ್ಚಿಕೊಳ್ಳುತ್ತವೆ ತಾನೇ? ಏಕೆ? ಇದು ನಮಗೆಲ್ಲರಿಗೂ ಕಾಡುವ ಒಂದು ನಿಗೂಢ ಪ್ರಶ್ನೆ. ನಾವು ಎಷ್ಟು ಗಟ್ಟಿಯಾಗಿ ಗಂಟು ಹಾಕಿದರೂ, ಕೆಲವೊಮ್ಮೆ ಕೆಲಸದ ನಡುವೆ ಅಥವಾ ಓಡುತ್ತಿರುವಾಗ ಅವು ಸಡಿಲಗೊಂಡು ಕಳಚಿಕೊಳ್ಳುತ್ತವೆ. ಈ ಸಮಸ್ಯೆಯನ್ನು ಶೂ ಧರಿಸಿದವರೆಲ್ಲ ಒಂದಲ್ಲ, ಒಂದು ಸಂದರ್ಭದಲ್ಲಿ ಅನುಭವಿಸಿದವರೇ. ಇದರ ಹಿಂದೆ ರೋಚಕವಾದ ಭೌತವಿಜ್ಞಾನ ಅಡಗಿದೆ ಎಂದರೆ ತುಸು ಸೋಜಿಗವಾಗಬಹುದು. ಈ ಬಗ್ಗೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧಕರು ಆಳವಾದ ಅಧ್ಯಯನವನ್ನು ಬೇರೆ ನಡೆಸಿದ್ದಾರೆ.

ನಾವು ನಡೆಯುವಾಗ ಅಥವಾ ಓಡುವಾಗ ನಮ್ಮ ಪಾದಗಳು ನೆಲಕ್ಕೆ ಅಪ್ಪಳಿಸುತ್ತವೆ. ಈ ಕ್ರಿಯೆಯು ಶೂಲೇಸ್‌ನ ಗಂಟಿನ ಮೇಲೆ ಎರಡು ರೀತಿಯ ಬಲಗಳನ್ನು ಪ್ರಯೋಗಿಸುತ್ತದೆ. ಮೊದಲನೆಯದು, ಇಂಪ್ಯಾಕ್ಟ್ ಫೋರ್ಸ್. ನಮ್ಮ ಪಾದ ನೆಲಕ್ಕೆ ತಾಕಿದಾಗ ಉಂಟಾಗುವ ಆಘಾತವು ಗಂಟನ್ನು ಸಡಿಲಗೊಳಿಸಲು ಪ್ರಾರಂಭಿಸುತ್ತದೆ. ಸಂಶೋಧನೆಯ ಪ್ರಕಾರ, ಒಬ್ಬ ಮನುಷ್ಯ ಓಡುವಾಗ ಅವನ ಪಾದ ನೆಲಕ್ಕೆ ಅಪ್ಪಳಿಸುವ ಬಲವು ಗುರುತ್ವಾಕರ್ಷಣೆಯ ಏಳು ಪಟ್ಟು ಇರುತ್ತದೆ (7g). ಈ ಬಲವು ಗಂಟಿನ ಎಳೆಗಳನ್ನು ಮೇಲಕ್ಕೆ ಮತ್ತು ಕೆಳಕ್ಕೆ ಎಳೆಯುತ್ತದೆ. ಪಾದವು ಮುಂದಕ್ಕೆ ಚಲಿಸುವಾಗ ಶೂಲೇಸ್‌ನ ತುದಿಗಳು ತಮ್ಮ ಜಡತ್ವದ ಕಾರಣದಿಂದ ಹಿಂದಕ್ಕೆ ಅಥವಾ ಮುಂದಕ್ಕೆ ಸರಿಯುತ್ತವೆ. ಇದು ಗಂಟಿನ ಒಳಗಿರುವ ಎಳೆಗಳನ್ನು ಹೊರಕ್ಕೆ ಎಳೆಯುವಂತೆ ಮಾಡುತ್ತದೆ.

ಎರಡನೆಯದು, ಅದೃಶ್ಯ ಕೈಗಳ ಸನ್ನೆ (The Invisible Hands). ಶೂಲೇಸ್ ಬಿಚ್ಚಿಕೊಳ್ಳುವ ಪ್ರಕ್ರಿಯೆಯನ್ನು ಸಂಶೋಧಕರು 'ಅದೃಶ್ಯ ಕೈಗಳು ಗಂಟನ್ನು ಎಳೆಯುವುದು' ಎಂದು ಬಣ್ಣಿಸಿದ್ದಾರೆ. ಇಲ್ಲಿ ಎರಡು ಹಂತದ ಪ್ರಕ್ರಿಯೆ ನಡೆಯುತ್ತದೆ. ಮೊದಲನೆಯದಾಗಿ, ಪಾದ ನೆಲಕ್ಕೆ ಅಪ್ಪಳಿಸಿದಾಗ ಗಂಟು ಸಡಿಲಗೊಳ್ಳುತ್ತದೆ. ಎರಡನೆಯದಾಗಿ, ನಾವು ಕಾಲು ಮುಂದಕ್ಕೆ ಚಾಚಿದಾಗ ಶೂಲೇಸ್‌ನ ತುದಿಗಳು ಜೋಲಾಡುತ್ತವೆ. ಈ ಜೋಲಾಟವು ಸಡಿಲಗೊಂಡ ಗಂಟಿನ ಎಳೆಗಳನ್ನು ಹೊರಕ್ಕೆ ಎಳೆಯುತ್ತದೆ.

ಒಮ್ಮೆ ಗಂಟು ಸ್ವಲ್ಪ ಸಡಿಲಗೊಂಡರೆ ಸಾಕು, ನಂತರದ ಕೆಲವು ಹೆಜ್ಜೆಗಳಲ್ಲಿ ಸಂಪೂರ್ಣ ಕಳಚಿಕೊಳ್ಳುತ್ತದೆ. ಇದು ಒಂದೇ ಸಮನೆ ನಡೆಯುವ ಪ್ರಕ್ರಿಯೆಯಲ್ಲ; ಬದಲಿಗೆ ಗಂಟು ಬಹಳ ಹೊತ್ತು ಗಟ್ಟಿಯಾಗಿದ್ದು, ಒಮ್ಮೆ ಸಡಿಲಗೊಳ್ಳಲು ಶುರುವಾದ ತಕ್ಷಣ ಸೆಕೆಂಡುಗಳ ಅಂತರದಲ್ಲಿ ಬಿಚ್ಚಿಕೊಳ್ಳುತ್ತದೆ.

ಎಲ್ಲ ಗಂಟುಗಳು ಒಂದೇ ರೀತಿ ಇರುವುದಿಲ್ಲ. ಶೂಲೇಸ್ ಕಟ್ಟುವಲ್ಲಿ ಎರಡು ಪ್ರಮುಖ ವಿಧಗಳಿವೆ. ಮೊದಲನೆಯದು, ಗಟ್ಟಿ ಗಂಟು. ಇದರಲ್ಲಿ ಮೇಲೆ ಹಾಕುವ ಗಂಟು ಮತ್ತು ಕೆಳಗಿನ ಗಂಟು ವಿರುದ್ಧ ದಿಕ್ಕಿನಲ್ಲಿರುತ್ತವೆ. ಇದು ಸುಲಭವಾಗಿ ಬಿಚ್ಚಿಕೊಳ್ಳುವುದಿಲ್ಲ. ಎರಡನೆಯದು, ದುರ್ಬಲ ಗಂಟು. ಇದರಲ್ಲಿ ಎರಡೂ ಗಂಟುಗಳು ಒಂದೇ ದಿಕ್ಕಿನಲ್ಲಿರುತ್ತವೆ. ಇದು ಓಡುವಾಗ ಅಥವಾ ನಡೆಯುವಾಗ ಅತಿ ಬೇಗನೆ ಸಡಿಲಗೊಳ್ಳುತ್ತದೆ. ಹೆಚ್ಚಿನವರು ಅಜಾಗರೂಕತೆಯಿಂದ 'ದುರ್ಬಲ ಗಂಟು' ಹಾಕುವುದರಿಂದಲೇ ಈ ಸಮಸ್ಯೆ ಎದುರಾಗುತ್ತದೆ.

ಶೂಲೇಸ್ ಬಿಚ್ಚಿಕೊಳ್ಳುವುದು 'ಒಂದು ರೀತಿಯ ಯಾಂತ್ರಿಕ ವೈಫಲ್ಯ'. ಗಂಟಿನ ಒಳಗಿನ ಘರ್ಷಣೆ (Friction) ಮತ್ತು ಹೊರಗಿನಿಂದ ಪ್ರಯೋಗವಾಗುವ ಬಲಗಳ ನಡುವಿನ ಸಮತೋಲನ ತಪ್ಪಿದಾಗ ಈ ವೈಫಲ್ಯ ಸಂಭವಿಸುತ್ತದೆ. ಪಾದದ ಚಲನೆಯು ಘರ್ಷಣೆಯನ್ನು ಕಡಿಮೆ ಮಾಡುತ್ತಾ ಹೋಗುತ್ತದೆ ಮತ್ತು ಒಂದು ಹಂತದಲ್ಲಿ ಘರ್ಷಣೆಗಿಂತ ಎಳೆಯುವ ಬಲ ಹೆಚ್ಚಾದಾಗ ಗಂಟು ಬಿಚ್ಚಿಕೊಳ್ಳುತ್ತದೆ.

ಇದನ್ನು ತಡೆಯುವುದು ಹೇಗೆ?

ಈ ಭೌತವಿಜ್ಞಾನದ ಸಮಸ್ಯೆಗೆ ಪರಿಹಾರ ಸರಳವಾಗಿದೆ. ಗಟ್ಟಿ ಗಂಟು ಹಾಕಬೇಕು. ನೀವು ಗಂಟು ಹಾಕುವ ವಿಧಾನವನ್ನು ಗಮನಿಸಿ. ಅದು ಪಾದರಕ್ಷೆಯ ಉದ್ದಕ್ಕೆ ಲಂಬವಾಗಿರುವಂತೆ ನೋಡಿಕೊಳ್ಳಿ. ಮೆಟೀರಿಯಲ್‌ನ್ನು ಗಮನಿಸಬೇಕು. ನೈಲಾನ್‌ನಂಥ ನುಣುಪಾದ ಲೇಸ್‌ಗಳಿಗಿಂತ ಹತ್ತಿಯ ಲೇಸ್‌ಗಳು ಹೆಚ್ಚು ಘರ್ಷಣೆಯನ್ನು ಹೊಂದಿರುತ್ತವೆ, ಆದ್ದರಿಂದ ಅವು ಬೇಗ ಬಿಚ್ಚಿಕೊಳ್ಳುವುದಿಲ್ಲ. ಕ್ರೀಡಾಪಟುಗಳು ಸಾಮಾನ್ಯವಾಗಿ ಸುರಕ್ಷತೆಗಾಗಿ ಎರಡು ಬಾರಿ ಗಂಟು ಹಾಕುತ್ತಾರೆ, ಇದು ಬಲಗಳನ್ನು ಸಮರ್ಥವಾಗಿ ಎದುರಿಸುತ್ತದೆ.

ಶೂಲೇಸ್ ಬಿಚ್ಚಿಕೊಳ್ಳುವುದು ಕೇವಲ ಒಂದು ಸಣ್ಣ ಘಟನೆಯಂತೆ ಕಂಡರೂ, ಅದು ಸಂಕೀರ್ಣವಾದ ಡೈನಾಮಿಕ್ ಮತ್ತು ಭೌತವಿಜ್ಞಾನದ ತತ್ವಗಳನ್ನು ಒಳಗೊಂಡಿದೆ. ನಾವು ನಡೆಯುವ ಪ್ರತಿಯೊಂದು ಹೆಜ್ಜೆಯೂ ನಮ್ಮ ಪಾದರಕ್ಷೆಯ ಗಂಟಿನ ಮೇಲೆ ನಿರಂತರವಾಗಿ ಒತ್ತಡ ಹಾಕುತ್ತಿರುತ್ತದೆ. ವಿಜ್ಞಾನವು ಈ ಸಣ್ಣ ವಿಷಯವನ್ನು ಅರ್ಥಮಾಡಿಕೊಳ್ಳುವ ಮೂಲಕ ಬ್ರಹ್ಮಾಂಡದ ದೊಡ್ಡ ಭೌತಿಕ ಸಂರಚನೆಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ಸ್ಪಾಗೆಟ್ಟಿ ಕಳ್ಳಸಾಗಣೆ

ಸಹಾರಾ ಮರುಭೂಮಿಯ ಸುಡುವ ಮರಳುಗಾಡಿನಲ್ಲಿ ಕೇವಲ ಚಿನ್ನ, ಡ್ರಗ್ಸ್ ಅಥವಾ ಶಸ್ತ್ರಾಸ್ತ್ರಗಳು ಮಾತ್ರ ಕಳ್ಳಸಾಗಣೆಯಾಗುವುದಿಲ್ಲ. ಬದಲಿಗೆ ನಾವು ಅಡುಗೆ ಮನೆಯಲ್ಲಿ ಬಳಸುವ 'ಸ್ಪಾಗೆಟ್ಟಿ' ಅಥವಾ ಪಾಸ್ತಾದಂಥ ಪದಾರ್ಥಗಳು ಕೂಡ ಭಾರಿ ಪ್ರಮಾಣದಲ್ಲಿ ಅಕ್ರಮವಾಗಿ ಗಡಿ ದಾಟುತ್ತವೆ!

ಕೇಳಲು ಇದು ವಿಚಿತ್ರವಾಗಿ ಕಂಡರೂ, ಆಫ್ರಿಕಾದ ಆರ್ಥಿಕತೆ ಮತ್ತು ರಾಜಕೀಯದ ದೃಷ್ಟಿಯಿಂದ ಇದು ಅತ್ಯಂತ ಗಂಭೀರವಾದ ವಿಷಯ. ಸಹಾರಾ ಮರುಭೂಮಿಯ ಉದ್ದಕ್ಕೂ ನಡೆಯುವ ಈ 'ಸ್ಪಾಗೆಟ್ಟಿ ಕಳ್ಳಸಾಗಣೆ'ಯ ಹಿಂದೆ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿವೆ.

ಈ ಕಳ್ಳಸಾಗಣೆಗೆ ಮೂಲ ಪ್ರೇರಣೆ ದೇಶಗಳ ನಡುವಿನ ಬೆಲೆ ವ್ಯತ್ಯಾಸ. ಉತ್ತರ ಆಫ್ರಿಕಾದ ದೇಶಗಳಾದ ಅಲ್ಜೀರಿಯಾ ಮತ್ತು ಲಿಬಿಯಾಗಳಲ್ಲಿ ಗೋಧಿ ಮತ್ತು ಪಾಸ್ತಾದಂಥ ಆಹಾರ ಪದಾರ್ಥಗಳ ಮೇಲೆ ಸರಕಾರವು ಭಾರಿ ಪ್ರಮಾಣದ ಸಬ್ಸಿಡಿ ನೀಡುತ್ತದೆ. ಈ ದೇಶಗಳಲ್ಲಿ ಆಹಾರವು ಅತ್ಯಂತ ಅಗ್ಗದ ದರದಲ್ಲಿ ಸಿಗುತ್ತದೆ. ಆದರೆ, ಅವುಗಳ ಪಕ್ಕದ ದೇಶಗಳಾದ ಮಾಲಿ, ನೈಜರ್ ಅಥವಾ ಚಾಡ್‌ಗಳಲ್ಲಿ ಇಂಥ ಸಬ್ಸಿಡಿಗಳು ಇಲ್ಲ, ಅಲ್ಲಿ ಆಹಾರದ ಬೆಲೆಗಳು ತುಂಬಾ ಹೆಚ್ಚು. ಈ ಬೆಲೆಗಳ ವ್ಯತ್ಯಾಸದ ಲಾಭ ಪಡೆಯಲು ಕಳ್ಳಸಾಗಣೆದಾರರು ಅಲ್ಜೀರಿಯಾದಿಂದ ಅಗ್ಗವಾಗಿ ಸ್ಪಾಗೆಟ್ಟಿ ಖರೀದಿಸಿ, ಸಹಾರಾ ಮರುಭೂಮಿಯ ಮೂಲಕ ನೆರೆ ರಾಷ್ಟ್ರಗಳಿಗೆ ಸಾಗಿಸಿ ಅಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ.

ಸಹಾರಾ ಮರುಭೂಮಿಯ ದಕ್ಷಿಣ ಭಾಗದಲ್ಲಿರುವ ಅನೇಕ ಪ್ರದೇಶಗಳು ತಮ್ಮದೇ ದೇಶದ ಮುಖ್ಯ ಭೂಭಾಗದಿಂದ ಕಡಿತಗೊಂಡಿವೆ. ಉದಾಹರಣೆಗೆ, ಉತ್ತರ ಮಾಲಿಯ ಕೆಲವು ನಗರಗಳಿಗೆ ಅವುಗಳ ರಾಜಧಾನಿ ಬಮಾಕೋದಿಂದ ಆಹಾರ ತಲುಪುವುದಕ್ಕಿಂತ ಪಕ್ಕದ ದೇಶವಾದ ಅಲ್ಜೀರಿಯಾದಿಂದ ತಲುಪುವುದು ಸುಲಭ ಮತ್ತು ಅಗ್ಗ. ಇಲ್ಲಿ ಯಾವುದೇ ಅಧಿಕೃತ ರಸ್ತೆಗಳಿಲ್ಲದಿದ್ದರೂ, ಶತಮಾನಗಳಿಂದ ಇರುವ ವ್ಯಾಪಾರಿ ಮಾರ್ಗಗಳ ಮೂಲಕ ಟ್ರಕ್‌ಗಳು ಮತ್ತು ಒಂಟೆಗಳ ಮೂಲಕ ಆಹಾರವನ್ನು ಸಾಗಿಸಲಾಗುತ್ತದೆ. ಇದನ್ನು ಅಧಿಕೃತವಾಗಿ 'ವ್ಯಾಪಾರ' ಎಂದು ಕರೆಯುವ ಬದಲು 'ಕಳ್ಳಸಾಗಣೆ' ಎಂದು ಕರೆಯಲಾಗುತ್ತದೆ, ಏಕೆಂದರೆ ಇದಕ್ಕೆ ಯಾವುದೇ ಸುಂಕ ಪಾವತಿಸುವುದಿಲ್ಲ.

ಸಹಾರಾ ಮರುಭೂಮಿಯ ಸುತ್ತಮುತ್ತ ಬದುಕುವ ಜನರಿಗೆ ಉದ್ಯೋಗದ ಅವಕಾಶಗಳು ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ಸ್ಪಾಗೆಟ್ಟಿ, ಸಕ್ಕರೆ ಅಥವಾ ಹಿಟ್ಟನ್ನು ಸಾಗಿಸುವುದು ಅಲ್ಲಿನ ಯುವಕರಿಗೆ ಒಂದು ಪ್ರಮುಖ ಆದಾಯದ ಮೂಲವಾಗಿದೆ. ಸುಡುವ ಬಿಸಿಲು, ಮರಳಿನ ಬಿರುಗಾಳಿ ಮತ್ತು ದರೋಡೆಕೋರರ ನಡುವೆ ನೂರಾರು ಕಿಲೋಮೀಟರ್ ದೂರ ಟ್ರಕ್‌ಗಳಲ್ಲಿ ಈ ಪದಾರ್ಥಗಳನ್ನು ಸಾಗಿಸುತ್ತಾರೆ. ದೊಡ್ಡ ಪ್ರಮಾಣದ ಡ್ರಗ್ಸ್ ಕಳ್ಳಸಾಗಣೆಗಿಂತಲೂ ಈ ಆಹಾರದ ಕಳ್ಳಸಾಗಣೆಯು ಸ್ಥಳೀಯ ಬಡ ಜನರಿಗೆ ಉಪಜೀವನ ನೀಡುತ್ತದೆ.

ಲಿಬಿಯಾದಂಥ ದೇಶಗಳಲ್ಲಿ ನಡೆಯುವ ಅಂತರ್ಯುದ್ಧದ ಸಮಯದಲ್ಲಿ ಸರಕಾರ ನಿಯಂತ್ರಣ ತಪ್ಪಿದಾಗ, ಗೋದಾಮುಗಳಿಂದ ಲೂಟಿ ಮಾಡಿದ ಅಥವಾ ಅಕ್ರಮವಾಗಿ ಸಂಗ್ರಹಿಸಲಾದ ಆಹಾರ ಪದಾರ್ಥಗಳು ಕಳ್ಳಸಾಗಣೆದಾರರ ಕೈ ಸೇರುತ್ತವೆ. ಮಾಲಿಯಂಥ ದೇಶಗಳಲ್ಲಿ ಉಗ್ರಗಾಮಿ ಗುಂಪುಗಳು ಮತ್ತು ಸಶಸ್ತ್ರ ಪಡೆಗಳು ಈ ಕಳ್ಳಸಾಗಣೆ ಮಾರ್ಗಗಳ ಮೇಲೆ ತೆರಿಗೆ ವಸೂಲಿ ಮಾಡುವ ಮೂಲಕ ತಮ್ಮ ಚಟುವಟಿಕೆಗಳಿಗೆ ಹಣವನ್ನು ಕ್ರೋಢೀಕರಿಸುತ್ತವೆ. ಹೀಗಾಗಿ, ಒಂದು ಪ್ಯಾಕೆಟ್ ಸ್ಪಾಗೆಟ್ಟಿ ಕೇವಲ ಆಹಾರವಾಗಿ ಉಳಿಯದೆ, ಆ ಪ್ರದೇಶದ ರಾಜಕೀಯ ಮತ್ತು ಭದ್ರತೆಯ ಭಾಗವಾಗಿ ಬದಲಾಗುತ್ತದೆ.

ಈ ಅಕ್ರಮ ವ್ಯಾಪಾರದಿಂದ ಅಲ್ಜೀರಿಯಾದಂಥ ದೇಶಗಳ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗುತ್ತದೆ. ತಮ್ಮ ದೇಶದ ಬಡ ಜನರಿಗಾಗಿ ಸರಕಾರ ನೀಡುವ ಸಬ್ಸಿಡಿ ಹಣದ ಪ್ರಯೋಜನವು ಬೇರೆ ದೇಶದ ಜನರಿಗೆ ಮತ್ತು ಕಳ್ಳಸಾಗಣೆದಾರರಿಗೆ ಸಿಗುತ್ತಿದೆ ಎಂಬುದು ದೊಡ್ಡ ಆತಂಕ. ಇದನ್ನು ತಡೆಯಲು ಗಡಿಗಳಲ್ಲಿ ಕಟ್ಟುನಿಟ್ಟಿನ ಕಣ್ಗಾವಲು ಇಡಲಾಗಿದ್ದರೂ, ವಿಶಾಲವಾದ ಮರುಭೂಮಿಯನ್ನು ಸಂಪೂರ್ಣವಾಗಿ ಬಂದ್ ಮಾಡುವುದು ಅಸಾಧ್ಯ.

ಸಹಾರಾ ಮರುಭೂಮಿಯ ಮೂಲಕ ಸ್ಪಾಗೆಟ್ಟಿ ಕಳ್ಳಸಾಗಣೆಯಾಗುವುದು ಜಾಗತಿಕ ಹಸಿವು ಮತ್ತು ಆರ್ಥಿಕ ಅಸಮಾನತೆಯ ಪ್ರತೀಕ. ಒಂದು ದೇಶದಲ್ಲಿ ಅಗ್ಗವಾಗಿ ಸಿಗುವ ಆಹಾರ ಇನ್ನೊಂದು ದೇಶದಲ್ಲಿ ಚಿನ್ನದಂತೆ ಬೆಲೆಬಾಳುವುದಾದರೆ, ಅಕ್ರಮ ವ್ಯವಹಾರಗಳು ನಡೆಯುವುದು ಸಹಜ. ಇದು ಕೇವಲ ಒಂದು ಅಪರಾಧವಲ್ಲ, ಬದಲಿಗೆ ಸಾವಿರಾರು ಕುಟುಂಬಗಳ ಹೊಟ್ಟೆ ತುಂಬಿಸುವ ಮತ್ತು ಮರುಭೂಮಿಯ ಕಠಿಣ ಪರಿಸ್ಥಿತಿಯಲ್ಲಿ ಬದುಕುಳಿಯಲು ನಡೆಯುವ ಹೋರಾಟವೂ ಹೌದು.

ವಿಶ್ವದ ಅತ್ಯಂತ ದೊಡ್ಡ ಮರುಭೂಮಿಯಲ್ಲಿ ಅಲೆಯುವ ಟ್ರಕ್‌ಗಳ ಒಳಗೆ ಕೇವಲ ಇಟಾಲಿಯನ್ ಶೈಲಿಯ ಸ್ಪಾಗೆಟ್ಟಿ ಮಾತ್ರ ಇರುವುದಿಲ್ಲ, ಬದಲಿಗೆ ಆಫ್ರಿಕಾದ ಸಂಕೀರ್ಣ ಆರ್ಥಿಕತೆಯ ಕಥೆಯೂ ಇರುತ್ತದೆ.

ಇರುವೆಗಳ 'ವಿಶ್ವ ಸಮರ'

ಇರುವೆಗಳ ಪ್ರಪಂಚವು ನಮಗೆ ಮೇಲ್ನೋಟಕ್ಕೆ ಶಿಸ್ತಿನ ಮತ್ತು ಪರಿಶ್ರಮದ ಸಂಕೇತವಾಗಿ ಕಂಡರೂ, ಅದರ ಆಳದಲ್ಲಿ ಒಂದು ಮಹಾನ್ 'ವಿಶ್ವಯುದ್ಧ' ನಡೆಯುತ್ತಿದೆ ಎಂದರೆ ಆಶ್ಚರ್ಯವಾಗಬಹುದು. ಈ ಯುದ್ಧವು ಯಾವುದೇ ದೇಶದ ಗಡಿಗಳಿಗೆ ಸೀಮಿತವಾಗಿಲ್ಲ, ಇದು ಖಂಡಾಂತರಗಳಲ್ಲಿ ವ್ಯಾಪಿಸಿರುವ ಬೃಹತ್ ಸಂಘರ್ಷ. ಈ ರೋಚಕ ಕಥೆಯ ಕೇಂದ್ರಬಿಂದು 'ಅರ್ಜೆಂಟೈನ್ ಇರುವೆ'ಗಳು.

ಮನುಷ್ಯನ ಅಜಾಗರೂಕತೆ, ಜಾಗತಿಕ ವ್ಯಾಪಾರ ಮತ್ತು ಪ್ರಕೃತಿಯ ವಿಚಿತ್ರ ಹೊಂದಾಣಿಕೆ ಹೇಗೆ ಒಂದು ಸಣ್ಣ ಜೀವಿಯನ್ನು ಜಾಗತಿಕವಾಗಿ ಆಕ್ರಮಣಕಾರಿಯನ್ನಾಗಿ ಮಾಡಿದೆ ಎಂಬುದು ಕುತೂಹಲಕಾರಿ.

ಹೆಸರೇ ಸೂಚಿಸುವಂತೆ, ಈ ಇರುವೆಗಳ ಮೂಲ ದಕ್ಷಿಣ ಅಮೆರಿಕದ ಅರ್ಜೆಂಟೀನಾ ಮತ್ತು ಬ್ರೆಜಿಲ್ ಪ್ರದೇಶಗಳು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಜಾಗತಿಕ ವ್ಯಾಪಾರವು ಚುರುಕುಗೊಂಡಾಗ, ಸಕ್ಕರೆ, ಕಾಫಿ ಮತ್ತು ಮಣ್ಣಿನ ಮೂಲಕ ಈ ಇರುವೆಗಳು ಹಡಗುಗಳಲ್ಲಿ ಸೇರಿಕೊಂಡು ಜಗತ್ತಿನ ವಿವಿಧ ಭಾಗಗಳಿಗೆ ಪ್ರಯಾಣ ಬೆಳೆಸಿದವು. ಇಂದು ಇವು ಅಂಟಾರ್ಕ್ಟಿಕಾವನ್ನು ಹೊರತುಪಡಿಸಿ ವಿಶ್ವದ ಎಲ್ಲ ಖಂಡಗಳಲ್ಲೂ ಭದ್ರವಾಗಿ ನೆಲೆಗೊಂಡಿವೆ.

ಸಾಮಾನ್ಯವಾಗಿ ಇರುವೆಗಳು ತಮ್ಮದೇ ಕಾಲೋನಿಯ ಸದಸ್ಯರನ್ನು ಮಾತ್ರ ಗುರುತಿಸುತ್ತವೆ ಮತ್ತು ಬೇರೆ ಕಾಲೋನಿಯ ಇರುವೆಗಳನ್ನು ಕಂಡರೆ ಯುದ್ಧ ಮಾಡುತ್ತವೆ. ಆದರೆ, ಅರ್ಜೆಂಟೈನ್ ಇರುವೆಗಳ ವಿಷಯದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಕ್ಯಾಲಿಫೋರ್ನಿಯಾದಲ್ಲಿರುವ ಇರುವೆಗಳು, ಯುರೋಪ್‌ನ ಮೆಡಿಟರೇನಿಯನ್ ಕರಾವಳಿಯಲ್ಲಿರುವ ಇರುವೆಗಳು ಮತ್ತು ಜಪಾನ್‌ನಲ್ಲಿರುವ ಇರುವೆಗಳು ಪರಸ್ಪರ ಭೇಟಿಯಾದಾಗ ಅವು ಶತ್ರುಗಳಂತೆ ಕಾದಾಡುವುದಿಲ್ಲ. ಬದಲಿಗೆ ಅವು ಹಳೆಯ ಸ್ನೇಹಿತರಂತೆ ವರ್ತಿಸುತ್ತವೆ.

ಯುರೋಪ್‌ನಲ್ಲಿ ಇವು ನಿರ್ಮಿಸಿರುವ ಕಾಲೋನಿಯು ಸುಮಾರು 6,000 ಕಿಲೋಮೀಟರ್‌ಗಳಷ್ಟು ಉದ್ದವಾಗಿದೆ (ಇಟಲಿಯಿಂದ ಸ್ಪೇನ್‌ವರೆಗೆ). ಇದು ಜಗತ್ತಿನ ಅತಿದೊಡ್ಡ ಸಹಕಾರಿ ಸಮಾಜ. ಈ ಇರುವೆಗಳು ತಳೀಯವಾಗಿ ಎಷ್ಟು ಹತ್ತಿರವಾಗಿವೆ ಎಂದರೆ, ಇಡೀ ಜಗತ್ತಿನ ಈ ಇರುವೆಗಳೆಲ್ಲವೂ ಒಂದು ಬೃಹತ್ ಸಾಮ್ರಾಜ್ಯದ ಭಾಗವಾಗಿವೆ. ಈ ಇರುವೆಗಳು ಪರಸ್ಪರ ಸಹಕರಿಸುವುದೇ ಇತರ ಸ್ಥಳೀಯ ಇರುವೆಗಳಿಗೆ ಶಾಪವಾಗಿದೆ. ಈ ಅರ್ಜೆಂಟೈನ್ ಇರುವೆಗಳು 'ಸಂಖ್ಯಾ ಬಲ'ದ ಮೂಲಕ ಯುದ್ಧ ಮಾಡುತ್ತವೆ.

ಇವು ಯಾವುದಾದರೂ ಹೊಸ ಪ್ರದೇಶಕ್ಕೆ ಕಾಲಿಟ್ಟರೆ, ಅಲ್ಲಿನ ಸ್ಥಳೀಯ ಇರುವೆ ತಳಿಗಳನ್ನು ಗುಂಪು ದಾಳಿಯ ಮೂಲಕ ಕೊಲ್ಲುತ್ತವೆ. ಇವುಗಳ ನಡುವೆ ನಡೆಯುವ ಈ ಸಂಘರ್ಷವನ್ನು ವಿಜ್ಞಾನಿಗಳು 'The Global Ant War' ಎಂದು ಕರೆಯುತ್ತಾರೆ. ಸ್ಥಳೀಯ ಇರುವೆಗಳು ಪರಸ್ಪರ ಕಿತ್ತಾಡುತ್ತಾ ಶಕ್ತಿ ಕಳೆದುಕೊಳ್ಳುತ್ತವೆ. ಆದರೆ, ಅರ್ಜೆಂಟೈನ್ ಇರುವೆಗಳು ಲಕ್ಷಾಂತರ ಸಂಖ್ಯೆಯಲ್ಲಿ ಒಂದಾಗಿ ದಾಳಿ ಮಾಡುವುದರಿಂದ ಇವುಗಳನ್ನು ಸೋಲಿಸುವುದು ಅಸಾಧ್ಯವಾಗಿದೆ.

ಈ ಇರುವೆಗಳ ಹಾವಳಿ ಕೇವಲ ಕೀಟಗಳ ಪ್ರಪಂಚಕ್ಕೆ ಸೀಮಿತವಾಗಿಲ್ಲ, ಇದು ಇಡೀ ಪರಿಸರ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತಿದೆ. ಈ ಇರುವೆಗಳು ಗಿಡಗಳಿಗೆ ಅಂಟುವ 'ಏಫಿಡ್ಸ್' ಎಂಬ ಸಣ್ಣ ಕೀಟಗಳನ್ನು ರಕ್ಷಿಸುತ್ತವೆ, ಏಕೆಂದರೆ ಆ ಕೀಟಗಳು ಬಿಡುವ ಸಿಹಿಯಾದ ದ್ರವ ಇವುಗಳಿಗೆ ಆಹಾರ. ಇದರಿಂದ ರೈತರ ಬೆಳೆಗಳಿಗೆ ಕೀಟಬಾಧೆ ಹೆಚ್ಚಾಗುತ್ತದೆ. ಕ್ಯಾಲಿಫೋರ್ನಿಯಾದಲ್ಲಿ ಹಲ್ಲಿಗಳು ಈ ಇರುವೆಗಳ ದಾಳಿಯಿಂದಾಗಿ ಆಹಾರವಿಲ್ಲದೇ ಸಾಯುತ್ತಿವೆ ಅಥವಾ ಮರಿ ಹಾಕಲು ಸಾಧ್ಯವಾಗುತ್ತಿಲ್ಲ.

ಅನೇಕ ಸಸ್ಯಗಳ ಬೀಜಗಳನ್ನು ಸ್ಥಳೀಯ ಇರುವೆಗಳು ಹರಡುತ್ತವೆ. ಆದರೆ ಅರ್ಜೆಂಟೈನ್ ಇರುವೆಗಳು ಆ ಬೀಜಗಳನ್ನು ತಿಂದು ಹಾಕುವುದರಿಂದ ಕಾಡುಗಳ ಪುನರ್‌ಉತ್ಪತ್ತಿಗೆ ಅಡ್ಡಿಯಾಗುತ್ತಿವೆ. ಈ ಹಸಿರು ಆಕ್ರಮಣಕಾರರನ್ನು ತಡೆಯುವುದು ವಿಜ್ಞಾನಿಗಳಿಗೆ ದೊಡ್ಡ ಸವಾಲಾಗಿದೆ. ಇವುಗಳ ಕಾಲೋನಿಗಳು ಎಷ್ಟು ವಿಶಾಲವಾಗಿವೆ ಎಂದರೆ ವಿಷ ಹಾಕುವುದು ಅಥವಾ ಬಲೆ ಬೀಸುವುದು ಕೇವಲ ತಾತ್ಕಾಲಿಕ ಪರಿಹಾರವಷ್ಟೇ. ಪ್ರಸ್ತುತ ವಿಜ್ಞಾನಿಗಳು 'ಜೈವಿಕ ನಿಯಂತ್ರಣ' ಅಥವಾ ತಳೀಯ ಮಾರ್ಪಾಡುಗಳ ಮೂಲಕ ಇವುಗಳ ಸಂತಾನೋತ್ಪತ್ತಿಯನ್ನು ತಡೆಯಲು ಸಂಶೋಧನೆ ನಡೆಸುತ್ತಿದ್ದಾರೆ.

ಅರ್ಜೆಂಟೈನ್ ಇರುವೆಗಳ ಈ ಕಥೆಯು ಜಾಗತೀಕರಣದ ಇನ್ನೊಂದು ಕರಾಳ ಮುಖವನ್ನು ತೋರಿಸುತ್ತದೆ. ಮನುಷ್ಯ ತನ್ನ ಲಾಭಕ್ಕಾಗಿ ಸರಕುಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುವಾಗ, ನಿಸರ್ಗದ ನಿಯಮಗಳನ್ನು ಮೀರಿ ಕೆಲವು ಜೀವಿಗಳನ್ನು 'ವಿಶ್ವ ವಿಜೇತ'ರನ್ನಾಗಿ ಮಾಡುತ್ತಿದ್ದಾನೆ. ಈ ಸಣ್ಣ ಇರುವೆಗಳ ವಿಶ್ವಯುದ್ಧವು ನಮಗೆ ನೀಡುವ ಎಚ್ಚರಿಕೆ ಏನೆಂದರೆ – ನಾವು ಪ್ರಕೃತಿಯಲ್ಲಿ ಮಾಡುವ ಸಣ್ಣ ಬದಲಾವಣೆಯೂ ಕೂಡ ಜಾಗತಿಕ ಮಟ್ಟದ ಅನಾಹುತಕ್ಕೆ ಅಥವಾ ಬದಲಾವಣೆಗೆ ಕಾರಣವಾಗಬಲ್ಲದು.

ವಿಶ್ವದ ಅತಿ ಎತ್ತರದ ಕಸ ರಾಶಿ

ಮೌಂಟ್ ಎವರೆಸ್ಟ್, ಜಗತ್ತಿನ ಅತ್ಯುನ್ನತ ಶಿಖರ ಮತ್ತು ಸಾಹಸಿಗಳ ಪಾಲಿನ ಸ್ವರ್ಗ. ಆದರೆ ಇಂದು ಇದು ಕೇವಲ ಹಿಮದ ಶಿಖರವಾಗಿ ಉಳಿದಿಲ್ಲ. ಇದು 'ಜಗತ್ತಿನ ಅತಿ ಎತ್ತರದ ಕಸದ ರಾಶಿ' (Highest Garbage Dump) ಎಂಬ ಕುಖ್ಯಾತಿಗೂ ಒಳಗಾಗಿದೆ. ಎವರೆಸ್ಟ್ ಆರೋಹಣವು ಇಂದು ಒಂದು ಬೃಹತ್ ವಾಣಿಜ್ಯ ಉದ್ಯಮವಾಗಿ ಬೆಳೆದಿರುವ ಬೆನ್ನಲ್ಲೇ, ಅಲ್ಲಿನ ಪರಿಸರ ಮಾಲಿನ್ಯ ಮತ್ತು ಕಸದ ಆರ್ಥಿಕತೆ ಒಂದು ಕರಾಳ ಅಧ್ಯಾಯವಾಗಿ ಮಾರ್ಪಟ್ಟಿದೆ.

ಎವರೆಸ್ಟ್ ಶಿಖರದ ಹಾದಿಯಲ್ಲಿ, ವಿಶೇಷವಾಗಿ ನಾಲ್ಕನೇ ಕ್ಯಾಂಪ್ ಸುತ್ತಮುತ್ತ ನೂರಾರು ಟನ್‌ಗಳಷ್ಟು ಕಸ ಶೇಖರಣೆಯಾಗಿದೆ. ಇವುಗಳ ಪೈಕಿ ಖಾಲಿಯಾದ ಆಕ್ಸಿಜನ್ ಸಿಲಿಂಡರ್‌ಗಳು, ಹರಿದ ಟೆಂಟ್‌ಗಳು, ಪ್ಲಾಸ್ಟಿಕ್ ಬಾಟಲಿಗಳು, ಅಲ್ಯೂಮಿನಿಯಂ ಏಣಿಗಳು, ಪಾದರಕ್ಷೆಗಳು ಮತ್ತು ಆಹಾರದ ಪ್ಯಾಕೆಟ್‌ಗಳು ಮುಖ್ಯವಾದವು. ಅತ್ಯಂತ ಆಘಾತಕಾರಿ ವಿಷಯವೆಂದರೆ ಮೈನಸ್ 40 ಡಿಗ್ರಿ ತಾಪಮಾನದಲ್ಲಿ ಕೊಳೆಯದ ಮಾನವ ತ್ಯಾಜ್ಯ (ಮಲ-ಮೂತ್ರ). ಇದು ಹಿಮದೊಂದಿಗೆ ಬೆರೆತು ಸ್ಥಳೀಯ ನದಿಗಳ ನೀರನ್ನು ಕಲುಷಿತಗೊಳಿಸುತ್ತಿದೆ.

ಕಸದ ಹಾವಳಿಯನ್ನು ತಡೆಯಲು ನೇಪಾಳ ಸರಕಾರವು ಒಂದು ವಿಶೇಷ ಕಾನೂನನ್ನು ಜಾರಿಗೆ ತಂದಿದೆ. ಪ್ರತಿ ಆರೋಹಿ ಅಥವಾ ತಂಡವು ಸುಮಾರು 4,000 ಡಾಲರ್(ಅಂದಾಜು 3.3 ಲಕ್ಷ ರೂಪಾಯಿ) ಠೇವಣಿಯನ್ನು ಇಡಬೇಕು. ಶಿಖರದಿಂದ ಇಳಿದು ಬರುವಾಗ ಪ್ರತಿ ಆರೋಹಿಯೂ ಕನಿಷ್ಠ 8 ಕೆಜಿ ಕಸವನ್ನು ಹೊತ್ತು ತರಬೇಕು. ಹಾಗೆ ತಂದರೆ ಮಾತ್ರ ಅವರ ಠೇವಣಿ ಹಣವನ್ನು ವಾಪಸ್ ನೀಡಲಾಗುತ್ತದೆ. ಆದರೆ, ಅನೇಕ ಶ್ರೀಮಂತ ಆರೋಹಿಗಳು ಆ ಹಣದ ಬಗ್ಗೆ ತಲೆಕೆಡಿಸಿಕೊಳ್ಳದೇ ಕಸವನ್ನು ಅಲ್ಲಿಯೇ ಬಿಟ್ಟು ಬರುತ್ತಾರೆ.

ಇದರಿಂದಾಗಿ ಎವರೆಸ್ಟ್ ಮೇಲಿರುವ ಕಸವು ಇಂದು ಒಂದು ವಿಲಕ್ಷಣ ಮಾರುಕಟ್ಟೆಯನ್ನು ಸೃಷ್ಟಿಸಿದೆ. ಎವರೆಸ್ಟ್ ಹಾದಿಯಲ್ಲಿ ಸಾವಿರಾರು ಆಕ್ಸಿಜನ್ ಸಿಲಿಂಡರ್‌ಗಳು ಬಿದ್ದಿವೆ. ಕೆಲವು ಗೈಡ್‌ಗಳು ಮತ್ತು ಸ್ಥಳೀಯ ಏಜೆನ್ಸಿಗಳು ಈ ಹಳೆಯ ಸಿಲಿಂಡರ್‌ಗಳನ್ನು ಕದ್ದು ತಂದು, ಅವುಗಳನ್ನು ಮರುಪೂರಣ (Refill) ಮಾಡಿ ಹೊಸಬರಿಗೆ ಅಗ್ಗದ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ, ಏಕೆಂದರೆ ಹಳೆಯ ಸಿಲಿಂಡರ್‌ಗಳು ಹೆಚ್ಚಿನ ಒತ್ತಡದಲ್ಲಿ ಸ್ಫೋಟಗೊಳ್ಳುವ ಅಥವಾ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಬೆಲೆಬಾಳುವ ಗೇರ್‌ಗಳನ್ನು(Climbing gear) ಅಲ್ಲಿಯೇ ಬಿಟ್ಟು ಹೋಗುವ ಆರೋಹಿಗಳ ವಸ್ತುಗಳನ್ನು ಸಂಗ್ರಹಿಸಿ, ಅವುಗಳನ್ನು ಸೆಕೆಂಡ್ ಹ್ಯಾಂಡ್ ಮಾರುಕಟ್ಟೆಯಲ್ಲಿ ಮಾರುವ ದೊಡ್ಡ ಜಾಲವೇ ನೇಪಾಳದ ಕಠ್ಮಂಡುವಿನಲ್ಲಿದೆ.

ಎವರೆಸ್ಟ್ ಸ್ವಚ್ಛಗೊಳಿಸುವ ಕೆಲಸವು ಕೇವಲ ಯಂತ್ರಗಳಿಂದ ಸಾಧ್ಯವಿಲ್ಲ, ಇಲ್ಲಿ ಸ್ಥಳೀಯ 'ಶೇರ್ಪಾ' ಜನಾಂಗದವರು ತಮ್ಮ ಜೀವವನ್ನು ಪಣಕ್ಕಿಟ್ಟು ಕಸವನ್ನು ಕೆಳಕ್ಕೆ ಹೊತ್ತು ತರುತ್ತಿದ್ದಾರೆ. 8,000 ಮೀಟರ್‌ಗಿಂತಲೂ ಎತ್ತರದ ಡೆತ್ ಝೋನ್‌ನಿಂದ ಭಾರವಾದ ಸಿಲಿಂಡರ್‌ಗಳನ್ನು ಹೊತ್ತು ತರುವುದು ಅತ್ಯಂತ ಕಠಿಣ ಕೆಲಸ. ಸರಕಾರವು ಪ್ರತಿ ಕೆಜಿ ಕಸಕ್ಕೆ ಇಂತಿಷ್ಟು ಹಣವನ್ನು ನೀಡುವ ಮೂಲಕ ಇವರನ್ನು ಉತ್ತೇಜಿಸುತ್ತಿದೆ.

ಎವರೆಸ್ಟ್ ಹತ್ತಲು ನೀಡುವ ಪ್ರತಿ ಪರ್ಮಿಟ್‌ಗೆ ನೇಪಾಳ ಸರಕಾರವು 11,000 ಡಾಲರ್ ಶುಲ್ಕ ವಿಧಿಸುತ್ತದೆ. ಇದೊಂದು ದೊಡ್ಡ ಆದಾಯದ ಮೂಲವಾಗಿರುವುದರಿಂದ, ಸರಕಾರ ಆರೋಹಿಗಳ ಸಂಖ್ಯೆಯನ್ನು ನಿಯಂತ್ರಿಸಲು ಹಿಂಜರಿಯುತ್ತಿದೆ. ಆದರೆ, ಅತಿಯಾದ ಪ್ರವಾಸೋದ್ಯಮವು ಹಿಮನದಿಗಳು ಕರಗಲು ಮತ್ತು ಪರ್ವತದ ನೈಸರ್ಗಿಕ ಸೌಂದರ್ಯ ನಾಶವಾಗಲು ಕಾರಣವಾಗುತ್ತಿದೆ.

ಹೀಗಾಗಿ ಮೌಂಟ್ ಎವರೆಸ್ಟ್ ಇಂದು ಕೇವಲ ಸಾಹಸದ ಸಂಕೇತವಾಗಿ ಉಳಿದಿಲ್ಲ, ಅದು ಮನುಷ್ಯನ ದುರಾಸೆ ಮತ್ತು ಪರಿಸರದ ಕಡೆಗಣನೆಯ ಸ್ಮಾರಕವಾಗುತ್ತಿದೆ. 'ಕಸ ಮುಕ್ತ ಎವರೆಸ್ಟ್' ಅಭಿಯಾನಗಳು ನಡೆಯುತ್ತಿದ್ದರೂ, ಪ್ರವಾಸೋದ್ಯಮದ ಈ ಬೃಹತ್ ಉದ್ಯಮವು ಪರಿಸರದ ಮೇಲಿನ ತನ್ನ ದಾಳಿಯನ್ನು ಮುಂದುವರಿಸಿದೆ.

ಐದು ವ್ಯಂಜನಗಳ ಸಂಯುಕ್ತಾಕ್ಷರವೂ ಪಂಚಾಮೃತವೇ!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಶ್ವತ್ಥ, ಬಿಲ್ವ, ವಟ(ಆಲ), ಧಾತ್ರೀ(ನೆಲ್ಲಿ), ಅಶೋಕ- ಈ ಐದು ವೃಕ್ಷಪ್ರಭೇದಗಳಿರುವ ಅರಣ್ಯ ಪಂಚವಟೀ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಈ ಐದು ಮಾನವ ಶರೀರ ರಚನೆಯ ಪಂಚಕೋಶಗಳು. ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ- ಈ ಐವರು ಪ್ರಾತಃಸ್ಮರಣೀಯ ಪಂಚ ನಾರಿಯರು. ಅರವಿಂದ(ಕಮಲ), ಅಶೋಕ, ಚೂತ(ಮಾವು), ನವಮಲ್ಲಿಕಾ, ನೀಲೋತ್ಪಲ- ಈ ಐದು ಹೂವುಗಳಿಂದಾದ ಪಂಚ ಬಾಣಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ- ಪಂಚ ಪ್ರಾಣಗಳು. ಅಧಿಷ್ಠಾನ, ಕರ್ತಾ, ಕರಣ, ಚೇಷ್ಟಾ, ದೈವ ಎಂಬ ಪಂಚಕಾರಣಗಳು. ರೂಪ, ರಸ, ಗಂಧ, ಸ್ಪರ್ಶ, ಶಬ್ದ ಎಂಬ ಪಂಚ ತನ್ಮಾತ್ರಗಳು. ಶತದ್ರು, ವಿಪಾಶಾ, ಇರಾವತೀ, ಚಂದ್ರಭಾಗಾ, ವಿತಸ್ತಾ- ಪಂಚನದಗಳು (ಪಶ್ಚಿಮಾಭಿಮುಖ ಹರಿಯುವವು ಆದ್ದರಿಂದ 'ನದ' ಪುಲ್ಲಿಂಗ; ನದಿ ಅಲ್ಲ). ಅಥವಾ ಈಗಿನ ಸಟ್ಲೆಜ್, ಬಿಯಾಸ್, ರಾವೀ, ಚೆನಾಬ್, ಝೀಲಮ್ ನದಗಳಿಂದಾದ ಪಂಜಾಬ್. ಹೀಗೆ ಐದು ವಸ್ತು/ವಿಷಯಗಳ ಪುಂಜಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅನೇಕವಿವೆ. ಬೇರೆ ಸಂಖ್ಯೆಗಳವೂ ಇವೆಯೆನ್ನಿ, ಆದರೆ ಐದರವು ತುಸು ಹೆಚ್ಚೇ ಇವೆಯೇನೋ. ಪಂಚೇಂದ್ರಿಯ, ಪಂಚಾಗ್ನಿ, ಪಂಚಾಂಗ, ಪಂಚತಂತ್ರ, ಪಂಚಭೂತ, ಪಂಚಲೋಹ, ಪಂಚಾಯತನ, ಪಂಚೋಪಚಾರ... ಹೀಗೆ ನೆನಪಿಸಿಕೊಂಡರೆ ತುಂಬ ಇವೆ.

ಅಂಥವುಗಳಲ್ಲೊಂದು ಪಂಚಾಮೃತ. ಸನಾತನ ಪರಂಪರೆಯಲ್ಲಿ ಪೂಜೆ-ಪುನಸ್ಕಾರಗಳ ಆಚರಣೆಯಲ್ಲಿ ಪಂಚಾಮೃತದ ಪಾತ್ರ ಹಿರಿದು. ''ಶರ್ಕರಾದುಗ್ಧಘೃತದಧಿಮಧುಘಟಿತಮ್'' ಎಂದು ಸಂಸ್ಕೃತದಲ್ಲಿ ಅದರ ವ್ಯಾಖ್ಯೆ ಅಥವಾ ಡೆಫಿನಿಷನ್. ಪ್ರಾಚೀನ ಧಾರ್ಮಿಕ ಗ್ರಂಥಗಳಲ್ಲಿ ''ದುಗ್ಧಂ ಚ ಶರ್ಕರಾ ಚೈವ ಘೃತಂ ದಧಿ ತಥಾ ಮಧು। ಪಂಚಾಮೃತಮಿದಂ ಪ್ರೋಕ್ತಂ ವಿಧೇಯಂ ಸರ್ವಕರ್ಮಸು'' ಮತ್ತು ''ಗವ್ಯಮಾಜ್ಯಂ ದಧಿ ಕ್ಷೀರಂ ಮಾಕ್ಷಿಕಂ ಶರ್ಕರಾನ್ವಿತಮ್। ಏಕತ್ರ ಮಿಲಿತಂ ಜ್ಞೇಯಂ ದಿವ್ಯಂ ಪಂಚಾಮೃತಂ ಪರಮ್'' ಮುಂತಾಗಿ ಶ್ಲೋಕ ರೂಪದಲ್ಲಿ ಪಂಚಾಮೃತದ ಗುಣಗಾನವಿದೆ. ಈ ಶ್ಲೋಕಗಳಲ್ಲೂ ತಿಳಿಸಿರುವುದಿಷ್ಟೇ: ಜೇನು, ತುಪ್ಪ, ಸಕ್ಕರೆ, ಮೊಸರು, ಮತ್ತು ಹಾಲು- ಈ ಐದು ವಸ್ತುಗಳ ಮಿಶ್ರಣವೇ ಪಂಚಾಮೃತ. ಐದು ವಸ್ತುಗಳಲ್ಲಿ ಪ್ರತಿಯೊಂದೂ ಅಮೃತಸಮಾನ ಆದ್ದರಿಂದ ಪಂಚಾಮೃತ ಎಂದು ಹೆಸರು. ದೇವರಿಗೆ ಪಂಚಾಮೃತದ ಅಭಿಷೇಕ. ಭಕ್ತರಿಗೆ ಪಂಚಾಮೃತವೇ ಪ್ರಸಾದ. ಹಾಲಿನಿಂದ ಶುದ್ಧತೆ, ಮೊಸರಿನಿಂದ ಶಕ್ತಿ, ಸಕ್ಕರೆಯಿಂದ ಸಿಹಿತನ, ಜೇನಿನಿಂದ ಬಾಳ್ವಿಕೆ, ತುಪ್ಪದಿಂದ ಪುಷ್ಟಿ- ಇವಿಷ್ಟು ನಮ್ಮ ಶರೀರಕ್ಕೆ ಒಳ್ಳೆಯದನ್ನೇ ಮಾಡುತ್ತವೆ ಎಂಬ ಆಶಯ.

ಪಂಚಾಮೃತವನ್ನು ತಯಾರಿಸುವಾಗ ಈ ಐದು ವಸ್ತುಗಳನ್ನು ಸರಿಯಾದ ಪ್ರಮಾಣದಲ್ಲಿ ಮಿಶ್ರಣ ಮಾಡಬೇಕಾದ್ದು ಮುಖ್ಯ. ಏಕೆಂದರೆ ಇವೆಲ್ಲವೂ ಒಂದೇ ಪ್ರಮಾಣದಲ್ಲಿ ಇರುವುದಿಲ್ಲ. ಇವುಗಳ ಪ್ರಮಾಣದಲ್ಲಿ ಒಂದು ಸುಂದರ ಕ್ರಮ ಇದೆ, ಕ್ರಮದಲ್ಲಿ ಕಾರಣವೂ ಇದೆ! ಒಂದು ಉದ್ಧರಣೆಯಷ್ಟು ಜೇನು, ಎರಡು ಉದ್ಧರಣೆಗಳಷ್ಟು ತುಪ್ಪ, ನಾಲ್ಕು ಉದ್ಧರಣೆಗಳಷ್ಟು ಸಕ್ಕರೆ, ಎಂಟು ಉದ್ಧರಣೆಗಳಷ್ಟು ಮೊಸರು, ಮತ್ತು ಹದಿನಾರು ಉದ್ಧರಣೆಗಳಷ್ಟು ಹಾಲು. ಇದು ಕ್ರಮಬದ್ಧ ಪ್ರಮಾಣ. ಉದ್ಧರಣೆಯ ಮಾನವನ್ನು ನಾನಿಲ್ಲಿ ಆಯ್ದುಕೊಂಡದ್ದು ಪೂಜಾಪರಿಸರದ ಪವಿತ್ರ ಭಾವನೆ ಮನದಲ್ಲಿ ಬರಲಿ ಅಂತಷ್ಟೇ. ಉದ್ಧರಣೆಯ ಬದಲಿಗೆ ಚಮಚ, ಸೌಟು, ಕಪ್, ಬೋಗುಣಿ, ತಪ್ಪಲೆ, ಹಂಡೆ ಯಾವ ಪ್ರಮಾಣವಾದರೂ ಸರಿ, ಅನುಪಾತವಷ್ಟೇ ಇಲ್ಲಿ ಮುಖ್ಯ. ಒಂದು, ಎರಡು, ನಾಲ್ಕು, ಎಂಟು, ಹದಿನಾರು- ಈ ಸಂಖ್ಯೆಗಳನ್ನು ಗಮನಿಸಿದರೆ ಗೊತ್ತಾಗುತ್ತದೆ ಇದು ದ್ವಿಮಾನ ಸಂಖ್ಯಾಪದ್ಧತಿಯನ್ನು ಅನುಸರಿಸಿದ ಪ್ರಮಾಣ. ಎರಡರ ಘಾತ ಸೊನ್ನೆಯಿಂದ ಆರಂಭಿಸಿ ಎರಡರ ಘಾತ ನಾಲ್ಕರವರೆಗಿನ ಐದು ಸಂಖ್ಯೆಗಳು. ಇದರಲ್ಲಿ ನಮ್ಮ ಹಿರಿಯರ ಜಾಣ್ಮೆಯನ್ನು ಮೆಚ್ಚಬೇಕಾದ್ದೆಂದರೆ- ಐದು ವಸ್ತುಗಳ ಪೈಕಿ ಅತ್ಯಂತ ಸಾಂದ್ರವಾದ ಜೇನು ಮತ್ತು ತುಪ್ಪ ಕಡಿಮೆ ಪ್ರಮಾಣದಲ್ಲಿ ಇರುವುದು. ಸಕ್ಕರೆ ಕರಗಿ ಹೋಗುವಂಥದ್ದು ಅದು ಮಧ್ಯಭಾಗದಲ್ಲಿ. ಅನಂತರದ ಸ್ಥಾನ ಮೊಸರಿಗೆ. ಅದು ದ್ರವ-ಘನಗಳ ಸಮರೂಪ. ಐದರ ಪೈಕಿ ಅತ್ಯಂತ ದ್ರವರೂಪದ ಹಾಲು ಅಧಿಕ ಪ್ರಮಾಣದಲ್ಲಿ ಇರುವುದು. ಇದರಿಂದಾಗಿ ಒಟ್ಟು ಮಿಶ್ರಣವು ಸಾಕಷ್ಟು ದ್ರವರೂಪದಲ್ಲಿಯೇ ಇದ್ದು ದೇವರ ಮೂರ್ತಿಯ ಮೇಲೆ ಅಭಿಷೇಕಕ್ಕೆ ಸುಲಭವಾಗುವುದು. ತೀರ್ಥ ಪ್ರಸಾದದ ರೂಪದಲ್ಲಿ ಭಕ್ತರಿಗೆ ವಿತರಣೆಗೂ ಸುಲಭವಾಗುವುದು.

ಹೀಗೆ ದ್ವಿಮಾನ ಸಂಖ್ಯಾಪದ್ಧತಿಯನ್ನು ಅನುಸರಿಸಿದ ಪ್ರಮಾಣದಲ್ಲಿ ಜೇನು, ತುಪ್ಪ, ಸಕ್ಕರೆ, ಮೊಸರು, ಮತ್ತು ಹಾಲನ್ನು ಮಿಶ್ರಮಾಡಿದರೇನೇ ಶಾಸ್ತ್ರೋಕ್ತ ಪಂಚಾಮೃತ ಎನಿಸುವುದು. ಈ ಐದು ವಸ್ತುಗಳ ಜತೆಗೆ ಅಥವಾ ಬದಲಿಗೆ ಬಾಳೆಹಣ್ಣು ಖರ್ಜೂರ ಒಣದ್ರಾಕ್ಷಿ ದಾಳಿಂಬೆ ಮತ್ತಿತರ ವಸ್ತುಗಳನ್ನು ಬೆರೆಸಿದರೆ ಅದು ಒಳ್ಳೆಯ ರಸಾಯನ ಅಥವಾ ಸೀಕರಣೆ ಅನಿಸೀತೇ ಹೊರತು ಶಾಸ್ತ್ರೋಕ್ತ ಪಂಚಾಮೃತವಾಗದು ಎಂದು ಗೊತ್ತಿರಲಿ. ಇನ್ನೊಂದು ಗಮನಾರ್ಹ ಅಂಶವೆಂದರೆ ಜೇನು ಮತ್ತು ತುಪ್ಪ ಇವೆರಡನ್ನು ಸಮಪ್ರಮಾಣದಲ್ಲಿ ಬೆರೆಸಿದರೆ (ಪಂಚಾಮೃತದಲ್ಲಿ ಅಂತಲ್ಲ, ಒಟ್ಟಾರೆಯಾಗಿಯೂ) ಅದು ಮನುಷ್ಯದೇಹಕ್ಕೆ ವಿಷಕಾರಿ ಎನಿಸುವ ಸಾಧ್ಯತೆಗಳಿವೆ. ಈ ಅಪಾಯವನ್ನು ತಪ್ಪಿಸಲಿಕ್ಕೆಂದೇ ಪಂಚಾಮೃತದಲ್ಲಿ ಜೇನು ಮತ್ತು ತುಪ್ಪದ ಪ್ರಮಾಣ ಒಂದಕ್ಕೆ ಎರಡರಂತೆ ಇರುವುದು. ನಮ್ಮ ಪೂರ್ವಜರು ಎಷ್ಟೆಲ್ಲ ಸೂಕ್ಷ್ಮ ವಿಷಯಗಳನ್ನು ಮನಗಂಡು ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದಾರೆಂದು ಗಮನಿಸಿದರೆ ಆಶ್ಚರ್ಯವೂ ಅವರ ಬಗ್ಗೆ ಅಭಿಮಾನವೂ ಆಗುತ್ತದೆ.

ಪಂಚಾಮೃತವೆಂಬ ಈ ದಿವ್ಯ ಮಿಶ್ರಣ ಕೇವಲ ಭಕ್ತಿಪ್ರಧಾನವಾಗಿ ಮತ್ತು ರುಚಿಪ್ರಧಾನವಾಗಿ ರೂಪುಗೊಂಡಿದ್ದಲ್ಲ. ಆರೋಗ್ಯವರ್ಧಕ ಗುಣಗಳು ಪಂಚಾಮೃತದಲ್ಲಿವೆಯೆಂದು ಆಯುರ್ವೇದದ ಗ್ರಂಥಗಳು ಉಲ್ಲೇಖಿಸುತ್ತವೆ. ''ಅಜೀರ್ಣಭೂತವಾತಘ್ನಂ ಜ್ಞೇಯಂ ಪಂಚಾಮೃತಂ ಪರಮ್'' ಎನ್ನಲಾಗಿದೆ ಧನ್ವಂತರೀ ನಿಘಂಟುವಿನಲ್ಲಿ. ಜೀರ್ಣಕ್ರಿಯೆಯ ಸಮಸ್ಯೆಗಳಾದ ಹಸಿವು ಕಡಿಮೆ ಇರುವುದು, ದುರ್ಬಲ ಜೀರ್ಣಕ್ರಿಯೆ, ಅಜೀರ್ಣ ಇತ್ಯಾದಿಗಳ ಚಿಕಿತ್ಸೆಯಲ್ಲಿ ಪಂಚಾಮೃತ ತುಂಬ ಉಪಯುಕ್ತವಾಗಿದೆ. ಮಾನಸಿಕ ಅಸ್ವಸ್ಥತೆಗಳು, ಭೂತಬಾಧೆ ಎಂದು ಹೇಳಲಾಗುವ ಸಮಸ್ಯೆಗಳು ಮತ್ತು ಸೂಕ್ಷ್ಮಜೀವಿ ಸೋಂಕುಗಳ ಚಿಕಿತ್ಸೆಯಲ್ಲೂ ಪಂಚಾಮೃತವನ್ನು ಉಪಯೋಗಿಸಲಾಗುತ್ತದೆ. ವಾತ ದೋಷವನ್ನೂ ಅದು ಸಮತೋಲನಗೊಳಿಸುತ್ತದೆ. ಹೊಟ್ಟೆ ಉಬ್ಬುವುದು, ನರ ಸಂಬಂಧಿತ ಸಮಸ್ಯೆಗಳು, ಸ್ನಾಯು ಕ್ಷಯ, ದೌರ್ಬಲ್ಯ ಮತ್ತು ಪೋಷಣೆಯ ಕೊರತೆಯೊಂದಿಗೆ ಸಂಬಂಧಿಸಿದ ಅಸ್ಥಿ-ಸ್ನಾಯು ಸಮಸ್ಯೆಗಳೆಲ್ಲದಕ್ಕೂ ಪಂಚಾಮೃತದಲ್ಲಿ ಔಷಧವಿದೆ. ಗರ್ಭವತಿ ಸ್ತ್ರೀಯರಿಗೆ ಯಾವ್ಯಾವ ತಿಂಗಳು/ ನಕ್ಷತ್ರ/ ಕರಣಗಳಲ್ಲಿ ಪಂಚಾಮೃತ ಕೊಡಬೇಕು ಎಂದು ವಿವರಿಸುವ ಒಂದು ಚಂದದ ಶ್ಲೋಕವೇ ಇದೆ. ಆದ್ದರಿಂದಲೇ ಪಂಚಾಮೃತವನ್ನು ಪವಿತ್ರ ಮತ್ತು ಅತ್ಯುತ್ತಮ ಔಷಧೀಯ ಮಿಶ್ರಣವೆಂದು ಪರಿಗಣಿಸಲಾಗುತ್ತದೆ.

ಇಷ್ಟೇ ಅಲ್ಲ, ಪಂಚಾಮೃತವನ್ನು ಆಯುರ್ವೇದದ ರಸಶಾಸ್ತ್ರ ಶಾಖೆಯಲ್ಲಿ ಅನೇಕ ಲೋಹೀಯ ಪದಾರ್ಥಗಳನ್ನು ಶುದ್ಧೀಕರಿಸುವ ದ್ರವ್ಯವಾಗಿಯೂ ಬಳಸಲಾಗುತ್ತದೆ. 'ರಸಕರ್ಮ ಪ್ರಸಾಧಕ' ಎಂದು ಅದನ್ನು ಬಣ್ಣಿಸಲಾಗಿದೆ. ಅಂದರೆ, ಲೋಹಗಳು ಮತ್ತು ಪಾದರಸ ಸಂಬಂಧಿತ ಔಷಧ ತಯಾರಿಕೆಯಲ್ಲಿ ಬಳಕೆಯಾಗುವ ಪದಾರ್ಥ. ತಾಮ್ರಭಸ್ಮ ತಯಾರಿಯಲ್ಲಿ ತಾಮ್ರದ ವಿಷಗುಣವನ್ನು ತೆಗೆಯಲಿಕ್ಕೆ ಬಳಸುವುದು ಪಂಚಾಮೃತವನ್ನೇ. ಆ ಪ್ರಕ್ರಿಯೆಯ ಹೆಸರೇ ಅಮೃತೀಕರಣ ಎಂದು. ಮನುಷ್ಯದೇಹಕ್ಕೆ ಬೇಕಾದ ಉಪಯುಕ್ತ ಅಂಶಗಳನ್ನಷ್ಟೇ ತಾಮ್ರದಿಂದ ಪಡೆಯುವುದು ಇದರಿಂದ

ಸಾಧ್ಯವಾಗುತ್ತದೆ. ಇಲ್ಲಿ ಇನ್ನೊಂದು ವಿಚಾರವನ್ನೂ ನಾವು ಗಮನಿಸಬೇಕು. ದೇವರ ವಿಗ್ರಹಕ್ಕೆ ಅಭಿಷೇಕ ಮಾಡಿದ ಪಂಚಾಮೃತವನ್ನು ತೀರ್ಥವೆಂದು ಸ್ವೀಕರಿಸುವ ಪದ್ಧತಿ ಮೌಢ್ಯದ್ದಲ್ಲ, ವೈಜ್ಞಾನಿಕ ತತ್ತ್ವವುಳ್ಳದ್ದೇ. ವಿಗ್ರಹಗಳನ್ನು ಕಲ್ಲು-ಮಣ್ಣಿನಿಂದ ಮಾಡಿದ್ದರೂ, ಕಂಚು ಅಥವಾ ಪಂಚಲೋಹಗಳಿಂದ ಮಾಡಿದ್ದರೂ ಅದರಲ್ಲಿ ಕಬ್ಬಿಣ, ತಾಮ್ರ, ಚಿನ್ನ, ಬೆಳ್ಳಿ ಅಂಶಗಳೆಲ್ಲ ಅಲ್ಪಪ್ರಮಾಣದಲ್ಲಿ ಇದ್ದೇಇರುತ್ತವೆ. ಅಂತಹ ವಿಗ್ರಹಗಳಿಗೆ ಪಂಚಾಮೃತದಿಂದ ಅಭಿಷೇಕ ಮಾಡಿದಾಗ, ಆ ಲೋಹಗಳಿಂದ ಅತಿ ಸೂಕ್ಷ್ಮ ಕಣಗಳು ಪಂಚಾಮೃತದಲ್ಲಿ ಸೇರಬಹುದು. ಅದನ್ನು ಸೇವಿಸುವುದರಿಂದ, ಪಂಚಾಮೃತದಿಂದಾಗಿ ಆ ಲೋಹಗಳ ವಿಷಾಂಶಗಳು ಕಳೆದು ಸೂಕ್ಷ್ಮ ಪ್ರಮಾಣದ ಔಷಧೀಯ ಅಂಶಗಳು ನಮಗೆ ಲಭ್ಯವಾಗುತ್ತವೆ!

ಇದಿಷ್ಟು, ಲೋಕಕ್ಕೆಲ್ಲ ಪರಿಚಿತವಿರುವ ಪಂಚಾಮೃತ ಬಗೆಗಿನ ಕೆಲವು ಸ್ವಾರಸ್ಯಕರ ಮಾಹಿತಿ. ಈಗ, ನಿಮಗೆ ಅಷ್ಟೇನೂ ಪರಿಚಯವಿರಲಾರದ, ಅಥವಾ ಬೇರೆ ಹೆಸರಿನಿಂದ ಗೊತ್ತಿರಬಹುದಾದ ಒಂದು ಪಂಚಾಮೃತದ ಬಗ್ಗೆ ಹೇಳುತ್ತೇನೆ. ಇದು ಕೂಡ ಬಾಯಿಯಿಂದ ಹೊಟ್ಟೆಗೆ ಸೇವಿಸುವ ಒಂದು ಪದಾರ್ಥವೇ. ಆದರೆ ಆ ಪಂಚಾಮೃತದಂತೆ ದೇವರ ಪೂಜೆಯಲ್ಲಿ ಉಪಯೋಗಿಸುವ ವಸ್ತು ಇದಲ್ಲ, ಇದೇನಿದ್ದರೂ 'ಪೇಟ್ ಪೂಜೆ'ಗೆ ಮಾತ್ರ ಸೀಮಿತ. ಆದರೆ, ಆ ಪಂಚಾಮೃತದಂತೆ ಈ ಪಂಚಾಮೃತದ್ದೂ ಸ್ವಲ್ಪಸ್ವಲ್ಪ ಪ್ರಮಾಣದಲ್ಲೇ ಸೇವನೆ. ರುಚಿ ಮಾತ್ರ ಆಹಾ... ಅದ್ಭುತ! ಬರೀ ಸಿಹಿಯಲ್ಲ, ಸಿಹಿ, ಖಾರ, ಉಪ್ಪು, ಹುಳಿ, ಕಹಿ ಈ ಐದೂ ರುಚಿಗಳಿರುವಂಥದ್ದು. ನನ್ನ ಪ್ರಕಾರ ಪಂಚಾಮೃತ ಎಂಬ ಹೆಸರು ಇದಕ್ಕೇ ಚೆನ್ನಾಗಿ ಹೊಂದುವುದು. ಪಂಚಾಮೃತ ಎಂದೊಡನೆ ನನಗಂತೂ ಇದರದೇ ಚಿತ್ರ ಕಣ್ಮುಂದೆ ಬಂದು ಬಾಯಿಯಲ್ಲಿ ನೀರೂರುವುದು. ನಮ್ಮ ಮನೆಯಲ್ಲಂತೂ ತಲೆತಲಾಂತರದಿಂದ ಬಂದಿರುವ ಈ ರೆಸಿಪಿ ಎಲ್ಲರಿಗೂ ಅಚ್ಚುಮೆಚ್ಚಿನದು. ಸರಿ, ಇಷ್ಟೆಲ್ಲ ಬಡಿವಾರ ಬಿಲ್ಡಪ್ ಓದಿದಾಗ ನಿಮ್ಮ ಬಾಯಿಯಲ್ಲಿ ನೀರೂರಿತೋ ಏನೋ. ಈಗ ರೆಸಿಪಿಯನ್ನು ಓದಿ ಹೇಗಿರಬಹುದೆಂದು ಕಲ್ಪಿಸಿಕೊಳ್ಳಿ. ಬೇಕಾಗುವ ಪದಾರ್ಥಗಳು ಮತ್ತು ಮಾಡುವ ವಿಧಾನವನ್ನು ನೋಟ್ ಮಾಡಿಟ್ಟುಕೊಳ್ಳಿ.

ಹಸಿಮೆಣಸು 1/4 ಕೆ.ಜಿ., ಹುಣಿಸೆಹಣ್ಣು 100 ಗ್ರಾಂ, ಬೆಲ್ಲ ಹದಾಗಾತ್ರದ ಒಂದು ಅಚ್ಚು, ಉಪ್ಪು ಒಂದೆರಡು ಚಿಟಿಕೆ (ರುಚಿಗೆ ತಕ್ಕಷ್ಟು), ಜೀರಿಗೆ 3 ಚಮಚ, ಮೆಂತ್ಯ 3 ಚಮಚ, ಇಂಗು 1 ಚಿಟಿಕೆ, ಎಣ್ಣೆ- ಹಸಿಮೆಣಸನ್ನು ಬಾಡಿಸಲು ಬೇಕಾಗುವಷ್ಟು ಮಾತ್ರ. ಹುಣಿಸೆಹಣ್ಣನ್ನು ನೀರಲ್ಲಿ ನೆನೆಸಿಟ್ಟು ಚೆನ್ನಾಗಿ ಕಿವುಚಿ ರಸ ತೆಗೆದಿಟ್ಟುಕೊಳ್ಳಿ. ಹಸಿಮೆಣಸನ್ನು ತೊಟ್ಟು ತೆಗೆದು ಸಣ್ಣಗೆ ಹೆಚ್ಚಿ (ಉದ್ದುದ್ದ ಹೆಚ್ಚುವುದಕ್ಕಿಂತ ಅಡ್ಡಕ್ಕೆ, ಚಕ್ರಗಳಂತೆ ಹೆಚ್ಚುವುದು ಉತ್ತಮ) ಎಣ್ಣೆಯಲ್ಲಿ ಹುರಿಯಬೇಕು. ಗಮನಿಸಿ- ಕರಿಯುವುದಲ್ಲ, ಹುರಿಯುವುದು. ಚೆನ್ನಾಗಿ ಹುರಿದ ಮೆಣಸಿನಕಾಯಿ ಬಾಣಲೆಯಲ್ಲಿರುವಾಗಲೇ ಹುಣಿಸೆರಸ ಸೇರಿಸಿ ಉಪ್ಪು, ಇಂಗು, ಪುಡಿಮಾಡಿದ ಬೆಲ್ಲವನ್ನೂ ಹಾಕಿ ಚೆನ್ನಾಗಿ ಕುದಿಸಿ. ಒಲೆಯ ಜ್ವಾಲೆ ಮೀಡಿಯಂ ಆಗಿರಲಿ. ಇದೇ ಟೈಮಲ್ಲಿ ಕ್ವಿಕ್ಕಾಗಿ ಜೀರಿಗೆ-ಮೆಂತ್ಯವನ್ನು ಪುಡಿ ಮಾಡಿಟ್ಟುಕೊಳ್ಳಿ. ಒಲೆಯ ಮೇಲಿನ ಮಿಶ್ರಣ ದಪ್ಪವಾಗುತ್ತ ಬರುತ್ತಿದ್ದಂತೆಯೇ ಇಳಿಸುವ ಮುನ್ನ ಜೀರಿಗೆ ಮತ್ತು ಮೆಂತ್ಯ ಪುಡಿ ಹಾಕಿ ಬಾಣಲೆಯನ್ನು ಒಲೆಯಿಂದ ಇಳಿಸಿ. ಆರಿದ ಮೇಲೆ ಮಿಶ್ರಣವನ್ನು ಗಾಜಿನ ಜಾಡಿಯಲ್ಲಿ ತುಂಬಿಸಿಡಿ. ಬೇಕಿದ್ದರೆ ''ಪಂಚಾಮೃತ(ತಿಳಿರುತೋರಣ ಜ್ಞಾನಾಮೃತ)'' ಎಂದು ಲೇಬಲ್ ಹಚ್ಚಿ! ತಯಾರಿಸಿದ ದಿನಕ್ಕಿಂತ ಒಂದೆರಡು ದಿನ ಬಿಟ್ಟು ತೆರೆದು ಬಳಸತೊಡಗಿದರೆ ಒಳ್ಳೆಯದು. ಬಿಸಿಬಿಸಿ ಅನ್ನಕ್ಕೆ ಒಂದು ಚಮಚದಷ್ಟು ಪಂಚಾಮೃತ ಬಡಿಸಿಕೊಂಡು, ಒಂದಿಷ್ಟು ತುಪ್ಪ ಅಥವಾ ಕೊಬ್ರಿ ಎಣ್ಣೆಯನ್ನೂ ಹಾಕಿ ಕಲಸಿದರೆ... ಪಂಚಾಮೃತದಲ್ಲಿ ಹಸಿಮೆಣಸಿನ ಚಕ್ರಾಕಾರಗಳಿರುತ್ತವಲ್ವಾ ಅವನ್ನೂ ಸರಿಯಾಗಿ ಕಿವುಚಿ ರಸೋತ್ಪತ್ತಿ ಹೆಚ್ಚಿಸಿಕೊಂಡರೆ... ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ! ದೋಸೆ, ಚಪಾತಿ, ಪೂರಿಗೆ ಹಚ್ಚಿ ತಿನ್ನಲಿಕ್ಕೂ ಸೂಪರ್ ಆಗಿರುತ್ತದೆ. ಜಾಡಿಯಲ್ಲಿ ಹಾಕಿಟ್ಟರೆ ಒಂದೆರಡು ತಿಂಗಳ ಕಾಲ ಕೆಡದೆ ಉಳಿಯಬಲ್ಲುದು. ನಮ್ಮನೇಲಂತೂ ಅಷ್ಟೆಲ್ಲ ದಿನಗಳವರೆಗೆ ಉಳಿಯುವ ಸಾಧ್ಯತೆಯೇ ಇಲ್ಲ, ತೀವ್ರ ಬೇಡಿಕೆಯುಳ್ಳ ವ್ಯಂಜನ ಆದ್ದರಿಂದ.

ಹಾಂ! ವ್ಯಂಜನ ಎಂದಾಗ ನೆನಪಾಯ್ತು. ಇಂದಿನ ಅಂಕಣದ ತಲೆಬರಹದಲ್ಲಿ ಹೇಳಹೊರಟಿದ್ದೇ ಬೇರೆಯೇ ವ್ಯಂಜನಗಳ ಬಗ್ಗೆ. ಇದುವರೆಗೂ ಕೊಂಕಣ ಸುತ್ತಿದ್ದೇ ಆಯ್ತು. ಈಗ ಮೈಲಾರ ಪ್ರವೇಶ. ವರ್ಣಮಾಲೆಯಲ್ಲಿ ವ್ಯಂಜನ ಎಂದರೇನೆಂದು ನಿಮಗೆ ಗೊತ್ತೇ ಇದೆ. 'ಕ'ದಿಂದ 'ಮ'ವರೆಗಿನ 25 ವರ್ಗೀಯ ವ್ಯಂಜನಗಳು, 'ಯ'ದಿಂದ 'ಳ'ವರೆಗಿನ 9 ಅವರ್ಗೀಯ ವ್ಯಂಜನಗಳು. ವ್ಯಂಜನಕ್ಕೆ ಸ್ವರ ಸೇರಿ ಪೂರ್ಣಾಕ್ಷರ ಆಗುವುದು. ಕೆಲವೊಮ್ಮೆ ಪದದ ಕೊನೆಯಲ್ಲಿ ವ್ಯಂಜನಕ್ಕೆ ಸ್ವರ ಸೇರದೆ ಅದು ವ್ಯಂಜನವಾಗಿಯೇ ಉಳಿಯಬಹುದು. ಅದನ್ನು ಅರ್ಧಾಕ್ಷರ ಎನ್ನುತ್ತೇವೆ. ಒಂದಕ್ಕಿಂತ ಹೆಚ್ಚು ವ್ಯಂಜನಗಳು ಕೂಡಿ ಅವುಗಳ ಜತೆಗೊಂದು ಸ್ವರ ಸೇರಿದ್ದನ್ನು ಸಂಯುಕ್ತಾಕ್ಷರ ಎನ್ನುತ್ತೇವೆ. ಕನ್ನಡದಲ್ಲಾದರೆ ಒತ್ತಕ್ಷರ ಎನ್ನುವುದೇ ರೂಢಿ, ಕನ್ನಡ ಲಿಪಿಯಲ್ಲಿ ಅಂಥ ಸಂದರ್ಭದಲ್ಲಿ ಮುಖ್ಯ(ಮೊದಲ) ವ್ಯಂಜನದ ಕೆಳಗೆ ಎರಡನೆಯನ್ನು ಒತ್ತಿನಂತೆ ಬರೆಯುವುದರಿಂದ. ನನಗದು ಭಾರತದ ನಕ್ಷೆಯ ಕೆಳಗೆ ಶ್ರೀಲಂಕಾ ಇದ್ದಂತೆ ಅಂತಲೇ ಅನಿಸುವುದು. ಅಂದಮಾತ್ರಕ್ಕೆ ಋ-ಕಾರದ ವಟ್ರಸುಳಿ ಮತ್ತು ಐ-ತ್ವದ ಚಿಹ್ನೆಯನ್ನೂ ವ್ಯಂಜನದ ಕೆಳಗೆ ಬರೆಯುವುದಾದರೂ ಅವು ಒತ್ತಕ್ಷರಗಳಲ್ಲವೆಂದು ಗೊತ್ತಿರಬೇಕು. ಇಲ್ಲಿ ಇನ್ನೂ ಒಂದು ಸ್ವಾರಸ್ಯ ಇದೆ. ಅಚ್ಚಕನ್ನಡ (ಮತ್ತು ತದ್ಭವ) ಪದಗಳಲ್ಲಾದರೆ ಸಜಾತೀಯ ಸಂಯುಕ್ತಾಕ್ಷರವಷ್ಟೇ ಸಾಧ್ಯ. ಅಂದರೆ ಮುಖ್ಯ ವ್ಯಂಜನ ಮತ್ತು ಕೆಳಗಡೆ ಬರೆಯಲ್ಪಡುವ ವ್ಯಂಜನ ಅದೇ ಆಗಿರುವುದು. ಉದಾಹರಣೆಗೆ 'ಅಕ್ಕ' ಪದದಲ್ಲಿ 'ಕ್ಕ'; 'ಅಮ್ಮ' ಪದದಲ್ಲಿ 'ಮ್ಮ'; 'ಅಯ್ಯ' ಪದದಲ್ಲಿ 'ಯ್ಯ'; 'ಕಳ್ಳ' ಪದದಲ್ಲಿ 'ಳ್ಳ' ಇತ್ಯಾದಿ. ಆ ದೃಷ್ಟಿಯಿಂದಲೂ ನಮ್ಮ ಕನ್ನಡ ಭಾಷೆ ಸರಳ ಮತ್ತು ಸುಂದರ.

ಸಂಸ್ಕೃತ ಮೂಲದ ಪದಗಳಲ್ಲಿ ಹಾಗಲ್ಲ. ಬೇರೆಬೇರೆ ವ್ಯಂಜನಗಳು ಸೇರಿ ಸಂಯುಕ್ತಾಕ್ಷರ ಆಗಬಹುದು. ಉದಾಹರಣೆಗೆ 'ವಿಶ್ವ' ಪದದಲ್ಲಿ 'ಶ್ವ'; 'ಪತ್ರಿಕೆ' ಪದದಲ್ಲಿ 'ತ್ರಿ'; 'ವಾಙ್ಮಯ' ಪದದಲ್ಲಿ 'ಙ್ಮ'; 'ಮಧ್ಯಾಹ್ನ' ಪದದಲ್ಲಿ 'ಧ್ಯಾ' ಮತ್ತು 'ಹ್ನ'. ಕೆಲವೊಮ್ಮೆ ಎರಡಲ್ಲ ಮೂರು ವ್ಯಂಜನಗಳಿರುವ ಸಂಯುಕ್ತಾಕ್ಷರ ಇರುತ್ತದೆ. ಉದಾಹರಣೆಗೆ 'ಲಕ್ಷ್ಮ್ಯ' ಪದದಲ್ಲಿ 'ಕ್ಷ್ಮ್ಯ'; 'ಕಾಕುತ್ಸ್ಥ' ಪದದಲ್ಲಿ 'ತ್ಸ್ಥ'; 'ಉಜ್ಜ್ವಾಯ' ಪದದಲ್ಲಿ 'ಜ್ಜ್ವಾ', 'ರಾಷ್ಟ್ರಕೂಟ' ಪದದಲ್ಲಿ 'ಷ್ಟ್ರ' ಇತ್ಯಾದಿ. ತೀರ ಅಪರೂಪದಲ್ಲಿ ಮೂರಲ್ಲ ನಾಲ್ಕು ವ್ಯಂಜನಗಳು ಸೇರಿ ಸಂಯುಕ್ತಾಕ್ಷರ ಆಗುವುದೂ ಇದೆ. ಸಂಸ್ಕೃತ ಶ್ಲೋಕಗಳಲ್ಲಿ, ಸ್ತೋತ್ರಗಳಲ್ಲಿ ಇಂಥವು ಅಪರೂಪಕ್ಕೊಮ್ಮೆ ಕಾಣಸಿಗುತ್ತವೆ. ಉಚ್ಚರಿಸುವಾಗ ನಮ್ಮ ನಾಲಗೆ ತೊಡರುವುದಕ್ಕೆ ಕಾರಣವಾಗುತ್ತವೆ. ಉದಾಹರಣೆಗೆ 'ಭುಙ್ಕ್ಷ್ವ' (ತಿನ್ನು, ಉಣ್ಣು ಎಂಬ ಅರ್ಥ) ಪದ. ಇದರಲ್ಲಿ ಙ್ಕ್ಷ್ವ ಇದು ಙ್, ಕ್, ಷ್, ವ್ ಎಂಬ ನಾಲ್ಕು ವ್ಯಂಜನಗಳು ಒಟ್ಟುಸೇರಿರುವ ಸಂಯುಕ್ತಾಕ್ಷರ. ಉಡುಪಿಯಲ್ಲಿ ಕೃಷ್ಣದೇವಾಲಯದ ಪಕ್ಕದಲ್ಲಿರುವ ಗೀತಾಮಂದಿರದಲ್ಲಿ ಉಪಾಹಾರಗೃಹಕ್ಕೆ 'ಕುರು ಭುಙ್ಕ್ಷ್ವ'ಎಂದೇ ಹೆಸರಿಟ್ಟಿದ್ದಾರೆ. ಅವು ಮಧ್ವಾಚಾರ್ಯರ ಕೃತಿಯೊಂದರ ಮೊದಲೆರಡು ಪದಗಳೂ ಹೌದು. ನಾಲ್ಕು ವ್ಯಂಜನಗಳ ಇನ್ನೊಂದು ಸಂಯುಕ್ತಾಕ್ಷರ ನೆನಪಾಗುವುದು ಭಗವದ್ಗೀತೆಯ 8ನೇಯ ಅಧ್ಯಾಯದ 12ನೇಯ ಶ್ಲೋಕದಲ್ಲಿ. ಅದರ ಮೂರನೆಯ ಚರಣದಲ್ಲಿ ''ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮ್'' ಎಂದು ಬರುತ್ತದೆ. ಇಲ್ಲಿ ರ್ಧ್ನ್ಯಾ ಇದು ರ್, ಧ್, ನ್, ಯ್ ಎಂಬ ನಾಲ್ಕು ವ್ಯಂಜನಗಳು ಒಟ್ಟುಸೇರಿರುವ ಸಂಯುಕ್ತಾಕ್ಷರ.

ನಾಲ್ಕರದ್ದೇ ಅಪರೂಪ ಎಂದುಕೊಂಡಿರಾದರೆ ಐದು ವ್ಯಂಜನಗಳು ಸೇರಿ ಆದ ಸಂಯುಕ್ತಾಕ್ಷರವೂ ಸಂಸ್ಕೃತದಲ್ಲಿದೆ! ನನ್ನ ಸೀಮಿತ ತಿಳಿವಳಿಕೆಯಲ್ಲಿ ನನಗೆ ಗೊತ್ತಿರುವ ಒಂದೇಒಂದು ಉದಾಹರಣೆಯೆಂದರೆ 'ಕಾರ್ತ್ಸ್ನ್ಯ' ಎಂಬ ಪದ. ಇದರಲ್ಲಿ ರ್, ತ್, ಸ್, ನ್, ಯ್ ಎಂಬ ಐದು ವ್ಯಂಜನಗಳಿಂದಾದ ಸಂಯುಕ್ತಾಕ್ಷರವಿದೆ. ಇದು ಸಕಲ ಅಥವಾ ಸಂಪೂರ್ಣ ಎಂಬ ಅರ್ಥದ 'ಕೃತ್ಸ್ನ' ವಿಶೇಷಣ ಪದವನ್ನು ನಾಮಪದವಾಗಿಸಿದ ರೂಪ. 'ಕರುಣ'ವನ್ನು 'ಕಾರುಣ್ಯ' ಮಾಡಿದಂತೆ. ಚಂಚಲವನ್ನು 'ಚಾಂಚಲ್ಯ' ಮಾಡಿದಂತೆ. ಕಾರ್ತ್ಸ್ನ್ಯ ಎಂದರೆ ಪರಿಪೂರ್ಣತೆ, ಸಮಗ್ರತೆ ಎಂದು ಅರ್ಥ. ಇಂಗ್ಲಿಷ್‌ನಲ್ಲಾದರೆ ಟೋಟಾಲಿಟಿ. ವಾಲ್ಮೀಕಿ-ರಾಮಾಯಣದಲ್ಲಿ ''ತಾಂ ಕಥಾಂ ಶ್ರೋತುಮಿಚ್ಛಾಮಿ ವಿಸ್ತರೇಣ ಚ ಮೈಥಿಲಿ। ಯಥಾನುಭೂತಂ ಕಾರ್ತ್ಸ್ನ್ಯೇನ ತನ್ಮೇ ತ್ವಂ ವಕ್ತುಮರ್ಹಸಿ॥'' ಮತ್ತು ''ತೌ ರಾಜಪುತ್ರೌ ಕಾರ್ತ್ಸ್ನ್ಯೇನ ಧರ್ಮ್ಯಮಾಖ್ಯಾನಮುತ್ತಮಮ್। ವಾಚೋವಿಧೇಯಂ ತತ್ಸರ್ವಂ ಕೃತ್ವಾ ಕಾವ್ಯಮನಿನ್ದಿತೌ॥'' ಮುಂತಾದ ಶ್ಲೋಕಗಳಲ್ಲಿ ಈ 'ಕಾರ್ತ್ಸ್ನ್ಯ' ಪದ ಮತ್ತು ಅದರಿಂದಾಗಿ ಐದು ವ್ಯಂಜನಗಳ ಸಂಯುಕ್ತಾಕ್ಷರ ಬರುತ್ತದೆ. ನನ್ನಂಥ ಅಕ್ಷರಮೋಹಿತರಿಗೆ, ಭಾಷೆಹುಚ್ಚಿನವರಿಗೆ ಇದೂ ಒಂಥರದ ಪಂಚಾಮೃತವೇ!

ಒಂದು ದೇಶ, ಒಂದೇ ಭಾಷೆ ಎನ್ನುವುದು ಸರಿಯಲ್ಲ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

7 ದಶಕಗಳಿಗೂ ಹಿಂದೆ, ಭಾರತದ ಸಮಷ್ಟಿಯ ಭಾಷಾವಿಮರ್ಷೆಗಾಗಿ ಸಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಗೆ ನಮ್ಮ ಡಿ.ವಿ. ಗುಂಡಪ್ಪನವರು ಸವಿಸ್ತಾರವಾದ ಅಭಿಪ್ರಾಯವೊಂದನ್ನು ಕಳುಹಿಸುತ್ತಾರೆ. ನಂತರ ಅದರ ಕೆಲವು ಭಾಗಗಳು (1958ರಲ್ಲಿ) 'ಹಿಂದು' ಪತ್ರಿಕೆಯಲ್ಲಿಯೂ ಪ್ರಕಟವಾಗುತ್ತೆ. ಭಾಷಾ ವಿವಾದ, ಸರಿಯಾದ ಭಾಷಾ ನೀತಿಯ ಇಂದಿನ ಅಗತ್ಯ ಹಾಗೂ ಹಿಂದಿ ಹೇರಿಕೆ ಮುಂತಾದ ವಿಷಯಗಳೊನ್ನೊಳಗೊಂಡ ಡಿವಿಜಿಯವರ ಈ ವಿಶಿಷ್ಟ ವಿಚಾರಧಾರೆಯನ್ನು ಅವರ ಕೃತಿಶ್ರೇಣಿಯ 11ನೇ ಸಂಪುಟದಲ್ಲಿ 'ಇಂಡಿಯಾದ ಭಾಷಾ ಪ್ರಶ್ನೆ' ಎನ್ನುವ ಹೆಸರಿನಡಿಯಲ್ಲಿ ಅಳವಡಿಸಲಾಗಿದೆ. ಪ್ರಾದೇಶಿಕ ಭಾಷೆಯ ಇತಿಮಿತಿ, ಸಂಸ್ಕೃತದ ಹೆಚ್ಚುಗಾರಿಕೆ, ದೇಶದ ಐಕಮತ್ಯದ ನೆಪದಲ್ಲಿ ಹಿಂದಿಭಾಷೆಯ ಅನಗತ್ಯ ಹೇರುವಿಕೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಇಂದಿನ ಅಗತ್ಯಗಳನ್ನು ಪೂರೈಸಲು ನಮಗೆ ಇರುವ ಇಂಗ್ಲೀಷಿನ ಅವಶ್ಯಕತೆಗಳ ಕುರಿತು ಅತ್ಯಂತ ಮನೋಜ್ಞವಾಗಿ ತಿಳಿಸಿದ್ದಾರೆ. ಅದರಲ್ಲಿ ಅವರು ಭಾಷಾ ದುರಭಿಮಾನವನ್ನೂ ಅತ್ಯಂತ ತರ್ಕಬದ್ಧವಾಗಿ ದೂಷಿಸುತ್ತಾರೆ. ಇಂಗ್ಲೀಷು ಎಷ್ಟು ಬೇಕು, ನಮ್ಮ ಭಾಷೆಯ ಬೆಳವಣಿಗೆಯಲ್ಲಿ ಇಂಗ್ಲೀಷ್ ಹೇಗೆ ಸಹಾಯಕವಾಗಬಹುದು ಎಂದು ಡಿವಿಜಿ ಅತ್ಯಂತ ಜಾಣ್ಮೆಯಿಂದ ತೋರಿಸುತ್ತಾರೆ. ಕಳೆದವಾರ ತ್ರಿಭಾಷಾ ಸೂತ್ರದ ಕುರಿತು ಕುವೆಂಪು ಅವರ 'ತ್ರಿಶೂಲ' ಎನ್ನುವ ಅಷ್ಟೊಂದು ಸಮಂಜಸವಲ್ಲದ ಹಾಗೂ ತೀಕ್ಷ್ಣ ಟಿಪ್ಪಣಿಯ ಬಗ್ಗೆ ಬರೆದಿದ್ದೆ. ಮಾತೃ ಭಾಷೆಯ ಕಲಿಕೆಯ ಜತೆಗೆ ಇಂಗ್ಲೀಷ್ ಕಲಿಕೆಯ ಇಂದಿನ ಅಗತ್ಯ ಮತ್ತು ತ್ರತೀಯ ಭಾಷೆಯಾಗಿ ಹಿಂದಿಯನ್ನಲ್ಲ, ಸಂಸ್ಕೃತವನ್ನು ಕಲಿಸಬೇಕು ಎನ್ನುವ ಸರ್ವಕಾಲಕ್ಕೂ ಒಪ್ಪುವ ಒಂದು 'ಪ್ರಾಕ್ಟಿಕಲ್' ಹಾಗೂ ಸರಳ ಸೂತ್ರವನ್ನು ಡಿವಿಜಿಯವರು ಮಂಡಿಸಿರುವುದನ್ನು ಈ ಕಾಲಘಟ್ಟದಲ್ಲಿ ನಾವು ಕನ್ನಡಿಗರು ಒಮ್ಮೆ ಅರಿಯುವುದೊಳಿತು ಎನ್ನುವ ಕಾರಣಕ್ಕೆ, ಅವರ ಲೇಖನದ ತಿರುಳನ್ನು ಅವರದೇ ಶಬ್ದಗಳಲ್ಲಿ ಈವಾರ ನೀಡುತ್ತಿದ್ದೇನೆ. ಓದಿದರೆ ನಿಮಗೂ ಡಿವಿಜಿಯವರ ಸಾರ್ವಕಾಲಿಕ ನಿಲುವು ಸರಿಯೆನಿಸುವುದರಲ್ಲಿ ಸಂಶಯವಿಲ್ಲ.

ಮನುಷ್ಯ ಜೀವನವು ಎಲ್ಲ ಭಾಷೆಗಳಿಗಿಂತ ದೊಡ್ಡದು. ಜೀವನವನ್ನು ಆದಷ್ಟು ವಿಶಾಲವಾಗಿ, ಸಾರ್ಥಕವಾಗುವಂತೆ ನಡೆಸಬೇಕೆನ್ನುವ ಜನಕ್ಕೆ ಲೋಕದಲ್ಲಿರುವ ಯಾವ ಒಂದು ಭಾಷೆ ಸಾಕಾಗದು. ಭಾಷಾ ವಿಷಯದಲ್ಲಿ ಸ್ವೀಯತಾಮಾತ್ರ ತೃಪ್ತಿಯ (Self-sufficiency) ನೀತಿ ಸಾಲದು. ಆ ಜನಕ್ಕೆ ಅನ್ಯಭಾಷೆಯ ಸಹಾಯವಿದ್ದ ಹೊರತು ಅವರ ಬದುಕು ತುಂಬುಬದುಕಾಗಲಾರದು. ಅನ್ಯಭಾಷೆಯನ್ನು ಮುಟ್ಟೆವೆಂದು ವ್ರತ ತೊಟ್ಟರೆ, ಅದರಿಂದ ಅವರ ವ್ಯಕ್ತಿತ್ವದ ಯಾವುದೋ ಒಂದು ಭಾಗಕ್ಕೆ ಕೊರತೆಯಾಗಿ ಅದು ಕುಗ್ಗುತ್ತದೆ. ಹೀಗೆ ಜೀವನ ಪರಿಪೂರ್ಣತಾ ದೃಷ್ಟಿಯಿಂದ ಅನ್ಯ ಭಾಷಾ ಸಹಾಯ ಅವಶ್ಯವಾಗುತ್ತದೆ. ಅನ್ಯಭಾಷಾ ಸಹಾಯವನ್ನು ತೆಗೆದುಕೊಳ್ಳುವುದೆಂದರೆ ಪ್ರಪಂಚದಲ್ಲಿಯ ಎಲ್ಲ ಭಾಷೆಗಳನ್ನೂ ಕಲಿಯುವುದೆಂದು ಅರ್ಥವಲ್ಲ. ಇರುವ ಎಲ್ಲ ಭಾಷೆಗಳನ್ನೂ ಕಲಿಯುವುದು ನಮಗೆ ಸಾಧ್ಯವೂ ಅಲ್ಲ, ಅದು ಅವಶ್ಯವೂ ಅಲ್ಲ. ನಮ್ಮ ಭಾಷೆಯಿಂದ ಬೇರೆಯಾದ ಭಾಷೆ ಒಂದನ್ನೋ ಎರಡನ್ನೂ ಮಾತ್ರ ಕಲಿಯಬೇಕೆಂಬುದು ತಾತ್ಪರ್ಯ. ನಮ್ಮ ಸ್ವಂತ ಭಾಷೆಯಲ್ಲಿ ಯಾವ ಯಾವ ಗುಣಾಂಶಗಳೂ ಶಕ್ತಿ ವಿಶೇಷಗಳೂ ತಕ್ಕಷ್ಟು ಬೆಳೆದಿಲ್ಲವೋ ಅಂಥಾ ಗುಣಶಕ್ತಿಗಳನ್ನು ಸಮೃದ್ಧಿಯಾಗಿ ಪಡೆದಿರುವ ಭಾಷೆಯನ್ನು ನಾವು ಆರಿಸಿಕೊಳ್ಳಬೇಕು. ಆರಿಸಿಕೊಂಡ ಭಾಷೆಯ ಸಂಪತ್ತಿನಿಂದ ನಮ್ಮ ಭಾಷೆಯ ಬಡತನ ತೊಲಗುವಂತಿರಬೇಕು.

ವಿಷಯ ಮೊದಲು, ಭಾಷೆ ಆಮೇಲೆ. ವ್ಯವಹಾರಕ್ಕೆ ವಿಷಯವೇ ಇಲ್ಲದಾಗ ಕಲಿತ ಭಾಷೆ ಬರಿಯ ಹೊರೆಯಾಗುತ್ತದೆ. ಹೀಗೆ ನೋಡಿದಲ್ಲಿ ಸ್ವಪ್ರದೇಶ ಭಾಷೆ, ಇಂಗ್ಲೀಷ್ ಭಾಷೆ ಇವೆರಡೇ ಪ್ರತಿಯೊಬ್ಬ ಭಾರತೀಯನಿಗೂ ಇರಬೇಕಾದ ಕನಿಷ್ಠ ಪ್ರಮಾಣದ ಅವಶ್ಯ ಭಾಷಾಜ್ಞಾನ ಎಂದು ನಿಶ್ಚಿತವಾಗುತ್ತದೆ. ಆ ಎರಡು ಭಾಷೆಗಳಿಗೂ ವಿದ್ಯಾಭ್ಯಾಸಕ್ರಮದಲ್ಲಿ ಸ್ಥಳ ಮಾಡಿಕೊಟ್ಟ ಮೇಲೆ, ಮೂರನೆಯ ಸ್ಥಳ ಸಂಸ್ಕೃತಕ್ಕೆ ಯುಕ್ತವಾಗುತ್ತದೆ. ಈ ಮೂರಲ್ಲದೆ ಬೇರೆ ಯಾವ ಭಾಷೆ ಬೇಕೆಂದರೂ ಅದಕ್ಕೆ ತಕ್ಕದ್ದು ನಾಲ್ಕನೆಯ ಜಾಗ.

ಹಿಂದಿ ಭಾಷೆಯ ಪ್ರಸ್ತಾವ ನಮಗೆ ಇಲ್ಲಿ ಅಪ್ರಕೃತ, ಅದು ಭಾರತದಲ್ಲಿ ಬಹುಜನ ಬಳಸುವ ಬಲಿಷ್ಠ ಭಾಷೆ, ಆ ಭಾಷೆಯಲ್ಲಿ ಮಹಾಕಾವ್ಯಗಳುಂಟೆಂಬುದನ್ನು ಯಾರೂ ಅಲ್ಲಗಳೆಯಲಾರರು, ಹಿಂದಿಯಲ್ಲಿ ತುಲಸೀದಾಸರ ರಾಮಾಯಣ ಪ್ರಸಿದ್ಧವಾಗಿದ್ದರೆ ಕನ್ನಡದಲ್ಲಿ ತೊರವೆಯ ರಾಮಾಯಣವೂ, ತಮಿಳಿನಲ್ಲಿ ಕಂಬ ರಾಮಾಯಣವೂ, ತೆಲುಗಿನಲ್ಲಿ ರಂಗನಾಥ ರಾಮಾಯಣವೂ ಪ್ರಸಿದ್ಧವಾಗಿವೆ. ಈಗಣ ಪ್ರಶ್ನೆ ಹಿಂದಿಯಲ್ಲಿ ಉತ್ತಮ ಗ್ರಂಥಗಳಿಲ್ಲವೆ ಎಂಬುದಲ್ಲ, ನಮಗೆ ಕನ್ನಡಿಗರಿಗೆ ಈಗ ಅವಶ್ಯವಾಗಿರುವ ಹೊಸ ವಿಜ್ಞಾನಾದಿ ಪ್ರಕೃತಪ್ರಯುಕ್ತ ಸಾಹಿತ್ಯ ಹಿಂದಿಯಲ್ಲುಂಟೆ ಎಂಬುದು ಪ್ರಶ್ನೆ, ಈ ಭಾಗದಲ್ಲಿ ಕನ್ನಡ ತಮಿಳು ತೆಲುಗುಗಳು ಯಾವ ಮಟ್ಟದಲ್ಲಿವೆಯೋ ಹಿಂದಿ ಅದಕ್ಕಿಂತ ಮೇಲ್ಪಟ್ಟೇನೂ ಇಲ್ಲವೆಂಬುದು ಖಂಡಿತ.

ಸಮಸ್ತ ಭಾರತಕ್ಕೂ ಏಕೈಕ ಭಾಷೆ ಒಂದಿರಬೇಕೆಂಬುದರ ಉದ್ದೇಶವೇನು? ಅದರಿಂದ ಜನದಲ್ಲಿ ಐಕಮತ್ಯ ಬಲವಡುತ್ತದೆ ಎಂಬುದಲ್ಲವೆ? ಕಿವಿಗೆ ಆ ವಾದ ಯುಕ್ತವೆನಿಸುತ್ತದೆ; ವಿಚಾರಕ್ಕೆ ಅದು ಅಷ್ಟು ಯುಕ್ತವೆಂದು ತೋರದು. ಭಾಷೆ ಏಕವಾದರೆ ಜನ ಏಕವಾಗುತ್ತದೆ ಎಂಬ ಖಾತ್ರಿ ಎಲ್ಲಿದೆ? ಇಂಗ್ಲೆಂಡೂ ಅಮೆರಿಕವೂ ಒಂದೇ ಭಾಷೆಯನ್ನಾಡುತ್ತವೆ. ಅವೆರಡೂ ಏಕರಾಷ್ಟ್ರವಲ್ಲ. ಅವೆರಡಕ್ಕೂ ಎಷ್ಟೋ ವೇಳೆ ಭೇದಗಳೂ ಮನಸ್ತಾಪಗಳೂ ಆಗಿವೆ. ಇನ್ನೆಷ್ಟೋ ರಾಷ್ಟ್ರಗಳಲ್ಲಿ ಎರಡೋ ಮೂರೋ ಭಾಷೆಗಳು ನೆಲಸಿಕೊಂಡಿವೆ. ಆ ರಾಷ್ಟ್ರಗಳಲ್ಲಿ ಜನೈಕಮತ್ಯಕ್ಕೆ ಅವರ ಅನೇಕ ಭಾಷೀಯತ್ವದಿಂದ ಎಷ್ಟು ಮಾತ್ರವೂ ಕುಂದಾಗಿಲ್ಲ. ನಮ್ಮ ದೇಶದಲ್ಲಿ ಈಗ ಪ್ರಚಾರದಲ್ಲಿರುವ ಮತಗಳು ನೂರಾರು, ಜನೈಕಮತ್ಯಕ್ಕೋಸ್ಕರ ಆ ಮತಗಳನ್ನೆಲ್ಲ ರದ್ದುಪಡಿಸಿ, ಅವುಗಳ ಜಾಗದಲ್ಲಿ ಒಂದೇ ಒಂದು ಮತವನ್ನು ಸ್ಥಾಪಿಸಬೇಕೆಂದು ಯಾರಾದರೂ ಹೊರಟಿದ್ದಾರೆಯೆ? ಭಾಷೆ ಮತಗಳೇಕೆ, ಆಹಾರ ವಸ್ತ್ರ ವೇಷಗಳೆಲ್ಲದರಲ್ಲಿಯೂ ಐಕಮತ್ಯವನ್ನು ನಿರ್ಬಂಧದಿಂದ ತಂದರೆ ಜನದ ಹೃದಯಗಳಲ್ಲಿ ಐಕಮತ್ಯ ಉಂಟಾಗುತ್ತದೆಯೇ ಎಂದರೆ, ಇಲ್ಲವೆನ್ನುವುದೇ ಉತ್ತರವಾಗುತ್ತದೆ. ಒಂದು ಅವಾಸ್ತವಿಕವಾದ ಧ್ಯೇಯವನ್ನು ಮನಸ್ಸಿನಲ್ಲಿ ಮಾಡಿಕೊಂಡು, ಜನದ ಮೇಲೆ ಒಂದು ಹೊಸ ಭಾಷೆಯ ಭಾರವನ್ನು ಹೇರುವುದು ಯಾರಿಗೂ ಹಿತವೆನಿಸದು.

ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ನಮ್ಮ ದೇಶದ ಇಂದಿನ ಸ್ಥಿತಿಯಲ್ಲಿ ಇಂಗ್ಲೀಷನ್ನು ಬೇಡವೆನ್ನುವುದೂ, ಹಿಂದಿ ಭಾಷಿಗಳಲ್ಲದವರ ಮೇಲೆ ಹಿಂದಿಯನ್ನು ಹೇರ ಬೇಕೆನ್ನುವುದು ಅಸಂಗತಗಳಾದ ವಾದಗಳು. ಇಂಗ್ಲೀಷು ನಮಗೆ ಮಾಡಿರುವ ಅಪಕಾರವೇನು? ಪ್ರಪಂಚದ ಯಾವ ಭಾಷೆಯೇ ಆಗಲಿ, ಅದರಲ್ಲಿ ಗುಣವಿದ್ದರೆ ಅದು ನಮ್ಮ ಮನ್ನಣೆಯನ್ನು ಪಡೆಯಲೇಬೇಕು. ತತ್ತ್ವದಲ್ಲಿ ಎಲ್ಲ ಭಾಷೆಗಳೂ ಭಗವದ್ ವಾಣಿ ಎಂಬುದೇ ನಮ್ಮ ಪೂರ್ವಿಕರ ಮತ. ಇಂಗ್ಲೀಷು ಕೂಡ ಭಗವದ್ವಾಣಿಯ ಒಂದು ರೂಪ 'ದೇವೀಂ ವಾಚಮಜನಯಂತ ದೇವಾಃ ವಿಶ್ವರೂಪಾಸ್ತಾಂ ಪಶವೋ ವದಂತಿ' ದೇವತೆಗಳು ವಾಕ್ಯನ್ನು ಸೃಷ್ಟಿಮಾಡಿದರು. ಆ ಒಂದೇ ದೇವತಾವಾಕ್ಕು ಜಗತ್ತಿನ ಪಶು ಪಕ್ಷಿ ಮನುಷ್ಯಾದಿಗಳಲ್ಲಿ ನಾನಾ ರೂಪಗಳನ್ನು ತಾಳಿ ಪ್ರಯೋಗದಲ್ಲಿದೆ. ''ಸಂಸ್ಕೃತ, ಇಂಗ್ಲೀಷ್, ಕನ್ನಡ, ತೆಲುಗು, ತಮಿಳು-ಇವೆಲ್ಲವೂ ಸಮಾನವಾಗಿ ಭಗವದ್ವಾಣಿಯೇ ಹೊರತು ಬೇರೆ ಅಲ್ಲ. ಆದದ್ದರಿಂದ ಅವೆಲ್ಲವೂ ಭಗವತ್ಪಸಾದವನ್ನು ರೂಪಗೊಳಿಸಿದವೇ ಸರಿ. ಹೀಗೆಂದ ಮೇಲೆ ಇಂಗ್ಲೀಷಿನಲ್ಲಿರುವ ದೋಷವೇನು? ನಮ್ಮ ದೇಶಭಾಷೆಗಳಲ್ಲಿ ಈಗ ಇರುವ ದಾರಿದ್ರ್ಯವನ್ನು ಪರಿಹಾರಮಾಡಬಲ್ಲ ಶಕ್ತಿಯೂ, ಸಂಸ್ಕೃತ ಸಾಹಿತ್ಯದಲ್ಲಿ ಅಡಗಿರುವ ದಿವ್ಯರತ್ನಗಳನ್ನು ಪ್ರಪಂಚಕ್ಕೆ ಎತ್ತಿ ತೋರಿಸುವ ಶಕ್ತಿಯೂ, ಇಂಡಿಯ ದೇಶವನ್ನೆಲ್ಲ ಒಟ್ಟುಗೂಡಿಸಿ ಅದಕ್ಕೆ ರಾಜಕೀಯ ಸಮುನ್ನತಿಯನ್ನು ತಂದುಕೊಡುವ ಶಕ್ತಿಯೂ ಯಾವ ಭಾಷೆಗೆ ಉಂಟು ಎಂಬುದು ನಮಗೆ ಅನುಭವಸಿದ್ಧವಾಗಿದೆಯೋ ಅಂಥ ಇಂಗ್ಲೀಷನ್ನು ನಾವು ವರ್ಜಿಸಬೇಕೆಂಬುದರಲ್ಲಿ ನ್ಯಾಯವೇನಿದೆ?

ನಮ್ಮ ಮುಂದಿರುವ ಪ್ರಶ್ನೆ ಭಾರತೀಯತೆಯ ಪ್ರಶ್ನೆ. ಭಾರತೀಯತೆಯ ಪ್ರಶ್ನೆ ಎಂದರೆ ಭರತಖಂಡದ ಜನತೆಯ ಜೀವನವನ್ನು ಸದ್ಯಃ ಪ್ರಪಂಚಕ್ಕೆ ಸಮನ್ವಯಗೊಳಿಸುವುದು ಎಂದು ತಾತ್ಪರ್ಯ. ಇಂದಿನ ಪ್ರಪಂಚದಲ್ಲಿ ಕಾಣಬರುವ ಅಂಶಗಳನ್ನು ವಿಚಾರಮಾಡಿ, ಅದರಲ್ಲಿ ಒಳ್ಳೆಯವಾದುವನ್ನು ಇಂಡಿಯ ಅಂಗೀಕರಿಸಿಕೊಳ್ಳಬೇಕು; ಮತ್ತು ಪ್ರಪಂಚಕ್ಕೆ ಉಪಕಾರಕವಾಗಿ

ತನ್ನಲ್ಲಿರುವ ಅಂಶಗಳನ್ನು ಇತರ ಜನತೆಗಳಿಗೆ ಕೊಡಲು ಸಮರ್ಥವಾಗಬೇಕು. ಈ ಇಂಡಿಯ ಪ್ರಪಂಚಗಳ ಸಮರಸ ಸವ್ಯವಹಾರವೇ ಇಂದು ಆಗಬೇಕಾದ ಜಗತ್ಕಲ್ಯಾಣ. ಇದಕ್ಕೆ ತಕ್ಕ ಸಿದ್ಧತೆಯೇ ಭಾರತಜೀವನದ ಅಭಿನವೀಕರಣ. ಈ ನವೀಕರಣಕ್ಕೆ ಅವಶ್ಯವಾದ ಉಪಕರಣ ಇಂಗ್ಲೀಷು, ಅದು ಇಂಡಿಯದ ಆರ್ಷೇಯ ಸಂಸ್ಕೃತಿಯೊಡನೆ ಸಹಕರಿಸಲು ಸಿದ್ಧವಾಗಿದೆ. ಅದನ್ನು ಬೇಡವೆನ್ನುವವರು ಈ ಸಂಸ್ಕೃತ ಗಾದೆಯನ್ನು ನೆನಪಿಗೆ ತಂದುಕೊಳ್ಳಲಿ 'ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ' ಭೋಜನಕ್ಕಾಗಿ ಎಲೆಯಲ್ಲಿ ಬಡಿಸಿರುವ ಮೃಷ್ಟಾನ್ನವನ್ನು ಬಿಟ್ಟು, ಬೀದಿಯಲ್ಲಿ ತಿರುಪೆಗೆ ಹೊರಡುವವನನ್ನು ಏನನ್ನಬೇಕು? ಪ್ರಪಂಚದ ಯಾವ ಭಾಷೆಯೇ ಆಗಲಿ, ಅದರಲ್ಲಿ ಗುಣವಿದ್ದರೆ ಅದು ನಮ್ಮ ಮನ್ನಣೆಯನ್ನು ಪಡೆಯಲೇಬೇಕು.

ಹಿಂದಿ ಭಾಷೆಯನ್ನು ಸಕಲ ವ್ಯವಹಾರಾರ್ಹವನ್ನಾಗಿ ಮಾಡಲಾದೀತೆಂಬುದು ಅಭಿಮಾನದ ಮಾತೇ ಹೊರತು ಅನುಭವ ಸಿದ್ಧವಾದ ಮಾತಲ್ಲ. ಹುಟ್ಟಿನಿಂದ ಹಿಂದಿಗಳಲ್ಲದವರು ಹಿಂದಿಯನ್ನು ಕಲಿತುಕೊಳ್ಳುವ ಕಷ್ಟವನ್ನು ಸಹಿಸಬೇಕೆನ್ನಲು, ಆ ಕಷ್ಟಕ್ಕೆ ತಕ್ಕಂಥ ಭವಿಷ್ಯತ್ ಪ್ರತಿಫಲದ ಸೂಚನೆ ಯಾವುದೂ ಈಗ ಇಲ್ಲ. ಆ ವಾದದಲ್ಲಿ ಹಟ ತೋರುತ್ತಿದೆಯೇ ಹೊರತು ಕಾರಣಾಧಾರಗಳು ತೋರುತ್ತಿಲ್ಲ. ಒಂದು ಸಮಸ್ತ ಭಾರತ ಭಾಷೆ ಪೂರ್ವದಿಂದ ಸ್ವಾಭಾವಿಕವಾಗಿ ಬಂದಿದ್ದರೆ ಅದನ್ನು ತೊಡೆದು ಹಾಕಬೇಕೆಂದು ಯಾರೂ ವಾದಿಸುತ್ತಿರಲಿಲ್ಲ, ಸಂಸ್ಕೃತ ಅಂಥ ಭಾಷೆ. ಅದಕ್ಕೆ ಯಾರೂ ವಿರೋಧಿಗಳಲ್ಲ, ಸಂಸ್ಕೃತ ಭಾಷೆಯ ವಾಕ್ಯಗಳು ಸಾಮಾನ್ಯಜನದ ಮಾತುಕಥೆಯಲ್ಲಿ ಇಲ್ಲದಿದ್ದರೂ ಸಂಸ್ಕೃತದ ಮಾತುಗಳು ಅವರಲ್ಲಿ ಎಲ್ಲೆಲ್ಲಿಯೂ ಬಳಕೆಯಲ್ಲಿವೆ. ಜೀವನ ಧರ್ಮಕ್ಕೆ ಮುಖ್ಯವಾದ ಸಂಸ್ಕೃತ ಪದಗಳು 'ಸ್ವಾಮಿ, ಭಗವಂತ, ಪ್ರಪಂಚ, ಈಶ್ವರ, ಕರ್ಮ, ಪುಣ್ಯ, ಪಾಪ, ಧರ್ಮ, ಋಣ, ಜನ್ಮಾಂತರ, ಆತ್ಮ, ಜೀವ, ಸ್ವರ್ಗ, ಮೋಕ್ಷ ಇಂಥವು ನೂರಾರು ಮಾತುಗಳು ಎಲ್ಲರ ಪ್ರತಿದಿವಸದ ಉಪಯೋಗದಲ್ಲಿಯೂ ಇವೆ ಮತ್ತು ನಮ್ಮ ನಾನಾ ಪ್ರಾದೇಶಿಕ ಭಾಷೆಗಳ ಕನ್ನಡ, ತೆಲುಗು, ತಮಿಳು ಇತ್ಯಾದಿಗಳ ಕಾವ್ಯ ಸಾಹಿತ್ಯದಲ್ಲಿ ಸಂಸ್ಕೃತ ಪದಪ್ರಯೋಗಗಳು ಹೇರಳವಾಗಿವೆ. ಹೀಗೆ ಜನಜೀವನ, ಕಾವ್ಯಸಾಹಿತ್ಯ ಈ ಎರಡು ದೃಷ್ಟಿಗಳಿಂದಲೂ ಸಂಸ್ಕೃತವು ಸಾವಿರಾರು ವರ್ಷಗಳಿಂದ ಸಕಲ ಭಾರತದ ಭಾಷೆಯಾಗಿಯೇ ಇದೆ. ಅದು ಹಾಗೆಯೇ ಇರಬೇಕು ಕೂಡ. ಆದರೆ, ಅದು ಅಂತರಂಗ ಸಂಸ್ಕೃತಿಯ ಭಾಷೆ; ಬಹಿರಂಗ ವ್ಯಾಪಾರಕ್ಕೆ ಅಷ್ಟಾಗಿ ಅನ್ವಯಿಸುವುದಿಲ್ಲ. ಇನ್ನು ನಮಗೆ ಉಳಿದಿರುವ ಭಾಷಾಕರ್ತವ್ಯ, ಸಮಸ್ತ ಭಾರತದ ಲೌಕಿಕ ವ್ಯವಹಾರದ್ದು. ಇದರ ಅವಸರಗಳಿಗೆ ಇಂಗ್ಲೀಷ್ ಒದಗಿಬರುವಂತೆ ಯಾವ ಪ್ರಾದೇಶಿಕ ಭಾಷೆಯೂ ಸದ್ಯಕ್ಕೆ ಒದಗಲಾರದೆಂಬುದನ್ನು ಎಲ್ಲರೂ ಒಪ್ಪಲೇಬೇಕಾಗುತ್ತದೆ.

ಇಂಗ್ಲೀಷು ಪರಭಾಷೆಯಾದ ಕಾರಣದಿಂದ ಅದನ್ನು ನಾವು ತೊರೆಯತಕ್ಕದ್ದೆಂಬುದು ಕೆಲವರ ವಾದ. ಅದನ್ನು ನಾವು ಒಪ್ಪುವುದಾದರೆ ಈಗ ನಮ್ಮ ಜೀವನಕ್ಷೇತ್ರದೊಳಕ್ಕೆ ಬಂದಿರುವ ಇತರ ಪರದೇಶೀಯ ವಸ್ತುಗಳನ್ನೂ ವಿದ್ಯೆಗಳನ್ನೂ ತ್ಯಜಿಸುವುದಕ್ಕೆ ನಾವು ಸಿದ್ಧರಾಗಿರಬೇಕಲ್ಲವೆ? ಅದಕ್ಕೆ ಮನಸ್ಸು ಮಾಡಿದ್ದೇವೆಯೆ? ಭಾಷೆಯನ್ನು ಮಾತ್ರ ಪರಕೀಯವೆಂದು ಹಳಿದು ವರ್ಜಿಸೋಣವೆನ್ನುವುದು ಯುಕ್ತವಾದೀತೆ? ಯಾವ ದೃಷ್ಟಿಯಿಂದ ನೋಡಿದರೂ ಇಂಗ್ಲೀಷ್ ಅನ್ನು ಪರಕೀಯವೆನ್ನುವುದು ನ್ಯಾಯವೆನಿಸದು. ಒಂದು ದೊಡ್ಡ ಚರಿತ್ರಾಂಶವನ್ನು ಯಾರೂ ಸುಳ್ಳೆನ್ನುವಂತಿಲ್ಲ. ಭರತಖಂಡದಲ್ಲಿ ಭಾರತೀಯತೆ ಎಂಬ ಏಕಜನತಾ ಭಾವ ಉತ್ಪನ್ನವಾದದ್ದೇ ಇಂಗ್ಲೀಷಿನ ಮೂಲಕ. ರಾಜಾ ರಾಮಮೋಹನ ರಾಯರೂ ಸ್ವಾಮಿ ವಿವೇಕಾನಂದರೂ ಬಾಲಗಂಗಾಧರ ತಿಲಕರೂ ಮಹಾತ್ಮಗಾಂಧಿಯವರೂ ದೇಶವನ್ನು ಉದ್ಬುದ್ಧ ಮಾಡಿದ್ದು ಇಂಗ್ಲೀಷಿನ ಮೂಲಕ. ಅವರು ಅವರವರ ಪ್ರಾದೇಶಿಕ ಭಾಷೆಗಳಲ್ಲಿ ಮಾತ್ರ ಬರೆದು ಮಾತನಾಡಿದ್ದಿದ್ದರೆ ಏನಾಗುತ್ತಿತ್ತು? ಊಹಿಸುವುದೂ ಕಷ್ಟ. ಯಾವ ಭಾಷೆಯ ಉಪಯೋಗ ಅವರಿಗೆ ಪರಕೀಯವಾಗಲಿಲ್ಲವೋ, ಅದು ನಮಗೆ ಪರಕೀಯವಾಗಬೇಕೆ?

ಆತ್ಮವಿದ್ಯೋಪದೇಶ ಕಾಲದಲ್ಲಿ ಯಾವ ದೇವತೆ ಸಂಸ್ಕೃತದ ಉಡುಪನ್ನುಟ್ಟು ಬರುತ್ತಾಳೆಯೋ, ನಮ್ಮ ದಿನಗಟ್ಟಲೆಯ ಬದುಕು ಬಾಳಿನಲ್ಲಿ ಯಾವ ತಾಯಿ ಕನ್ನಡಿತಿಯಾಗಿ ಬರುತ್ತಾಳೆಯೋ ಆ ಸರಸ್ವತಿಯೇ ವಿಜ್ಞಾನಾದಿ ವಿಶ್ವವ್ಯಾಪಾರ ಕಾಲದಲ್ಲಿ ಇಂಗ್ಲೀಷಿನ ಉಡುಪನ್ನುಟ್ಟು ಬಂದೇನೆಂದರೆ ಆಕೆಗೆ ಬಹಿಷ್ಕಾರವೆ? ಹಾಗಂತ ಕನ್ನಡ, ಸಂಸ್ಕೃತವನ್ನು ಬಿಟ್ಟು ಇಂಗ್ಲೀಷು ಅಂತ ಅಲ್ಲ, ಅವುಗಳ ಊಳಿಗಕ್ಕಾಗಿಯೇ ಇಂಗ್ಲೀಷು ಬಳಕೆಯಾಗಬೇಕು, ಕನ್ನಡ ಸಾಹಿತ್ಯದ ಪುಷ್ಟಿಗಾಗಿ, ಸಂಸ್ಕತದ ಪ್ರಯೋಜನಗಳು ಜಗತ್ತಿಗೆ ದೊರಕುವಂತೆ ಮಾಡವುದಕ್ಕಾಗಿಯಾದರೂ ನಮ್ಮಲ್ಲಿ ಇಂಗ್ಲೀಷ್ ಕಲಿಕೆಯಾಗಬೇಕು, ಸಮಸ್ತ ಮಾನವ ಪ್ರಪಂಚದ ಬುದ್ಧಿಕಾರ್ಯಗಳು ನಮ್ಮ ಕೈವಶವಾಗಬೇಕಾದರೆ ಅದಕ್ಕೆ ಇಂದು ನಮಗೆ ಇಂಗ್ಲೀಷೇ ಆಯುಧವಾಗಬೇಕು ಹಿಂದಿಯಲ್ಲ, ಅದನ್ನು ನಮ್ಮ ಕನ್ನಡ, ಸಂಸ್ಕತಕ್ಕೆ ಸಹಾಯಕವಾಗುವ ಸ್ಥಾನದಲ್ಲಿರಿಸಿ ಬಳಸಿಕೊಳ್ಳಬೇಕಾದ್ದು ನಮ್ಮ ನೀತಿಯಾಗಬೇಕು ಎನ್ನುತ್ತಾರೆ ಗುಂಡಪ್ಪನವರು. ಮೋಕ್ಷಮಾರ್ಗವನ್ನು ಬೋಧಿಸುವ ಭಗವದ್ಗೀತೆಯನ್ನು ಜೀವನಧರ್ಮವಾಗಿಸಿದ ಡಿವಿಜಿಯವರ ಜೀವನ ಪ್ರೀತಿಯ ಧೋರಣೆಯೇ ಹಾಗೆ, ಎಲ್ಲವೂ ನಿತ್ಯಜೀವನಾನ್ವಯಕ್ಕೆ, ಮನುಷ್ಯ ಜೀವನದ ಏಳ್ಗೆಗೆ ಅನುಕೂಲವಾಗಿರಬೇಕು, ಬರಡು ತತ್ವಗಳಿಂದ, ಅಪ್ಪನೆಟ್ಟ ಆಲದ ಮರಕ್ಕೆ ನೇಣುಹಾಕಿಕೊಳ್ಳುವುದರಿಂದ ಏನೂ ಪ್ರಯೋಜನವಾಗದು ಎನ್ನುವವರು ಅವರು.

ಸ್ವಮೂತ್ರ ಪಾನಿ ಪ್ರಧಾನಿಯಿಂದಾದ ಪ್ರಮಾದಗಳು

ಒಳನೋಟ
ಲೀನಾ ಜೋಶಿ
vveditoped@gmail.com

ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (RAW) ಮುಖ್ಯಸ್ಥ ಆರ್. ಎನ್. ಕಾವ್, ಪ್ರಧಾನಿ ಮೊರಾರ್ಜಿ ದೇಸಾಯಿಯನ್ನು ಭೇಟಿಯಾಗಲು ಹಲವಾರು ದಿನಗಳಿಂದ ಪ್ರಯತ್ನಿಸುತ್ತಿದ್ದರು. ಹೊಸದಾಗಿ ಪ್ರಧಾನಿಯಾದ ಹುಮ್ಮಸ್ಸಿನಲ್ಲಿದ್ದ ಮೊರಾರ್ಜಿಗೆ ರಾ ಮುಖ್ಯಸ್ಥನ ಭೇಟಿ ಮಹತ್ವದ್ದಾಗಿ ಕಂಡಿರಲಿಲ್ಲ. ಪ್ರಧಾನಿಯಾದ ದಿನ ಅವರು ಕೈಗೊಂಡ ಪ್ರಮುಖ ತೀರ್ಮಾನ, ಪ್ರಧಾನಿ ಅಧಿಕೃತ ನಿವಾಸದ ಸ್ನಾನದ ಕೋಣೆಯಲ್ಲಿದ್ದ 'ಬಾತ್ ಟಬ್' ತೆರವುಗೊಳಿಸುವುದು, ಮತ್ತು ಅದಕ್ಕಿಂತ ಮಹತ್ವದ್ದೇನೆಂದರೆ 'ವಿದೇಶಿ ಕಮೋಡ್' ತೆರವುಗೊಳಿಸಿ 'ಭಾರತೀಯ ಕಕ್ಕಸಿನ' ಪುನರ್‌ನಿರ್ಮಾಣ. 1977-79 ಭಾರತದ ರಾಜಕೀಯದಲ್ಲಿ ಮಹತ್ವದ ಕಾಲಘಟ್ಟ, ಎರಡು ವರ್ಷಗಳ ತುರ್ತು ಪರಿಸ್ಥಿತಿಯ ವಿರುದ್ಧ ಬೇಸತ್ತಿದ್ದ, ಮೂರು ದಶಕಗಳ ಕಾಲ ಕಾಂಗ್ರೆಸ್ಸಿನ ಆಡಳಿತದಿಂದ ರೋಸಿದ್ದ ಭಾರತೀಯರಿಗೆ ಒಂದು ಚೇಂಜ್ ಬೇಕಿತ್ತು. ಮೂಲ ಕಾಂಗ್ರೆಸ್ಸಿನಿಂದ ಬೇರ್ಪಟ್ಟು ಹೊಸ ಪಕ್ಷವನ್ನು ಕಟ್ಟಿದ್ದ ಗಾಂಧಿವಾದಿ ನಾಯಕರ ಮೇಲೆ ದೇಶವಾಸಿಗಳಿಗೆ ಒಂದು ಹಿಡಿ ಜಾಸ್ತಿ ಪ್ರೀತಿ ಇತ್ತು. ನಿರೀಕ್ಷೆಗಳ ಮಹಾಪೂರದ ಮೇಲೆ 1977ರಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೊರಾರ್ಜಿಗೆ ಆಗ 81 ವರ್ಷ. ಜೀವನದ ಸಂಧ್ಯಾಕಾಲದಲ್ಲಿದ್ದ ಅನುಭವಿ ರಾಜಕಾರಣಿ, ಪ್ರಾಮಾಣಿಕ ರಾಜಕಾರಣಿ, 'ಸ್ವಮೂತ್ರ' ಕುಡಿಯುವ ವ್ಯಕ್ತಿ ಎಂಬ ಟ್ಯಾಗ್ ಇತ್ತು. ಗಾಂಧಿ ಟೋಪಿ, ಗಾಂಧಿ ಜುಬ್ಬ, ಧೋತಿಗೆ 1970ರ ದಶಕದಲ್ಲೂ ಅಪಾರ ಗೌರವವಿತ್ತು. ಈ ನಂಬಿಕೆ ನುಚ್ಚು ನೂರಾಗಲು ಹೆಚ್ಚು ಸಮಯ ತಗಲಲಿಲ್ಲ. ಮೊರಾರ್ಜಿ ಸರಕಾರ ತನ್ನದೇ ತಪ್ಪು ನಿರ್ಧಾರಗಳಿಂದ ಧೂಳಿಪಟವಾಯಿತು. ಕುರಿಗಳ ಮಂದೆಗೆ ಕುರಿಯೇ ನಾಯಕನಾದರೆ ಹೇಗಿರುತ್ತೆ ಹಾಗಿತ್ತು ಆವಾಗ ದೇಶದ ಪರಿಸ್ಥಿತಿ. ಮೊರಾರ್ಜಿಯ ವ್ಯಕ್ತಿತ್ವ ಅತಿ ಜಿಗುಟಿನದ್ದು. ಕಾಲಕ್ಕೆ ತಕ್ಕಂತೆ ಮನುಷ್ಯ ಬದಲಾಗಬೇಕೆನ್ನುವ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಯೋಚಿಸುತ್ತಿದ್ದ ವ್ಯಕ್ತಿ. ಅಹಿಂಸೆಯಿಂದಲೇ ದೇಶ ಉದ್ಧಾರ ಎಂಬ ಹಳೆಯ ಸಂಪ್ರದಾಯಕ್ಕೆ ಜೋತುಬಿದ್ದ ವ್ಯಕ್ತಿತ್ವ. ಸ್ವಾತಂತ್ರ್ಯದ ನಂತರ ದೇಶ ಎದುರಿಸಿದ 1948-1962-1971ರ ಯುದ್ಧದ ಬಳಿಕವೂ ಶಾಂತಿ ಶಾಂತಿ ಶಾಂತಿ ಎಂದು ಜಪಿಸುತ್ತಿದ್ದ ವ್ಯಕ್ತಿ. ಶಾಂತಿಯೇ ಮೂಲಮಂತ್ರ, ಶಾಂತಿಯೇ ಸರ್ವಸ್ವ ಎನ್ನುವುದು ಸಾರ್ವಕಾಲಿಕ ಸತ್ಯ. ಆದರೆ, ಶಾಂತಿಯ ಮಂತ್ರ ಬಲಶಾಲಿಯ ಬಾಯಲ್ಲಿ ಬಂದಾಗ ಮಾತ್ರ ಅದಕ್ಕೆ ತೂಕ! ಜನತಾ ಸರಕಾರದ ದೊಡ್ಡ ಸವಾಲುಗಳಲ್ಲಿ ಒಂದು, ಪಕ್ಷದ ಒಳಗಿನ ಭಿನ್ನಾಭಿಪ್ರಾಯಗಳಾಗಿತ್ತು. ಜನತಾ ಪಕ್ಷವು ಹಲವು ವಿಭಿನ್ನ ಚಿಂತನೆಗಳ ನಾಯಕರು ಒಟ್ಟುಗೂಡಿದ ಒಕ್ಕೂಟವಾಗಿದ್ದರಿಂದ ಆಂತರಿಕ ಸಂಘರ್ಷಗಳು ಆಗಾಗ್ಗೆ ಎದುರಾದವು. ವಿಭಿನ್ನ ನಾಯಕರ ನಡುವೆ ನಡೆದ ಅಧಿಕಾರದ ಪೈಪೋಟಿ ಸರಕಾರದ ಸ್ಥಿರತೆಗೆ ಹಾನಿ ಮಾಡಿತು. ಈ ಒಳಗಿನ ಕಲಹಗಳು ಕೊನೆಗೆ ಸರಕಾರದ ಪತನಕ್ಕೆ ಕಾರಣವಾದವು. 1979ರಲ್ಲಿ ಸರಕಾರ ಕುಸಿದು ರಾಜಕೀಯ ಅಸ್ಥಿರತೆ ಉಂಟಾಯಿತು.

ಭಾರತದಂತಹ ದೊಡ್ಡ ದೇಶದ ಭದ್ರತೆ ಕೇವಲ ಸೇನೆಯ ಶಕ್ತಿಯಿಂದ ಮಾತ್ರ ಸಾಧ್ಯವಿಲ್ಲ. ದೇಶದ ಸುರಕ್ಷತೆಗಾಗಿ ಗುಪ್ತಚರ ಸಂಸ್ಥೆಗಳು, ರಾಜಕೀಯ ನಾಯಕತ್ವ ಮತ್ತು ಸರಿಯಾದ ನಿರ್ಧಾರಗಳು ಕೂಡ ಅತಿ ಮಹತ್ವವಾದದ್ದು. ವಿಶೇಷವಾಗಿ ಪಕ್ಕದ ರಾಷ್ಟ್ರಗಳೊಂದಿಗೆ ಇರುವ ಸಂಬಂಧಗಳಲ್ಲಿ ಒಂದು ಸಣ್ಣ ತಪ್ಪು ನಿರ್ಧಾರವೂ ದೇಶಕ್ಕೆ ದೊಡ್ಡ ಹಾನಿ ಉಂಟುಮಾಡಬಹುದು. ಭಾರತದ ಗುಪ್ತಚರ ಸಂಸ್ಥೆ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (RAW) ದೇಶದ ಹೊರಗಿನ ಭದ್ರತಾ ಮಾಹಿತಿಗಳನ್ನು ಸಂಗ್ರಹಿಸುವ ಪ್ರಮುಖ ಸಂಸ್ಥೆ. ಈ ಸಂಸ್ಥೆಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಆರ್.ಎನ್. ಕಾವ್ (R.N.Kao) ಪ್ರಮುಖರು.RAW ಅನ್ನು ಬಲಿಷ್ಠ ಸಂಸ್ಥೆಯಾಗಿ ರೂಪಿಸಿದ ಕೀರ್ತಿ ಆರ್.ಎನ್. ಕಾವ್‌ಗೆ ಸಲ್ಲುತ್ತದೆ. ಅವರ ಕಾಲದಲ್ಲಿ RAW ಅತ್ಯಂತ ಬಲಿಷ್ಠ ಸಂಸ್ಥೆಯಾಗಿ ಬೆಳೆಯಿತು. ಪಾಕಿಸ್ತಾನದ ಒಳಗೆ ಮತ್ತು ಇತರ ರಾಷ್ಟ್ರಗಳಲ್ಲಿ ಭಾರತದ ಪರವಾಗಿ ಕೆಲಸ ಮಾಡುವ ಅನೇಕ ಗುಪ್ತಚರರು ತಮ್ಮ ಜೀವದ ಹಂಗಿಲ್ಲದೆ ಮಾಹಿತಿ ಸಂಗ್ರಹಿಸುತ್ತಿದ್ದರು.

1977ರಲ್ಲಿ ಮೊರಾರ್ಜಿ ದೇಸಾಯಿ ಪ್ರಧಾನಮಂತ್ರಿಯಾಗಿ ಅಧಿಕಾರಕ್ಕೆ ಬಂದ ನಂತರ RAW ಸಂಸ್ಥೆಯ ಕಾರ್ಯಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ತರಲು ನಿರ್ಧರಿಸಿತು. RAW ಸಂಸ್ಥೆಯ ಬಜೆಟ್ ಕಡಿಮೆ ಮಾಡಲಾಯಿತು ಮತ್ತು ಕೆಲವು ಪ್ರಮುಖ ಕಾರ್ಯಾಚರಣೆಗಳನ್ನು ನಿಧಾನಗೊಳಿಸಲಾಯಿತು. ವಿದೇಶಗಳಲ್ಲಿ ನಡೆಯುತ್ತಿದ್ದ ಗುಪ್ತಚರ ಕಾರ್ಯಾಚರಣೆಗಳನ್ನು ಕೂಡ ಸೀಮಿತಗೊಳಿಸಲಾಯಿತು. RAW ಸಂಸ್ಥೆಗೆ ಅಗತ್ಯವಿದ್ದ ಹಣಕಾಸು ನೆರವು ಮತ್ತು ಆಡಳಿತಾತ್ಮಕ ಬೆಂಬಲ ಕಡಿಮೆಯಾಯಿತು. ಆರ್.ಎನ್.ಕಾವ್ ಸೇರಿದಂತೆ ಪ್ರಮುಖ ಅಧಿಕಾರಿಗಳಿಗೆ ಈ ಬದಲಾವಣೆಗಳು ತುಂಬಾ ನಿರಾಶೆ ತಂದವು. ಕಾವ್ ಅವರು ಬಲಿಷ್ಠ ಗುಪ್ತಚರ ವ್ಯವಸ್ಥೆ ದೇಶದ ಭದ್ರತೆಗೆ ಅತ್ಯಗತ್ಯ ಎಂದು ನಂಬುತ್ತಿದ್ದರು. ವಿಶೇಷವಾಗಿ ಪಾಕಿಸ್ತಾನ ಮತ್ತು ಚೀನಾ ಮುಂತಾದ ರಾಷ್ಟ್ರಗಳ ಚಟುವಟಿಕೆಗಳನ್ನು ಗಮನಿಸುವಲ್ಲಿ RAW ಸಂಸ್ಥೆ ಬಲವಾಗಿರಬೇಕು ಎಂದು ಅವರು ಭಾವಿಸಿದ್ದರು. ಹೊಸ ಸರಕಾರದ ಜತೆ ಭಿನ್ನಾಭಿಪ್ರಾಯಗಳು ಹೆಚ್ಚಾದಂತೆ, ಕಾವ್ ಅವರಿಗೆ ತಮ್ಮ ಕಾರ್ಯವನ್ನು ಸ್ವತಂತ್ರವಾಗಿ ಮುಂದುವರಿಸುವುದು ಕಷ್ಟವಾಗುತ್ತಿದೆ ಎಂಬ ಭಾವನೆ ಮೂಡಿತು. ಅವರು ದೇಶದ ಹಿತಾಸಕ್ತಿಗಾಗಿ ಕೆಲಸ ಮಾಡಲು ಸದಾ ಸಿದ್ಧರಾಗಿದ್ದರೂ, ತಮ್ಮ ದೃಷ್ಟಿಕೋನಕ್ಕೆ ತಕ್ಕ ಬೆಂಬಲ ದೊರೆಯದ ಪರಿಸ್ಥಿತಿ ಅವರಿಗೆ ನಿರಾಶೆ ತಂದಿತು. ಈ ಎಲ್ಲ ಕಾರಣಗಳಿಂದಾಗಿ, 1977ರಲ್ಲಿ ಕಾವ್ ಅವರು ತಮ್ಮ ಹುದ್ದೆಯಿಂದ ಹಿಂದೆ ಸರಿಯುವ ನಿರ್ಧಾರ ತೆಗೆದುಕೊಂಡರು. ಆರ್.ಎನ್. ಕಾವ್ ಅವರ ರಾಜೀನಾಮೆ ಒಂದು ವ್ಯಕ್ತಿಯ ವೈಯಕ್ತಿಕ ನಿರ್ಧಾರ ಮಾತ್ರವಲ್ಲ; ಅದು ರಾಜಕೀಯ ಬದಲಾವಣೆಗಳು ಮತ್ತು ನೀತಿ ಭಿನ್ನಾಭಿಪ್ರಾಯಗಳು ಒಂದು ಮಹತ್ವದ ಸಂಸ್ಥೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದಕ್ಕೆ ಉದಾಹರಣೆ.

ಗುಪ್ತಚರ ಸಂಸ್ಥೆಗಳ ಕಾರ್ಯಾಚರಣೆಗಳಿಗೆ ತಕ್ಷಣ ಹಣಕಾಸು ದೊರೆಯದಿದ್ದರೆ, ಅವರ ಕಾರ್ಯಗಳು ವಿಳಂಬವಾಗುತ್ತವೆ ಮತ್ತು ಅದು ದೇಶದ ಭದ್ರತೆಯ ಮೇಲೆ ಪರಿಣಾಮ ಬೀರುತ್ತದೆ. ಈ ವಿಷಯಗಳ ಬಗ್ಗೆ ಪ್ರಮುಖವಾಗಿ ಬರೆದಿರುವವರಲ್ಲಿ ಮಾಜಿ RAW ಅಧಿಕಾರಿ ಬಿ. ರಾಮನ್ ಪ್ರಮುಖರು. ಅವರು ಬರೆದ The Kaoboys of RAW: Down Memory Lane ಎಂಬ ಪುಸ್ತಕದಲ್ಲಿ ಹಲವು ಐತಿಹಾಸಿಕ ಘಟನೆಗಳ ಬಗ್ಗೆ ಉಲ್ಲೇಖಗಳಿವೆ. ಅವರು ತಮ್ಮ ಅನುಭವಗಳನ್ನು ವಿವರಿಸುವಾಗ, ಗುಪ್ತಚರ ಸಂಸ್ಥೆಗಳ ಕಾರ್ಯಾಚರಣೆಗಳಲ್ಲಿ ಎದುರಾಗುವ ಸವಾಲುಗಳು ಮತ್ತು ರಾಜಕೀಯ ನಿರ್ಧಾರಗಳ ಪರಿಣಾಮಗಳ ಬಗ್ಗೆ ವಿವರಿಸಿದ್ದಾರೆ. ಅವರ ಬರಹಗಳಲ್ಲಿ ಪಾಕಿಸ್ತಾನದಲ್ಲಿ, ಭಾರತದ ಪರವಾಗಿ ಕೆಲಸ ಮಾಡುತ್ತಿದ್ದ ಗುಪ್ತಚರರ ಜೀವನ ಎಷ್ಟು ಅಪಾಯಕರವಾಗಿತ್ತು ಎಂಬುದನ್ನು ವಿವರಿಸಲಾಗಿದೆ. ರಾಮನ್, ತಮ್ಮ ಅನುಭವಗಳನ್ನು ವಿವರಿಸುವಾಗ ಆ ಕಾಲಘಟ್ಟದ ಸವಾಲುಗಳನ್ನು ಉಲ್ಲೇಖಿಸಿದ್ದಾರೆ. ಅವರು ಬರೆದ ಪುಸ್ತಕಗಳಲ್ಲಿ RAW ಸಂಸ್ಥೆಯ ಒಳಗಿನ ಸವಾಲುಗಳು, ರಾಜಕೀಯ ಬದಲಾವಣೆಗಳ ಪರಿಣಾಮ ಮತ್ತು ಗುಪ್ತಚರ ಅಧಿಕಾರಿಗಳು ಎದುರಿಸಿದ ಸಂಕಷ್ಟಗಳ ಬಗ್ಗೆ ವಿವರಿಸಲಾಗಿದೆ.

1978ರ ಸಮಯ, ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಜಿಯಾ ಉಲ್ ಹಕ್ (Zia&ul&Haq) ಎಂಥ ಮತಾಂಧ ಎಂದರೆ,

ತನ್ನ ಅಧಿಕಾರಿಗಳಿಗೆ, ದೇಶದ ಜನತೆಗೆ ಕರೆಕೊಟ್ಟಿದ್ದ 'bleed India with a thousand cuts'. ಆ ಕಾಲಘಟ್ಟದಲ್ಲಿ ಪಾಕಿಸ್ತಾನ ತನ್ನ ಅಣುಶಕ್ತಿ ಕಾರ್ಯಕ್ರಮವನ್ನು ವೇಗವಾಗಿ ಮುಂದುವರಿಸುತ್ತಿತ್ತು. ಭಾರತಕ್ಕೆ ಈ ವಿಷಯದ ಬಗ್ಗೆ ರಾ *agents ಗಳಿಂದ ಮಾಹಿತಿ ದೊರೆಯುತ್ತಿತ್ತು. ಮೊರಾರ್ಜಿ ದೇಸಾಯಿ ಮತ್ತು ಜಿಯಾ ಉಲ್ ಹಕ್ ನಡುವಿನ ಮಧುರ ಸಂಬಂಧದ ಬಗ್ಗೆ ಬರೆಯುತ್ತಾ, ರಾಮನ್ ಒಂದು ಮಹತ್ವದ ಸಂಗತಿಯ ಬಗ್ಗೆ ನಮ್ಮೆಲ್ಲರ ಗಮನ ಸೆಳೆಯುತ್ತಾರೆ. ಒಮ್ಮೆ, ದೂರವಾಣಿ ಸಂಭಾಷಣೆಯಲ್ಲಿ, ಮೊರಾರ್ಜಿ ಜಿಯಾ ಉಲ್ ಹಕ್‌ಗೆ ಹೇಳುತ್ತಾರೆ, ಭಾರತಕ್ಕೆ ಪಾಕಿಸ್ತಾನದ ಪ್ರತಿಯೊಂದು ವಿಷಯದ ಬಗ್ಗೆ ಸಂಪೂರ್ಣ ಅರಿವಿದೆ, ಪಾಕಿಸ್ತಾನದ ಅಣುಸ್ಥಾವರದ ಪ್ರತಿಯೊಂದು ಮಾಹಿತಿಯಿದೆ, ನೀವು ಪಾಕಿಸ್ತಾನಿಗಳು ಯಾವ ಮೂಲಗಳಿಂದ ಅಣುಬಾಂಬಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಸಂಗ್ರಹಿಸುತ್ತಿದ್ದೀರಿ, ಯಾವ ಪರೀಕ್ಷೆಯನ್ನು ಮಾಡಿದ್ದೀರಿ ಎಂದು ನನಗೆ ಇಲ್ಲೇ ಕುಳಿತು ಎಲ್ಲ ಗೊತ್ತು. ಈ ಮಾಹಿತಿ ಜಿಯಾ ಉಲ್ ಹಕ್ ನನ್ನು ಅಲರ್ಟ್ ಮಾಡಿತು, ಭಾರತದ ಅತ್ಯಧಿಕ ರಾ agents ಗಳನ್ನು, ಪಾಕಿಸ್ತಾನದಲ್ಲಿ ಹೆಕ್ಕಿ ಹೆಕ್ಕಿ ಹುಡುಕಿ ಕ್ರೂರವಾಗಿ ಕೊಲ್ಲಲಾಯಿತು. ಮೊರಾರ್ಜಿ ದೇಸಾಯಿ ಪಾಕಿಸ್ತಾನದೊಂದಿಗೆ ಶಾಂತಿ ಸಂಬಂಧಗಳನ್ನು ಬೆಳೆಸಲು ಅವಿರತ ಪ್ರಯತ್ನ ಪಟ್ಟರು ಎಂದು ಬಿಂಬಿಸಲಾಯಿತು. ಪಾಕಿಸ್ತಾನ ಮೊರಾರ್ಜಿಯ ಸಹಾಯವನ್ನು ಮರೆಯಲಿಲ್ಲ, ಇದಕ್ಕೆ ಪೂರಕವೆಂಬಂತೆ, ಪಾಕಿಸ್ತಾನ ಸರಕಾರ ಮೊರಾರ್ಜಿಗೆ ನಿಶಾನ್-ಎ-ಪಾಕಿಸ್ತಾನ್ ಪ್ರಶಸ್ತಿ ನೀಡಿತು. ನಿಶಾನ್-ಎ-ಪಾಕಿಸ್ತಾನ್, ಪಾಕಿಸ್ತಾನದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ. ಪಾಕಿಸ್ತಾನದ ರಾಷ್ಟ್ರೀಯ ಹಿತಾಸಕ್ತಿಗೆ ಅತ್ಯುನ್ನತ ವಿಶಿಷ್ಟ ಸೇವೆ ಸಲ್ಲಿಸಿದವರಿಗೆ ಇದನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು ಪಾಕಿಸ್ತಾನದ ಪ್ರಜೆಗಳು ಮತ್ತು ವಿದೇಶಿಯರು ಸೇರಿದಂತೆ ಸರಕಾರಿ ಅಧಿಕಾರಿಗಳಿಗೆ ಹಾಗೂ ನಾಗರಿಕರಿಗೆ ನೀಡಲಾಗುತ್ತದೆ.

ಪ್ರಧಾನಮಂತ್ರಿಯವರು ದೇಶದ ಅತ್ಯಂತ ಸೂಕ್ಷ್ಮ ಮಾಹಿತಿಗಳ ಪಾಲಕರು. ಅವರ ಮಾತು ಮತ್ತು ನಿರ್ಧಾರಗಳು ದೇಶದ ಭದ್ರತೆಯನ್ನು ಬಲಪಡಿಸಬಹುದು ಅಥವಾ ದುರ್ಬಲಗೊಳಿಸಬಹುದು. ಒಂದು ಸಣ್ಣ ತಪ್ಪು ನಿರ್ಧಾರ ಅಥವಾ ಅಜಾಗರೂಕ ಹೇಳಿಕೆ ದೇಶದ ಭದ್ರತೆಗೆ ದೊಡ್ಡ ಹಾನಿ ಮಾಡಬಹುದು. ನಾಯಕತ್ವದ ಮಟ್ಟದಲ್ಲಿ ಮಾತನಾಡುವಾಗ ಅತ್ಯಂತ ಎಚ್ಚರಿಕೆ ಅಗತ್ಯ. ಒಂದು ತಪ್ಪಾದ ಹೇಳಿಕೆ ಅಥವಾ ಅಜಾಗರೂಕ ಮಾತು ಶತ್ರು ರಾಷ್ಟ್ರಗಳಿಗೆ ಎಚ್ಚರಿಕೆಯ ಸೂಚನೆಯಾ ಗಬಹುದು. ಇಂತಹ ಸಂದರ್ಭಗಳಲ್ಲಿ ಶತ್ರು ರಾಷ್ಟ್ರಗಳು ತಮ್ಮೊಳಗಿನ ಶಂಕಿತರನ್ನು ಹುಡುಕಲು ಪ್ರಾರಂಭಿಸಬಹುದು. ಇದರಿಂದ ಗುಪ್ತಚರರ ಜೀವಕ್ಕೆ ಅಪಾಯ ಉಂಟಾಗಬಹುದು. ಪಕ್ಕದ ರಾಷ್ಟ್ರಗಳೊಂದಿಗೆ ಸಂಬಂಧಗಳಲ್ಲಿ ಸ್ನೇಹವೂ ಅಗತ್ಯ. ಆದರೆ, ಅತಿಯಾದ ವಿಶ್ವಾಸ ಅಪಾಯಕಾರಿಯೂ ಆಗಬಹುದು. ಪಾಕಿಸ್ತಾನದಂತಹ ರಾಷ್ಟ್ರಗಳೊಂದಿಗೆ ರಾಜಕೀಯ ಸಂಬಂಧಗಳು ಸದಾ ಸಂಕೀರ್ಣವಾಗಿವೆ. ಒಂದು ಕಡೆ ಮಾತುಕತೆ, ಮತ್ತೊಂದು ಕಡೆ ಎಚ್ಚರಿಕೆ- ಈ ಎರಡರ ನಡುವೆ ಸಮತೋಲನ ಕಾಪಾಡು ವುದು ನಾಯಕತ್ವದ ಪ್ರಮುಖ ಕರ್ತವ್ಯ.

ಇಂದಿನ ಜಗತ್ತಿನಲ್ಲಿ ಯುದ್ಧಗಳು ಕೇವಲ ಗನ್ ಮತ್ತು ಟ್ಯಾಂಕ್‌ಗಳ ಮೂಲಕ ನಡೆಯುವುದಿಲ್ಲ, ಮಾಹಿತಿ ಯುದ್ಧ, ಸೈಬರ್ ದಾಳಿ ಮತ್ತು ಗುಪ್ತಚರ ಕಾರ್ಯಾಚರಣೆಗಳು ಪ್ರಮುಖ ಪಾತ್ರವಹಿಸುತ್ತಿವೆ. ಗುಪ್ತಚರ ಸಂಸ್ಥೆಗಳು ಬಲಿಷ್ಠವಾಗಿರಬೇಕು. ಸರಕಾರಗಳು ಅವರಿಗೆ ಅಗತ್ಯವಿರುವ ಸ್ವಾತಂತ್ರ್ಯ ಮತ್ತು ಸಂಪನ್ಮೂಲಗಳನ್ನು ನೀಡಬೇಕು. ದೇಶದ ಭದ್ರತೆ ಒಂದು ದಿನದಲ್ಲಿ ನಿರ್ಮಾಣವಾಗುವುದಿಲ್ಲ, ಅದು ದಶಕಗಳ ಪರಿಶ್ರಮ, ತ್ಯಾಗ ಮತ್ತು ಸರಿಯಾದ ನಾಯಕತ್ವದ ಫಲಿತಾಂಶ. ಪಕ್ಕದ ರಾಷ್ಟ್ರಗಳೊಂದಿಗೆ ಇರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಬಲಿಷ್ಠ ಗುಪ್ತಚರ ವ್ಯವಸ್ಥೆ, ಜವಾಬ್ದಾರಿಯುತ ನಾಯಕತ್ವ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಮೇಲೆ ಅಚಲ ನಿಷ್ಠೆ ಅತ್ಯಂತ ಅಗತ್ಯ. ಈ ಐತಿಹಾಸಿಕ ಪ್ರಮಾದಗಳು ನಮಗೆ ನೀಡುವ ಪಾಠ ಒಂದೇ- ದೇಶದ ಭದ್ರತೆ ಎಂಬುದು ಮಾತಿನ ವಿಷಯವಲ್ಲ, ಅದು ಜವಾಬ್ದಾರಿಯ ವಿಷಯ. ನಾಯಕತ್ವದ ಒಂದು ಮಾತು ದೇಶವನ್ನು ಮುನ್ನಡೆಸಬಹುದು, ಅದೇ ಮಾತು ದೇಶವನ್ನು ಹಿಂದೆ ತಳ್ಳಬಹುದು.

ವೈಭವ್ ಸೂರ್ಯವಂಶಿ ನೀತಿ-ಹೊಡೆದು ಆಳಬೇಕು

ಸಿನಿಗನ್ನಡ

ರಾಜೇಂದ್ರಸಿಂಗ್ ಬಾಬು ಹೊಸ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ದಶಕಗಳ ಹಿಂದೆ ಈ ಮಾತಿಗೆ ಚಿತ್ರಪ್ರೇಮಿಗಳಿಗೆ ರೋಮಾಂಚನಗೊಳಿಸುವ ತಾಕತ್ತು ಇತ್ತು. ಆದರೆ, ಈಗ ಅದೇ ಮಾತು ಹೇಳಿದರೆ, ನಿರ್ದೇಶನ ಮಾಡ್ತಾರೆ. ಆದ್ರೆ ನಿಜವಾಗ್ಲೂ ಮಾಡ್ತಾರಾ, ಮಾಡಿದ್ರೆ ಕಂಪ್ಲೀಟ್ ಮಾಡ್ತಾರಾ, ಮಾಡಿದ್ರೆ ರಿಲೀಸ್ ಮಾಡ್ತಾರಾ ಅನ್ನೋ ಪ್ರಶ್ನೆ ಸಿನಿಪ್ರೇಮಿಗಳಿಗೆ ಬಂದರೆ ತಪ್ಪಿಲ್ಲ. ಯಾಕಂದ್ರೆ, ಸಿಂಗ್ ಬಾಬು ಅಭಿಮಾನಿಗಳಿಗೆ ಇತ್ತೀಚಿನ ವರ್ಷಗಳಲ್ಲಿ ಖುಷಿಪಡುವ ಅವಕಾಶವನ್ನೇ ಕೊಟ್ಟಿಲ್ಲ. ಕುರಿ, ಕೋತಿ, ಕತ್ತೆಗಳ ನಂತರ ಸಿಂಗ್ ಬಾಬು ಅವರಿಗೆ ಪ್ರೇಕ್ಷಕರ ನಿರೀಕ್ಷೆಯನ್ನು ತಲುಪಲಾಗಿಲ್ಲ. ತಮ್ಮ ಪುತ್ರ ಆದಿತ್ಯ ಅವರೊಂದಿಗೆ ಒಂದಷ್ಟು ಪ್ರಯತ್ನ ಮಾಡಿದರೂ ಅದಾವುದೂ ಹಿಡಿಯಲಿಲ್ಲ. ಜತೆಗೆ ಉಪೇಂದ್ರ ಮತ್ತು ರಮ್ಯಾ ಅವರಿದ್ದ ಭೀಮೂಸ್ ಬ್ಯಾಂಗ್ ಬ್ಯಾಂಗ್ ಅನ್ನೋ ಸಿನಿಮಾ ರಕ್ತ ಕಾಶ್ಮೀರ ಅನ್ನೋ ಹೆಸರಲ್ಲಿ ಬಿಡುಗಡೆ ಆಗಿ ಡಬ್ಬಾ ಸೇರಿಕೊಂಡಿದೆ. ಜತೆಗೆ ಇತ್ತೀಚಿನ ದಿನಗಳಲ್ಲಿ ಅಂದಿನ ಕಾಲದ ಸಿಂಗ್ ಬಾಬು ಅವರ ನಿರ್ದೇಶನ ದ ಝಲಕ್ ಸಿನಿಪ್ರಿಯರಿಗೆ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಕಾಣಿಸುತ್ತಿಲ್ಲ. ಹಾಗಂತ ಬಾಬು ಡಲ್ ಆಗಿದ್ದಾರೆ ಎಂದರ್ಥ ಅಲ್ಲ. ಆದರೆ, ಅವರ ಕಾನ್ಸೆಪ್ಟ್‌ಗಳು ಇಂದಿನ ಪೀಳಿಗೆಯ ಚಿತ್ರಗಳಿಗೆ ಮ್ಯಾಚ್ ಆಗುತ್ತಿಲ್ಲ. ಸುನಿಲ್ ಕುಮಾರ್ ದೇಸಾಯಿ ಸೇರಿದಂತೆ ಅನೇಕ ಹಿರಿಯ ನಿರ್ದೇಶಕರು ಎದುರಿಸುತ್ತಿರೋ ಸವಾಲು ಇದು. ಇಂಥ ಸಂದರ್ಭದಲ್ಲಿ ಆಗಾಗ ಸಿಂಗ್ ಬಾಬು ಮತ್ತೊಂದು ಸಿನಿಮಾ ಮಾಡುತ್ತಿದ್ದಾರೆ ಅನ್ನೋ ಸುದ್ದಿ ಬರ್ತಾ ಇರುತ್ತೆ. ಈಗಲೂ ಬಂದಿದೆ. ಚಿತ್ರದ ಬಗ್ಗೆ ಸದ್ಯಕ್ಕೆ ಹೆಚ್ಚಿನ ಮಾಹಿತಿ ಇಲ್ಲ. ಆದರೆ, ಚಿತ್ರ ಅನೌನ್ಸ್ ಆಗಿರೋದನ್ನ ನೋಡಿ ಕೆಲವರು ಸಿಂಗ್ ಬಾಬು ಹೊಸ ಚಿತ್ರ ಬರ್ತಾ ಇದೆ ಅಂತ ಥ್ರಿಲ್ ಆಗಿದ್ದರೆ, ಇನ್ನು ಕೆಲವರು, ಹೌದಾ, ಮಾಡಿ ರಿಲೀಸ್ ಮಾಡ್ಲಿ, ಆಮೇಲೆ ಮಾತಾಡೋಣ ಅನ್ನೋ ವೈರಾಗ್ಯವನ್ನೂ ತೋರಿಸುತ್ತಿರೋದು ಸುಳ್ಳಲ್ಲ.

ಲೂಸ್ ಟಾಕ್ ▶▶ ವೈಭವ್ ಸೂರ್ಯವಂಶಿ

- **ಏನಪ್ಪಾ, ಎಸ್‌ಎಸ್‌ಎಲ್‌ಸಿ ಎಕ್ಸಾಮ್ ಡ್ರಾಪ್ ಮಾಡಿ ಬಂದು ಐಪಿಎಲ್ ಆಡ್ತಾ ಇದ್ದೀಯಂತೆ?**
- ನಂಗೀಗ ಐಪಿಎಲ್ ಟೀಮಿಂದ ನನ್ನ ಡ್ರಾಪ್ ಮಾಡಬಾರದು ಅನ್ನೋದೊಂದೇ ಗುರಿ
- **ಏನಪ್ಪಾ ಓದೋ ವಯಸ್ಸಲ್ಲಿ ಹಿಂಗೆಲ್ಲಾ ಮಾತಾಡ್ತೀಯ?**
- ಅಯ್ಯೋ ಓದಿ ಯಾರ್ ಉದ್ಧಾರ ಆಗಿದ್ದಾರೆ ಬಿಡ್ರೀ..
- **ನಿನ್ನ ಬಾಯಲ್ಲಾದ್ರೆ ಈ ಮಾತು ಕೇಳೋಕೆ ಚೆನ್ನಾಗಿರುತ್ತೆ. ಸರಿ ಅದೇನು ಎಲ್ಲ ಬಾಲು ಹೊಡೆಯೋಕೆ ಹೋಗ್ತೀಯಲ್ಲ ನೀನು?**
- 'ಹೊಡೆದು' ಆಳಬೇಕು ಅನ್ನೋ ನೀತಿ ನನ್ನದು
- **ದೊಡ್ಡ ದೊಡ್ಡ ಬೋಲರ್ಸ್‌ಗೆಲ್ಲ ಸರಿಯಾಗಿ ಬಾರಿಸ್ತೀಯ. ಅವರ ಬೋಲಿಂಗ್ ನಿನ್ನ ಮುಂದೆ ಏನೂ ಅಲ್ಲ ಅಲ್ವಾ?**
- ರೀ, ನಾನು ಹಂಗೆಲ್ಲಾ ಮಾತಾಡಲ್ಲ. ಯಾಕಂದ್ರೆ ನಾನು ಲೂಸ್ ಶಾಟ್ಸ್ ಹೊಡೆಯೊಲ್ಲ, ಈ ಸಂದರ್ಶನದ ಹೆಸರಿನ ಥರ ಲೂಸ್ ಟಾಕ್ ಮಾಡಲ್ಲ
- **ಅದ್ಸರಿ, ನಿನ್ನ ಫಿಟ್ನೆಸ್ ರಹಸ್ಯ ಏನು ?**
- ಗುಂಡ್ ಗುಂಡಗಿದ್ದೀನಿ ಅಂತ ಆಡಿಕೊಳ್ತಾ ಇದ್ದೀರಾ? ಏನ್ ಮಾಡೋದ್ರಿ? ನಾನು ಊಟದ ವಿಷಯದಲ್ಲೂ ಒಳ್ಳೆ ಬ್ಯಾಟ್ಸ್ ಮನ್ನು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಮರಿಖೇಮು ಕಾಲೇಜು ಸೇರ್ಕೊಂಡ. ಅಪ್ಪ ಇಡೀ ವರ್ಷಕ್ಕೆಂದು ಕಳಿಸಿದ ದುಡ್ಡು ಮೂರೇ ತಿಂಗಳಿಗೆ ಖಾಲಿ ಆಯ್ತು, ದುಡ್ಡಿಗೇನು ಮಾಡೋದು? ಅಪ್ಪ ಖೇಮುಗೆ ಕಾಲ್ ಮಾಡಿದ ಮರಿಖೇಮು 'ಅಪ್ಪಾ ನೀನು ನಂಬಲ್ಲ, ನಮ್ಮ ಕಾಲೇಜಲ್ಲಿ ನಾಯಿಗಳಿಗೆ ಮಾತೋಡೋದನ್ನ ಕಲಿಸುತ್ತಾರಂತೆ 'ಅಂದ. ಆಶ್ಚರ್ಯಗೊಂಡ ಖೇಮು 'ಹೌದಾ ಹಂಗಾದ್ರೆ ನಮ್ಮ ಮೋತಿನೂ ಅಲ್ಲಿಗೆ ಸೇರಿಸಬೇಕಲ್ಲ ಹೆಂಗೆ?' ಅಂದ. ಅದಕ್ಕೆ ಮರಿಖೇಮು 'ವೆರಿಸಿಂಪಲ್ ಒಂದು ಲಕ್ಷ ಕಳಿಸಿ, ನಾನು ಅಡ್ಮಿಷನ್ ಮಾಡಿಸ್ತೀನಿ' ಅಂದ. ಸರಿ ನಾಯಿ ಬಂತು. ಒಂದು ಲಕ್ಷನೂ ಬಂತು. ಮತ್ತೆ ಮೂರು ತಿಂಗಳಿಗೆ ದುಡ್ಡು ಖಾಲಿ ಆಯ್ತು. ಮತ್ತೆ ಮರಿಖೇಮು ಮನೆಗೆ ಕಾಲ್ ಮಾಡಿದ 'ಅಪ್ಪಾ ಈಗ ಹೊಸ ಸ್ಕೀಮ್ ಬಂದಿದೆ. ನಾಯಿಗೆ ಓದೋದನ್ನೂ ಕಲಿಸ್ತಾರಂತೆ' ಖೇಮುಗೆ ಮತ್ತೆ ಆಶ್ಚರ್ಯ, 'ನಮ್ಮ ಮೋತಿಗೂ ಓದೋದು ಕಲಿಸಬೇಕಲ್ಲ' ಅಂದ. 'ಸರಿ ಅದಕ್ಕೇನಂತೆ 2 ಲಕ್ಷ ಕಳಿಸು, ನಾನು ಅರೇಂಜ್ ಮಾಡ್ತೀನಿ' ಅಂದ ಮರಿಖೇಮು. ಸರಿ ಮರಿಖೇಮುಗೆ 2 ಲಕ್ಷ ತಲುಪಿತು. ಕೋರ್ಸ್ ಮುಗೀತಾ ಬಂತು. ಮನೆಗೆ ಹೋಗೋ ಸಮಯ ಮರಿಖೇಮುಗೆ ಗೊತ್ತಿತ್ತು. ಮೋತಿಗೆ ಮಾತಾಡೋಕೂ ಬರಲ್ಲ, ಓದೋಕೂ ಬರಲ್ಲ ಅಂತ ಗೊತ್ತಾದ್ರೆ, ನಮ್ಮಪ್ಪ ನನ್ನ ಸುಮ್ಮ ಬಿಡಲ್ಲ ಅಂತ. ಹಾಗಾಗಿ ಆ ನಾಯಿನ ಗುಂಡಿಟ್ಟು ಸಾಯಿಸಿಬಿಟ್ಟು ಮನೆಗೆ ಬಂದ. ಖೇಮು ಫುಲ್ ಎಕ್ಸೈಟೆಡ್ ಆಗಿ ಮೋತಿ ಮಾತಾಡೋದನ್ನ, ಓದೋದನ್ನ ನೋಡೋಕೆ ಕಾಯ್ತಾ ಇದ್ದ. ಮರಿಖೇಮು ಬಂದವನೇ ಸಪ್ಪೆ ಮುಖ ಹಾಕಿಕೊಂಡು ಹೇಳಲು ಶುರು ಮಾಡಿದ 'ಅಪ್ಪ ನಿಂಗೊಂದು ಬ್ಯಾಡ್ ನ್ಯೂಸ್.' ಮೊನ್ನೆ ನಾನು ಕಾಲೇಜಿನಿಂದ ನನ್ನ ರೂಮ್ಗೆ ಬಂದಾಗ ನಮ್ಮ ಮೋತಿ ಎಕನಾಮಿಕ್ ಟೈಮ್ಸ್ ಓದ್ತಾ ಇತ್ತು. ನನ್ನನ್ನು ನೋಡಿದ ತಕ್ಷಣ 'ನಿನ್ನತ್ರ ಏನೋ ಕೇಳೋದು ಮರೆತಿದ್ದೆ. ನಿಮ್ಮಪ್ಪ ಆ ಪಕ್ಕದ ಮನೆ ಪದ್ಮಾ ಆಂಟಿ ಜತೆ ಇನ್ನೂ ಸಂಬಂಧ ಇಟ್ಕೊಂಡಿದಾನಾ?' ಅಂತ ಕೇಳ್ತು. ಖೇಮು ಗಾಬರಿಯಾಗಿ 'ಅಯ್ಯೋ, ಅದು ನಿಮ್ಮಮ್ಮನ ಜತೆ ಮಾತಾಡೋಕೆ ಮುಂಚೆ ಅದನ್ನು ಗುಂಡಿಟ್ಟು ಸಾಯಿಸಬೇಕಿತ್ತು' ಅಂದ. ಅದಕ್ಕೆ ಮರಿಖೇಮು ಹೇಳಿದ 'ನಾನಾಗಲೇ ಆ ಕೆಲಸ ಮಾಡಿದೀನಿ ಅಪ್ಪಾ. ಎಷ್ಟೇ ಆದರೂ ನಿನ್ನ ಮಗ ಅಲ್ಲವೇ?!'

ಲೈನ್ ಮ್ಯಾನ್

- **ಸಿಲಿಂಡರ್ ಸತ್ಯ**
- 'ಮಗಾ ಹೊಸ ಸ್ಕೂಟರ್ ತಗೊಂಡೆ'
'ಹೌದಾ, ಹೆಂಗಿದೆ? ಮುಂದೆ ಎಷ್ಟ್ ಜಾಗ ಇದೆ? ಸಿಲಿಂಡರ್ ಇಡಬಹುದಾ?'
'ಇಡಬಹುದು, ಸಿಲಿಂಡರ್ ಸಿಕ್ರೆ...'
- **ಸರಳ ಸತ್ಯ**
- ಕೆಲವರಿಗೆ ಸಿಗೋ ಬೆಲೆ ಏನೇ ತಿಪ್ಪರಲಾಗ ಹೊಡೆದ್ರೂ, ಬೇರೆಯವರಿಗೆ ಸಿಗಲ್ಲ.. ಯಾಕಂದ್ರೆ, ಗಾಡಿ 1 ಲೀಟರ್ ಪೆಟ್ರೋಲ್‌ಗೆ ಎಷ್ಟೇ kilometer ಓಡಿದ್ರೂ, ಅದನ್ನ mile-age ಅಂತಾನೇ ಅನ್ನೋದು.
- **ಕುಶಲೋಪರಿ**
- ಅವ್ನು 'ಹಾಯ್' ಅಂತ ಮಾತಾಡಿಸ್ತಾನೆ, ನಾನು, 'ಲೋ' ಅಂತ ಮಾತಾಡಿಸ್ತಿನಿ. ಯಾಕಂದ್ರೆ, ಅವ್ನು 'ಹೈ' ಲೆವೆಲ್, ನಾನು 'ಲೋ' ಲೆವೆಲ್
- **ಪ್ರಶಸ್ತಿ ಸಮಯ**
- ನೀವು ಪ್ರಶಸ್ತಿ ಸಮಾರಂಭಕ್ಕೆ ಬರ್ತೀರ ಇಲ್ವಾ ಅನ್ನೋದ್ರ ಮೇಲೆ ನಿಮಗೆ ಪ್ರಶಸ್ತಿ ಸಿಗುತ್ತಾ ಇಲ್ವಾ ಅನ್ನೋದು ಡಿಪೆಂಡ್ ಆಗುತ್ತೆ.
- **ಮಳೆ ಬಂದಾಗ ನೆನಪಾಗುವ ಹಾಡಿನ ಧಾಟಿ**
- ವರುಣ ರಾಗ
- **ಮೂರೊತ್ತೂ ನಾನ್ ವೆಜ್ ತಿನ್ನುವವನದು**
- 'ಪೀಸ್' ಫುಲ್ ಲೈಫ್
- **ಯಾವುದಕ್ಕೂ ಇರಲಿ ಅಂತ ಇಟ್ಟುಕೊಳ್ಳುವ ಒಂದು ಜತೆ ಎಕ್ಸ್ಟ್ರಾ ಚಪ್ಪಲಿ**
- ಸ್ಟೆಪ್‌ನಿ
- **''ಪ್ರೊಫೆಷನಲ್'' ಬೈಗುಳಗಳು**
- ಅಡುಗೆ ಭಟ್ಟ: 'ನನ್ನತ್ರ ನಿನ್ ಬೇಳೆ ಬೇಯೊಲ್ಲ'
- ಮೇಷ್ಟ್ರು: 'ಇವತ್ ನಿಂಗೆ ಸರಿಯಾಗಿ ಪಾಠ ಕಲಿಸ್ತೀನಿ'
- ಡಾಕ್ಟರ್: 'ನಿಂಗೇನ್ ಬಂದಿರೋದು, ದೊಡ್ ರೋಗ'
- ಸಾಹಿತಿ: 'ಬರ್ಕೊಡ್ತೀನಿ', ನೀನ್ ಉದ್ಧಾರ ಆಗಲ್ಲ
- ಪೋಸ್ಟ್ ಮನ್: 'ನನ್ ತಂಟೆಗ್ ಬಂದ್ರೆ ಅಡ್ರೆಸ್ಸಿಲ್ಲದಂಗ್ ಹೋಗ್ಬಿಡ್ತೀಯಾ'
- ಪೊಲೀಸ್: 'ಅವ್ನ್ ಬಿಡಿ ಹೆಂಗ್ ಬೇಕಾದ್ರೂ ಬಯ್ಯಬಹುದು. ಅವ್ರನ್ನ ಹೇಳೋರಿಲ್ಲ, ಕೇಳೋರಿಲ್ಲ.'

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:86

ಸಮಾಚಾರ ಸಣ್ಣದಲ್ಲ

ಅಮರನಾಥ ಯಾತ್ರೆ: 15ರಿಂದ ನೋಂದಣಿ

ದೆಹಲಿ: ಈ ವರ್ಷದ ಅಮರನಾಥ ಯಾತ್ರೆಗೆ ದೇಶಾದ್ಯಂತ ಮುಂಗಡ ನೋಂದಣಿ ಪ್ರಕ್ರಿಯೆ ಏ.15ರಿಂದ ಆರಂಭ. ಶ್ರೀ ಅಮರನಾಥ ಯಾತ್ರೆ ಮಂಡಳಿ 554 ಬ್ಯಾಂಕ್ ಶಾಖೆಗಳಲ್ಲಿ ನೋಂದಣಿ ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಘೋಷಿಸಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ ಎಂಬ ಕ್ರಮವನ್ನೂ ಅನುಸರಿಸುತ್ತದೆ. 13ರಿಂದ 70 ವರ್ಷ ವಯೋಮಿತಿಯವರು ಮಾತ್ರ ಯಾತ್ರೆಗೆ ನೋಂದಣಿ ಮಾಡಿಕೊಳ್ಳಬಹುದು. 6 ವಾರ ದಾಟಿರುವ ಗರ್ಭಿಣಿಯರಿಗೂ ತೀರ್ಥಯಾತ್ರೆ ಕೈಗೊಳ್ಳಲು ಅನುಮತಿ ಇಲ್ಲ. ಆಧಾರ್ ಕಾರ್ಡ್‌ನಲ್ಲಿ ಲಭ್ಯವಿರುವ ಬಯೋಮೆಟ್ರಿಕ್ ದೃಢೀಕರಣ ಯಾತ್ರಿಕರಿಗೆ ಕಡ್ಡಾಯ.

1ಕೋಟಿ ಹಸಿರು ಸೀರೆ: ತೆಲಂಗಾಣ ಉಡುಗೊರೆ

ಹೈದರಾಬಾದ್: ಉಚಿತ ಸೀರೆ ವಿತರಣೆಗಾಗಿ ಈ ಬಾರಿ ಗಿಳಿ ಹಸಿರು ಬಣ್ಣದ ಮತ್ತು ಕೆಂಪು ಬಾರ್ಡರ್ ಇರುವ 1 ಕೋಟಿ ಸೀರೆಗಳನ್ನು ಖರೀದಿಸಲು ತೆಲಂಗಾಣ ಸರಕಾರ ನಿರ್ಧರಿಸಿದೆ. ಇದಕ್ಕಾಗಿ 450 ಕೋಟಿ ರು. ವೆಚ್ಚ ಮಾಡಲೂ ಮುಂದಾಗಿದೆ. ಉತ್ಪಾದನೆ ಆದೇಶವನ್ನು ಟೆಸ್ಕೊ ಕಂಪನಿಗೆ ನೀಡಲಾಗಿದೆ. ಕೋಟಿ ಮಹಿಳೆಯರಿಗೆ ಉಚಿತವಾಗಿ ನೀಡುವ ಎಲ್ಲಾ ಸೀರೆಗಳೂ ಒಂದೇ ವಿನ್ಯಾಸದಲ್ಲಿರಬೇಕು ಎಂದೂ ಸಿಎಂ ರೇವಂತ್ ರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಇಂದಿರಾ ಗಾಂಧಿ ಜನ್ಮದಿನವಾದ 2025ರ ನ.19ರಂದು 86 ಲಕ್ಷ ನೀಲಿ ಬಣ್ಣದ ಸೀರೆಗಳನ್ನು ವಿತರಿಸಲಾಗಿತ್ತು. ಈ ವರ್ಷವೂ ಅದೇ ದಿನಾಂಕದಂದು ಕೋಟಿ ಮಹಿಳೆಯರುಗೆ ಸೀರೆ ವಿತರಿಸಲು ನಿರ್ಧರಿಸಿರುವ ರೇವಂತ್ ರೆಡ್ಡಿ, ಅಕ್ಟೋಬರ್ ವೇಳೆಗೆ ಸೀರೆಗಳ ನೇಯ್ಗೆ ಕಾಯ ಪೂರ್ಣಗೊಳಿಸಲು ಸೂಚನೆ ನೀಡಿದ್ದಾರೆ.

ವನತಾರಾದಿಂದ ವನ್ಯಜೀವಿ ವಿವಿ

ಜಾಮನಗರ್: ರಿಲಯನ್ಸ್ ಸಮೂಹ ಕಂಪನಿಗಳ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ಸಂಸ್ಥಾಪಿಸಿರುವ 'ವನತಾರಾ' ಸಂಸ್ಥೆ ವಿಶ್ವದ ಮೊದಲ 'ಗ್ಲೋಬಲ್ ವೈಲ್ಡ್‌ಲೈಫ್ ಮತ್ತು ವೆಟರ್ನರಿ ಸೈನ್ಸ್ ಯೂನಿವರ್ಸಿಟಿ'(ಜಾಗತಿಕ ವನ್ಯಜೀವಿ ಮತ್ತು ಪಶು ಸಂಗೋಪನಾ ವಿಶ್ವವಿದ್ಯಾಲಯ)ವನ್ನು ಆರಂಭಿಸಿದೆ. ವನ್ಯಪ್ರಾಣಿಗಳ ಕಲ್ಯಾಣ, ವೈಜ್ಞಾನಿಕ ಪ್ರಗತಿ ಮತ್ತು ವನ್ಯಜೀವಿ ಸಂರಕ್ಷಣೆ ವನತಾರಾ ವಿವಿ ಉದ್ದೇಶವಾಗಿದೆ. ಆಧುನಿಕ ಗುರುಕುಲ ಪದ್ಧತಿಯಡಿ ಸ್ಪಷ್ಟ ಉದ್ದೇಶ ಆಧಾರಿತ ವಿಶ್ವವಿದ್ಯಾಲಯವಾಗಿ ರೂಪುಗೊಳ್ಳುವ ಸಂಕಲ್ಪದೊಂದಿಗೆ ಈ ವಿಶ್ವವಿದ್ಯಾಲಯ ಆರಂಭಿಸಲಾಗಿದೆ. ಭಾರತವನ್ನು ವನ್ಯಜೀವಿ ಮತ್ತು ಪಶುವೈದ್ಯಕೀಯ ಶಿಕ್ಷಣದ ಜಾಗತಿಕ ಕೇಂದ್ರವಾಗಿಸುವ ಗುರಿ ಇದೆ. ಅಲ್ಲದೇ ಪಶು ವೈದ್ಯಕೀಯ ಔಷಧಗಳ ಸಂಶೋಧನೆ, ವನ್ಯಜೀವಿಗಳ ಆರೈಕೆಯಲ್ಲಿ ತೊಡಗಿಸಿಕೊಳ್ಳಲು ಬಯಸುವ ಯುವ ಪ್ರತಿಭೆಗಳನ್ನು ರೂಪಿಸುವುದೇ ಸಂಸ್ಥೆಯ ಗುರಿಯಾಗಿದೆ. ಪದವಿ ಪೂರ್ವ, ಪದವಿ, ಸ್ನಾತಕೋತ್ತರ, ಫೆಲೋಷಿಪ್ ಶಿಕ್ಷಣ ಲಭ್ಯವಿರುತ್ತದೆ ಎಂದು ಅನಂತ್ ಅಂಬಾನಿ ಹೇಳಿದ್ದಾರೆ.

ವಂದೇಭಾರತ್ ರೈಲಿಗೆ ಪಾಲಕ್ಕಾಡಲ್ಲಿ ಕಲ್ಲೆಸೆತ

ಪಾಲಕ್ಕಾಡ್: ಕೇರಳ ರಾಜ್ಯದ ಎರ್ನಾಕುಲಂ ನಗರದಿಂದ ಬೆಂಗಳೂರಿನತ್ತ ಸಂಚರಿಸುತ್ತಿದ್ದ ವಂದೇಭಾರತ್ ವೇಗದ ರೈಲಿಗೆ ಶುಕ್ರವಾರ ಸಂಜೆ 4.30ರ ವೇಳೆ ಪಾಲಕ್ಕಾಡ್ ಜಿಲ್ಲೆಯ ಪರಾಳಿ ಎಂಬಲ್ಲಿ ದುಷ್ಕರ್ಮಿಗಳು ಕಲ್ಲೆಸೆದಿದ್ದಾರೆ. ಪರಿಣಾಮ ವಂದೇಭಾರತ್‌ನ ಬೋಗಿಯೊಂದರ ಕಿಟಕಿ ಗಾಜು ಜಖಂಗೊಂಡಿದ್ದು, ಅದರ ಪಕ್ಕದ ಆಸನದಲ್ಲಿದ್ದ ಪ್ರಯಾಣಿಕರು ಆಘಾತಕ್ಕೊಳಗಾಗಿದ್ದಾರೆ. ಸುದೈವವಶಾತ್ ಯಾವುದೇ ಪ್ರಯಾಣಿಕರಿಗೂ ಗಾಯವಾಗಿಲ್ಲ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಭಾರತೀಯ ರೈಲ್ವೆಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

{ **ಅಭಿಷೇಕ್ ಬ್ಯಾನರ್ಜಿ** } ಟಿಎಂಸಿ ನಾಯಕ

ಪಶ್ಚಿಮ ಬಂಗಾಳ ಚುನಾವಣೆ ಪ್ರಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಪದೇ ಪದೇ ಒಳನುಸುಳುವಿಕೆ ವಿಷಯ ಪ್ರಸ್ತಾಪಿಸುತ್ತಿದ್ದಾರೆ. ಹಾಗಿದ್ದರೆ ಸರಕಾರ ಆಶ್ರಯ ನೀಡಿರುವ ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ನುಸುಳುಕೋರರೆ? ಅಲ್ಲವೇ? ಪಾಕ್ ಉಗ್ರರು ದೇಶಕ್ಕೆ ನುಸುಳಿ ದೆಹಲಿಯಲ್ಲಿ 10 ಜನ, ಪಹಲ್ಗಾಮ್‌ನಲ್ಲಿ 26 ಜನರನ್ನು ಕೊಂದಿದ್ದು ಹೇಗೆ?

ಫೆಸಿಫಿಕ್ ಮಹಾಸಗರದಲ್ಲಿ ಸುರಕ್ಷಿತವಾಗಿ ಇಳಿದ ಒರಿಯಾನ್ ಕ್ಯಾಪ್ಸೂಲ್ | ನಿಗದಿತ ಕಾರ್ಯಕ್ರಮ ಪೂರ್ಣ | 4 ಗಗನಯಾತ್ರಿಗಳೂ ಸುರಕ್ಷಿತ ಧರೆಗೆ

ಭುವಿಗೆ ಮರಳಿದ ಆರ್ಟೆಮಿಸ್-2 ತಂಡ

ಕ್ಯಾಲಿಫೋರ್ನಿಯ: 5 ದಶಕಗಳ ದೀರ್ಘ ಕಾಯುವಿಕೆ ನಂತರ ಚಂದ್ರನತ್ತ ಪ್ರಯಾಣ ಬೆಳೆಸಿ ಸಮೀಪದಿಂದ ಸುತ್ತು ಹಾಕಿ ಅಧ್ಯಯನ ಪೂರ್ಣಗೊಳಿಸಿದ ನಾಸಾದ 'ಆರ್ಟೆಮಿಸ್-2' ಗಗನನೌಕೆಯಲ್ಲಿದ್ದ 4 ಗಗನಯಾತ್ರಿಗಳ ತಂಡ ಯಶಸ್ವಿಯಾಗಿ ಭೂಮಿಗೆ ಮರಳಿದೆ. 4 ಗಗನಯಾತ್ರಿಗಳಿದ್ದ 'ಒರಿಯಾನ್ ಕ್ಯಾಪ್ಸೂಲ್' ಏ.10ರ ರಾತ್ರಿ 8 ಗಂಟೆ 7 ನಿಮಿಷದಲ್ಲಿ(ಭಾರತೀಯ ಕಾಲಮಾನ ಏ.11ರ ಬೆಳಗ್ಗೆ) ಕ್ಯಾಲಿಫೋರ್ನಿಯ ರಾಜ್ಯದ ಸ್ಯಾನ್ ಡಿಯಾಗೊ ನಗರದ ಕರಾವಳಿಯಲ್ಲಿನ ಪೆಸಿಫಿಕ್ ಮಹಾಸಾಗರದಲ್ಲಿ ಸುರಕ್ಷಿತವಾಗಿ ಇಳಿದಿದೆ.

4 ಗಗನಯಾತ್ರಿಗಳ ತಂಡ ಚಂದ್ರನ ಮೇಲೆ ಇಳಿಯದೇ ಇದ್ದರೂ, ಚಂದ್ರನ ಕಕ್ಷೆಯಲ್ಲಿ ಬಲು ಸಮೀಪದಲ್ಲಿ ಸುತ್ತು ಹಾಕಿ ಭವಿಷ್ಯದ ಮಾನವ ಚಂದ್ರಯಾನ ಯೋಜನೆಗಳಿಗೆ ಪೂರಕವಾದ ಮಹತ್ವದ ಅಧ್ಯಯನವನ್ನು ನಡೆಸಿದೆ, ತಾಂತ್ರಿಕ ಪರಿಶೀಲನೆಗಳನ್ನು ಪೂರ್ಣಗೊಳಿಸಿಎ. ಇದು ಚಂದ್ರನ ಮೇಲೆ ಗಗನಯಾತ್ರಿಗಳನ್ನು ಮತ್ತೆ ಇಳಿಸುವ ನಾಸಾದ ಮಹತ್ವಾಕಾಂಕ್ಷೆಯ ಯೋಜನೆಗೆ ಬಲ ನೀಡಿದೆ.

ಭೂಮಿಗೆ ಸುರಕ್ಷಿತವಾಗಿ ಮರಳಿದ ನಾಲ್ವರೂ ಗಗನಯಾತ್ರಿಗಳನ್ನು ನಾಸಾ ವಿಜ್ಞಾನಿಗಳು ಮತ್ತು ಅಮೆರಿಕದ ನೌಕಾಪಡೆ ತಂಡ ಸಂಭ್ರಮದಿಂದ ಬರಮಾಡಿಕೊಂಡಿತು. ಮುಂದಿನ ದಿನಗಳಲ್ಲಿ ಚಂದ್ರನ ಮೇಲೆ ಮನುಷ್ಯನನ್ನು ಇಳಿಸುವ ಆರ್ಟೆಮಿಸ್-3 ಯೋಜನೆಗೆ ಈಗಿನ 4 ಗಗನಯಾತ್ರಿಗಳ ಪಯಣ ಸುಭದ್ರ ಬುನಾದಿ ಹಾಕಿದಂತಾಗಿದೆ.

ತಂಡದಲ್ಲಿ: ಈ ಬಾರಿ ಆರ್ಟೆಮಿಸ್-2 ಯೋಜನೆಯಡಿ ಪ್ರತಿಷ್ಠಿತ 'ನಾಸಾ' ಸಂಸ್ಥೆಯ ಗಗನಯಾತ್ರಿಗಳಾದ ರೀಡ್ ವೈಸ್‌ಮನ್, ವಿಕ್ಟರ್ ಗ್ಲೋವರ್ ಮತ್ತು ಕ್ರಿಸ್ಟಿನಾ ಕೋಚ್ ಹಾಗೂ 'ಸಿಎಸ್‌ಎ' ಸಂಸ್ಥೆಯ ಗಗನಯಾತ್ರಿ ಜೆರೆಮಿ ಹ್ಯಾನ್‌ಸೆನ್ ಚಂದ್ರನ ಸಮೀಪಕ್ಕೆ ತೆರಳಿ ಭೂಮಿಯ ಸಹಜ ಉಪಗ್ರಹ ಚಂದ್ರನ ಸುತ್ತ ಸುತ್ತು ಹಾಕಿ ಅಧ್ಯಯನ ನಡೆಸಿ ಭೂಮಿಗೆ ಸುರಕ್ಷಿತವಾಗಿ ವಾಪಸಾಗಿದ್ದಾರೆ.

ಇದಕ್ಕೂ ಮುನ್ನ 1972ರಲ್ಲಿ ಮೊದಲಿಗೆ ಗಗನಯಾತ್ರಿಗಳ ತಂಡ ಚಂದ್ರನ ಸಮೀಪಕ್ಕೆ ತೆರಳಿತ್ತು.

ಗಗನನೌಕೆಯ ಒಳಗೆ 4 ಗಗನಯಾತ್ರಿಗಳ ಪಯಣ.

5000 ಡಿ.ಸೆ. ತಾಪ ತಡೆದುಕೊಂಡ ಹೀಟ್‌ಷೀಲ್ಡ್

ನಾಲ್ವರು ಗಗನಯಾತ್ರಿಗಳನ್ನು ಒಡಲಲ್ಲಿಟ್ಟುಕೊಂಡಿದ್ದ 'ಒರಿಯಾನ್ ಕ್ಯಾಪ್ಸೂಲ್' ಭೂಮಿಯ ವಾತಾವರಣವನ್ನು ಮರಳಿ ಪ್ರವೇಶ ಮಾಡುವಾಗ ಉಂಟಾದ ಘರ್ಷಣೆಯಿಂದಾಗಿ ಕ್ಯಾಪ್ಸೂಲ್‌ನ ಹೊರಕವಚದ ತಾಪಮಾನ 2,760 ಡಿಗ್ರಿ ಸೆಲ್ಸಿಯಸ್‌ಗೆ(5 ಸಾವಿರ ಡಿಗ್ರಿ ಫ್ಯಾರನ್‌ಹೀಟ್) ವೃದ್ಧಿಸಿತ್ತು. ಆದರೆ, ಕ್ಯಾಪ್ಸೂಲ್‌ಗೆ ಅಳವಡಿಸಲಾಗಿದ್ದ 'ಹೀಟ್ ಷೀಲ್ಡ್', ಈ ಗರಿಷ್ಠ ಪ್ರಮಾಣದ ಉಷ್ಣಾಂಶವು ಕ್ಯಾಪ್ಸೂಲ್ ಒಳಗೆ ನಿದ್ರಿಸುತ್ತಿದ್ದ ಗಗನಯಾತ್ರಿಗಳವರೆಗೆ ತಲುಪದಂತೆ ಯಶಸ್ವಿಯಾಗಿ ತಡೆದಿತ್ತು.ವೇಗವಾಗಿ ಭೂಮಿಯತ್ತ ಧಾವಿಸಿ ಬಂದ ಕ್ಯಾಪ್ಸೂಲ್, ಇನ್ನೇನು ನೆಲ/ಸಮುದ್ರಕ್ಕೆ ಅಪ್ಪಳಿಸಿಯೇ ಬಿಡುತ್ತದೆ ಎಂದು ಕೊಂಡಿರುವಾಗ ಸ್ವಯಂಚಾಲಿತವಾಗಿ ತೆರೆದುಕೊಂಡ ಪ್ಯಾರಾಚೂಟ್‌ಗಳು ಕ್ಯಾಪ್ಸೂಲ್‌ನ ವೇಗವನ್ನು ಬಹಳಷ್ಟು ತಗ್ಗುವಂತೆ ಮಾಡಿದವು. ನಿಗದಿತ ವೇಗದಲ್ಲಿಯೇ ಕ್ಯಾಪ್ಸೂಲ್ ನಿದಾನವಾಗಿ, ಅಷ್ಟೇ ಸುರಕ್ಷಿತವಾಗಿ ಸಮುದ್ರದ ಮೇಲೆ ಇಳಿಯಿತು. ಕ್ಯಾಪ್ಸೂಲ್‌ಗೆ ಅಳವಡಿಸಲಾಗಿದ್ದ ಬಲೂನ್‌ಗಳು ಸ್ವಯಂಚಾಲಿತವಾಗಿ ಗಾಳಿ ತುಂಬಿಕೊಂಡು ಕ್ಯಾಪ್ಸೂಲ್ ನೀರಿನಲ್ಲಿ ತೇಲುವಂತೆ ಮಾಡಿದವು.ಆ ಬಳಿಕ ಅಮೆರಿಕ ನೌಕಾಪಡೆಯ ಯಾಂತ್ರಿಕ ದೋಣಿಯಲ್ಲಿ ಕಾಯುತ್ತಿದ್ದ ನಾಸಾ ವಿಜ್ಞಾನಿಗಳು ಮತ್ತು ನೌಕಾಪಡೆ ಸಿಬ್ಬಂದಿ ಒರಿಯಾನ್ ಕ್ಯಾಪ್ಸೂಲನ್ನು ದೋಣಿಯ ಮೇಲಕ್ಕೆ ಸ್ಥಳಾಂತರಿಸಿ ಗಗನಯಾತ್ರಿಗಳನ್ನು ಕ್ಯಾಪ್ಸೂಲ್‌ನಿಂದ ಹೊರಕ್ಕೆ ತಂದರು.



- ಗಗನಯಾತ್ರೆ ಏ.1ರಂದು ಪ್ರಾರಂಭವಾಗಿ, ಏ.10ರಂದು ಯಶಸ್ವಿಯಾಗಿ ಸಮಾಪ್ತಿ
- ಭೂಮಿಯಿಂದ ಚಂದ್ರನತ್ತ ಜಿಗಿದ ಆರ್ಟೆಮಿಸ್-2 ಗಗನನೌಕೆ ಒಟ್ಟು 4,06,778 ಕಿಮೀ ಸಂಚರಿಸಿ, ಅಪೊಲೊ-13 ದಾಖಲೆ ಮುರಿದಿದೆ.
- ಯೂರೋಪ್ ಸರ್ವಿಸ್ ಮಾಡ್ಯೂಲ್(ಇಎಸ್‌ಎಂ) ಮತ್ತು ಜರ್ಮನಿ ಏರೋಸ್ಪೇಸ್ ಸೆಂಟರ್‌ನ(ಡಿಎಲ್‌ಆರ್) ರೇಡಿಯೇಷನ್ ಡಿಟೆಕ್ಟರ್ಸ್‌(ಎಂ-42) ಜೋಡಣೆ ಯಾಗಿದ್ದ ಆರ್ಟೆಮಿಸ್-2 ಗಗನನೌಕೆ
- ಈ ಸಾದನಗಳನ್ನು ಬಳಸಿಕೊಂಡು ಅಂತಾರಾಷ್ಟ್ರೀಯ ಬ್ಯಾಹ್ಯಾಕಾಶ ನಿಲ್ದಾಣದ ಹೊರಭಾಗದ ವಿಕಿರಣ ಪ್ರಮಾಣ ಕುರಿತು ದತ್ತಾಂಶ ಸಂಗ್ರಹ
- ಚಂದ್ರನನ್ನು ಸಮೀಪದಿಂದ ಸುತ್ತು ಹಾಕುವಾಗ ಖಗ್ರಾಸ ಸೂರ್ಯ ಗ್ರಹಣ ಸಂದರ್ಭದ ಶ್ರೇಷ್ಠ ಗುಣಮಟ್ಟದ ಚಿತ್ರೀಕರಣ, ಗರಿಷ್ಠ ದತ್ತಾಂಶ ಸಂಗ್ರಹ
- 2024ರಲ್ಲಿ ಆರ್ಟೆಮಿಸ್-1 ಮಿಷನ್ ವೇಳೆ ಕ್ಯಾಪ್ಸೂಲ್‌ಗೆ ಹೊದಿಸಿದ್ದ ಹೀಟ್‌ಷೀಲ್ಡ್ ಹಾನಿಗೀಡಾಗಿದ್ದರಿಂದ ಈ ಬಾರಿ ಹೀಟ್‌ಷೀಲ್ಡ್‌ನ ಸಾಮರ್ಥ್ಯದ ಪರೀಕ್ಷೆ
- 2028ರಲ್ಲಿ ಚಂದ್ರನ ಮೇಲೆ ಮೊದಲ ಬಾರಿ ಪುರುಷ-ಮಹಿಳೆಯ ಗಗನಯಾತ್ರಿಗಳು ಇಳಿಯುವಂತೆ ಮಾಡುವ ಆರ್ಟೆಮಿಸ್-3 ಯೋಜನೆಗೆ ಅಧ್ಯಯನ-ಸಿದ್ಧತೆ
- 4 ಗಗನಯಾತ್ರಿಗಳನ್ನು ಒಳಗೊಂಡಿದ್ದ ಆರ್ಟೆಮಿಸ್-2 ಗಗನಯಾತ್ರೆ



ಗಗನನೌಕೆಯ ಕಿಟಕಿಯಿಂದ ಕಂಡುಬಂದ ಚಂದ್ರ.



ಕ್ಯಾಲಿಫೋರ್ನಿಯದ ಸ್ಯಾನ್ ಡಿಯಾಗೊ ಕರಾವಳಿಯಲ್ಲಿ ಪೆಸಿಫಿಕ್ ಮಹಾಸಾಗರದಲ್ಲಿ ಸುರಕ್ಷಿತವಾಗಿ ಇಳಿದ ಒರಿಯಾನ್.

ಎನ್ನಾರೈ ಅಮಿತ್ ಕ್ಷತ್ರಿಯ ಕೊಡುಗೆ

ಆರ್ಟೆಮಿಸ್-2 ಯೋಜನೆಯಲ್ಲಿ ಭಾರತ ಮೂಲದ ಬಾಹ್ಯಾಕಾಶ ವಿಜ್ಞಾನಿ, 'ನಾಸಾ' ಸಂಸ್ಥೆಯಲ್ಲಿ ಸಹಾಯಕ ಆಡಳಿತಾಧಿಕಾರಿಯೂ ಆಗಿರುವ ಅಮಿತ್ ಕ್ಷತ್ರಿಯ ಅವರ ಕೊಡುಗೆಯೂ ಇದೆ. ಯೋಜನೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ತೊಡಗಿಸಿಕೊಂಡಿದ್ದಾರೆ. ಮಿಷನ್ ಡೈರೆಕ್ಟರೇಟ್ ಅಸೋಸಿಯೇಟ್ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ತಿಳಿದುಬಂದಿದೆ. ಅಲ್ಲದೇ, ಅಮಿತ್, ನಾಸಾ ಆಡಳಿತಾಧಿಕಾರಿ ಜೇರೆಡ್ ಐಸಾಕ್‌ಮನ್ ಅವರ ಹಿರಿಯ ಸಲಹೆಗಾರರೂ ಆಗಿದ್ದಾರೆ. ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಗಣಿತ ಮತ್ತು ವಿಜ್ಞಾನ ಪದವಿ, ಆಸ್ಟಿನ್‌ನ ಟೆಕ್ಸಾಸ್ ವಿವಿಯಲ್ಲಿ ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅಮಿತ್, ಬಾಹ್ಯಾಕಾಶ ನಿರ್ವಾಹಕ, ರೊಬೊಟಿಕ್ಸ್ ಇಂಜಿನಿಯರ್ ಆಗಿಯೂ ಕೆಲಸ ಮಾಡಿದ್ದಾರೆ. 2014-17 ಅವಧಿಯಲ್ಲಿ ನಾಸಾದಲ್ಲಿ ಬಾಹ್ಯಾಕಾಶ ನಿಲ್ದಾಣ ಉಡ್ಡಯನ ನಿರ್ದೇಶಕರಾಗಿದ್ದರು. ರಾಕೆಟ್ ಹಾರಾಟ, ನಿಲ್ದಾಣ ರಚನೆ ಕಾರ್ಯಾಚರಣೆ ತಂಡದಲ್ಲಿದ್ದರು.

ಸೂರ್ಯನನ್ನು ಚಂದ್ರ ಪೂರ್ಣವಾಗಿ ಆವರಿಸಿಕೊಂಡಾಗಿನ(ಸೂರ್ಯ ಗ್ರಹಣ) ದೃಶ್ಯ ಆರ್ಟೆಮಿಸ್-2 ಯೋಜನೆಯಲ್ಲಿ ಕಂಡ ಬಗೆಯಿದು.

ಮೊಜ್ತಾಬಾ ಮುಖ ವಿರೂಪ, ಕಾಲುಗಳಿಗೆ ತೀವ್ರ ಗಾಯ

ದುಬೈ: ಇರಾನ್ ಮೇಲೆ ನಡೆಸಿದ ಅಮೆರಿಕ-ಇಸ್ರೇಲ್ ಜಂಟಿ ಕ್ಷಿಪಣಿ ದಾಳಿಯಲ್ಲಿ ಇರಾನ್ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಗಾಯಗಳಿಂದ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಆದರೆ, ಸುಟ್ಟ ಗಾಯಗಳಿಂದಾಗಿ ಅವರ ಮುಖ ವಿರೂಪಗೊಂಡಿದೆ ಮತ್ತು ಕ್ಷಿಪಣಿಯ ಸ್ಫೋಟದಿಂದಾಗಿ ಎರಡೂ ಕಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ ಎಂದು ಅವರ ಆಪ್ತ ವಲಯದ ಮೂವರು ಸಿಬ್ಬಂದಿ ಮಾಧ್ಯಮ ಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ. ಟೆಹರಾನ್ ನಗರದ ಮಧ್ಯದಲ್ಲಿದ್ದ ಸರ್ವೋಚ್ಚ ನಾಯಕನ ಮನೆ ಮೇಲೆ ನಡೆದ ದಾಳಿಯಲ್ಲಿ 56 ವರ್ಷದ ಮೊಜ್ತಬಾ ತೀವ್ರವಾಗಿ ಗಾಯಗೊಂಡರು. ಅದೇ ದಾಳಿಯಲ್ಲಿ ಪತ್ನಿಯನ್ನೂ ಕಳೆದುಕೊಂಡರು. ಗಾಯಗಳಿಂದಾಗಿ ಹಲವು ದಿನಗಳಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಆದರೆ, ಈಗ ಗಾಯಗಳಿಂದ ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು ಮಾನಸಿಕವಾಗಿ ಚುರುಕಾಗಿಯೇ ಇದ್ದಾರೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಿಬ್ಬಂದಿ ತಿಳಿಸಿದ್ದಾರೆಂದು ಮಾಧ್ಯಮದಲ್ಲಿ ವರದಿಯಾಗಿದೆ.

ಮೊಜ್ತಬಾ ಅವರು ಇತ್ತೀಚೆಗೆ ಆಡಿಯೋ ಕಾನ್ಫರೆನ್ಸಿಂಗ್ ಮೂಲಕ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸುತ್ತಿದ್ದಾರೆ. ಯುದ್ಧ ನಿಲಗಡೆ ಮತ್ತು ಅಮೆರಿಕ ಜತೆಗಿನ ಮಾತುಕತೆ ಸೇರಿದಂತೆ ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ ಎಂದು ಆಪ್ತ ಸಿಬ್ಬಂದಿತಿಳಿಸಿದ್ದಾರೆಂದು ಅಮೆರಿಕ ಮೂಲಕ ಪ್ರಮುಖ ಮಾಧ್ಯಮ ಸಂಸ್ಥೆ ವರದಿ ಮಾಡಿದೆ.

ನಮ್ಮ ಉದ್ದೇಶ ಒಳ್ಳೇದಿದೆ, ಅಮೆರಿಕ ನಂಬಲಾಗದು



ಟೆಹರಾನ್: ಇರಾನ್‌ಗೆ ಒಳ್ಳೆಯ ಉದ್ದೇಶವಿದೆ. ಆದರೆ ಅಮೆರಿಕವನ್ನು ನಂಬಲಾಗದು ಎಂದು ಇರಾನ್‌ನ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಕರ್ ಖಾಲಿಬಾಫ್ ಪ್ರತಿಕ್ರಿಯಿಸಿದ್ದಾರೆ.ಅಮೆರಿಕ-ಇರಾನ್ ಶಾಂತಿಸಭೆಯಲ್ಲಿ ಭಾಗಿಯಾಗಲು ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ತೆರಳುವ ಮುನ್ನ ಇರಾನ್ ಸುದ್ದಿಸಂಸ್ಥೆ 'ತಸ್ನೀಮ್'ಗೆ ಕಿರು ಸಂದರ್ಶನ ನೀಡಿ, ಅಮೆರಿಕದ ಮೇಲೆ ಇರಾನ್ ಹೊಂದಿರುವ ಅನುಮಾನಗಳನ್ನು ಪುನರುಚ್ಚರಿಸಿದರು.ಮಾತುಕತೆಗೆ ಕರೆಯುವ ಅಮೆರಿಕ ಅದರ ಮಧ್ಯದಲ್ಲಿಯೇ ನಮ್ಮ ಮೇಲೆ ದಾಳಿ ನಡೆಸಿದೆ. ಒಂದೇ ವರ್ಷದಲ್ಲಿ ಎರಡು ಬಾರಿ ಹೀಗೆ ಮಾಡಿದೆ. ಇರಾನ್ ಪೂರ್ಣ ನಂಬಿಕೆ ವ್ಯಕ್ತಪಡಿಸಿದ್ದರೂ ಅಮೆರಿಕ ಇರಾನ್ ಮೇಲೆ ದಾಳಿ ಮಾಡಿ ಅಪರಾಧವೆಸಗಿದೆ. ಹಾಗಾಗಿ ಅಮೆರಿಕದ ಮೇಲೆ ನಮಗೆ ಪೂರ್ಣ ವಿಶ್ವಾಸ ಇಲ್ಲ ಎಂದು ಖಾಲಿಬಾಫ್ ಹೇಳಿದ್ದಾರೆ.

ಇಸ್ಲಾಮಾಬಾದ್ ವಿಮಾನ ನಿಲ್ದಾಣದಲ್ಲಿಯೂ ಅವರು ಮಾಧ್ಯಮ ಪ್ರತಿನಿಧಿಗಳೆದುರು ಅಮೆರಿಕದ ಜತೆಗಿನ ಹಿಂದಿನ ಕಹಿ ಅನುಭವಗಳನ್ನು ನೆನಪಿಸಿದರು. ಅಮೆರಿಕವೇನಾದರೂ ಈಗಿನ ಮಾತುಕತೆ ವೇಳೆ ನಾಟಕವಾಡಿದರೆ ಅಥವಾ ಮೋಸದ ಕಾರ್ಯಾಚರಣೆ ನಡೆಸಲೆತ್ನಿಸಿದರೆ ನಮ್ಮ ಜನರ ಹಿತಾಸಕ್ತಿ ರಕ್ಷಿಸಲು ಇರಾನ್ ತನ್ನ ಸಾಮರ್ಥ್ಯವನ್ನು ಬಳಸಲಿದೆ ಎಂದು ಅವರು ಎಚ್ಚರಿಸಿದರು.

234 ವಿ.ಸಭೆ ಕ್ಷೇತ್ರಗಳಲ್ಲೂ ಡಿಎಂಕೆ ಮೈತ್ರಿಕೂಟದ್ದೇ ಜಯಭೇರಿ: ಸ್ಟಾಲಿನ್

ಚೆನ್ನೈ: ಈ ಬಾರಿಯ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 234 ಕ್ಷೇತ್ರಗಳಲ್ಲಿಯೂ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ನೇತೃತ್ವದ ಮೈತ್ರಿಕೂಟ ಜಯಭೇರಿ ಭಾರಿಸಲಿದೆ ಎಂದು ಡಿಎಂಕೆ ಪಕ್ಷದ ಮುಖ್ಯಸ್ಥ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಡಿಎಂಕೆ ಯಾವುದೇ ಸವಾಲನ್ನು ಎದುರಿಸಲು ಸಿದ್ಧವಿದೆ. ರಾಜ್ಯದ ಜನರು ಸಾರ್ವಜನಿಕ ಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದ್ದಾರೆ.

'ರಾಜ್ಯ ರಾಜಕೀಯದಲ್ಲಿ ಯಾರೇ ಎದುರಾಳಿಗಳು ಬಂದರೂ ಎದುರಿಸುತ್ತೇವೆ' ಎಂದು ಚಿತ್ರನಟ-ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಸಂಸ್ಥಾಪಕ ಮುಖ್ಯಸ್ಥ ಜೋಸೆಫ್ ವಿಜಯ್ ಅವರ ರಾಜಕೀಯ ಪ್ರವೇಶದ ಬಗ್ಗೆ ಸ್ಟಾಲಿನ್ ಪ್ರತಿಕ್ರಿಯಿಸಿದ್ದಾರೆ.

ಎಐಎಡಿಎಂಕೆ ಪಕ್ಷದ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರ ಹೇಳಿಕೆಗಳೆಲ್ಲ ಸೋಲಿನ ಭಯ-ಹತಾಶೆಯನ್ನು ಬಿಂಬಿಸುತ್ತಿವೆ. ದ್ರಾವಿಡ ಪಕ್ಷವನ್ನು ದೆಹಲಿ ನಿಯಂತ್ರಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಸ್ಟಾಲಿನ್ ಹೇಳಿದ್ದಾರೆ.

ತಮಿಳುನಾಡು ವಿಧಾನಸಭೆ ಚುನಾವಣೆಗೆ ಏ.23ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ

ಡೆಲ್: 11,000 ನೌಕರಿ ಕಡಿತ

ದೆಹಲಿ: ಕಂಪ್ಯೂಟರ್ ತಯಾರಿಕಾ ಕ್ಷೇತ್ರದ ಪ್ರಮುಖ ಕಂಪನಿ 'ಡೆಲ್' 11 ಸಾವಿರಕ್ಕೂ ಹೆಚ್ಚು ಉದ್ಯೋಗಗಳನ್ನು ಕಡಿತಗೊಳಿಸಿದೆ. ಆ ಮೂಲಕ ಉದ್ಯೋಗಿಗಳ ಸಂಖ್ಯೆಯನ್ನು 97 ಸಾವಿರಕ್ಕೆ ಇಳಿಸಿದೆ. ಕೃತಕ ಬುದ್ಧಿಮತ್ತೆ(ಎ.ಐ) ಮೇಲೆ ಹೆಚ್ಚು ಬಂಡವಾಳ ಹೂಡಿಕೆ ಮಾಡುತ್ತಿರುವುದು ಮತ್ತು ಶಿಸ್ತುಬದ್ಧ ವೆಚ್ಚ ನಿರ್ವಹಣೆಯ ಕಾರಣಗಳಿಂದಾಗಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ(ಒಟ್ಟು ಉದ್ಯೋಗಿಗಳ ಶೇ.10ರಷ್ಟು) ನೌಕರಿ ಕಡಿತ ಮಾಡಬೇಕಾಗಿ ಬಂದಿದೆ ಎಂದು ಕಂಪನಿ ತಿಳಿಸಿದೆ.

2026ರಲ್ಲಿ ಈವರೆಗೆ ತಂತ್ರಜ್ಞಾನ ಕ್ಷೇತ್ರದಲ್ಲಿನ ವಿವಿಧ ದೇಶಗಳ 66 ಪ್ರಮುಖ ಕಂಪನಿಗಳು 39 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಮನೆಗೆ ಕಳುಹಿಸಿವೆ. ಈಗ, ಡೆಲ್ ಕಂಪೆನಿ ಆ ಪಟ್ಟಿಗೆ ತನ್ನಲ್ಲಿನ 11 ಸಾವಿರ ನೌಕರಿಗಳನ್ನೂ ಸೇರಿಸಿದೆ. ಅಷ್ಟೇ ಅಲ್ಲದೇ ಡೆಲ್ ಕಂಪೆನಿ ಹೊಸದಾಗಿ ನೇಮಕ ಮಾಡಿಕೊಳ್ಳುವುದನ್ನು ಕಡಿಮೆ ಮಾಡಿದೆ. 2025ರ ಜನವರಿಯಲ್ಲಿ ಡೆಲ್ ಕಂಪನಿಯಲ್ಲಿ 1.08 ಲಕ್ಷ ಉದ್ಯೋಗಿಗಳಿದ್ದರು.

ಹೊರ್ಮುಜ್‌ನಲ್ಲಿ ಅಡಗಿಸಿಟ್ಟ ಸ್ಫೋಟಕಗಳ ನಿವಾರಣೆ ಸಂಕಷ್ಟ

ಟೆಹರಾನ್: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದ 40ನೇ ದಿನ '2 ವಾರಗಳ ಕದನ ವಿರಾಮ' ಘೋಷಣೆಯಾಗಿ 3 ದಿನಗಳೇ ಕಳೆದಿವೆ. ಆದರೆ, ಇರಾನ್ ನೌಕಾಪಡೆಗೆ ತಾನು ಹೊರ್ಮುಜ್ ಜಲಸಂಧಿಯಲ್ಲಿ ಅಡಗಿಸಿಟ್ಟಿದ್ದ ನೆಲಬಾಂಬ್‌ಗಳನ್ನು ಹುಡುಕಿ ತೆಗೆದು ನಾಶಪಡಿಸಲು ಸಾಧ್ಯವಾಗುತ್ತಿಲ್ಲ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.ಯುದ್ಧದ ವೇಳೆ ಜಲಸಂಧಿಯಲ್ಲಿ ವಾಣಿಜ್ಯ ನೌಕೆಗಳು ಮುಂದೆ ಸಾಗದಂತೆ ತಡೆಯಲು ಇರಾನ್, ನೀರಿನೊಳಗೇ 'ಮೈನ್ಸ್' ಅಳವಡಿಸಿತ್ತು. ಅದಾಗಿ 6 ವಾರಗಳೇ ಕಳೆದಿರುವುದರಿಂದ ಸ್ಫೋಟಕಗಳನ್ನು ಎಲ್ಲೆಲ್ಲಿ ಅಡಗಿಸಿಡಲಾಗಿದೆ ಎಂಬುದನ್ನೇ ಇರಾನ್ ನೌಕಾಪಡೆ ಮರೆತುಬಿಟ್ಟಿದೆ. ಹಾಗಾಗಿ ಜಲಸಂಧಿಯನ್ನು ನೌಕೆಗಳಿಗೆ ಮುಕ್ತಗೊಳಿಸಲಾಗದೇ ಪರದಾಡುತ್ತಿದೆ.

ವಾಣಿಜ್ಯ ನೌಕೆಗಳು ನೆಲದಡಿಯಿರುವ ಸ್ಫೋಟಕಗಳಿಗೆ ಡಿಕ್ಕಿ ಹೊಡೆದರೆ ಸ್ಫೋಟಗೊಳ್ಳುವ ಅಪಾಯವಿದೆ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ) ಎಚ್ಚರಿಕೆ ನೀಡಿದೆ.

ಸಂಸತ್ ಅಂಗಳ ಮೋದಿ-ರಾಹುಲ್ ಮಾತು

ದೆಹಲಿ: ಇಲ್ಲಿನ ಸಂಸತ್ ಭವನದ ಆವರಣ ಶನಿವಾರ ಅಪರೂಪದ ದೃಶ್ಯಕ್ಕೆ ಸಾಕ್ಷಿಯಾಯಿತು. ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮುಖಾಮುಖಿಯಾಗಿದ್ದು, ಕೆಲವು ಕ್ಷಣ ಸೌಹಾರ್ದಯುತ ಮಾತುಕತೆ ನಡೆಸಿದರು. ಈ ವಿಡಿಯೊ, ಫೋಟೊಗಳು ಜಾಲತಾಣದಲ್ಲಿ ವೈರಲ್ ಆಗಿವೆ.

ಸಮಾಜ ಸುಧಾರಕ ಮಹಾತ್ಮ ಜ್ಯೋತಿರಾವ್ ಫುಲೆ ಅವರ 200ನೇ ಜನ್ಮ ದಿನಾಚರಣೆಯಲ್ಲಿ ಗೌರವ ಸಲ್ಲಿಸಲು ಸಂಸತ್ ಭವನದಲ್ಲಿ ಎಲ್ಲಾ ಪಕ್ಷಗಳ ನಾಯಕರೂ ನೆರೆದಿದ್ದ ಸಂದರ್ಭ ಮೋದಿ-ರಾಹುಲ್ ಎದುರುಬದರಾದರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ ಮತ್ತು ಅರ್ಜುನ್ ರಾಮ್ ಮೇಘವಾಲ್ ಅವರ ಜತೆಗೆ ಮಾತನಾಡುತ್ತಾ ನಿಂತಿದ್ದ ರಾಹುಲ್ ಗಾಂಧಿ ಅವರನ್ನು ಕಂಡ ಮೋದಿ ಕ್ಷಣಕಾಲ ನಿಂತು ಮಾತನಾಡಿಸಿದರು.

ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗಿದ್ದ ವಿಚಾರವಾಗಿ ರಾಹುಲ್ ಬಳಿ ಮಾತನಾಡಿದ ಮೋದಿ, 'ಈಗ ತಾಯಿಯವರ ದೇಹಸ್ಥಿತಿ ಹೇಗಿದೆ, ಆರೋಗ್ಯವಾಗಿರುವರೇ?' ಎಂದು ವಿಚಾರಿಸಿದರು. 'ತಾಯಿ ಆರೋಗ್ಯ ಈಗ ಸುಧಾರಿಸುತ್ತಿದೆ' ಎಂದು ರಾಹುಲ್ ಉತ್ತರಿಸಿದರು

ಟಿಎಂಸಿಯ ನಿರ್ಮಮ್ ಸರಕಾರ ಜನರಿಗೆ ಭಯವನ್ನಷ್ಟೇ ನೀಡಿದೆ

ನುಸುಳುಕೋರರು ಗಂಟು ಮೂಟೆ ಕಟ್ಟಬೇಕು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ಬಿಜೆಪಿ ನೇತೃತ್ವದ ಸರಕಾರ ರಚನೆಯಾದ ಬಳಿಕ ಮಥುವಾ, ನಮಸೂದ್ರ ಮತ್ತಿತರ ಬಾಂಗ್ಲಾದೇಶ ವಲಸಿಗ ನಿರಾಶ್ರಿತ ಸಮುದಾಯಗಳಿಗೆ 'ಪೌರತ್ವ ತಿದ್ದುಪಡಿ ಕಾಯಿದೆ'(ಸಿಎಎ) ಅಡಿಯಲ್ಲಿ ಪೌರತ್ವ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿನ ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿನ ಕಟ್ವಾ ಪಟ್ಟಣದಲ್ಲಿ ಶನಿವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಮೋದಿ, ಅಕ್ರಮವಾಗಿ ನುಸುಳಿಕೊಂಡು ಪಶ್ಚಿಮ ಬಂಗಾಳದಲ್ಲಿ ನೆಲೆಸಿರುವವರು ಮಾತ್ರ ಗಂಟು ಮೂಟೆ ಕಟ್ಟಲೇಬೇಕು. ಲೂಟಿಕೋರರು, ಆಸ್ತಿ ಕಬಳಿಸಿದವರು, ದಬ್ಬಾಳಿಕೆ ಮಾಡುವವರನ್ನು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಲಾಗುವುದು ಎಂದೂ ಬಾಂಗ್ಲಾದೇಶದ ಅಕ್ರಮ ವಲಸಿಗರಿಗೆ ಎಚ್ಚರಿಕೆ ನೀಡಿದ್ದಾರೆ. ಅಕ್ರಮ ನುಸುಳುಕೋರರಿಗೆ ಆಶ್ರಯ ಒದಗಿಸಿರುವವರೂ ಅದರ ಪರಿಣಾಮಗಳನ್ನು ಎದುರಿಸಬೇಕಾಗಿ ಬರಲಿದೆ ಎಂದು ಹೇಳಿದ್ದಾರೆ.

ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿಯ 'ನಿರ್ಮಮ್'(ಕ್ರೂರ) ಸರಕಾರ ಕಳೆದ 15 ವರ್ಷಗಳಲ್ಲಿ ಬಂಗಾಳದ ಜನತೆಗೆ ಭಯವೊಂದನ್ನು ಬಿಟ್ಟು ಬೇರೇನನ್ನೂ ನೀಡಿಲ್ಲ. ಮಥುವಾ, ನಮಸೂದ್ರ ಸಮುದಾಯಗಳ ಭವಿಷ್ಯವನ್ನು ತೃಣಮೂಲ ಕಾಂಗ್ರೆಸ್ ಪಕ್ಷದ ಸರಕಾರ ಅತಂತ್ರವಾಗಿರಿಸಿದೆ. ಆದರೆ, ಭಾರತದ ಸಂವಿಧಾನ ಮತ್ತು 'ಸಿಎಎ' ರಕ್ಷಣೆ ಒದಗಿಸಲಿದೆ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಸರಕಾರ ರಚನೆ ಮಾಡಲಿರುವ ಬಿಜೆಪಿ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಮಾಡಲಿದೆ. ಅಷ್ಟೇ ಅಲ್ಲ, ಸಬ್ ಕಾ ಹಿಸಾಬ್ ಮಂತ್ರವನ್ನೂ ಅಳವಡಿಸಿಕೊಳ್ಳಲಿದೆ. ಆಯುಷ್ಮಾನ್ ಭಾರತ್ ಯೋಜನೆಯನ್ನೂ ರಾಜ್ಯದಲ್ಲಿ ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಪಶ್ಚಿಮ ಬಂಗಾಳದ ಕಟ್ವಾದಲ್ಲಿ ಶನಿವಾರ ಪ್ರಧಾನಿ ಮೋದಿ ಪ್ರಚಾರ ಸಭೆ.

ದೆಹಲಿ, ಪಂಜಾಬ್: ಐಎಸ್‌ಐ, ಬಬ್ಬರ್ ಕಾಲ್ಸಾ ಸಂಪರ್ಕ ಇದ್ದವರ ಬಂಧನ

ಸೇನಾಶಿಬಿರ ಬಳಿ ಕ್ಯಾಮೆರಾ: 11 ಉಗ್ರರ ಸೆರೆ

ದೆಹಲಿ: ಕಾಶ್ಮೀರ, ಉತ್ತರ ಪ್ರದೇಶ ಸೇರಿದಂತೆ ಉತ್ತರ ಭಾರತದ 3 ರಾಜ್ಯಗಳಲ್ಲಿನ ಸೇನಾ ಶಿಬಿರಗಳ ಬಳಿ ಸೌರಶಕ್ತಿ ಚಾಲಿತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಪಾಕಿಸ್ತಾನಕ್ಕೆ ಅದರ ನೇರ ವೀಕ್ಷಣೆ ಸಿಗುವಂತೆ ಮಾಡಿದ್ದ 11 ಉಗ್ರರ ತಂಡವನ್ನು ದೆಹಲಿ ಮತ್ತು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ.

ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ 'ಐಎಸ್‌ಐ' ಜತೆ ಸಂಪರ್ಕ ಹೊಂದಿದ್ದು, ಪಾಕ್ ಪರವಾಗಿ ಭಾರತದಲ್ಲಿ ಗೂಢಚಾರಿಕೆ ನಡೆಸುತ್ತಿದ್ದ ಜಾಲವನ್ನು ದೆಹಲಿ ಮತ್ತು ಪಂಜಾಬ್ ಪೊಲೀಸರು ಭೇದಿಸಿದ್ದಾರೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಮತ್ತು ಸಿಖ್ಖರ 'ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್'(ಬಿಕೆಐ) ಜತೆ ನಂಟು ಹೊಂದಿದ್ದ ಭಯೋತ್ಪಾದನಾ ಮಾಡ್ಯೂಲನ್ನು ದೆಹಲಿ ಪೊಲೀಸರ ವಿಶೇಷ ದಳ ಬಯಲಿಗೆಳೆದಿದೆ. ಭಾರತ ವಿರುದ್ಧದ ಸಂಚಿನಲ್ಲಿ ಭಾಗಿಯಾಗಿದ್ದ ಪಂಜಾಬ್ ಮತ್ತು ದೆಹಲಿಯ 11 ಮಂದಿ ಭಯೋತ್ಪಾದಕರನ್ನು ಬಂಧಿಸಿ ವಿಚಾರಣೆಗೊಳಪಡಿಸಿದೆ.

ಬಂಧಿತರು ಜಮ್ಮು-ಕಾಶ್ಮೀರದ ಕಥುವಾದಿಂದ ಉತ್ತರ ಪ್ರದೇಶದ ಹಲವೆಡೆಯ ಸೇನಾ ಶಿಬಿರಗಳ ಬಳಿ ಬೇಹುಗಾರಿಕೆ ನಡೆಸುತ್ತಿದ್ದರು. ಉತ್ತರ ಭಾರತದ ಮೂರು ರಾಜ್ಯಗಳಲ್ಲಿ ಸೇನಾ ಶಿಬಿರಗಳಿರುವ 9 ಸೂಕ್ಷ್ಮ ಸ್ಥಳಗಳಲ್ಲಿ ಸೌರಶಕ್ತಿ ಚಾಲಿತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದರು. ಈ ಕ್ಯಾಮೆರಾಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದ್ದು, ಸೇನಾ ಶಿಬಿರಗಳಲ್ಲಿನ ಸೈನಿಕರ ಚಟುವಟಿಕೆಗಳು, ಸೇನಾ ವಾಹನಗಳ ಸಂಚಾರ ಎಲ್ಲವೂ ಪಾಕ್‌ನಲ್ಲಿನ ಹ್ಯಾಂಡ್ಲರ್‌ಗಳಿಗೆ ನೇರ ಪ್ರಸಾರವಾಗುತ್ತಿದ್ದವು ಎಂದು ತನಿಖಾಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಈ ತಂಡ ಸೇನಾನೆಲೆಗಳು, ರೈಲು ನಿಲ್ದಾಣಗಳು ಮತ್ತಿತರ ಸೂಕ್ಷ್ಮ ಪ್ರದೇಶಗಳ ಮಾಹಿತಿ ಸಂಗ್ರಹಿಸಿ, ಸ್ಥಳದ ಫೋಟೊ, ಸಂಪರ್ಕ ರಸ್ತೆಗಳು ಮೊದ ಲಾದ ಮಾಹಿತಿ ಜತೆಗೆ ವಿಡಿಯೋ ಗಳನ್ನು ಸಂಗ್ರಹಿಸಿ ಪಾಕಿಸ್ತಾನಕ್ಕೆ ಕಳುಹಿಸುತ್ತಿತ್ತು ಎಂದು ತನಿಖೆಯಿಂದ ತಿಳಿದುಬಂದಿದೆ. ಅಲ್ಲದೆ, ಆರೋಪಿಗಳು ಪಾಕ್‌ನಿಂದ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ತರಲು ಯತ್ನಿಸಿದ್ದರು.

ನ್ಯೂಸ್ ಪ್ಯಾಕೇಜ್

ಭಾರತಕ್ಕೆ ಬೇಕು ಮದ್ದು ಗುಂಡು ಮೀರಿದ ಸ್ಮಾರ್ಟ್ ವಾರ್!



ಇತ್ತೀಚೆಗೆ ನಡೆದಿದ್ದ ಮಲ್ಟಿ ಡೊಮೈನ್ ಆಪರೇಷನ್ (MDO) ದೃಶ್ಯೀಕರಣ ಕುರಿತ 'ಯುದ್ಧ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ, ಏಷ್ಯಾದ ಪಶ್ಚಿಮ ರಾಷ್ಟ್ರಗಳು ಅನುಸರಿಸುತ್ತಿ ರುವ ಹೊಸ ಬಗೆಯ ಯುದ್ಧ ನೀತಿಗಳು ಹಾಗೂ ಯುದ್ಧ ತಂತ್ರಗಾರಿಕೆಗಳು ಭವಿಷ್ಯದ ಯುದ್ಧಗಳಿಗೆ ಪಾಠ ಎಂದು ಹೇಳಿದ್ದಾರೆ. ಮತ್ತೊಂದು ಕಾರ್ಯಕ್ರಮ ದಲ್ಲಿ ಮಾತ ನಾಡಿರುವ, ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು, ಯುದ್ಧಗಳನ್ನು ಈಗ ಕೇವಲ ಮದ್ದು- ಗುಂಡು ಹಾರಿಸಿ ಗೆಲ್ಲಲು ಸಾಧ್ಯವಿಲ್ಲ. ಹೈಬ್ರೀಡ್ ಸಿದ್ಧತೆ ಅಗತ್ಯ ಎಂದು ಹೇಳಿದ್ದಾರೆ. ಇವೆರಡೂ ಹೇಳಿಕೆಗಳು ಇಸ್ರೇಲ್ ದೇಶದ ಯುದ್ಧ ತಂತ್ರ ಗಾರಿಕೆಯನ್ನು ಮನಗಂಡು ನೀಡಲಾಗಿರುವಂಥ ಹೇಳಿಕೆಗಳು. ಏನಿದು ಇಸ್ರೇಲ್ ತಂತ್ರಗಾರಿಕೆ, ಅದನ್ನೇಕೆ ನಮ್ಮ ಸೇನಾ ಪಡೆಗಳ ಮುಖ್ಯಸ್ಥರು ಒತ್ತಿ ಹೇಳುತ್ತಿದ್ದಾರೆ. ಬನ್ನಿ ನೋಡೋಣ.

ತನ್ನ ಮೇಲೆ ಸದಾ ದಾಳಿ ನಡೆಸುವ ಹಮಾಸ್ ಉಗ್ರರ ಹೆಡೆಮುರಿ ಕಟ್ಟಲು ಇಸ್ರೇಲ್ ದೇಶ 2024ರಲ್ಲಿ ಜಗತ್ತಿನಲ್ಲಿ ಅದುವರೆಗೆ ಯಾರೂ ಕಂಡು ಕೇಳರಿಯದ ಒಂದು ಹೊಸ ರಣಕಲೆಯನ್ನು ರೂಪಿಸಿ ಅದನ್ನು ಯಶಸ್ವಿಯಾಗಿ ಜಾರಿಗೊಳಿಸಿತು. ಅಕ್ಕಪಕ್ಕದ ರಾಷ್ಟ್ರಗಳಾದ ಲೆಬನಾನ್, ಸಿರಿಯಾದಲ್ಲಿ ಅಡಗಿರುವ ಹಮಾಸ್ ಉಗ್ರರು ಹಾಗೂ ಅವರ ಬೆಂಬಲಿಗರು ತಮ್ಮ ಗೌಪ್ಯ ಸಂಹವನಕ್ಕಾಗಿ ಬಳಸುವ ಪೇಜರ್‌ಗಳ ವೈರ್‌ಲೆಸ್ ತರಂಗಗಳನ್ನು ಹ್ಯಾಕ್ ಮಾಡಿ, ಅದರಲ್ಲಿ ತನ್ನ ರಿವರ್ಸ್ ಪ್ರೋಗ್ರಾಮಿಂಗ್ ಮಾಡಿ ಅದನ್ನು ಹರಿಬಿಟ್ಟಿತ್ತು. ಅದರಿಂದಾಗಿ, ಪೇಜರ್ ನಲ್ಲಿ ಏಕಾಏಕಿ ಬೀಪ್ ಶಬ್ದ ಬಂದು ಅದನ್ನು ಜೇಬಿನಿಂದ ಹೊರತಗೆದ ಕೂಡಲೇ ಅದರಲ್ಲಿದ್ದ ಬ್ಯಾಟರಿಗಳು ಭಯಾನಕವಾಗಿ ಸ್ಫೋಟಗೊಂಡು ಅದನ್ನು ಹಿಡಿದಿದ್ದ ಹಮಾಸ್ ಉಗ್ರರು ಸತ್ತಿದ್ದರು. ಇನ್ನೂ ಕೆಲವರು ತೀವ್ರವಾಗಿ ಗಾಯಗೊಂಡಿದ್ದರು. ಹೀಗೆ, ಚಿಟಿಕೆ ಹೊಡೆಯುವಷ್ಟರಲ್ಲಿ ಸಾವಿರಾರು ಹಮಾಸ್ ಉಗ್ರರನ್ನು ಅವರು ಇರುವ ಜಾಗಗಳಲ್ಲೇ ಹೊಡೆದುರುಳಿಸಿತ್ತು ಇಸ್ರೇಲ್.

ಯಾವುದೇ ದೇಶದ ಗಡಿಯನ್ನು ದಾಟದೇ, ವೈಮಾನಿಕ ದಾಳಿಗಳನ್ನು ನಡೆಸದೇ, ಕ್ಷಿಪಣಿಗಳನ್ನು ಉಡಾಯಿಸದೇ, ಡ್ರೋನ್‌ಗಳನ್ನು ಹಾರಾಡಿಸದೇ ಹೀಗೆ ಸದ್ದಿಲ್ಲದೆ ತನ್ನ ಶತ್ರುಗಳನ್ನು ಮಟ್ಟಹಾಕಿತ್ತು ಇಸ್ರೇಲ್. ಅಂದು ಆ ಘಟನೆಯನ್ನು ಇಡೀ ಜಗತ್ತೇ ನಿಬ್ಬೆರಗಾಗಿ ನೋಡಿತ್ತು.

ಇಸ್ರೇಲಿನ ಇಂಥ ತಂತ್ರಗಾರಿಕೆ ಕೇವಲ ಅಷ್ಟಕ್ಕೇ ನಿಲ್ಲಲಿಲ್ಲ. ಇರಾನಿನ ಸರ್ವಾಧಿಕಾರಿ ಖಮೈನಿಯನ್ನು ಹತ್ಯೆಗೈಯ್ಯಲು ಇರಾನ್ ರಾಜಧಾನಿ ಟೆಹರಾನ್‌ನಲ್ಲಿರುವ ಟ್ರಾಫಿಕ್ ಸಿಗ್ನಲ್ ಗಳಲ್ಲಿ ಅಳವಡಿಸಲಾಗಿರುವ ಕ್ಯಾಮೆರಾಗಳು, ಖಮೈನಿಯ ಕಚೇರಿಗಳ ಸೆಕ್ಯುರಿಟಿ ಕ್ಯಾಮೆರಾಗಳನ್ನು ಹ್ಯಾಕ್ ಮಾಡಿ ಅವರ ಚಲನವಲನ ಇತ್ಯಾದಿಗಳನ್ನು ಗಮನಿಸಿ ನೇರವಾಗಿ ಕ್ಷಿಪಣಿ ದಾಳಿ ನಡೆಸಿ ಖೈಮೇನಿಯವರನ್ನು ಖತಂ ಮಾಡಿತ್ತು.

ಇದೆಲ್ಲವೂ ಇಂದಿನ ಅತ್ಯಾಧುನಿಕ ಜಗತ್ತಿನಲ್ಲಿ ಹೊಸ ಹೊಸ ಯುದ್ಧದ ಸಂಭಾವ್ಯತೆಗಳನ್ನು ಹಾಗೂ ಅವುಗಳ ಅವಶ್ಯಕತೆಯನ್ನು ಸಾರುತ್ತಿದೆ. ವರ್ಷದಿಂದ ವರ್ಷಕ್ಕೆ ಡಿಫೆನ್ಸ್ ಬಜೆಟ್ ಹೆಚ್ಚಾಗುತ್ತಲೇ ಇದೆ. ಮದ್ದು-ಗುಂಡುಗಳು, ಶಸ್ತ್ರಾಸ್ತ್ರಗಳು ಎಗ್ಗಿಲ್ಲದೆ ತಯಾರಿಯಾಗುತ್ತಿವೆ. ಇಂಥ ಸಂದರ್ಭದಲ್ಲಿ ನಾವು ಮದ್ದು-ಗುಂಡುಗಳನ್ನು ಮೀರಿ, ತಂತ್ರಜ್ಞಾನಗಳ ಸಹಾಯದಿಂದ ಯುದ್ಧವನ್ನು ಮಾಡಬಹುದು ಎಂಬುದರ ಸಣ್ಣ ಸ್ಯಾಂಪಲ್‌ಗಳನ್ನು ಇಸ್ರೇಲ್ ತೋರಿಸಿಕೊಟ್ಟಿದೆ.

ಈಗ ಎದ್ದಿರುವ ಪ್ರಶ್ನೆಯೇನೆಂದರೆ, ಅಂಥ ಹೊಸ ಬಗೆಯ ಯುದ್ಧ ತಂತ್ರಗಾರಿಕೆ ಭಾರತಕ್ಕೂ ಬೇಕೇ ಎಂಬುದು. ಇದಕ್ಕೆ ಉತ್ತರ-ಹೌದು, ಬೇಕು. ಆದರೆ, ಇಸ್ರೇಲ್ ಬಳಸಿರುವುದನ್ನೇ ನಕಲು ಮಾಡಬೇಕು ಅಂತೇನಲ್ಲ. ನಮಗೆ ನಮ್ಮದೇ ಆದ ಸ್ವತಂತ್ರವಾದ ಯುದ್ಧ ತಂತ್ರಗಾರಿಕೆ ಬೇಕಿದೆ.

ಭಾರತ ಈಗಾಗಲೇ ತಂತ್ರಜ್ಞಾನ-ಆಧಾರಿತ ಭಯೋತ್ಪಾದನಾ-ವಿರೋಧಿ ಕ್ರಮಗಳತ್ತ ಸಾಗುತ್ತಿದೆ. ಕೃತಕ ಬುದ್ಧಿಮತ್ತೆ (ಎಐ), ನಿಗಾವ್ಯವಸ್ಥೆ, ಡ್ರೋನ್‌ಗಳು, ಸೈಬರ್ ಫೊರೆನ್ಸಿಕ್ಸ್, ಬಯೋಮೆಟ್ರಿಕ್ ವ್ಯವಸ್ಥೆಗಳು, ಮತ್ತು ವಿವಿಧ ಏಜೆನ್ಸಿಗಳ ಡೇಟಾ ಏಕೀಕರಣ ಇವು ಅದರ ಇಂದಿನ ವಿಧಾನಗಳ ಭಾಗವೆಂದು ವಿವರಿಸಲಾಗುತ್ತದೆ. ಈಗ ದೇಶದಲ್ಲಿ ಅಭಿವೃದ್ಧಿಯಾಗುತ್ತಿರುವ ಎಐ ತಂತ್ರಜ್ಞಾನವನ್ನು ಬಳಸಿಕೊಂಡರೆ ಭಾರತವು ಹೊಸ ಬಗೆಯ ಯುದ್ಧ ತಂತ್ರಗಳನ್ನು ಅಳವಡಿಸಿಕೊಳ್ಳಬಹುದು.

ಸ್ಮಾರ್ಟ್ ಕಣ್ಗಾವಲು ಜಾಲಗಳು (ಎಐ + ಕ್ಯಾಮೆರಾಗಳು)



ಭಾರತವು ಈಗಾಗಲೇ ಸಿಸಿಟಿವಿ ಜಾಲಗಳನ್ನು ಹೊಂದಿದೆ. ಅದಕ್ಕೆ ಕೃತಕ ಬುದ್ಧಿಮತ್ತೆಯ ಸ್ಪರ್ಶ ಕೊಡಬೇಕಷ್ಟೇ. ಸಂಚಾರ ಕ್ಯಾಮೆರಾಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳನ್ನು ಒಂದೇ ಎಐ ವ್ಯವಸ್ಥೆಗೆ ಜೋಡಿಸಿ, ದಟ್ಟ ಜನಸಂದಣಿಯಲ್ಲಿ ನಾವು ಅನುಮಾಸ್ಪದವಾಗಿ ಓಡಾಡುವಂಥ ವ್ಯಕ್ತಿಗಳನ್ನು, ತಲೆಮರೆಸಿಕೊಂಡಿರುವ ಉಗ್ರವಾದಿಗಳು ಅಥವಾ ಯಾವುದೇ ಸಮಾಜಘಾತುಕ ವ್ಯಕ್ತಿಗಳು ಅವರು ಯಾವುದೇ ವೇಷದಲ್ಲಿ ಬಂದರೂ ಪತ್ತೆ ಹಚ್ಚುವಂಥ ವ್ಯವಸ್ಥೆಯನ್ನು ರೂಪಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಯೋಗಗಳು ಸಾಗುತ್ತಿವೆ. ಸಿಸಿಟಿವಿ, ಫೋನ್ ಮೆಟಾಡೇಟಾ, ಹಣಕಾಸಿನ ವಹಿವಾಟುಗಳಿಂದ ಮಾದರಿಗಳನ್ನು ವಿಶ್ಲೇಷಿಸಿ ಅನುಮಾನಾಸ್ಪದ ನಡವಳಿಕೆಯನ್ನು ಗುರುತಿಸಿ (ಹಠಾತ್ ಪ್ರಯಾಣ, ಅಸಾಮಾನ್ಯ ಖರ್ಚು, ನೆಟ್‌ವರ್ಕ್ ಲಿಂಕ್‌ಗಳು) ಮುಂತಾದವನ್ನು ಗುರುತಿಸಬಹುದು.

2. ಅಡ್ವಾನ್ಸ್‌ಡ್ ಸಿಗ್ನಲ್ಸ್ ಇಂಟೆಲಿಜೆನ್ಸ್ (SIGINT) ತಂತ್ರಜ್ಞಾನ

ಭಾರತ ವಿರೋಧಿ ಶಕ್ತಿಗಳು ತಮ್ಮ ನಡುವೆ ನಡೆಸುವ ಗೌಪ್ಯ ಸಂವಹನವನ್ನು ಚುರುಕಾಗಿ ಗುರುತಿಸುವುದು, ವಿಶ್ಲೇಸುವಂಥ ಕೆಲಸ ನಡೆಯಬೇಕು. ಎನ್‌ಕ್ರಿಪ್ಟ್ ಮಾಡಿದ ಸಂದೇಶ ಮಾದರಿಗಳನ್ನು ಬೇಧಿಸುವುದು, ಡಾರ್ಕ್ ನೆಟ್‌ವರ್ಕ್ ಸಂವಹನ ಕ್ಲಸ್ಟರ್‌ಗಳನ್ನು ಪತ್ತೆ ಮಾಡುವುದು, ಎಐ-ಆಧಾರಿತ ಧ್ವನಿ ಮತ್ತು ಭಾಷಾ ಗುರುತಿಸುವಿಕೆಯಂಥ ತಂತ್ರಜ್ಞಾನಗಳು ಬೆಳೆಯಬೇಕು. ಇದು ಮಾನವ ಮಾಹಿತಿದಾರರನ್ನು ಮಾತ್ರ ಅವಲಂಬಿಸದೆ ಭಯೋತ್ಪಾದಕ ಜಾಲಗಳನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ.

ಆಟೋಮಸ್ ಡ್ರೋನ್‌ಗಳು ಮತ್ತು ಸ್ವಾರ್ಮ್ ತಂತ್ರಜ್ಞಾನ

ಆಧುನಿಕ ಭದ್ರತೆಯಲ್ಲಿ ಡ್ರೋನ್‌ಗಳು ನಿರ್ಣಾಯಕವಾಗುತ್ತಿವೆ. ರಿಯಲ್ ಟೈಮ್‌ನಲ್ಲಿ ಗಡಿ ಕಣ್ಗಾವಲು, ಒಳನುಸುಳುವಿಕೆ ಪ್ರಯತ್ನಗಳನ್ನು ಪತ್ತೆಹಚ್ಚುವುದು, ಕಠಿಣ ಭೂಪ್ರದೇಶದಲ್ಲಿ ಸಂಘಟಿತ ಮೇಲ್ವಿಚಾರಣೆಗಾಗಿ ಸ್ವಾರ್ಮ್ ಡ್ರೋನ್‌ಗಳನ್ನು ತಯಾರಿಸಬೇಕು. ಭಾರತವು ಜಮ್ಮು ಮತ್ತು ಕಾಶ್ಮೀರ, ಈಶಾನ್ಯ ಭಾರತದಂಥ ಪ್ರದೇಶಗಳಲ್ಲಿ ಬಳಕೆಯನ್ನು ವಿಸ್ತರಿಸಬಹುದು.

ಬಯೋಮೆಟ್ರಿಕ್ ಮತ್ತು ಗುರುತಿನ ಗುಪ್ತಚರ

ಆಧಾರ್ ಮೀರಿದ ಬಲವಾದ ಗುರುತಿನ ವ್ಯವಸ್ಥೆಗಳು ಇಂದಿನ ಭಾರತಕ್ಕೆ ಬೇಕೇಬೇಕು. ಏಕೆಂದರೆ, ಈಗೀಗ ಆಧಾರ್ ಕಾರ್ಡ್‌ಗಳನ್ನೂ ನಕಲು ಮಾಡಲಾಗುತ್ತಿದೆ. ಹಾಗಾಗಿ, ಬಹು-ಪದರದ ಬಯೋಮೆಟ್ರಿಕ್ (ಮುಖ+ನಡಿಗೆ+ಧ್ವನಿ) ಆಧಾರಿತ ಗುರುತು ಪತ್ತೆ ವ್ಯವಸ್ಥೆ ಜಾರಿಯಾಗಬೇಕು. ವಂಚನೆ ಅಥವಾ ನಕಲಿ ದಾಖಲೆಗಳನ್ನು ಪತ್ತೆಹಚ್ಚುವುದು, ರಾಜ್ಯಗಳಾದ್ಯಂತ ಕ್ರಿಮಿನಲ್ ಡೇಟಾಬೇಸ್‌ಗಳನ್ನು ಲಿಂಕ್ ಮಾಡುವುದು ಇತ್ಯಾದಿ ಕೆಲಸಗಳು ಈ ಬಯೋಮೆಟ್ರಿಕ್ ಮತ್ತು ಗುಪ್ತಚರ ಮಾಹಿತಿಗಳಿಂದಾಗಬೇಕು. ಇದರಿಂದ ಭಯೋತ್ಪಾದಕರು ನಕಲಿ ಗುರುತಿನ ಅಡಿಯಲ್ಲಿ ಅಡಗಿಕೊಳ್ಳುವುದನ್ನು ತಡೆಯಲು ಸಹಾಯ ಮಾಡುತ್ತದೆ.

ಸೈಬರ್ ಇಂಟೆಲಿಜೆನ್ಸ್ ಮತ್ತು ಡಾರ್ಕ್ ವೆಬ್ ಮಾನಿಟರಿಂಗ್

ಅನೇಕ ಭಯೋತ್ಪಾದಕ ಚಟುವಟಿಕೆಗಳು ಈಗ ಆನ್ ಲೈನ್‌ನಲ್ಲಿವೆ. ಹಾಗಾಗಿ, ನಾವು ಆನ್ ಲೈನ್‌ನಲ್ಲೇ ಸೋಷಿಯಲ್ ಮೀಡಿಯಾ ಮೂಲಕ ಇಂಥ ಸಂಘಟನೆಗಳಿಗೆ ಆಗುತ್ತಿರುವ ನೇಮಕಾತಿಯನ್ನು ಪತ್ತೆ ಹಚ್ಚುವುದು, ಶಸ್ತ್ರಾಸ್ತ್ರಗಳು/ಸ್ಫೋಟಕಗಳ ವ್ಯಾಪಾರಕ್ಕಾಗಿ ಉಗ್ರರು ಬಳಸುವ ಡಾರ್ಕ್ ವೆಬ್ ಅನ್ನು ಪರಿಶೀಲಿಸುವುದು, ಕೋಡ್ ವರ್ಡ್‌ಗಳ ಮಾದರಿಗಳನ್ನು ಪತ್ತೆ ಹಚ್ಚಲು ಎಐ ಪರಿಕರಗಳ ಬಳಕೆ-ಇಂಥ ವ್ಯವಸ್ಥೆಯನ್ನು ಸೈಬರ್ ಇಂಟೆಲಿಜೆನ್ಸ್ ಅಡಿಯಲ್ಲಿ ತರಬೇಕು.

ಉಪಗ್ರಹ ಮತ್ತು ಜಿಯೋ ಸ್ಪೇಷಿಯಲ್ ಇಂಟೆಲಿಜೆನ್ಸ್

ಗಡಿಯೊಳಗಿನ ಹಾಗೂ ಗಡಿಯಾಚೆಗಿನ ಉಗ್ರರ ತರಬೇತಿ ಶಿಬಿರಗಳ ಮೇಲೆ ನಿಗಾ ಇಡಲು ಪ್ರತ್ಯೇಕವಾದ ಅತ್ಯಾಧುನಿಕ ಉಪಗ್ರಹವನ್ನು ಹಾರಿಬಿಡಬೇಕು. ಈ ಉಪಗ್ರಹವು ಜಿಯೋಸ್ಪೇಷನಲ್ ಇಂಟೆಲಿಜೆನ್ಸ್‌ನಲ್ಲಿ ಕಾರ್ಯನಿರ್ವಹಿಸಬೇಕು. ಗಡಿಯಲ್ಲಿ ಅನುಮಾನಾಸ್ಪದ ವ್ಯಕ್ತಿಗಳ

ಚಲನ ವಲನಗಳನ್ನು ಸತತವಾಗಿ ಗಮನಿಸುವುದು, ಅನುಮಾಸ್ಪದ ವ್ಯಕ್ತಿಗಳ, ತರಬೇತಿ ಶಿಬಿರಗಳಲ್ಲಿ ನಡೆಯುತ್ತಿರುವ ತರಬೇತಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಹಾಗೂ ಸ್ವಯಂ ಸ್ವಯಂಚಾಲಿತ ಎಚ್ಚರಿಕೆಗಳಿಗಾಗಿ ಎಐನೊಂದಿಗೆ ಸಂಯೋಜಿಸುವಂಥ ತಂತ್ರಜ್ಞಾನ ರೂಪುಗೊಳ್ಳಬೇಕು.

ಸಂಯೋಜಿತ ಗುಪ್ತಚರ ವೇದಿಕೆಗಳು

ಪೊಲೀಸ್, ಐಬಿ, ರಾ (RAW), ಎನ್‌ಐಎಗಳನ್ನು ಸಂಪರ್ಕಿಸುವ ಒಂದು ಏಕೀಕೃತ ವೇದಿಕೆಯೊಂದು ಸಿದ್ಧಗೊಳ್ಳಬೇಕು. ಈಗ ಆ ಪ್ರಯತ್ನ ರೂಪುಗೊಂಡಿದ್ದರೆ ಅದಕ್ಕೆ ಅತ್ಯಾಧುನಿಕ ತಂತ್ರಜ್ಞಾನದ ಸ್ಪರ್ಶ ಕೊಡಬೇಕು. ವಿವಿಧ ರಾಜ್ಯಗಳಿಂದ ದತ್ತಾಂಶಗಳನ್ನು ಪಡೆಯುವುದು, ಹಾಗೆ ಬರುವ ದತ್ತಾಂಶಗಳನ್ನು ಒಂದೆಡೆ ಸಂಸ್ಕರಿಸುವುದು, ಬೇಕೆಂದಾಗ ಅದನ್ನು ಸೇನೆ, ಸಿಬಿಐ ಮುಂತಾದ ಸಂಸ್ಥೆಗಳು ಬಳಸಿಕೊಳ್ಳುವಂಥ ವ್ಯವಸ್ಥೆ ರೂಪುಗೊಳ್ಳಬೇಕು

ದಾವಣಗೆರೆ ಉಪಸಮರ

ಪರ್ಯಾಯ ನಾಯಕತ್ವ ಚಿಂತನೆ ಶಾಸಕ ರಿಜ್ವಾನ್‌ಗೆ ಮೆಚ್ಚುಗೆ ಸಚಿವ ಜಮೀರ್ ನಡೆ ನಿಗೂಢ ಕವಲು ದಾರಿಯಲ್ಲಿ ಅಲ್ಪಸಂಖ್ಯಾತ ನಾಯಕತ್ವ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಸರಕಾರಕ್ಕೆ ಸವಾಲಾಗಿದ್ದ ಉಪ ಚುನಾವಣೆ ಫಲಿತಾಂಶ ರಾಜಕಾರಣದಲ್ಲಿ ಬದಲಾವಣೆ ತರುವುದೋ ಇಲ್ಲವೋ, ಆದರೆ, ರಾಜ್ಯ ಅಲ್ಪಸಂಖ್ಯಾತರ ನಾಯಕತ್ವದಲ್ಲಿ ಮಾತ್ರ ಬದಲಾವಣೆ ಗಾಳಿ ಬೀಸುವಂತೆ ಮಾಡಿದೆ.

ಅದರಲ್ಲೂ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯ ಆರಂಭದಿಂದ ಮತದಾನದ ಅಂತ್ಯದವರೆಗೂ ನಡೆದ ವಿದ್ಯಮಾನಗಳು ರಾಜ್ಯ ಕಾಂಗ್ರೆಸ್‌ನ ಅಲ್ಪಸಂಖ್ಯಾತರ ನಾಯಕತ್ವ ಮತ್ತು ಪರ್ಯಾಯ ನಾಯಕತ್ವದ ಮೇಲೆ ಪರಿಣಾಮ ಬೀರಿದ್ದು, ಇದು ಫಲಿತಾಂಶದ ನಂತರ ಬೇರೆಯದೇ ರೂಪ ಪಡೆಯುವ ಸಾಧ್ಯತೆಯೂ ಇದೆ. ಅದು ಎಷ್ಟರ ಮಟ್ಟಿಗೆ ಎಂದರೆ, ಈ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಅಲ್ಪಸಂಖ್ಯಾತರ ನಾಯ ಕತ್ವದಲ್ಲಿ ಕೊಂಚ ಬದಲಾವಣೆಯಾಗುವ ಗಂಭೀರ ಚರ್ಚೆ ನಡೆದಿದೆ. ಒಂದೊಮ್ಮೆ ಸೋಲನುಭವಿಸಿದರೆ, ಸದ್ಯದ ಪಕ್ಷಾತೀತ ನಾಯಕರ ವರ್ಚಸ್ಸು ಇನ್ನೂ ಗಟ್ಟಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇದು ವಸತಿ ಸಚಿವ ಜಮೀರ್ ಅಹಮ್ಮದ್ ಅವರಿಗೆ ಲಾಭವಾದರೂ ಅಚ್ಚರಿ ಇಲ್ಲ. ಹಾಗೆಯೇ ಚುನಾವಣೆ ವೇಳೆ ಕಾಂಗ್ರೆಸ್ ವಿರುದ್ಧ ಸಿಡಿದಿದ್ದ ಅಲ್ಪಸಂಖ್ಯಾತರ ಸಮಾಧಾನದ ಸೂತ್ರವಾಗಿದ್ದ ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್‌ಗೆ ಹಿನ್ನಡೆಯಾದರೂ ಪಕ್ಷದಲ್ಲಿ ಅವರ ವರ್ಚಸ್ಸು, ಭವಿಷ್ಯ ಗಟ್ಟಿಯಾಗುವ ಸಾಧ್ಯತೆ ಇದೆ ಎಂದು ಪಕ್ಷದ ಹಿರಿಯರು ಹೇಳಿದ್ದಾರೆ. ಹೀಗಾಗಿ ಸದ್ಯ ಮುಗಿದಿರುವ ಉಪಚುನಾವಣೆ ಸಂದರ್ಭದಲ್ಲಿ ತಲೆದೋರಿದ್ದ ಅಲ್ಪಸಂಖ್ಯಾತರ ನಡುವಿನ ಗೊಂದಲ, ಅವರಲ್ಲಿ ಕಾಂಗ್ರೆಸ್ ವಿರುದ್ಧ ಎದ್ದಿದ್ದ ಆಕ್ರೋಶಗಳು ಫಲಿತಾಂಶದ ಮೇಲೆ ಪರಿಣಾಮ ಬೀರಿದರೆ ಹೇಗೆ ಎನ್ನುವ ಆತಂಕ ಕಾಂಗ್ರೆಸ್ ನಾಯಕರದ್ದಾಗಿದೆ ಎನ್ನಲಾಗಿದೆ.

ಈ ಮಧ್ಯೆ, ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್, ದಾವಣಗೆರೆಯಲ್ಲಿ ಅಲ್ಪಸಂಖ್ಯಾತರಿಗೇ ಕಾಂಗ್ರೆಸ್ ಟಿಕೆಟ್ ನೀಡದಿದ್ದರೆ ಹೇಗೆ ಎಂದು ಎಚ್ಚರಿಸಿದ್ದು, ನಂತರದಲ್ಲಿ ಏನೂ ನಡೆದೇ ಇಲ್ಲ ಎನ್ನುವಂತೆ ಚುನಾವಣಾ ಕಣಕ್ಕೆ ಬಂದು ಪ್ರಚಾರದ ಶಾಸ್ತ್ರ ಮುಗಿಸಿದ್ದನ್ನು ಪಕ್ಷದ ನಾಯಕರು ಸೂಕ್ಷ್ಮವಾಗಿ ಗಮನಿಸಿದ್ದಾರೆ ಎನ್ನಲಾಗಿದೆ. ಅಂದರೆ, ಉಪಚುನಾವಣೆ ಆರಂಭದಲ್ಲಿ ಟಿಕೆಟ್ ರಾಜಕಾರಣಕ್ಕೆ ಚಾಲನೆ ನೀಡಿ ನಂತರ ಮೌನವಾದ ಜಮೀರ್‌ಗೆ ದಾವಣಗೆರೆ ಚುನಾವಣೆ ಲಾಭ ಮತ್ತು ನಷ್ಟ ಎರಡನ್ನೂ ತರುವ ಸಾಧ್ಯತೆ ಇದೆ. ಇಲ್ಲಿ ಕಾಂಗ್ರೆಸ್ ಗೆದ್ದರೆ, ಅದು ಪಕ್ಷದ ಗೆಲುವು ಮಾತ್ರ, ಒಂದೊಮ್ಮೆ ಸೋತರೆ ಅದು ಜಮೀರ್ ಅವರ ಗೆಲುವು ಎನ್ನುವಂತೆ ಬಿಂಬಿತವಾಗುವ ಚರ್ಚೆಗಳು ನಡೆದಿವೆ. ಆದರೆ, ಇದು ಅವರ ನಾಯಕತ್ವದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ .

ಇದೇ ರೀತಿ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಹಿರಿಯರಾದ ಸಲೀಂ ಅಹಮ್ಮದ್ ತಂಡಕ್ಕೆ ವ್ಯತಿರಿಕ್ತ ಪರಿಣಾಮವಾಗುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಅಂದರೆ ಕಾಂಗ್ರೆಸ್ ಗೆದ್ದರೆ, ಅದು ಜಮೀರ್ ಅವರಿಲ್ಲದ ಪರ್ಯಾಯ ನಾಯಕತ್ವ ತಂದುಕೊಟ್ಟ ಗೆಲುವಾಗುತ್ತದೆ. ಒಂದೊಮ್ಮೆ ಪಕ್ಷ ಸೋತರೆ, ಅದು ಪಕ್ಷಾತೀತ ನಾಯಕತ್ವದ ಗೆಲುವಾಗುತ್ತದೆ. ಇದರಿಂದ ಕಾಂಗ್ರೆಸ್‌ನಲ್ಲಿ ಅಲ್ಪಸಂಖ್ಯಾತರ ನಾಯಕತ್ವ ಸದ್ಯ ಕವಲು ದಾರಿಯಲಿ ಸಾಗುವ ಸೂಚನೆಗಳು ವ್ಯಕ್ತವಾಗುತ್ತಿದೆ ಎಂಬ ವಿಶ್ಲೇಷಣೆ ಕಾಂಗ್ರೆಸ್ ನಾಯಕರ ವಲಯದಲ್ಲಿದೆ.

ಏನಾಗಬೇಕಿತ್ತು, ಏನಾಯ್ತು?

ದಾವಣಗೆರೆಯಲ್ಲಿ ಟಿಕೆಟ್ ಕೈ ತಪ್ಪುತ್ತಿದ್ದಂತೆ ಕ್ಷೇತ್ರದಲ್ಲಿದ್ದ 80 ಸಾವಿರಕ್ಕೂ ಹೆಚ್ಚಿನ ಅಲ್ಪಸಂಖ್ಯಾತ ಮತದಾರರಲ್ಲಿ ಬಹುತೇಕ ಮಂದಿ ಆಕ್ರೋಶಗೊಂಡಿದ್ದರು. ಇದನ್ನು ಸಮಾಧಾನಗೊಳಿಸಲು ಸಚಿವ ಜಮೀರ್ ಅವರು ಬರುತ್ತಾರೆ ಎನ್ನುವ ನಿರೀಕ್ಷೆ ಇತ್ತು. ನಂತರ ಪಕ್ಷದ ನಾಯಕರೆಲ್ಲಾ ಸೇರಿದ್ದ ನಾಮಪತ್ರ ಸಲ್ಲಿಕೆಗಾದರೂ ಸಿಗುತ್ತಾರೆ ಎನ್ನುವ ಮಾತಿತ್ತು. ಆದರೆ ಎಲ್ಲ ನಿರೀಕ್ಷೆಗಳು ಹುಸಿಯಾಗಿತ್ತು. ಕೇರಳ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ಜಮೀರ್, ಪಕ್ಷದ ನಾಯಕರ ಆಹ್ವಾನದ ನಂತರವೂ ಕ್ಷೇತ್ರಕ್ಕೆ ಬರಲಿಲ್ಲ. ಅಷ್ಟೊತ್ತಿಗಾಗಲೇ ಕ್ಷೇತ್ರದಲ್ಲಿ ಪರ್ಯಾಯ ನಾಯಕತ್ವದ ಸಿದ್ಧತೆ ನಡೆದಿತ್ತು. ಅಂದರೆ ಪಕ್ಷದ ನಾಯಕರು ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ವಿಶೇಷ ಜವಾಬ್ದಾರಿ ನೀಡಿ, ಕ್ಷೇತ್ರದಲ್ಲಿ ಚುನಾವಣೆ ಮುಗಿಯುವವರೆಗೂ ಕಾರ್ಯನಿರ್ವಹಿಸುವಂತೆ ಸೂಚಿಸಿದ್ದರು. ಇಷ್ಟರ ಮೇಲೂ ಕ್ಷೇತ್ರಕ್ಕೆ ಬಾರದ ಜಮೀರ್ ವಿರುದ್ಧ ಪಕ್ಷದ ಮುಖಂಡರಾದ ಸಲೀಂ ಅಹಮ್ಮದ್, ಎನ್.ಎ.ಹ್ಯಾರೀಸ್, ರಿಜ್ವಾನ್ ಅರ್ಷದ್ ತಂಡದಿಂದ ಪಕ್ಷದ ನಾಯಕರಿಗೆ ದೂರು ಸಲ್ಲಿಕೆಯಾಗಿತ್ತು ಎನ್ನಲಾಗಿದೆ. ನಂತರ ಪಕ್ಷದ ಹೈಗಮಾಂಡ್‌ಗೂ ಮಾಹಿತಿ ಹೋಗಿತ್ತು. ನಂತರ ಕ್ಷೇತ್ರಕ್ಕೆ ಬಂದ ಜಮೀರ್ ಅವರು, ಮಾಧ್ಯಮದ ಮೂಲಕ ಹಾಜರಾತಿ ಸಂದೇಶ ನೀಡಿದ್ದರು. ಆದರೆ ಪ್ರಚಾರದಲ್ಲಿ ತೊಡಗಿಸಿಕೊಳ್ಳದೆ, 80 ಸಾವಿರ ಮತದಾರರಿರುವ ತಮ್ಮ ಸಮುದಾಯಕ್ಕೆ ಟಿಕೆಟ್ ಕೊಡಿಸಲಾಗಲಿಲ್ಲ ಎನ್ನುವ ಬೇಸರವನ್ನು ದಾಖಲಿಸಿದ್ದರು.

ಮತದಾನ ಪ್ರಮಾಣ ತಂದ ಆತಂಕ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಳೆದ ಬಾರಿ ಶೇ.69ರಷ್ಟು ಮತದಾನ ನಡೆದಿತ್ತು. ಆದರೆ ಈ ಬಾರಿ ಶೇ.63ರಷ್ಟು ಮತದಾನವಾಗಿದೆ. ಮತದಾನದ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಬಿಜೆಪಿಯಲ್ಲಿ ವಿಶ್ವಾಸ ಮೂಡಿಸಿದ್ದು, ಕಾಂಗ್ರೆಸ್‌ನಲ್ಲಿ ಆತಂಕ ತರುವಂತೆ ಮಾಡಿದೆ. ಕಾರಣ ಕಳೆದ ಬಾರಿ 84,298 ಮತಗಳನ್ನು ಗಳಿಸಿದ್ದ ಕಾಂಗ್ರೆಸ್, ಈ ಬಾರಿ ಇನ್ನೂ ಹೆಚ್ಚಿನ ಮತ ಗಳಿಸುವ ವಿಶ್ವಾಸ ಇದ್ದಂತೆ ಕಾಣುತ್ತಿಲ್ಲ. ಹಾಗೆಯೇ ಕಳೆದ ಬಾರಿ 56,410 ಮತಗಳನ್ನು ಪಡೆದಿದ್ದ ಬಿಜೆಪಿಯು ಈ ಬಾರಿ ಇನ್ನೂ ಹೆಚ್ಚಿನ ಮತಗಳನ್ನು ಗಳಿಸುವ ವಿಶ್ವಾಸದಲ್ಲಿದೆ. ಏಕೆಂದರೆ, ಕಣದಲ್ಲಿದ್ದ ಎಸ್‌ಡಿಪಿಐ ಅಭ್ಯರ್ಥಿ ಸೇರಿದಂತೆ ಅನೇಕ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಈ ಬಾರಿ ಹೆಚ್ಚಿನ ಮತ ಗಳಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಂದರೆ ಕಾಂಗ್ರೆಸ್ ಪಾಲಾಗುತ್ತಿದ್ದ ಅಲ್ಪಸಂಖ್ಯಾತರ ಮತಗಳು, ಆ ಸಮುದಾಯದ ನಾಯಕ ಜಮೀರ್ ಅವರ ಸಕಾಲಿಕ ಪ್ರಚಾರ ಮತ್ತು ಸಮಾಧಾನಗಳ ಕಾರ್ಯತಂತ್ರಗಳಿಲ್ಲದೆ ಹರಿದು ಹಂಚಿಕೆ ಹೋಗಿರಬಹುದೇ ಎನ್ನುವ ಆತಂಕ ಕಾಂಗ್ರೆಸ್‌ನಲ್ಲಿದೆ. ಇದೇನಾದರೂ ಚುನಾವಣಾ ಫಲಿತಾಂಶದಲ್ಲಿ ವ್ಯಕ್ತವಾಗಿದ್ದೇಯಾದರೆ ಪಕ್ಷದಲ್ಲಿ ಜಮೀರ್ ಅವರಿಗೆ ಇರುವ ಸ್ಥಾನಕ್ಕೆ ಕೊಂಚ ಕುತ್ತು ತರುವ ಆತಂಕವೂ ಇದೆ ಎನ್ನಲಾಗಿದೆ.

ಸ್ಮಿತಾ ರಾಮಣ್ಣ ರಂಗಪ್ರವೇಶ ಇಂದು



ಬೆಂಗಳೂರು: ಕು.ಸ್ಮಿತಾ ರಾಮಣ್ಣ 'ಮಾರ್ಗಂ' ಸಂಪ್ರದಾಯದಲ್ಲಿ ಏ.12 ರಂದು ಸಂಜೆ 5.30 ಕ್ಕೆ ಕೋಣನಕುಂಟೆಯ ಬಳಿ ಇರುವ ಮೀನಾಕ್ಷಿ ರಂಗಮಂಚ ಆಡಿಟೋರಿಯಂನಲ್ಲಿ ವಿದ್ಯುಕ್ತ ವಾಗಿ ಭರತನಾಟ್ಯ ರಂಗಪ್ರವೇಶ ಮಾಡುತ್ತಿ ದ್ದಾರೆ. ಕೆಲವು ವರ್ಷಗಳಿಂದ ಕು.ಸ್ಮಿತಾ ಅವರು ವಿದುಷಿ ಭಾನು ಪ್ರಿಯಾ ರಾಕೇಶ್ ಗರಡಿಯಲ್ಲಿ ಪರಿಣತ ನಾಟ್ಯ ಶಿಕ್ಷಣ ಪಡೆದು ಜ್ಯೂನಿಯರ್ ನೃತ್ಯ ಪರೀಕ್ಷೆ ತೇರ್ಗಡೆಯಾಗಿ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತದಲ್ಲೂ ಪರಿಶ್ರಮಿಸಿರುವ ಸ್ಮಿತಾ ಅವರು ಉತ್ತಮ ಯೋಗಪಟು ಕೂಡ. ಸ್ಮಿತಾ, ಸ್ವತಃ ಕೆಲವು ಮಕ್ಕಳಿಗೆ ನೃತ್ಯ ಶಿಕ್ಷಣ ನೀಡುವ ಗುರುವಾಗಿದ್ದಾರಲ್ಲದೆ, ದೇಶದಾದ್ಯಂತ ವಲ್ಲದೆ, ವಿದೇಶದಲ್ಲೂ ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ. ಇದುವರೆಗೂ ಒಟ್ಟೂ 250ಕ್ಕೂ ಹೆಚ್ಚು ಕಾರ್ಯಕ್ರಮ ಪ್ರಸ್ತುತಪಡಿಸಿದ ಹೆಮ್ಮೆ ಇವರದು. ಹೈದರಾಬಾದ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ತೆಲುಗು ಮತ್ತು ಇಂಗ್ಲೀಷ್ ಭಾಷೆಯ ಅನೇಕ ನಾಟಕಗಳಲ್ಲಿ ಪಾಲ್ಗೊಂಡಿರುವ ಇವರು ಕೆಲವು ಕಿರುಚಿತ್ರಗಳಲ್ಲೂ ಅಭಿನಯಿಸಿದ ಅಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದೀಗ ತನ್ನ ನೃತ್ಯ ಪ್ರತಿಭಾ ಪ್ರದರ್ಶನವನ್ನು ಪ್ರೇಕ್ಷಕರ ಮುಂದೆ ಮಾರ್ಗಂ ಸಂಪ್ರದಾಯದಲ್ಲಿ ಪ್ರಸ್ತುತಪಡಿಸಲು ವಿದ್ಯುಕ್ತವಾಗಿ ಭರತನಾಟ್ಯ ರಂಗಪ್ರವೇಶ ಮಾಡುತ್ತಿದ್ದಾರೆ.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಮಸ್ಯೆ ಆಗದಂತೆ ಕ್ರಮವಹಿಸಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಯಾವುದೇ ಸಮಸ್ಯೆಗಳು ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳುವ ಜತೆಗೆ ಮಳೆಗಾಲಕ್ಕೂ ಮುನ್ನ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಹಲವು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಪ್ರದೇಶ ಹಾಗೂ ಕೋಗಿಲು ಜಂಕ್ಷನ್‌ನಲ್ಲಿ ಪ್ರವಾಹ ತಡೆಗಟ್ಟುವ ನಿಟ್ಟಿನಲ್ಲಿ ಯಲಹಂಕ ಕೆರೆಯ ವೆಂಕಟಾಲ ಕೆರೆ ಕೋಡಿಯಿಂದ ಜಕ್ಕೂರು ಕೆರೆಯವರೆಗೆ 2.7 ಕಿ.ಮೀ ಉದ್ದದ 35 ಮೀ. ಅಗಲದ ರಾಜಕಾಲುವೆ ಹಾಗೂ ಎರಡೂ ಬದಿಯಲ್ಲಿ 30 ಅಡಿ ರಸ್ತೆ ನಿರ್ಮಾಣ ಕಾರ್ಯಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ಮೊದಲ ಹಂತದಲ್ಲಿ 1.5 ಕಿ.ಮೀ ಉದ್ದದ ಆರ್‌ಸಿಸಿ ತಡೆಗೋಡೆ ಸಹಿತ ರಾಜಕಾಲುವೆ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಭಾಗದಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕಚ್ಚಾ ಡ್ರೈನ್ ನಿರ್ಮಿಸಲಾಗಿದೆ. ಪ್ರವಾಹ ಉಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

41 ಪುಸ್ತಕಗಳ ಬಿಡುಗಡೆ 15ರಂದು

ಬೆಂಗಳೂರು: ಹೊಸತಲೆಮಾರಿನ ಕನ್ನಡಿಗರಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಮನ್ವಯದ ನೆಲೆಗಳ ಕುರಿತು ಸರಳವಾಗಿ ತಿಳಿಸಿಕೊಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಸಾಮರಸ್ಯ ನೆಲೆಗಳು ಯೋಜನೆಯಡಿ 41 ಪುಸ್ತಕ ಸಿದ್ಧಪಡಿಸಿದೆ. ಪ್ರಾಧಿಕಾರವು ಏ.15ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಈ ಪುಸ್ತಕಗಳ ಜನಾರ್ಪಣೆ ಸಮಾರಂಭ ಹಮ್ಮಿಕೊಂಡಿದೆ.

ಕೊಬ್ಬರಿಗೆ ಮತ್ತೊಮ್ಮೆ ದಾಖಲೆ ಬೆಲೆ

ಹೂವಪ್ಪ ಈ ಎಚ್. ಬೆಂಗಳೂರು

ಮಾರುಕಟ್ಟೆಯಲ್ಲಿ ಕೊಬ್ಬರಿ ಆವಕ ಕಡಿಮೆಯಾಗಿದ್ದು, ಟೆಂಡರ್ ಸಮಯದಲ್ಲಿ ಮಾಡಿದ ಬದಲಾವಣೆ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿರುವುದು ತೆಂಗು ಬೆಳೆಗಾರರ ಮೊಗದಲ್ಲಿ ಹರ್ಷ ಮೂಡಿಸಿದೆ.

ತಿಪಟೂರು ಉಂಡೆ ಕೊಬ್ಬರಿ ಧಾರಣೆ ಮತ್ತೊಮ್ಮೆ ದಾಖಲೆ ಬರೆದಿದ್ದು, ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ನಡೆದ ಹರಾಜಿನಲ್ಲಿ ಕ್ವಿಂಟಲ್ 33, 618ಕ್ಕೆ ಮಾರಾಟವಾಗಿದೆ. ಕನಿಷ್ಠ ದರ 30,000, ಮಾದರಿ ದರ 31,860 ರು. ಗೆ ಮಾರಾಟವಾಗಿದೆ. ಅರಿಸೀಕೆರೆ ಮಾರುಕಟ್ಟೆಯಲ್ಲಿ 32,200 ರು.ಗೆ ಮಾರಾಟವಾಗಿದೆ. ಒಟ್ಟು 1,621 ಕ್ವಿಂಟಲ್ ಆವಕವಾಗಿತ್ತು. ಹಿಂದಿನ ವರ್ಷದ ಜೂನ್ 30ರಂದು ನಡೆದ ಮಾರಾಟದಲ್ಲಿ ಕ್ವಿಂಟಲ್ ದರ 31,100 ರು.ಗೆ ಮಾರಾಟವಾಗುವ ಮೂಲಕ ದಾಖಲೆ ಬೆಲೆ ನಿರ್ಮಿಸಿತ್ತು. ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ಈಗ ಹೊಸ ದಾಖಲೆಯೊಂದಿಗೆ ಮುನ್ನುಗ್ಗುತ್ತಿದೆ. ಬೆಲೆ ಏರಿಕೆಯಾಗುತ್ತಿರುವುದು ತೆಂಗು ಬೆಳೆಗಾರರಿಗೆ ಹರ್ಷ ತಂದಿದೆಯಾದರೂ ರೈತರ ಬಳಿ ಕೊಬ್ಬರಿ ದಾಸ್ತಾನು ಇಲ್ಲವಾಗಿದೆ. ಮಾರುಕಟ್ಟೆಯಲ್ಲಿ ಆವಕ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಹೆಚ್ಚಳವಾಗಬಹುದು ಎಂದು ವರ್ತಕರು ಹೇಳುತ್ತಿದ್ದಾರೆ.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿ ಸೋಮವಾರ, ಗುರುವಾರ ಹರಾಜು ನಡೆಯುತ್ತದೆ. ಸಾಮಾನ್ಯವಾಗಿ ಪ್ರತಿ ಹರಾಜಿನ ಸಮಯದಲ್ಲೂ 3 ಸಾವಿರ ಕ್ವಿಂಟಲ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟೆಗೆ ಬರುತ್ತಿತ್ತು. ಆದರೆ ಸೋಮವಾರದ ಹರಾಜಿಗೆ ಕೇವಲ 1,621 ಕ್ವಿಂಟಲ್ ಬಂದಿದೆ. ಕೊಬ್ಬರಿ ಶೇ.30ರಷ್ಟು ಆವಕ ಕಡಿಮೆಯಾದಂತಾಗಿದೆ.

ಉತ್ತರ ಭಾರತದ ರಾಜ್ಯಗಳಲ್ಲಿ ಹಬ್ಬದ ಸೀಜನ್ ಇಲ್ಲದ ಕಾರಣ ಅಲ್ಲಿ ಕೊಬ್ಬರಿಗೆ ಹೆಚ್ಚು ಬೇಡಿಕೆ ಇಲ್ಲವಾಗಿದೆ. ಈ ಬೆಲೆ ಏರಿಕೆ ವರ್ತಕರ ಮಂಡಿಗಳಿಗೆ ಹೆಚ್ಚು ಕೊಬ್ಬರಿ ಬಂದಿರಲಿಲ್ಲ. ಆವಕ ಕುಸಿದಿರುವುದು ಬೆಲೆ ಏರಿಯಾಗುವಂತೆ ಮಾಡಿದೆ ಎಂದು ಕೊಬ್ಬರಿ ರವಾನೆದಾರರೊಬ್ಬರು ತಿಳಿಸಿದರು.

ಈ ವರ್ಷದ ಆರಂಭದಲ್ಲೇ 31 ಸಾವಿರ ರು. ದಾಟುವ ಮೂಲಕ ಬೆಲೆ ಏರಿಕೆ ಸುಳಿವು ನೀಡಿತ್ತು. 30 ಸಾವಿರದಿಂದ 31 ಸಾವಿರ ರು. ನಡುವೆ ಮಾರಾಟವಾಗುತ್ತಿದ್ದ ಕೊಬ್ಬರಿ 33 ಸಾವಿರ ದಾಟಿದೆ. ಸಾಮಾನ್ಯವಾಗಿ ಜೂನ್ ತಿಂಗಳಿಂದ ದೀಪಾವಳಿ ವೇಳೆಗೆ ಧಾರಣೆ ಹೆಚ್ಚಳವಾಗುತಿತ್ತು. ಆದರೆ ಇದೀಗ ಕೊಬ್ಬರಿ

ಉತ್ಪಾದನೆ ಗಣನೀಯವಾಗಿ ಇಳಿದಿದೆ. ಮಾರುಕಟ್ಟೆಯಲ್ಲಿ ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಬಹಳಷ್ಟು ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಕಾಯಿ ಒಣಗಿಸಿ ಕೊಬ್ಬರಿ ಮಾಡುವುದು ಕಡಿಮೆಯಾಗುತ್ತಿದ್ದು, ಇದು ಮಾರುಕಟ್ಟೆಗೆ ಕೊಬ್ಬರಿ ಆವಕ ಕುಸಿತಕ್ಕೆ ಕಾರಣವಾಗಿದೆ ಎನ್ನುತ್ತಾರೆ ತಿಪಟೂರು ಕೊಬ್ಬರಿ ಮಂಡಿ ವ್ಯಾಪಾರಿ.

ಕೊಬ್ಬರಿ ವಹಿವಾಟಿನ ಇತಿಹಾಸದಲ್ಲಿ ಯಾವತ್ತೂ ಕ್ವಿಂಟಾಲ್ ಕೊಬ್ಬರಿ ಬೆಲೆ ರು. 20 ಸಾವಿರ ದಾಟಿಲ್ಲದಿರುವ ಬಗ್ಗೆ ರೈತರಲ್ಲಿ ಆಗಾಗ್ಗೆ ಚರ್ಚೆ ಉಂಟುಮಾಡುತ್ತಿತ್ತು. ಏಳೆಂಟು ವರ್ಷಗಳ ಹಿಂದೆ ಒಮ್ಮೆ 18 ಸಾವಿರದ ಸನಿಹಕ್ಕೆ ಬಂದಿದ್ದ ಬೆಲೆ ನಂತರ ಹಠಾತ್ ಕುಸಿದು 2023ರಲ್ಲಿ 8-10 ಸಾವಿರದ ಆಜುಬಾಜಿನಲ್ಲೇ ಗಿರಕಿ ಹೊಡೆಯುತ್ತಿತ್ತು.

ಈ ಸಂದರ್ಭದಲ್ಲಿ ಬೆಳೆಗಾರರಿಗೆ ಕೊಬ್ಬರಿ ಉತ್ಪಾದಿಸಲು ವೆಚ್ಚ ಹೆಚ್ಚಾಗಿ ಆದಾಯ ತುಂಬಾ ಕಡಿಮೆಯಾದ್ದರಿಂದ ತೆಂಗಿನ ಮರಗಳನ್ನು ಬೆಳೆಯುವುದು ಬೇಡವೆಂಬ ಬೇಸರಕ್ಕೆ ಬಂದಿದ್ದರು. ಹಾಗಾಗಿ ರೈತರು ಅಡಕೆ, ಬಾಳೆ, ದಾಳಿಂಬೆ ಮತ್ತಿತರೆ ವಾಣಿಜ್ಯ ತೋಟಗಾರಿಕೆಯತ್ತ ಮುಂದಾಗಿದ್ದರು. ಆದರೆ ಕಳೆದ ವರ್ಷದಿಂದ ತೆಂಗಿನ ಕಾಯಿಗಳ ಇಳುವರಿಯಲ್ಲಿ ಬಹುದೊಡ್ಡ ಕುಸಿತ ಕಂಡಿದ್ದರಿಂದ ಎಳನೀರು ಹಾಗೂ ತೆಂಗಿನ ಕಾಯಿಗಳಿಗೆ ನಿರೀಕ್ಷೆ ಮೀರಿ ಬೆಲೆ ಹಾಗೂ ಬೇಡಿಕೆ ಹೆಚ್ಚಾಗತೊಡಗಿದ್ದರಿಂದ ಬೆಳೆಗಾರರು ಎಳನೀರು ಹಾಗೂ ತೆಂಗಿನ ಕಾಯಿಗಳನ್ನೇ ಮಾರಾಟ ಮಾಡಲು ಪ್ರಾರಂಭಿಸಿದ್ದರಿಂದ, ಕೊಬ್ಬರಿ ದಾಸ್ತಾನು ಸಹಜವಾಗಿ ಕಡಿಮೆಯಾಗಿ ಕೊಬ್ಬರಿ ಬೆಲೆ ಏರುಮುಖದಲ್ಲಿ ಸಾಗುತ್ತಿದ್ದು, ಸೋಮವಾರದ ಹರಾಜಿನಲ್ಲಿ ಇದೀಗ 33 ಸಾವಿರ ಗಡಿ ದಾಟಿ ಮುಂದಿನ ದಿನಗಳಲ್ಲಿ ಮತ್ತಷ್ಟು ಬೇಡಿಕೆ-ಬೆಲೆ ಹೆಚ್ಚಾಗಬಹುದೆಂಬ ನಿರೀಕ್ಷೆಯಲ್ಲಿ ರೈತರು, ವರ್ತಕರು ಚರ್ಚೆ ಮಾಡುತ್ತಿರುವುದು ಕಂಡು ಬರುತ್ತಿದೆ.

ಏರಿಕೆಗೆ ಇನ್ನೊಂದು ಕಾರಣ: ಮಾರುಕಟ್ಟೆಯಲ್ಲಿ ಕೊಬ್ಬರಿ ಆವಕ ತೀವ್ರವಾಗಿ ಕಡಿಮೆಯಾಗಿದ್ದು, ಟೆಂಡರ್ ಸಮಯದಲ್ಲಿ ಮಾಡಿದ ಬದಲಾವಣೆ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿರುವುದು ತೆಂಗು ಬೆಳೆಗಾರರ ಮೊಗದಲ್ಲಿ ಹರ್ಷ ಮೂಡಿಸಿದೆ. ಹಿಂದೆ ವಾರದಲ್ಲಿ 3 ದಿನ (ಸೋಮವಾರ, ಬುಧವಾರ, ಶನಿವಾರ) ಟೆಂಡರ್ ಪ್ರಕ್ರಿಯೆ ನಡೆಯುತ್ತಿತ್ತು. ನವೆಂಬರ್‌ನಿಂದ ವಾರದಲ್ಲಿ ಎರಡು ದಿನ (ಸೋಮವಾರ, ಗುರುವಾರ) ಹರಾಜು ನಡೆಯುತ್ತಿದೆ. ಜತೆಗೆ ಬಿಡ್‌ದಾರರು ನೇರವಾಗಿ ಭಾಗವಹಿಸಲು ಅವಕಾಶ ನೀಡಿದ್ದು, ಖರೀದಿದಾರರೇ ಬೆಲೆ ನಿಗದಿಪಡಿಸಿ ಖರೀದಿಸುತ್ತಿರುವುದು ಬೆಲೆ ಹೆಚ್ಚಳಕ್ಕೆ ದಾರಿಮಾಡಿಕೊಟ್ಟಿದೆ ಎಂದು ತಿಪಟೂರು ಕೊಬ್ಬರಿ ವರ್ತಕರು ಹೇಳುತ್ತಾರೆ.

ಮಾರುಕಟ್ಟೆಯಲ್ಲಿ ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಬಹಳಷ್ಟು ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಕಾಯಿ ಒಣಗಿಸಿ ಕೊಬ್ಬರಿ ಮಾಡುವುದು ಕಡಿಮೆಯಾಗುತ್ತಿದ್ದು, ಇದು ಮಾರುಕಟ್ಟೆಗೆ ಕೊಬ್ಬರಿ ಆವಕ ಕುಸಿತಕ್ಕೆ ಕಾರಣವಾಗಿದೆ.
-ಸಂದೀಪ್, ಕೊಬ್ಬರಿ ವ್ಯಾಪಾರಿ, ತಿಪಟೂರು

ಶೇ.20ರಿಂದ 30 ಮರಗಳು ನಾಶವಾಗಿವೆ. ಈ ವರ್ಷ ಶೇ.40ರಷ್ಟು ಇಳುವರಿ ಕೊರತೆಯಾಗಿದೆ. ಈ ಸಲ ಹೆಚ್ಚು ಮಳೆ ಬಂದಿದ್ದರೂ ಇಳುವರಿ ಕಡಿಮೆಯಾಗಿದೆ. ತೆಂಗು ಬೇಸಾಯ ವೆಚ್ಚ ಜಾಸ್ತಿ ಬರುತ್ತಿದೆ. ಬೆಲೆ ಇದ್ದರೂ ಲಾಭ ಲಭಿಸುತ್ತಿಲ್ಲ.
-ರವಿಕುಮಾರ, ತಿಪಟೂರು

ಸಮಾಚಾರ ಸಣ್ಣದಲ್ಲ

ಇಂದು ಲಕ್ನೋ ವಿರುದ್ಧ ಗುಜರಾತ್ ಸವಾಲು

ಲಕ್ನೋ: ಇಲ್ಲಿನ ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಲಕ್ನೋ ಸೂಪರ್ ಜಿಯಾಂಟ್ಸ್ (ಎಲ್ಎಸ್‌ಜಿ) ಹಾಗೂ ಗುಜರಾತ್ ಟೈಟನ್ಸ್ (ಜಿಟಿ) ತಂಡಗಳು ಮುಖಾಮುಖಿಯಾಗಲಿವೆ. ಪ್ರಸಕ್ತ ಐಪಿಎಲ್‌ನ ಅಂಕಪಟ್ಟಿಯಲ್ಲಿ ಲಕ್ನೋ 5ನೇ ಸ್ಥಾನದಲ್ಲಿದ್ದರೆ, ಗುಜರಾತ್ ತಂಡ 7ನೇ ಸ್ಥಾನದಲ್ಲಿದೆ. ಹಾಗಾಗಿ, ಅಂಕಪಟ್ಟಿಯಲ್ಲಿ ತಮ್ಮ ಸ್ಥಾನವನ್ನು ಬಲಪಡಿಸುವ ಉದ್ದೇಶದಿಂದ ಈ ತಂಡಗಳು ಕಣಕ್ಕಿಳಿಯುತ್ತಿವೆ.

ಲಕ್ನೋ: ರಿಷಭ್ ಪಂತ್ (ನಾಯಕ ವಿಕೆಟ್ ಕೀಪರ್),ಏಡೆನ್ ಮಾರ್ಕ್ರಾಮ್, ಮಿಚೆಲ್ ಮಾರ್ಷ್, ನಿಕೋಲಸ್ ಪೂರನ್, ಅಬ್ದುಲ್ ಸಮದ್, ಮುಕುಲ್ ಚೌಧರಿ, ಮೊಹಮ್ಮದ್ ಶಮಿ, ಅವೇಶ್ ಖಾನ್, ಪ್ರಿನ್ಸ್ ಯಾದವ್, ಮಣಿಮಾರನ್ ಸಿದ್ಧಾರ್ಥ್, ದಿಗ್ವೇಶ್ ಸಿಂಗ್ ರಾಠಿ.

ಗುಜರಾತ್: ಗಿಲ್ (ನಾಯಕ), ಸಾಯಿ ಸುಧರಸನ್, ಜೋಸ್ ಬಟ್ಲರ್ (ವಿಕೆಟ್ ಕೀಪರ್), ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ, ವಿಜಯ್ ಶಂಕರ್, ರಶೀದ್ ಖಾನ್, ನೂರ್ ಅಹ್ಮದ್, ಮೋಹಿತ್ ಶರ್ಮಾ, ಉಮೇಶ್ ಯಾದವ್, ಸ್ಪೆನ್ಸರ್ ಜಾನ್ಸನ್.

ಸೂರ್ಯವಂಶಿ ಹೆಸರಲ್ಲಿ ಹೊಸ ದಾಖಲೆ ಸೃಷ್ಟಿ

ಗುವಾಹಟಿ: ಇಲ್ಲಿನ ಬರ್ಸಾಪಾರಾ ಕ್ರೀಡಾಂಗಣದಲ್ಲಿ ಏ. 10ರಂದು ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿರುದ್ಧದ ಪಂದ್ಯದಲ್ಲಿ ಮಿಂಚಿದ್ದ ರಾಜಸ್ಥಾನ ರಾಯಲ್ಸ್ ತಂಡದ ಸಿಡಿಲಮರಿ ವೈಭವ್ ಸೂರ್ಯವಂಶಿ, ಐಪಿಎಲ್ ಇತಿಹಾಸದಲ್ಲಿ ಹೊಸ ತೊಂದು ದಾಖಲೆ ಹುಟ್ಟುಹಾಕಿದ್ದಾರೆ. ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಕೇವಲ 26 ಎಸೆತಗಳಲ್ಲಿ 78 ರನ್ ಚಚ್ಚಿದ್ದರು. ಕೇವಲ 15 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ್ದರು. ಈ ಪಂದ್ಯದಲ್ಲಿ ಅವರ ಸ್ಟ್ರೈಕ್ ರೇಟ್ 300 ಪ್ಲಸ್ ಇತ್ತು. ಇತ್ತೀಚೆಗೆ, ಚೆನ್ನೈ ವಿರುದ್ಧದ ಪಂದ್ಯದಲ್ಲಿಯೂ ಅವರು 17 ಎಸೆತಗಳಲ್ಲಿ 52 ರನ್ ಬಾರಿಸುವ ಮೂಲಕ 300 ಪ್ಲಸ್ ಸ್ಟ್ರೈಕ್ ರೇಟ್ ಪಡೆದುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಐಪಿಎಲ್‌ನಲ್ಲಿ ಇನಿಂಗ್ಸ್ ಮುಗಿದ ನಂತರವೂ 300 ಪ್ಲಸ್ ಸ್ಟ್ರೈಕ್ ರೇಟ್ ನೊಂದಿಗೆ ಅರ್ಧಶತಕ ಗಳಿಸಿದ ಹೆಗ್ಗಳಿಕೆಯುಳ್ಳ ಮೊದಲ ಆಟಗಾರ ಎಂಬ ಹಿರಿಮೆಗೆ ಅವರು ಭಾಜನರಾಗಿದ್ದಾರೆ.

ತವರಿನಲ್ಲಿ ಪಂಜಾಬ್‌ಗೆ 6 ವಿಕೆಟ್ ಗೆಲುವು

ಶ್ರೇಯಸ್ ಬಿರುಸಿಗೆ ಮಣಿದ ಸನ್‌ರೈಸರ್ಸ್

ಚಂಡೀಗಢ: ನಾಯಕ ಶ್ರೇಯಸ್ ಅಯ್ಯರ್ ಅವರ ಸ್ಫೋಟಕ ಅರ್ಧಶತಕ (ಅಜೇಯ 69 ರನ್) ಸಹಾಯದಿಂದ ಪಂಜಾಬ್ ಕಿಂಗ್ಸ್ ತಂಡ, ಏ. 11ರಂದು ಚಂಡೀಗಡದ ಯಾದವೀರ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು. ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡ, ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 219 ರನ್ ಗಳಿಸಿತ್ತು. ಈ ಮೊತ್ತವನ್ನು ಬೆನ್ನಟ್ಟಿದ ಪಂಜಾಬ್ ಪಡೆ, 18.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 223 ರನ್ ಗಳಿಸಿ ಜಯದ ನಗೆ ಬೀರಿತು.

ಸನ್‌ರೈಸರ್ಸ್ ನೀಡಿದ್ದ ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ಆರಂಭಿಕರಾದ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್‌ಸಿಂಗ್ ಅವರು ಮೊದಲ ವಿಕೆಟ್‌ಗೆ 99 ರನ್ ಜೊತೆಯಾಟವಾಗಿ ಇನಿಂಗ್ಸ್‌ಗೆ ಭದ್ರ ಬುನಾದಿ ಹಾಕಿದರು. ಆನಂತರ, ಮಧ್ಯಮ ಕ್ರಮಾಂಕದಲ್ಲಿ ಬಂದ ನಾಯಕ ಶ್ರೇಯಸ್ ಅಯ್ಯರ್ ಅವರು 33 ಎಸೆತಗಳಲ್ಲಿ 5 ಬೌಂಡರಿ, 5 ಸಿಕ್ಸರ್ ಸಹಿತ 69 ರನ್ ಪೇರಿಸಿ ಪಂಜಾಬ್ ಗೆಲುವನ್ನು ಸುಲಭವಾಗಿಸಿದರು.

ಟಾಸ್ ಗೆದ್ದಿದ್ದ ಪಂಜಾಬ್ ತಂಡ, ಮೊದಲು ಸನ್‌ರೈಸರ್ಸ್ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್ ಅವರಿಂದ ಉತ್ತಮ ಆರಂಭ ಪಡೆಯಿತಾದರೂ 9ನೇ ಓವರ್‌ನಲ್ಲಿ ಈ ಜೋಡಿ ಬೇರ್ಪಡುವುದರೊಂದಿಗೆ ಸನ್ ರೈಸರ್ಸ್ ತನ್ನ ಮೊದಲ ವಿಕೆಟ್ ಕಳೆದುಕೊಂಡಿತು. ಆಗ ತಂಡದ ಮೊತ್ತ 120 ರನ್. ಅದಾಗಿ, 2 ರನ್ ಸೇರುವಷ್ಟರಲ್ಲಿ ಮತ್ತೊಬ್ಬ ಆರಂಭಿಕ ಅಭಿಷೇಕ್ ಶರ್ಮಾ ಅವರನ್ನು ಕಳೆದುಕೊಂಡಿತು. ಆನಂತರ, ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ಜೋಡಿ, 3ನೇ ವಿಕೆಟ್‌ಗೆ 47 ರನ್ ಪೇರಿಸಿತು. 14ನೇ ಓವರ್‌ನಲ್ಲಿ ಇಶಾನ್ ಕಿಶನ್ ಔಟಾದರೆ, ಅವರ ನಂತರ ಬಂದಿದ್ದ ಅನಿಕೇತ್ ವರ್ಮಾ 17ನೇ ಓವರ್‌ನಲ್ಲಿ ವಿಕೆಟ್ ಚೆಲ್ಲಿದರು. ಆನಂತರ ಸನ್‌ರೈಸರ್ಸ್ ಪತನ ಕಾಣುತ್ತಾ ಹೋಯಿತು.

ಸಂಕ್ಷಿಪ್ತ ಸ್ಕೋರ್

ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6ಕ್ಕೆ 219
ಅಭಿಷೇಕ್ ಶರ್ಮಾ 74, ಹೆನ್ರಿಚ್ 39; ಶಶಾಂಕ್ ಸಿಂಗ್ 20ಕ್ಕೆ 2, ಅರ್ಷದೀಪ್ ಸಿಂಗ್ 50ಕ್ಕೆ 2.
ಪಂಜಾಬ್ ಕಿಂಗ್ಸ್ 18.5 ಓವರ್‌ಗಳಲ್ಲಿ 4ಕ್ಕೆ 223
ಶ್ರೇಯಸ್ ಅಯ್ಯರ್ 69, ಪ್ರಿಯಾಂಶ್ ಆರ್ಯ 57; ಶಿವಾಂಗ್ ಕುಮಾರ್ 33ಕ್ಕೆ 3, ಹರ್ಷ ದುಬೆ 38ಕ್ಕೆ 1.

ಸ್ಟಬ್ಸ್ ಹೋರಾಟ ವ್ಯರ್ಥ | ಅಕ್ಷರ್ ಪಡೆಗೆ 6 ವಿಕೆಟ್ ಸೋಲು

ಚೆನ್ನೈ ಶಿಸ್ತಿನ ಪ್ರದರ್ಶನಕ್ಕೆ ಶರಣಾದ ಡೆಲ್ಲಿ ಕ್ಯಾಪಿಟಲ್ಸ್

ಚೆನ್ನೈ: ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಕರಾರುವಾಕ್ ಪ್ರದರ್ಶನ ನೀಡಿದ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡ, ಶನಿವಾರದಂದು ಚೆನ್ನೈ ಪಿ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 23 ರನ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ್ದ ಚೆನ್ನೈ, ಆರಂಭಿಕ ಸಂಜು ಸ್ಯಾಮ್ಸನ್ (ಅಜೇಯ 115) ಹಾಗೂ ಮಧ್ಯಮ ಕ್ರಮಾಂಕದ ಆಯುಷ್ ಮ್ಹಾತ್ರೆಯ (59) ಅವರ ಶತಕದ ಜೊತೆಯಾಟದಿಂದ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 212 ರನ್‌ಗಳಿಸಿತು. ಈ ಸವಾಲನ್ನು ಬೆನ್ನಟ್ಟಿದ ಡೆಲ್ಲಿ ತಂಡ, 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 189ಕ್ಕೆ ತೃಪ್ತಿಪಡಬೇಕಾಯಿತು.

ಚೆನ್ನೈ ನೀಡಿದ್ದ ಸವಾಲು ಸ್ವೀಕರಿಸಿದ ಡೆಲ್ಲಿ ತಂಡ ಆರಂಭಿಕರಾದ ಕೆಎಲ್ ರಾಹುಲ್ ಹಾಗೂ ಪಾಥುಮ್ ನಿಸ್ಸಾಂಕಾ ಜೋಡಿ ಆರಂಭ ನೀಡಿತು. ಆರಂಭದಿಂದಲೇ ಬಿರುಸಿನ ಹೊಡೆತಕ್ಕೆ ಮುಂದಾದ ಈ ಜೋಡಿ ವೇಗವಾಗಿ ರನ್ ಪೇರಿಸಲು ಆರಂಭಿಸಿತು. ಆದರೆ, 5ನೇ ಓವರ್‌ನಲ್ಲಿ ರಾಹುಲ್ ವಿಕೆಟ್ ಪತನಗೊಳ್ಳುವ ಮೂಲಕ ಈ ಜೊತೆಯಾಟ ಮುರಿಯಿತು. ಕೆಎಲ್ ರಾಹುಲ್ ನಿರ್ಗಮಿಸುತ್ತಲೇ ಸಮೀರ್ ರಿಜ್ವಿ, ಅಕ್ಷರ್ ಪಟೇಲ್, ಡೇವಿಡ್ ಮಿಲ್ಲರ್ ಒಬ್ಬರ ನಂತರ ಒಬ್ಬರಂತೆ ವಿಕೆಟ್ ಒಪ್ಪಿಸಿ ಹೊರನಡೆದರು. ಅದರಿಂದಾಗಿ ರನ್ ರೇಟ್ ಹಠಾತ್ತಾಗಿ ಕುಸಿಯಿತು. ಮಧ್ಯಮ ಕ್ರಮಾಂಕದಲ್ಲಿ ಟ್ರಿಸ್ಟನ್ ಸ್ಟಬ್ಸ್ (60 ರನ್, 38 ಎಸೆತ, 4 ಬೌಂಡರಿ, 3 ಸಿಕ್ಸರ್) ಭಾರೀ ಹೋರಾಟ ಮಾಡಿದರು. ಆದರೆ, 19ನೇ ಓವರ್‌ನಲ್ಲಿ ಅವರ ವಿಕೆಟ್ ಬೀಳುವ ಮೂಲಕ ಡೆಲ್ಲಿ ತಂಡಕ್ಕೆ ಭಾರೀ ಹಿನ್ನಡೆಯಾಯಿತು. ಟಾಸ್ ಸೋತರೂ ಮೊದಲು ಬ್ಯಾಟ್ ಮಾಡಲು ಅವಕಾಶ ಪಡೆದ ಚೆನ್ನೈಗೆ ಆರಂಭಿಕ ಸಂಜು ಸ್ಯಾಮ್ಸನ್, ಋತುರಾಜ್ ಗಾಯಕ್ವಾಡ್ ಉತ್ತಮ ಆರಂಭ ನೀಡಿದರು. ಆದರೆ, ಋತುರಾಜ್ ಬೇಗನೇ ಔಟಾದಾಗ ಆಯುಷ್ ಮ್ಹಾತ್ರೆ ಜೊತೆಗೂಡಿದ ಸ್ಯಾಮ್ಸನ್, 2ನೇ ವಿಕೆಟ್‌ಗೆ 113 ರನ್‌ಗಳ ಜೊತೆಯಾಟ ನೀಡುವ ಮೂಲಕ 20 ಓವರ್‌ಗಳಲ್ಲಿ 212 ರನ್ ಮೊತ್ತ ದಾಖಲಿಸಲು ನೆರವಾದರು.

ಸಂಕ್ಷಿಪ್ತ ಸ್ಕೋರ್

ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 212 (ಸಂಜು ಸ್ಯಾಮ್ಸನ್ ಅಜೇಯ 115, ಆಯುಷ್ ಮ್ಹಾತ್ರೆ 59; ಅಕ್ಷರ್ ಪಟೇಲ್ 39ಕ್ಕೆ 1).
ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 189 (ಟ್ರಿಸ್ಟನ್ ಮ್ಹಾತ್ರೆ 60, ಪಥುಮ್ 41; ಜ್ಯಾಮಿ 18ಕ್ಕೆ 4, ಅಂಶುಲ್ ಕಂಬೋಜ್ 35ಕ್ಕೆ 3).

ಚಿನ್ನದ ಪದಕಕ್ಕೆ ಕೈ ಚಾಚಿದ ಕಾರ್ಕಳ ಹುಡುಗ

ಏಷ್ಯನ್ ಬ್ಯಾಡ್ಮಿಂಟನ್ 2026

ಬೀಜಿಂಗ್: ಈ ಬಾರಿಯ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಕಾರ್ಕಳ ಮೂಲದ ಆಯುಷ್ ಶೆಟ್ಟಿ, ಟೂರ್ನಿಯ ಫೈನಲ್‌ಗೆ ಕಾಲಿಟ್ಟಿದ್ದಾರೆ. ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅವರು ವಿಶ್ವದ ನಂಬರ್ ಬ್ಯಾಡ್ಮಿಂಟನ್ ಆಟಗಾರ ಕುನ್ಲಾವುಟ್ ವಿಟಿಡ್ಸಾರ್ನ್ ಅವರನ್ನು 10-21, 21-19,21-17 ಗೇಮ್‌ಗಳ ಅಂತರದಲ್ಲಿ ಸೋಲಿಸಿ ಫೈನಲ್ ಪ್ರವೇಶಿಸಿದರು. ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಅವರು ಚೀನಾದ ಶಿಯು ಕ್ವಿ ಅವರನ್ನು ಎದುರಿಸಲಿದ್ದಾರೆ.

ಮೊದಲ ಗೇಮ್‌ನಲ್ಲಿ 10-21 ರಿಂದ ಹಿನ್ನಡೆ ಅನುಭವಿಸಿದರೂ, ನಂತರ ಅದ್ಭುತವಾಗಿ ಪುಟಿದೇಳುವ ಮೂಲಕ ಮುಂದಿನ ಎರಡು ಗೇಮ್‌ಗಳನ್ನು 21-19, 21-17 ರಿಂದ ಗೆದ್ದುಕೊಂಡರು. ಒಂದು ಗಂಟೆ 15 ನಿಮಿಷಗಳ ಕಾಲ ನಡೆದ ಈ ರೋಚಕ ಹೋರಾಟದಲ್ಲಿ, ಅವರ ಸಂಯಮ, ತಾಂತ್ರಿಕ ಪ್ರಜ್ಞೆ ಮತ್ತು ಆಕ್ರಮಣಕಾರಿ ನೆಟ್ ಪ್ಲೇ ಥಾಯ್ಲೆಂಡ್ ತಾರೆಯ ವಿರುದ್ಧ ಗೆಲುವು ಸಾಧಿಸಲು ನೆರವಾದವು. ಈ ಮೂಲಕ ತಾನು ವಿಶ್ವದ ಗಣ್ಯ ಆಟಗಾರರ ಸಾಲಿಗೆ ಸೇರಿದವನು ಎಂಬುದನ್ನು ಅವರು ಸಾಬೀತುಪಡಿಸಿದರು. 2018 ರಲ್ಲಿ ಹೆಚ್.ಎಸ್. ಪ್ರಣಯ್ ಅವರ ನಂತರ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್‌ನಲ್ಲಿ ಪದಕದ ವೇದಿಕೆಯನ್ನು ಏರಿದ ಮೊದಲ ಭಾರತೀಯ ಪುರುಷರ ಸಿಂಗಲ್ಸ್ ಆಟಗಾರ ಎಂಬ ಹೆಗ್ಗಳಿಕೆಗೆ ಶೆಟ್ಟಿ ಪಾತ್ರರಾಗಿದ್ದಾರೆ. 2023 ರಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ಡಬಲ್ಸ್ ಯಶಸ್ಸಿನ ನಂತರ, ಈ ಕೂಟದಲ್ಲಿ ಪದಕಕ್ಕಾಗಿ ಭಾರತದ ಕಾಯುವಿಕೆಯನ್ನು ಅವರು ಕೊನೆಗೊಳಿಸಿದ್ದಾರೆ. ಇದಕ್ಕೂ ಮುನ್ನ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ನಂ. 4 ಆಟಗಾರ ಜೊನಾಥನ್ ಕ್ರಿಸ್ಟಿ ವಿರುದ್ಧ ಗೆಲುವು ಸಾಧಿಸಿದ್ದರು.

ಪಂದ್ಯದ ಮಧ್ಯೆ ಕ್ರೀಸ್ ತೊರೆದ ಮಿಚೆಲ್

ಕರಾಚಿ: ಇಲ್ಲಿನ ನ್ಯಾಷನಲ್ ಸ್ಟೇಡಿಯಂನಲ್ಲಿ ಏ. 10ರಂದು ನಡೆದ ಪಾಕಿಸ್ತಾನ್ ಸೂಪರ್ ಲೀಗ್ (ಪಿಎಸ್ಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡದ ಅನುಭವಿ ಬ್ಯಾಟರ್ ಡೆರಿಲ್ ಮಿಚೆಲ್ ಅವರು ಪಾಕಿಸ್ತಾನದ ಸ್ಪಿನ್ನರ್ ಉಸ್ಮಾನ್ ತಾರಿಕ್ ಅವರ ಬೌಲಿಂಗ್ ಶೈಲಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಪಂದ್ಯದ ನಡುವೆಯೇ ಕ್ರೀಸ್‌ನಿಂದ ಹೊರನಡೆದ ಘಟನೆ ನಡೆದಿದೆ. ರಾವಲ್ಪಿಂಡಿ ಪಿಂಡಿಜ್ ಹಾಗೂ ಕ್ವೆಟ್ಟಾ ಗ್ಲಾಡಿಯೇಟರ್ಸ್ ನಡುವಿನ ಪಂದ್ಯದಲ್ಲಿ ಹೀಗಾಗಿದೆ.

ಕ್ವೆಟ್ಟಾ ಗ್ಲಾಡಿಯೇಟರ್ಸ್ ಪರ ಆಡುತ್ತಿರುವ ಉಸ್ಮಾನ್ ತಾರಿಕ್ ಅವರು ಚೆಂಡನ್ನು ಎಸೆಯುವ ಮುನ್ನ ತಮ್ಮ ಬೌಲಿಂಗ್ ಆಕ್ಷನ್‌ನಲ್ಲಿ ಕೊಂಚ ಬ್ರೇಕ್ ತೆಗೆದುಕೊಳ್ಳುತ್ತಿದ್ದರು. ಅಂದರೆ, ಓಡಿಬಂದು ಚೆಂಡನ್ನು ಎಸೆಯುವ ಹಂತದಲ್ಲಿ ಚೆಂಡನ್ನು ಹಾಕುವಂತೆ ಮಾಡಿದರೂ ಚೆಂಡು ಹಾಕದೇ ಮರುಕ್ಷಣದಲ್ಲೇ ಚೆಂಡನ್ನು ಹಾಕುತ್ತಿದ್ದರು. ಇದು ಡೆರಿಲ್ ಮಿಚೆಲ್ ಅವರನ್ನು ಗೊಂದಲಕ್ಕೀಡು ಮಾಡುತ್ತಿತ್ತು.

ಇದರಿಂದ ಅಸಮಾಧಾನಗೊಂಡ ಮಿಚೆಲ್, ಪಂದ್ಯದ ವೇಳೆ ಎರಡು ಬಾರಿ ಮಿಚೆಲ್ ಅವರು ಕ್ರೀಸ್ ಬಿಟ್ಟು ಹೊರನಡೆದ ಪ್ರಸಂಗ ನಡೆಯಿತು. ಬೌಲರ್ ಚೆಂಡನ್ನು ಬಿಡುವ ಮೊದಲೇ ಅನಗತ್ಯವಾಗಿ ನಿಲ್ಲುವುದು ಬ್ಯಾಟರ್‌ಗಳ ಏಕಾಗ್ರತೆಗೆ ಭಂಗ ತರುತ್ತದೆ ಎಂಬುದು ಅವರ ವಾದವಾಗಿತ್ತು. ಈ ವಿಡಿಯೋವನ್ನು ನಿಬ್ರಾರ್ಝ್ ರಂಜಾನ್ ಎಂಬುವರ ಟ್ವಿಟರ್‌ನಲ್ಲಿ ಪ್ರಕಟವಾಗಿದೆ.

ಈ ಪ್ರಕರಣದ ವಿಡಿಯೋ ನೋಡಲು ಇಲ್ಲಿನ QR ಕೋಡ್ ಸ್ಕ್ಯಾನ್ ಮಾಡಿ.

ವಿಟಾಕೀಸ್

ಹೊಸ ದಾಖಲೆ ಬರೆದ ಅದಿತಿ

ಮಹಿಳಾ ಪ್ರಧಾನ ಕಥೆಯ ಅದಿತಿ ಚಿತ್ರ ಶೂಟಿಂಗ್ ಮುಗಿಸಿದ್ದು ತೆರೆಗೆ ಸಿದ್ಧವಾಗಿದೆ. ನೆಲ್ಸನ್ ರೋಜರ್ಸ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರಕ್ಕೆ ಲಿಬರ್ಟಿ ಎಂಬ ಅಡಿಬರಹವಿದೆ. ಈ ಚಿತ್ರದ ರಿಲೀಸ್ ಆಗಿದ್ದು ಕುತೂಹಲ ಮೂಡಿಸಿದೆ. ಆ ದಿನಗಳು ಖ್ಯಾತಿಯ ಚೇತನ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಅದಿತಿ, ಸೈಕಲಾಜಿಕಲ್ ಥ್ರಿಲ್ಲರ್ ಕಥೆಯ ಸಿನಿಮಾ ಎಂಬುದು ಟೀಸರ್‌ನಲ್ಲಿ ತಿಳಿಯುತ್ತದೆ. ಇಶಾನಾ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಹರ್ಷಿತಾ ಕಲ್ಲಿಂಗಲ್, ಆರತಿ, ನಿಸರ್ಗಾ, ಯಶಾ, ಸುನಿಲ್, ಅಜಿತ್‌ಕುಮಾರ್, ಗೋಪಿ ಮುಂತಾದವರು ತಾರಾಗಣದಲ್ಲಿದ್ದಾರೆ. ಅದಿತಿ ಸೈಕಲಾಜಿಕಲ್ ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ. ಇಲ್ಲಿ ಅದಿತಿ ಯಾರು, ಯಾಕೆ ಬಂದಳು, ಏನು ಮಾಡಿದಳು ಅದಕ್ಕೆ ಕಾರಣವೇನು ಇವೆಲ್ಲವೂ ಕುತೂಹಲದೊಂದಿಗೆ ಸಾಗುತ್ತದೆ. ವಿಶ್ವದಲ್ಲೇ ಮೊದಲು ಎನ್ನಬಹುದಾದ ಅದಿತಿ ಸಿನಿಮಾವನ್ನು ಕೇವಲ ಐದು ಟೇಕ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಪ್ರತಿಯೊಂದು ದೃಶ್ಯಗಳು ಇಪ್ಪತ್ತರಿಂದ ಇಪ್ಪತ್ತೈದು ನಿಮಿಷ ಇರುತ್ತದೆ. ಇದಕ್ಕಾಗಿ ತಿಂಗಳುಗಟ್ಟಲೆ ಕಲಾವಿದರಿಗೆ ತರಬೇತಿ ಕೊಡಿಸಿ ಕ್ಯಾಮರಾ ಮುಂದೆ ನಿಲ್ಲಿಸಿದ್ದೇವೆ. ಹಿರಿಯ ಛಾಯಾಗ್ರಾಹಕ ಪಿ.ಕೆ.ಹೆಚ್.ದಾಸ್ ಛಾಯಾಗ್ರಹಣದ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು, ಮಲೆಯಾಳಂ ಹಾಗೂ ಕೊಂಕಣಿ ಭಾಷೆಗಳಲ್ಲಿ ಸಿನಿಮಾ ನಿರ್ಮಾಣವಾಗಿದ್ದು, ಏಕಕಾಲಕ್ಕೆ ಬಿಡುಗಡೆಯಾಗಲಿದೆ. ಎಲ್ಲಾ ಭಾಷೆಯ ಚಿತ್ರಗಳಿಗೆ ಮಹಿಳೆಯರೇ ಸಂಭಾಷಣೆ ಬರೆದಿರುವುದು ವಿಶೇಷ ಎಂದು ನಿರ್ದೇಶಕ ನೆಲ್ಸನ್ ಹೇಳಿದರು. ಮಿಲೆನಿಯಂ ಆಡ್ ಮೀಡಿಯಾ ಬ್ಯಾನರ್‌ನಲ್ಲಿ ವ್ಯಾಲೆರಿನಾ ಮರಿಯ ರೋಜರ್ಸ್ ಮತ್ತು ನೆಲ್ಸನ್ ರೋಜರ್ಸ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರದ ಹಾಡುಗಳಿಗೆ ರಮೇಶ್ ಕೃಷ್ಣ ಮತ್ತು ಕೃಷ್ಣಪ್ರಿಯ ದರ್ಶನ್ ಸಂಗೀತ ಸಂಯೋಜಿಸಿದ್ದು, ಸೋಲೋ ಮನ್ ಸಂಕಲನ ನಿರ್ವಹಿಸಿದ್ದಾರೆ. ಬೆಂಗಳೂರು, ಕನಕಪುರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸಗ ಳನ್ನು ಪೂರ್ಣಗೊಳಿಸಿರುವ ಅದಿತಿ ಜೂನ್‌ನಲ್ಲಿ ತೆರೆಗೆ ಬರಲಿದೆ.

ಹರಿದಾಸರ ಸಂಕೀರ್ತನ

ಕಲಾಗಂಗೋತ್ರಿ ಮಂಜು ನಿರ್ದೇಶಿಸಿರುವ ಭಕ್ತಿ ಪ್ರಧಾನ ಚಿತ್ರ ಸಂಕೀರ್ತನ ತೆರೆಗೆ ಸಿದ್ಧವಾಗಿದ್ದು, ಮುಂದಿನ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ. ಜೆ.ಎಂ.ಪ್ರಹ್ಲಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿರುವ ಈ ಚಿತ್ರವನ್ನು ಕೆ.ಪದ್ಮಕಲಾ ಗುಂಡೂರಾವ್ ನಿರ್ಮಾಣ ಮಾಡಿದ್ದಾರೆ. ಸಂಕೀರ್ತನ ಚಿತ್ರದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಶ್ರೇಷ್ಠ ಸಂತರ ಹಾಗೂ ಹರಿದಾಸರ ಬಗೆಗಿನ ಕಥಾಹಂದರವಿದೆ. ಹಿರಿಯ ಕಲಾವಿದರಾದ ಶ್ರೀಧರ್, ರಾಮಕೃಷ್ಣ, ರಮೇಶ್ ಭಟ್, ಅಜಯ್ ರಾಜ್, ಅಶೋಕ್ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. ಇದು ಹದಿನಾರನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಸಂತರ ಹಾಗೂ ಹರಿದಾಸರ ಕುರಿತಾದ ಚಿತ್ರ. ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ವೈಕುಂಠದಾಸರು, ಪುರಂದರದಾಸರು, ಕನಕದಾಸರೆ ಮೊದಲಾದ ಹರಿದಾಸರ ಕುರಿತು ತಿಳಿಸುವ ಪ್ರಯತ್ನವನ್ನು ಸಂಕೀರ್ತನ ಚಿತ್ರದಲ್ಲಿ ಮಾಡಿದ್ದೇವೆ. ನವರಾತ್ರಿಯಂದು ಹಂಪಿಗೆ ಬರುವ ವ್ಯಾಪಾರಿಗಳಿಂದ ಈ ಚಿತ್ರದ ಕಥೆ ಪ್ರಾರಂಭವಾಗುತ್ತದೆ ಎಂದು ಪ್ರಹ್ಲಾದ್ ಹೇಳಿದರು. ಸಂಕೀರ್ತನ ಭಕ್ತಿ ಪ್ರಧಾನ ಕಥೆಯ ಜತೆಗೆ ಐತಿಹಾಸಿಕ ಹಿನ್ನೆಯಲ್ಲಿ ಸಾಗುತ್ತದೆ. ಹಾಗಾಗಿ ದೊಡ್ಡ ಸೆಟ್ ನಿರ್ಮಿಸಿ ಅಲ್ಲಿಯೇ ಚಿತ್ರೀಕರಣ ನಡೆಸಿದ್ದೇವೆ ಎಂದು ನಿರ್ದೇಶಕ ಕಲಾಗಂಗೋತ್ರಿ ಮಂಜು ಹೇಳಿದರು. ಚಿಕ್ಕಂದಿನಿಂದ ದಾಸರ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿತ್ತು. ಹದಿನೈದು ವರ್ಷದ ನಂತರ ಅದು ಸಾಧ್ಯವಾಗಿದೆ. ಜಗತ್ತಿನಾದ್ಯಂತ ಚಿತ್ರ ಬಿಡುಗಡೆ ಮಾಡುವ ಉದ್ದೇಶವಿದೆ. ಮುಂದಿನ ವಾರ ಕರ್ನಾಟಕದಲ್ಲಿ ಚಿತ್ರ ಬಿಡುಗಡೆಯಾಗಲಿದ್ದು, ಬಳಿಕ ವಿದೇಶದಲ್ಲಿಯೂ ತೆರೆಗೆ ಬರಲಿದೆ ಎಂದು ಪದ್ಮಕಲಾ ಗುಂಡೂರಾವ್ ಹೇಳಿದರು. ಚಿತ್ರದಲ್ಲಿ ಹದಿನೈದು ಹಾಡುಗಳಿದ್ದು, ಪ್ರವೀಣ್.ಡಿ.ರಾವ್ ಸಂಗೀತ ಸಂಯೋಜಿಸಿದ್ದಾರೆ. ಕನಕಗಿರಿ ಬಳಿಯ ಮುಸಲಾಪುರ, ಆನೆಗುಂದಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಮಾತು ಮುಗಿಸಿದ ಫಾದರ್

ಆರ್.ಸಿ ಸ್ಟುಡಿಯೊ ಬ್ಯಾನರ್‌ನಲ್ಲಿ ಆರ್.ಚಂದ್ರು ನಿರ್ದೇಶನ ಮಾಡುತ್ತಿರುವ ಫಾದರ್ ಚಿತ್ರದ ಚಿತ್ರೀಕರಣ ಯಶಸ್ವಿಯಾಗಿ ಮುಕ್ತಾಯವಾಗಿದ್ದು, ಮಾತಿನ ಜೋಡಣೆ ಕಾರ್ಯವೂ ಪೂರ್ಣಗೊಂಡಿದೆ. ಆರಂಭದಿಂದಲೂ ಸಾಕಷ್ಟು ಕುತೂಹಲ ಮೂಡಿಸಿರುವ ಫಾದರ್ ಚಿತ್ರದಲ್ಲಿ ಪ್ರಕಾಶ್ ರಾಜ್ ಮತ್ತು ಡಾರ್ಲಿಂಗ್ ಕೃಷ್ಣ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಬಹುಭಾಷ ನಟ ಪ್ರಕಾಶ್ ರಾಜ್ ಅವರು ಶ್ರೀರಂಗಪಟ್ಟಣದಲ್ಲಿರುವ ತಮ್ಮ ಸ್ಟುಡಿಯೊದಲ್ಲೇ ಫಾದರ್ ಚಿತ್ರದ ತಮ್ಮ ಪಾತ್ರಕ್ಕೆ ಡಬ್ಬಿಂಗ್ ಮಾಡಿದ್ದಾರೆ. ಚಿತ್ರವನ್ನು ಆದಷ್ಟು ಬೇಗ ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ. ಈಗಾಗಲೇ ಈ ಚಿತ್ರದ ಫಸ್ಟ್ ಲುಕ್ ರಿಲೀಸ್ ಆಗಿದ್ದು, ಕಿಚ್ಚ ಸುದೀಪ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಸಾಥ್ ನೀಡಿದ್ದಾರೆ. ತಂದೆ ಮಗನ ಬಾಂಧವ್ಯ ಕಥೆಯ ಈ ಚಿತ್ರ ಹೃದಯ ಸ್ಪರ್ಶಿಯಾಗಿದ್ದು, ಪ್ರೇಕ್ಷಕರನ್ನು ಭಾವುಕ ಲೋಕಕ್ಕೆ ಕರೆದೊಯ್ಯುತ್ತದೆ.

ಫಾದರ್ ಅಂದರೆ ಒಂದು ಶಕ್ತಿ, ತಮ್ಮ ನಟನೆಯ ಮೂಲಕ ಎಲ್ಲರ ಗಮನ ಸೆಳೆಯುವ ಪ್ರಕಾಶ್ ರಾಜ್ ಅವರೇ ಇಲ್ಲಿ ಫಾದರ್. ಇನ್ನು, ಡಾರ್ಲಿಂಗ್ ಕೃಷ್ಣ ಕೂಡ ಪ್ರಮುಖ ಆಕರ್ಷಣೆ. ಇವರಿಬ್ಬರ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಫಾದರ್, ಈಗಾಗಲೇ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ. ಅದಕ್ಕೆ ಕಾರಣ, ಲವ್ ಮಾಕ್ಟೇಲ್ ಜೋಡಿ ಇಲ್ಲೂ ಒಂದಾಗಿದೆ. ಡಾರ್ಲಿಂಗ್ ಕೃಷ್ಣ ಅವರ ಜತೆಗೆ ಅಮೃತಾ ಅಯ್ಯಂಗಾರ್ ಅಭಿನಯಿಸಿದ್ದು, ಇದು ಸಿನಿಮಾದ ಬಗ್ಗೆ ಕುತೂಹಲ ಹೆಚ್ಚಿಸಿದೆ. ಇವರೊಂದಿಗೆ ಹಲವು ದಿಗ್ಗಜ ಕಲಾವಿದರು ತಾರಾಗಣದಜಿಚಿಣುಜಡಿಲ್ಲಿದ್ದಾರೆ. ತಂದೆ, ಮಗನ ಬಾಂಧವ್ಯ ಬೆರೆತ ಫಾದರ್ ಈ ವರ್ಷದ ಹಿಟ್ ಲಿಸ್ಟ್ ಸಿನಿಮಾಗಳ ಸಾಲಿಗೆ ಸೇರುವ ನಿರೀಕ್ಷೆ ಇದೆ. ಆರ್.ಸಿ.ಸ್ಟುಡಿಯೋಸ್ ಈ ಸಿನಿಮಾವನ್ನು ನಿರ್ಮಿಸಿದರೆ, ರಾಜ್ ಮೋಹನ್ ಈ ಸಿನಿಮಾದ ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಸುಜ್ಞಾನ್ ಛಾಯಾಗ್ರಹಣ, ನಕುಲ್ ಅಭಯಂಕರ್ ಸಂಗೀತ ನಿರ್ದೇಶನ ಫಾದರ್ ಚಿತ್ರಕ್ಕಿದೆ.



ನನಸಾದ ದಶಕದ ಕನಸು

ಶಂಕುಸ್ಥಾಪನೆ ಮಾಡಿದ್ದ ಸಿದ್ದರಾಮಯ್ಯ ಅವರಿಂದಲೇ ಉದ್ಘಾಟನೆ | ಹುಟ್ಟೂರಿಗೆ ಸೇತುವೆ ನಿರ್ಮಿಸಲು ಸರೋವರ ಶ್ರೀನಿವಾಸ್ ಅವರ ಅವಿರತ ಶ್ರಮ | ಪ್ರವಾಸಿಗರು-ಪ್ರವಾಸೋದ್ಯಮದ ನಡುವೆ ಸೇತುವೆಯಾಗುವ ವಿಶ್ವಾಸ

ರಸ್ತೆಗಳು ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯ ಸಂಕೇತ ಎನ್ನುವ ಮಾತೊಂದಿದೆ. ಆದರೆ ಭಾರತದಲ್ಲಿ, ಈಗಲೂ ರಸ್ತೆಗಳು ದೇಶದ ಅಥವಾ ರಾಜ್ಯಗಳ ಅಭಿವೃದ್ಧಿಯ ಸಂಕೇತ ಎನ್ನುವುದಕ್ಕಿಂತ, ಅನಿವಾರ್ಯತೆಯಾಗಿದೆ. ಇಂತಹದ್ದೇ ಅನಿವಾರ್ಯತೆಯ ಸೇತುವೆಯೊಂದು ಲೋಕಾರ್ಪಣೆಗೆ ಸಜ್ಜಾಗಿದ್ದು, ಈ ಸೇತುವೆ ಮೂಲಕ ಮುಂದಿನ ದಿನದಲ್ಲಿ ಸ್ಥಳೀಯರ ದೈನಂದಿನ ವ್ಯಾಪಾರ-ವ್ಯವಹಾರ, ಶಾಲೆ-ಆಸ್ಪತ್ರೆಗೆ ಹೋಗುವವರಿಗೆ ಆಗುತ್ತಿದ್ದ



ಸಮಸ್ಯೆ ಬಗೆಹರಿಯುವುದಷ್ಟೇ ಅಲ್ಲದೇ, ಮಲೆನಾಡಿನ ಪ್ರವಾಸೋದ್ಯಮದ ಮತ್ತಷ್ಟು ವಿಸ್ತಾರ ನಿರೀಕ್ಷೆ ಸ್ಥಳೀಯರದ್ದಾಗಿದೆ.

ನಾಯಕನಿಗೆ ದೂರದೃಷ್ಟಿ ಆಲೋಚನೆ, ಜನಪರ ಚಿಂತನೆಯಿದ್ದರೆ ಯಾವುದೂ ಅಸಾಧ್ಯವಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ಈ ಸೇತುವೆ ತಲೆಎತ್ತಿ ನಿಂತಿದೆ ಎಂದರೆ ತಪ್ಪಾಗುವುದಿಲ್ಲ. ಅಷ್ಟಕ್ಕೂ ಈ ಸೇತುವೆ ಇರುವುದು ನರಸಿಂಹರಾಜಪುರ (ಎನ್ ಆರ್‌ಪುರ)ದಲ್ಲಿ. ಭದ್ರಾ ಜಲಾಶಯದ ನಿರ್ಮಾಣದ ಬಳಿಕ ಹಿನ್ನೀರಿನಲ್ಲಿ ಮುಳುಗಡೆಯಾದ ಬಳಿಕ ಎನ್ ಆರ್ ಪುರ ಸುತ್ತಮುತ್ತಲಿನ ಅನೇಕ ಗ್ರಾಮಸ್ಥರು ಬೇರೆ ಕಡೆ ವಲಸೆ ಹೋದರು. ಆದರೆ ಎಂಟ್ಟತ್ತು ಗ್ರಾಮದವರು ಅಲ್ಲಿಗೇ ಉಳಿದುಕೊಂಡರು.

ಈ ರೀತಿ ತಾಯ್ನಾಡು ಬಿಟ್ಟು ಹೋಗಲು ಬಯಸದೇ ಉಳಿದುಕೊಂಡವರಿಗೆ ಹಿನ್ನೀರಿನ ಕಾರಣಕ್ಕೆ ಗ್ರಾಮಗಳಿಂದ ಎನ್‌ಆರ್ ಪುರಕ್ಕೆ ಬರಲು ಸುತ್ತಿಕೊಂಡು ಬರಬೇಕಾದ ಅನಿವಾರ್ಯತೆ ಸೃಷ್ಟಿಯಾಗಿತ್ತು. ಈ ಸಮಸ್ಯೆಯನ್ನು ಅರಿತ ಕೆಎಸ್ ಟಿಡಿಸಿ ಅಧ್ಯಕ್ಷ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಶ್ರೀನಿವಾಸ್ ಅವರು ತಮ್ಮ ಹುಟ್ಟೂರಿನ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು, ಸೇತುವೆ ನಿರ್ಮಿಸಬೇಕೆಂಬ ಆಲೋಚನೆ ಮಾಡಿದರು. ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಈ ಸೇತುವೆ ನಿರ್ಮಾಣದ ಮಹತ್ವವನ್ನು ಶ್ರೀನಿವಾಸ್ ಅವರು ಮನವರಿಕೆ ಮಾಡಿಕೊಟ್ಟರು.

ಭದ್ರಾ ಜಲಾಶಯಕ್ಕೆಂದು ಗ್ರಾಮಗಳನ್ನೇ ಬಿಟ್ಟುಕೊಟ್ಟಿರುವ ಗ್ರಾಮಸ್ಥರಿಗೆ ಶಾಶ್ವತ ಪರಿಹಾರ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇತುವೆಯನ್ನು ನಿರ್ಮಿಸಲು ಒಪ್ಪಿಗೆ ನೀಡಿ, ಶಂಕುಸ್ಥಾಪನೆ ಯನ್ನು ಮಾಡಿದರು. ಆದರೆ ಬಳಿಕ ಸರಕಾರಗಳ ನಿರ್ಲಕ್ಷ್ಯದಿಂದ ಈ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು. ಆದರೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ, ಶ್ರೀನಿವಾಸ್ ಅವರ ಸತತ ಪ್ರಯತ್ನದಿಂದ ಸೇತುವೆ ಕಾರ್ಯ ಮುಕ್ತಾಯವಾಗಿದ್ದು, ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದಲೇ ಲೋಕಾರ್ಪಣೆಗೊಳ್ಳಲಿದೆ.

ಭಾರಿ ಹೋರಾಟ

ಲೋಕಾರ್ಪಣೆಗೆ ನವವಧುವಿನಂತೆ ಈ ಸೇತುವೆ ಸಜ್ಜಾಗಿದೆ. ಆದರೆ ಈ ಹಂತಕ್ಕೆ ಈ ಕಾಮಗಾರಿ ಬರುವುದಕ್ಕೆ ಹತ್ತಿರ ಹತ್ತಿರ ಒಂದು ದಶಕ ಬೇಕಾಯಿತು. ಸಿದ್ದರಾಮಯ್ಯ ಅವರು ತಮ್ಮ ಮೊದಲ ಅವಧಿಯಲ್ಲಿ ಶಂಕುಸ್ಥಾಪನೆ ಮಾಡಿದ ಬಳಿಕ ಕಾಮಗಾರಿ ವೇಗ ಪಡೆಯುವ ಹೊತ್ತಿನಲ್ಲಿ ಸರಕಾರ ಬದಲಾಯಿತು. ಆಗ ಕಾಮಗಾರಿಗೆ ವೇಗ ನೀಡಲು ಎಷ್ಟೇ ಪ್ರಯತ್ನಿಸಿದರೂ, ಸಾಧ್ಯವಾಗಲಿಲ್ಲ. ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ಬಳಿಕ ಶ್ರೀನಿವಾಸ್ ಅವರು ಮುತುವರ್ಜಿವಹಿಸಿದ್ದರಿಂದ, ಹೆಚ್ಚುವರಿ ಅನುದಾನವನ್ನು ಒದಗಿಸಿ ಯೋಜನೆ ಪೂರ್ಣಗೊಳ್ಳುವಂತಾಗಿದೆ. ಆದರೆ ಈ ಹಂತಕ್ಕೆ ಸೇತುವೆ ಬರುವುದರ ಹಿಂದೆ ಭಾರಿ ಹೋರಾಟ ನಡೆದಿದೆ ಎನ್ನುವುದು ವಾಸ್ತವ.

ಈ ಸೇತುವೆ ನನ್ನ ಜೀವಮಾನದ ಸಾಧನೆ. ಇಲ್ಲಿನ ಕೆಲವು ಊರುಗಳು ಮುಳುಗಡೆ ಆದ ಬಳಿಕ ಹೊನ್ನೇಕೊಡಿಗೆಯವರು ಮಾತ್ರ ಇಲ್ಲಿದ್ದರು. ಅವರಿಗೆ ಪೇಟೆಗೆ ಬರುವ ದಾರಿ ಸುಲಭದ್ದಾಗಿರಲಿಲ್ಲ. ಈ ಸೇತುವೆಯಿಂದ ಅವರು ಸಲೀಸಾಗಿ ಓಡಾಡುವ ಹಾಗಾಗಿದೆ. ಇದರ ಎಲ್ಲ ಕ್ರೆಡಿಟ್ ಸಿದ್ದರಾಮಯ್ಯನವರಿಗೆ ಸಲ್ಲಬೇಕಾಗುತ್ತದೆ. ಎಡೆಹಳ್ಳಿಯಾಗಿದ್ದ ಊರಿಗೆ ನರಸಿಂಹರಾಜ ಒಡೆಯರ್ ಬಂದು ನರಸಿಂಹರಾಜಪುರ ಎಂಬ ಹೆಸರು ಕೊಟ್ಟರು. ಹಾಗೇ 100 ವರ್ಷಗಳ ಬಳಿಕ ಬಂದ ನೀವು ಈ ಊರಿಗೆ ಏನಾದರು ಕೊಡುಗೆ ಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೇಳಿದ್ದಕ್ಕೆ ಪ್ರೀತಿಯಿಂದ ಒಪ್ಪಿಕೊಂಡು ಈ ಸೇತುವೆ ನಿರ್ಮಾಣಕ್ಕೆ ನಾಂದಿ ಹಾಡಿದರು. ಶಂಕು ಸ್ಥಾಪನೆ ಕೂಡ ಮಾಡಿದರು. ಈಗ ಲೋಕಾರ್ಪಣೆ ಕೂಡ ಅವರೇ ಮಾಡುತ್ತಿದ್ದಾರೆ. ಹುಟ್ಟೂರಿನ ಋಣ ತೀರಿಸುವ ಪ್ರಯತ್ನ ಅಷ್ಟೇ.

-ಎಂ. ಶ್ರೀನಿವಾಸ, ಅಧ್ಯಕ್ಷರು, ಕೆಎಸ್ ಟಿಡಿಸಿ

ಎನ್ ಆರ್ ಪುರ ಮತ್ತು ಹೊನ್ನೇಕೊಡಿಗೆ ಸಂಪರ್ಕ ಮಾಡುವಂಥ ರಸ್ತೆಯಿದು. ಮುಳುಗಡೆ ಆದ ನಂತರ ಹಳ್ಳಿಯ ಜನರು ಸುಮಾರು ದೂರ ಪ್ರಯಾಣ ಮಾಡಿ ಎನ್ ಆರ್ ಪುರಕ್ಕೆ ಬರಬೇಕಿತ್ತು. ಈ ಸೇತುವೆಯಿಂದ ಅವರು ಈಗ 10-15 ನಿಮಿಷದಲ್ಲಿ ಪೇಟೆಯನ್ನು ತಲುಪಬಹುದು. ಇದೊಂದು ಐತಿಹಾಸಿಕ ಕಾರ್ಯ. ಮೈಸೂರಿನ ಒಡೆಯರ್ ನರಸಿಂಹರಾಜಪುರ ಎಂದು ನಾಮಕರಣ ಮಾಡಿದ ನೂರು ವರ್ಷಗಳ ಸಂಭ್ರಮಾಚರಣೆಯ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರಿಗೆ ಇಲ್ಲೊಂದು ಸೇತುವೆ ಆಗಬೇಕು ಎಂದು ಶ್ರೀನಿವಾಸ ಅವರು ಮನವಿ ಮಾಡಿದರು. ಅದಕ್ಕೆ ಮುಖ್ಯಮಂತ್ರಿಗಳು ಸುಮಾರು 34 ಕೋಟಿ ರು. ವಿಶೇಷ ಅನುದಾನ ನೀಡಿದರು. ಹೀಗಾಗಿ ಆ ಸೇತುವೆಗೆ ಅವರ ಹೆಸರನ್ನೇ ಇಡಲು ತೀರ್ಮಾನಿಸಲಾಗಿದೆ. ಸಿದ್ದರಾಮಯ್ಯನವರೇ ಬಂದು ಉದ್ಘಾಟನೆ ಕೂಡ ಮಾಡುತ್ತಿರುವುದು ಖುಷಿಯ ವಿಷಯ.

-ಟಿ.ಡಿ, ರಾಜೇಗೌಡ, ಶಾಸಕರು, ಶೃಂಗೇರಿ ವಿಧಾನಸಭಾ ಕ್ಷೇತ್ರ

ನರಸಿಂಹರಾಜಪುರ ಆಗಿದ್ದು ಇತಿಹಾಸ

ಹಾಗೇ ನೋಡಿದರೆ ಇಂದಿನ ಎನ್‌ಆರ್ ಪುರ ಶತಮಾನಗಳ ಹಿಂದೆ ಎನ್.ಆರ್.ಪುರವಾಗಿರಲಿಲ್ಲ. ಬದಲಿಗೆ ಎಡೆಹಳ್ಳಿಯಾಗಿತ್ತು. ಆದರೆ ಮೈಸೂರು ಸಂಸ್ಥಾನ ನರಸಿಂಹರಾಜ ಒಡೆಯರು ಈ ಹಳ್ಳಿಗೆ ಒಮ್ಮೆ ಭೇಟಿ ನೀಡಿದ್ದರು. ಈ ಭೇಟಿಯ ನೆನಪನ್ನು ಅಚ್ಚಳಿಯದಂತೆ ಇಟ್ಟುಕೊಳ್ಳಬೇಕು ಎನ್ನುವ ಕಾರಣಕ್ಕೆ ನರಸಿಂಹರಾಜಪುರ ಅಥವಾ ಎನ್‌ಆರ್ ಪುರ ಎಂದು ಮರುನಾಮಕರಣವಾಯಿತು. ಊರಿಗೆ ಮರುನಾಮಕರಣ ಮಾಡಿ ಶತಮಾನದ ಹೊಸ್ತಿಲಿನಲ್ಲಿ ಸಿದ್ದರಾಮಯ್ಯ ಅವರು ಭೇಟಿ ನೀಡಿದಾಗ ಎಂ.ಶ್ರೀನಿವಾಸ್ ಅವರು ಈ ಸೇತುವೆಯ ಪ್ರಸ್ತಾಪವನ್ನು ಮಾಡಿದ್ದರು. ಇದಕ್ಕೆ ಸ್ಪಂದಿಸಿ 2018ರಲ್ಲಿ ಸಿದ್ದರಾಮಯ್ಯ ಅವರೇ ಈ ಸೇತುವೆಗೆ ಗುದ್ದಲಿಪೂಜೆ ನೆರವೇರಿಸಿದ್ದರು.

ಸೇತುವೆಯ ಅಗತ್ಯವೇನು?

ಹೊನ್ನೇಕೊಡಿಗೆ ಭಾಗದ ಜನರು ಸದ್ಯ ಎನ್‌ಆರ್ ಪುರ ಪೇಟೆಗೆ ಬರಬೇಕೆಂದರೆ ಸುಮಾರು 23 ಕಿಮೀ ಸುತ್ತಿಕೊಂಡು ಬರಬೇಕು. ಆದರೀಗ ಕೇವಲ ಮೂರು ಕಿಮೀ ದೂರ ಪ್ರಯಾಣ ಮಾಡಿದರೆ ಸಾಕು. 38 ಕೋಟಿ ರು. ಅನುದಾನದಲ್ಲಿ ಸೇತುವೆ ನಿರ್ಮಾಣವಾಗಿದ್ದು, ಇದರೊಂದಿಗೆ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಅಗತ್ಯವೂ ಇದ್ದಿದ್ದಕ್ಕೆ ಆರು ಕೋಟಿ ರು. ಖರ್ಚು ಮಾಡಲಾಗಿದೆ. ಸುಮಾರು 15-20 ವರ್ಷಗಳ ಸುದೀರ್ಘ ಹೋರಾಟ ಇದಾಗಿತ್ತು. 2017ರಲ್ಲಿ ಶುರುವಾದ ಈ ಕೆಲಸ ಈಗ ಪೂರ್ಣಗೊಳ್ಳುತ್ತಿದ್ದು, ಹೋರಾಟವು ಈಗ ಸಾರ್ಥಕತೆ ಕಂಡುಕೊಂಡಿದೆ. ಪೇಟೆಗೆ ಬಂದು ವಾಪಸ್ ಹೋಗುವುದೆಂದರೆ ಅದು ಒಂದು ಇಡೀ ದಿನದ ಕೆಲಸವಾಗಿತ್ತು. ಈಗ ಕೆಲವು ಗಂಟೆಗಳಲ್ಲಿ ಬಂದು ಹೋಗಬಹುದು. ಇದರ ಜತೆಗೆ ಲಕ್ಕುಂದ, ಸಾಲೂರು, ಬಿಳಲ್ಕೊಪ್ಪ ಸೇರಿದಂತೆ ಏಳು ಗ್ರಾಮಗಳ 2000 ಜನಗಳಿಗೆ ಇದು ಅನುಕೂಲವಾಗಲಿದೆ.

ಸೇತುವೆಯ ಇತಿಹಾಸ

- ಸೇತುವೆಯ ಉದ್ದ : **504** ಮೀ (1.20ಕಿಮೀ ಸಂಪರ್ಕ ರಸ್ತೆ)
- ಸೇತುವೆಯ ಅಗಲ : **8.5** ಮೀಟರ್
- ಶಂಕುಸ್ಥಾಪನೆಯಾದ ದಿನ **19-03-2018**
- ಪೂರ್ಣಗೊಂಡ ದಿನ **30-01-2026**
- ಉದ್ದೇಶ : ಎನ್‌ಆರ್ ಪುರ ಸುತ್ತಮುತ್ತಲಿನ ಗ್ರಾಮಗಳಿಗೆ ಸಂಪರ್ಕ ಸೇತುವೆ ಹಾಗೂ ಪ್ರವಾಸೋದ್ಯಮಕ್ಕೆ ಒತ್ತು
- ಕಾಮಗಾರಿ ಮೊತ್ತ : **34.86** ಕೋಟಿ ರು.
- ಗುತ್ತಿಗೆದಾರರು **Contec Syndicate PVT LTD Banglore**

- ಭದ್ರ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ್ದ ಗ್ರಾಮದ ಕಷ್ಟ ನಿವಾರಣೆಗೆ ಸೇತುವೆ
- ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ ಶಂಕುಸ್ಥಾಪನೆ; ಅವರ ಎರಡನೇ ಅವಧಿಯಲ್ಲಿ ಲೋಕಾರ್ಪಣೆ
- ತಮ್ಮ ತವರೂರಿನ ಸಮಸ್ಯೆಗೆ ಶಾಶತ್ವ ಪರಿಹಾರ ಕಂಡುಕೊಳ್ಳುವುದಕ್ಕೆ ಶ್ರೀನಿವಾಸ್ ಅವರ ಹೋರಾಟಕ್ಕೆ ಸಿಕ್ಕ ಫಲ
- ಭಾನುವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸೇತುವೆ ಉದ್ಘಾಟನೆ
- ಸ್ಥಳೀಯವಾಗಿ ಈಗಾಗಲೇ 'ಸಿದ್ದರಾಮಯ್ಯ ಸೇತುವೆ' ಎಂದೇ ಪ್ರಖ್ಯಾತಿ
- ಉದ್ಘಾಟನೆಗೂ ಮೊದಲೇ ಪ್ರವಾಸಿ ತಾಣವಾದ ಸೇತುವೆ

ಉದ್ಘಾಟನೆಗೂ ಮೊದಲೇ ಜನಸಾಗರ

ಭದ್ರಾ ಹಿನ್ನೀರಿನಲ್ಲಿ ಸಿದ್ಧವಾಗಿ ಕರೆಯುತ್ತಿದೆ ಸಿದ್ದರಾಮಯ್ಯ ಸೇತುವೆ

ಕೆಎಸ್‌ಟಿಡಿಸಿಯಿಂದಲೂ ಮೂರು ಕಿಮೀ ಜಾಗದಲ್ಲಿ ರೆಸಾರ್ಟ್, ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಸಿದ್ಧತೆ

ಹಳ್ಳಿ-ಹಳ್ಳಿಗಳನ್ನು ಸಂಪರ್ಕಿಸಲು, ಭದ್ರೆ ಉಕ್ಕಿದಾಗ ಸಂಚಾರಕ್ಕೆ ಸಮಸ್ಯೆಯಾಗದಿರಲು ಹಾಗೂ ಸಂಚಾರದ ದೂರವನ್ನು ತಗ್ಗಿಸುವ ಉದ್ದೇಶದಿಂದ ಸೇತುವೆ ನಿರ್ಮಾಣವಾದರೂ, ಇದೀಗ ಉದ್ಘಾಟನೆಗೂ ಮೊದಲೇ ಈ ಸೇತುವೆ ಪ್ರವಾಸಿ ತಾಣವಾಗಿ ಬದಲಾಗಿದೆ.

ಎನ್.ಆರ್.ಪುರ ಮತ್ತು ಹೊನ್ನೆಕೊಡಿಗೆಯನ್ನು ಸಂಪರ್ಕಿಸಲು ಭದ್ರಾ ನದಿಯ ಹಿನ್ನೀರಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಹೊಸ ಸೇತುವೆ ಈಗ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಈ ಸ್ವರ್ಗ ಸದೃಶ ಸ್ಥಳ ನೋಡಲು ಈಗ ಪ್ರವಾಸಿಗರು ಮುಗಿ ಬಿದ್ದಿದ್ದಾರೆ. ಈ ಸೇತುವೆ ಈಗ ಚಿಕ್ಕಮಗಳೂರಿನ ಮತ್ತೊಂದು ಪ್ರಮುಖ ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಈ ಸೇತುವೆಯಿಂದಾಗಿ ರೈತರ ದಶಕಗಳ ಕನಸು ಕೂಡ ನನಸಾಗಿದೆ.

ಈ ಸೇತುವೆ ಮೂಲಕ ಮನಮೋಹಕ ನೈಸರ್ಗಿಕ ಸೌಂದರ್ಯ ಸವಿಯಲು ರಾಜ್ಯದ ನಾನಾ ಭಾಗಗಳಿಂದ ನಿತ್ಯ ಸಾವಿರಾರು ಜನ ಆಗಮಿಸುತ್ತಿದ್ದಾರೆ. ಹೀಗಾಗಿ ಈ ಭಾಗದಲ್ಲಿ ಇದ್ದಕ್ಕಿದ್ದಂತೆ ಪ್ರವಾಸೋದ್ಯಮ ಹೊಸ ಕಳೆ ಪಡೆದುಕೊಂಡಿದೆ. ಇನ್ನೊಂದೆಡೆ, ರೈತರಿಗೆ ಪಾಲಿಗೂ ಈ ಸೇತುವೆ ವರದಾನವಾಗಿದೆ. ಪಶ್ಚಿಮ ಘಟ್ಟಗಳ ಹಸಿರು ಸಾಲು ಮತ್ತು ಭದ್ರಾ ನದಿಯ ಪ್ರಶಾಂತ ಹಿನ್ನೀರಿನ ಹಿನ್ನೋಟವು ಪ್ರವಾಸಿಗರಿಗೆ ಆಹ್ಲಾದಕರ ಅನುಭವ ನೀಡುತ್ತಿದೆ. ಕೆಲವೇ ದಿನಗಳ ಹಿಂದೆ ಅಪರಿಚಿತ ಎಂಬಂತಿದ್ದ ಈ ಪ್ರದೇಶ ಈಗ ಪ್ರವಾಸಿ ಚಟುವಟಿಕೆಗಳಿಂದ ಗಿಜಿಗುಟ್ಟುತ್ತಿದೆ. ಈ ಸೇತುವೆಯು ಕೇವಲ ಒಂದು ಪ್ರವಾಸಿ ತಾಣವಾಗಿ ಉಳಿಯದೆ, ಸ್ಥಳೀಯರಿಗೆ ಮತ್ತು ರೈತರಿಗೆ ವರದಾನವಾಗಿದೆ.

ಹಿಂದೆ 30 ಕಿ.ಮೀ, ಈಗ 5 ಕಿ.ಮೀ

ಭದ್ರಾ ಅಣೆಕಟ್ಟನ್ನು 1958ರಲ್ಲಿ ನಿರ್ಮಾಣವಾದಾಗ ಈ ಪ್ರದೇಶದ ಸಾವಿರಾರು ರೈತರು ತಮ್ಮ ಫಲವತ್ತಾದ ಜಮೀನನ್ನು ಕಳೆದುಕೊಂಡು ನಿರ್ಗತಿಕರಾಗಿದ್ದರು. ನರಸಿಂಹರಾಜಪುರ ಮತ್ತು ಹೊನ್ನೆಕೊಡಿಗೆ ನಡುವಿನ ನೇರ ಸಂಪರ್ಕ ಕಡಿತಗೊಂಡಿತ್ತು. ಎನ್.ಆರ್. ಪುರದಿಂದ ಹೊನ್ನೆಕೊಡಿಗೆ ತಲುಪಬೇಕೆಂದರೆ ಸುಮಾರು 30 ಕಿ.ಮೀ ಪ್ರಯಾಣಿಸಬೇಕಿತ್ತು. ಆದರೆ ಇದೀಗ ಈ ಹೊಸ ಸೇತುವೆಯ ನಿರ್ಮಾಣದಿಂದಾಗಿ ಕೇವಲ 5 ಕಿ.ಮೀ ಕ್ರಮಿಸಿದರೆ ಸಾಕು. ಈ ಸೇತುವೆ ನಿರ್ಮಾಣದಿಂದಾಗಿ ಸಾರ್ವಜನಿಕರ ಮತ್ತು ರೈತರ ದೈನಂದಿನ ಪ್ರಯಾಣದ ಸಮಯದಲ್ಲಿ ಭಾರಿ ಉಳಿತಾಯ ಆಗಿದೆ. ಇದರಿಂದಾಗಿ ಸಾರಿಗೆ ವೆಚ್ಚ ಕೂಡ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಸುಮಾರು 800 ಮೀಟರ್ ಉದ್ದದ ಈ ಸೇತುವೆಯನ್ನು 36 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸೇತುವೆಗಾಗಿ ದಶಕಗಳಿಂದ ಇಲ್ಲಿಯ ಜನ ನಿರಂತರ ಹೋರಾಟ ನಡೆಸುತ್ತಿದ್ದರು. ಕೆ.ಎಸ್.ಟಿ.ಡಿ.ಸಿ ಅಧ್ಯಕ್ಷ ಎಂ.ಶ್ರೀನಿವಾಸ್ ಅವರು ಈ ಸೇತುವೆಯ ಅಗತ್ಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಸಿಎಂ ಸಿದ್ದರಾಮಯ್ಯ ಅವರು ಈ ಸೇತುವೆ ನಿರ್ಮಿಸಲು ವಿಶೇಷ ಆಸಕ್ತಿ ವಹಿಸಿದ್ದರು. ಮುಂದಿನ ದಿನಗಳಲ್ಲಿ ಇಲ್ಲಿ ವಾಟರ್ ಪಾರ್ಕ್ ಇತ್ಯಾದಿ ಆಧುನಿಕ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆ ಕಾರ್ಯಗತಗೊಳಿಸಲು ಸಿದ್ಧತೆ ನಡೆಸಿಕೊಳ್ಳಲಾಗಿದೆ.

1958 ರಲ್ಲಿ ಭದ್ರಾ ಅಣೆಕಟ್ಟು ನಿರ್ಮಾಣವಾದಾಗ ನರಸಿಂಹರಾಜಪುರ ಹಾಗೂ ಹೊನ್ನೆಕೊಡಿಗೆ ನಡುವಿನ ಗ್ರಾಮಗಳ ನೇರ ಸಂಪರ್ಕ ಕಡಿತಗೊಂಡಿತ್ತು. ಎರಡೂ ಗ್ರಾಮಗಳನ್ನು ಸಂಪರ್ಕಿಸಲು ಸುಮಾರು 30 ಕಿ.ಮೀ. ಅಧಿಕವಾಗಿ ಪ್ರಯಾಣಿಸಬೇಕಾಗಿತ್ತು. ಈ ಹೊಸ ಸೇತುವೆ ನಿರ್ಮಾಣದಿಂದ ಕೇವಲ 3 ರಿಂದ 4 ಕ್ರಮಿಸಿದರೆ ಸದರಿ ಗ್ರಾಮಗಳಿಗೆ ಸಂಪರ್ಕ ಹೊಂದಬಹುದಾಗಿದೆ. ಸದರಿ ಸೇತುವೆಯ ನಿರ್ಮಾಣದಿಂದ ಸುತ್ತಮುತ್ತಲಿನ ಸುಮಾರು 3000 ಜನಸಂಖ್ಯೆಗೆ ಅನುಕೂಲವಾಗುವುದಲ್ಲದೇ , ಪ್ರವಾಸೋದ್ಯಮದ ಅಭಿವೃದ್ಧಿಗೂ ಸಹಕಾರಿಯಾಗಿದೆ. ಸದರಿ ಹಾಂದೂರು – ನರಸಿಂಹರಾಜಪುರ ಸೇತುವೆ ಕಾಮಗಾರಿ ಕೈಗೊಳ್ಳಲು 2017–18 ನೇ ಸಾಲಿನಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತಾದರೂ ಹಲವಾರು ಕಾರಣಗಳಿಂದಾಗಿ ಕಾಮಗಾರಿ ವಿಳಂಬವಾಗಿತ್ತು. ಪ್ರಸ್ತುತ ಸ್ಥಳೀಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ನಮ್ಮ ಸರ್ಕಾರದ ಸಹಕಾರದೊಂದಿಗೆ ಸತತ ಪ್ರಯತ್ನಗಳಿಂದ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಕಾಮಗಾರಿಗೆ ಅನುಮೋದನೆ ನೀಡಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಂದಲೇ ಕಾಮಗಾರಿ ಉದ್ಘಾಟನೆ ಮಾಡಿ ಲೋಕಾರ್ಪಣೆ ಮಾಡುತ್ತಿರುವುದು ವಿಶೇಷವಾಗಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕಾಮಗಾರಿ ಯಶಸ್ವಿಯಾಗಿ ನಿರ್ಮಾಣ ಮಾಡಿದ್ದು ಸಂತಸ ತಂದಿದೆ.

–ಎಚ್.ಸಿ. ಬಾಲಕೃಷ್ಣ, ಅಧ್ಯಕ್ಷರು, ಕೆ.ಆರ್.ಡಿ .ಸಿ.ಎಲ್

ಮೂರು ಎಕರೆ ಜಾಗದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್

ಇನ್ನು ಈ ಸೇತುವೆ ಉದ್ಘಾಟಿಸುವುದಷ್ಟೇ ಅಲ್ಲದೇ, ಈ ಭಾಗದಲ್ಲಿ ಪ್ರವಾಸೋದ್ಯಮಕ್ಕೆ ಇನ್ನಷ್ಟು ಒತ್ತು ನೀಡಬೇಕು ಎನ್ನುವ ಕಾರಣಕ್ಕೆ ಕೆಎಸ್‌ಟಿಡಿಸಿ ವತಿಯಿಂದ ಈಗಾಗಲೇ ಹಿನ್ನೀರಿನ ಸುತ್ತಮುತ್ತಲಿನ ಭಾಗದಲ್ಲಿ ಮೂರು ಎಕರೆ ಜಾಗದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್, ಥೀಮ್ ಪಾರ್ಕ್, ವಾಟರ್ ಪಾರ್ಕ್ ಮಾಡುವ ಚಿಂತನೆಯಿದೆ. ಇದರೊಂದಿಗೆ ಕೆಎಸ್‌ಟಿಡಿಸಿ ವತಿಯಿಂದ ರೆಸಾರ್ಟ್ ಮಾಡಿದರೆ, ಪ್ರವಾಸಿಗರಿಗೆ ಮಲೆನಾಡ ಸೌಂದರ್ಯ ಹಾಗೂ ಹಿನ್ನೀರಿನ ತಂಪನ್ನು ಸವಿಯಲು ಸಾಧ್ಯವಾಗುತ್ತದೆ. ಈ ಸೇತುವೆಯ ಸುತ್ತಮುತ್ತ ಇನ್ನೂ ಕೆಲವು ಪ್ರೇಕ್ಷಣೀಯ ಸ್ಥಳಗಳಿವೆ. ಮುಖ್ಯವಾಗಿ, ಸಿಂಹನಗದ್ದೆ ಜೈನ ಬಸದಿ. ಇದು ಎನ್.ಆರ್. ಪುರದಲ್ಲಿರುವ ಐತಿಹಾಸಿಕ ಮತ್ತು ಧಾರ್ಮಿಕ ತಾಣವಾಗಿದೆ. ಇಲ್ಲಿಂದ ಸುಮಾರು 40 ಕಿ.ಮೀ ದೂರದ ಕುಪ್ಪಳಿಯಲ್ಲಿ ಕುವೆಂಪು ಸ್ಮಾರಕವಿದೆ. ಲಕ್ಕವಳ್ಳಿ ಭದ್ರಾ ಅಣೆಕಟ್ಟು ನೋಡಲು ಸೊಗಸಾಗಿದೆ.

ರಸ್ತೆ ಅಭಿವೃದ್ಧಿಗೆ ಕೋಟಿ ಕೋಟಿ ಅನುದಾನ

216 ಹೊಸ ಸೇತುವೆ, 288 ಸೇತುವೆ ದುರಸ್ತಿ ಕಾರ್ಯಕ್ಕೆ ಒಪ್ಪಿಗೆ ಮುಂದಿನ ಎರಡೂ ವರ್ಷವೂ 2ಸಾವಿರ ಕೋಟಿ ಅನುದಾನದ ನಿರೀಕ್ಷೆ

ರಾಜ್ಯ ರಸ್ತೆ, ಸೇತುವೆ, ಕಾಲುಸಂಕಗಳ ಅಭಿವೃದ್ಧಿ, ದುರಸ್ತಿ ಕಾರ್ಯಕ್ಕೆ ಕರ್ನಾಟಕ ಸರಕಾರ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದ್ದು, ವರ್ಷದ ಅವಧಿಯಲ್ಲಿ ಎರಡು ಸಾವಿರ ಕೋಟಿ ರು.ಗಳ ಅನುದಾನವನ್ನು ಒದಗಿಸಲಾಗಿದೆ.

2025–26 ನೇ ಸಾಲಿನಲ್ಲಿ 216 ಸೇತುವೆಗಳ ನಿರ್ಮಾಣ, 288 ಸೇತುವೆ ದುರಸ್ತಿ ಹಾಗೂ 386 ಕಾಲುಸಂಕಗಳ ನಿರ್ಮಾಣ ಕಾಮಗಾರಿಗಳನ್ನು 2000 ಕೋಟಿ ರು.ಗಳ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದಿಸಲಾಗಿದೆ. ಈ ಕಾರ್ಯಕ್ರಮವನ್ನು ಮುಂದುವರೆಸಿ ಸೇತುವೆಗಳ ನಿರ್ಮಾಣಕ್ಕಾಗಿ ಮುಂದಿನ ಎರಡು ವರ್ಷಗಳಲ್ಲಿ 2000 ಕೋಟಿ ಮೊತ್ತವನ್ನು ಒದಗಿಸಲಾಗುವುದೆಂದು ಘೋಷಿಸಲಾಗಿದೆ.

ಕೆಆರ್‌ಡಿಸಿಎಲ್ ರಾಜ್ಯದ ರಸ್ತೆ ಮೂಲಸೌಕರ್ಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. 1999ರ ಜುಲೈ 21ರಂದು ಕಂಪನಿಗಳ ಕಾಯಿದೆ 1956ರಲ್ಲಿ ಕರ್ನಾಟಕ ಸರಕಾರದ ಸಂಪೂರ್ಣ ಮಾಲೀಕತ್ವದ ಸಂಸ್ಥೆಯಾಗಿದ್ದು, ಸಾರ್ವಜನಿಕ ಕಾಮಗಾರಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಈ ನಿಗಮ, ರಸ್ತೆ ನಿರ್ಮಾಣ, ವಿಸ್ತರಣೆ, ಬಲಪಡಿಸುವುದು ಹಾಗೂ ಸೇತುವೆಗಳ ನಿರ್ಮಾಣದಲ್ಲಿ ತೊಡಗಿದೆ.

ಸಂಸ್ಥೆಯ ಪ್ರಾರಂಭಿಕ ಷೇರು ಬಂಡವಾಳ 510 ಕೋಟಿ ರು.ಗಳಾಗಿದ್ದು, ಸರಕಾರದ ಅನುದಾನ, ರಸ್ತೆ ಬಳಕೆದಾರ ಶುಲ್ಕ, ಠೇವಣಿ ಕೊಡುಗೆಗಳ ಬಡ್ಡಿ ಹಾಗೂ ರಸ್ತೆ ನಿಧಿ ರಚನೆ ಮೂಲಕ ಹಣಕಾಸು ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ, 2001–04ರಲ್ಲಿ 7327 ಕಿ.ಮೀ ಮತ್ತು 2005–08ರಲ್ಲಿ 14500 ಕಿ.ಮೀ ರಾಜ್ಯ ಹೆದ್ದಾರಿ ನಿರ್ವಹಣೆ ನಡೆಸಲಾಗಿದೆ. ಹಂತ ಹಂತವಾಗಿ 642 ಸೇತುವೆಗಳು ಹಾಗೂ 33 ಪ್ರಮುಖ ಸೇತುವೆಗಳುನಿರ್ಮಾಣಗೊಂಡಿವೆ.

ಶತಮಾನದ ಬಳಿಕ ರಸ್ತೆ ಅಗಲೀಕರಣ

ಸಿದ್ದರಾಮಯ್ಯ ಅವರು ಕೇವಲ ಈ ಸೇತುವೆ ಮಾತ್ರವಲ್ಲದೇ, ಎನ್.ಆರ್ ಪುರದ ರಸ್ತೆಗಳೂ ಅಗಲೀಕರಣವಾಗಿರಲಿಲ್ಲ. ಆದ್ದರಿಂದ ಇದೀಗ ಸುಮಾರು 38.50 ಕೋಟಿ ವೆಚ್ಚದಲ್ಲಿ ಬೃಹತ್ ಸೇತುವೆ ನಿರ್ಮಾಣದೊಂದಿಗೆ, ಸೇತುವೆಗೆ ಹೋಗುವ ರಸ್ತೆಯನ್ನು ಸುಮಾರು ಆರು ಕೋಟಿ ರುಪಾಯಿ ವೆಚ್ಚದಲ್ಲಿ ಗುಣಮಟ್ಟದಲ್ಲಿ ನಿರ್ಮಾಣ ಮಾಡಲಾಗಿದೆ. 130 ವರ್ಷಗಳಿಂದ ಎನ್.ಆರ್.ಪುರ ಪಟ್ಟಣದ ರಸ್ತೆ ಅಗಲೀಕರಣವಾಗಿರಲಿಲ್ಲ. ರಸ್ತೆ ಕಿರಿದಾಗಿದ್ದು ವಾಹನಗಳ ಓಡಾಟವೇ ಕಷ್ಟವಾಗಿತ್ತು. ರಸ್ತೆ ಅಗಲೀಕರಣ ಮಾಡಿ ಮನೆ ಮಾಲೀಕರಿಗೆ ಪರಿಹಾರ ಕೊಡಿಸಬೇಕು ಎಂದು 60 ಕೋಟಿ ರುಪಾಯಿಗಳನ್ನು ಮಂಜೂರು ಮಾಡಿಸಲಾಗಿದೆ. ಈ ಅನುದಾನದಲ್ಲಿ ರಸ್ತೆ ಅಗಲೀಕರಣಕ್ಕೆ 20 ಕೋಟಿ ರುಪಾಯಿಗಳನ್ನು ಬಳಸಿಕೊಂಡು, ಉಳಿದ 40 ಕೋಟಿ ರುಪಾಯಿಯನ್ನು ನಿವೇಶನ, ಮನೆ ಕಳೆದುಕೊಂಡವರಿಗೆ ಪರಿಹಾರ ನೀಡಲಾಗಿದೆ. ಈ ಯೋಜನೆಗೆ ಹಲವು ಶಾಸಕರು, ಸಚಿವರು ವಿರೋಧಿಸಿದರೂ ಎಂ.ಶ್ರೀನಿವಾಸ್ ಅವರ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 60 ಕೋಟಿ ರುಪಾಯಿ ಮಂಜೂರು ಮಾಡಿದ್ದರು. ಈ ರಸ್ತೆ ಅಗಲೀಕರಣದಿಂದ ಎನ್.ಆರ್.ಪುರ ಪಟ್ಟಣ ಅಭಿವೃದ್ಧಿ ಕಾಣಲಿದೆ. ಪಟ್ಟಣದ ಚಿತ್ರವೇ ಬದಲಾಗಲಿದೆ ಎನ್ನುವುದು ಸ್ಥಳೀಯರ ವಿಶ್ವಾಸವಾಗಿದೆ.

ಸೇತುವೆ ನಿರ್ಮಾಣಕ್ಕೆ ಶ್ರೀನಿವಾಸ್ ಕೊಡುಗೆ

ಹಾಗೇ ನೋಡಿದರೆ, ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗಲೇ ಈ ಸೇತುವೆ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಆದರೆ ಅದಾದ ಬಳಿಕ ಚುನಾವಣೆ, ಕರೋನಾ ಸೇರಿದಂತೆ ವಿವಿಧ ಕಾರಣಕ್ಕೆ ಸೇತುವೆ ಕಾಮಗಾರಿ ಟೇಕ್ ಆಫ್ ಆಗಲಿಲ್ಲ. ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಪ್ರಮಾಣ ವಚನ ಸ್ವೀಕರಿಸಿದ ಬಳಿಕ, ಎಂ. ಶ್ರೀನಿವಾಸ್ ಅವರು ತಮ್ಮ ಊರಿನ ಅಭಿವೃದ್ಧಿಗೆ, ಸುತ್ತಮುತ್ತಲಿನ ಜನರಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರಿ ಪುನಃ ಯೋಜನೆಗೆ ವೇಗ ಕೊಡಿಸುವ ಪ್ರಯತ್ನವನ್ನು ಮಾಡಿದರು. ಆರಂಭದಲ್ಲಿ 34 ಕೋಟಿ ರು.ಗಳಿಗೆ ಸೇತುವೆ ಕಾಮಗಾರಿ ಶುರುವಾಗಿದ್ದರೂ, ನಿಗದಿತ ಅವಧಿಗೆ ಮುಗಿಯದೇ ಇದಿದ್ದರಿಂದ ಹೆಚ್ಚುವರಿ ಅನುದಾನದ ಅಗತ್ಯವಿತ್ತು. ಆ ಸಮಯದಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಇದ್ದ ಆತ್ಮೀಯತೆಯನ್ನು ಬಳಸಿಕೊಂಡು, ಅಗತ್ಯವಿದ್ದ ಹೆಚ್ಚುವರಿ ಅನುದಾನವನ್ನು ತರುವಲ್ಲಿ ಯಶಸ್ವಿಯಾದರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ, ಹುಟ್ಟೂರಿಗೆ ಹಾಗೂ ಜನರ ಅನುಕೂಲಕ್ಕೆ ಶ್ರೀನಿವಾಸ್ ಅವರು ಹಾಕಿದ ಶ್ರಮಕ್ಕೆ ಸ್ಥಳೀಯರು ಶ್ಲಾಘಿಸುತ್ತಿದ್ದಾರೆ.

ಮಲೆನಾಡಿನ ಸಂಪರ್ಕ ಕ್ರಾಂತಿ

ನನಸಾದ ಕನಸು; ಎನ್.ಆರ್. ಪುರ ಸೇತುವೆ

ಈ ಸೇತುವೆ ಕೇವಲ ಸಿಮೆಂಟ್ ರಸ್ತೆಯಲ್ಲ. ಇಲ್ಲಿನ ಜನರ ಜೀವನಾಡಿ. ಸುದೀರ್ಘ ಹೋರಾಟಕ್ಕೆ ಸಿಕ್ಕ ಪ್ರತಿಫಲ. ಎರಡು ಊರುಗಳನ್ನು ಸೇರಿಸುವ ಜತೆಗೆ ಮನುಷ್ಯರನ್ನೂ ಭಾವನಾತ್ಮಕವಾಗಿ ಬೆಸೆಯುತ್ತಿದೆ. ಅದೆಷ್ಟೋ ಜೀವಗಳು ಈಗ ನೆಮ್ಮದಿಯಿಂದ ಓಡಾಡುವ ಸಮಯ ಬಂದಿದೆ. ಮನೆಗೆ ಹೋಗಲು ತಡವಾಗುತ್ತದೆ ಎಂಬ ಆತಂಕದಿಂದ ದೂರವಾಗುವ ಸಮಯ ಬಂದಿದೆ. ಇದು ಚಿಕ್ಕಮಗಳೂರಿನ ಜನರ ದೈನಂದಿನ ಜೀವನವನ್ನು ಪುನರ್ ರೂಪಿಸಿದೆ. ಮಲೆನಾಡಿನ ಈ ಸುಂದರ ಪ್ರದೇಶದಲ್ಲಿ ಪ್ರಗತಿಯು ಮುಂದುವರಿಯುತ್ತಿದ್ದಂತೆ, ಇದು ಸ್ಥಳಗಳನ್ನು ಮಾತ್ರವಲ್ಲದೆ, ಜನರ ಕನಸು ಮತ್ತು ಅವಕಾಶಗಳನ್ನು ಬೆಸೆಯುವ ಪ್ರಮುಖ ಸೇತುವೆ!

ಕರ್ನಾಟಕದ ಮಲೆನಾಡಿನ ಹೃದಯಭಾಗದಲ್ಲಿರುವ ನರಸಿಂಹರಾಜಪುರ (ಎನ್.ಆರ್. ಪುರ) ಬಳಿ ಇತ್ತೀಚೆಗೆ ಹೊಸ ಸೇತುವೆ ನಿರ್ಮಾಣ ಮಾಡಲಾಗಿದೆ. ಈ ಪ್ರದೇಶದ ಅಭಿವೃದ್ಧಿಯಲ್ಲಿ ಮಹತ್ವದ ಮೈಲಿಗಲ್ಲಾಗಿದೆ ಈ ಸೇತುವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಿಂದಿನ ಅವಧಿಯಲ್ಲಿ ಈ ಸೇತುವೆಯ ನಿರ್ಮಾಣ ಕಾರ್ಯಕ್ಕೆ ಶಂಕುಸ್ಥಾಪನೆ ಮಾಡಲಾಗಿದ್ದು, ಈಗ ಇದೇ 12ನೇ ತಾರೀಕಿಗೆ ಇದರ ಲೋಕಾರ್ಪಣೆ ಆಗುತ್ತಿರುವುದು ವಿಶೇಷ. ಅಂದಹಾಗೆ, ಇದನ್ನು ಆಡುಭಾಷೆಯಲ್ಲಿ ಅಲ್ಲಿನ ಜನರು 'ಸಿದ್ದರಾಮಯ್ಯ ಸೇತುವೆ' ಎಂದು ಕರೆಯುತ್ತಿದ್ದಾರೆ. ಮುಂದೆ ಇದಕ್ಕೆ 'ಸಿದ್ದರಾಮಯ್ಯ ಸೇತುವೆ' ಎಂದೇ ನಾಮಕರಣ ಮಾಡುವ ಬಗ್ಗೆ ಚರ್ಚೆಯೂ ನಡೆಯುತ್ತಿದೆ. ಎಂ. ಶ್ರೀನಿವಾಸ್ ಅವರ ನೇತೃತ್ವ, ಸ್ಥಳೀಯರ ಪರಿಶ್ರಮ ಹಾಗೂ ಶಾಸಕ ಟಿ.ಡಿ ರಾಜೇಗೌಡ ಅವರ ಬೆಂಬಲದಿಂದ ಈಗ ಈ ಸೇತುವೆ ಕಾರ್ಯ ಪೂರ್ಣಗೊಂಡು ಲೋಕಾರ್ಪಣೆ ಆಗುತ್ತಿದೆ.

ಪಶ್ಚಿಮ ಘಟ್ಟಗಳ ದಟ್ಟ ಹಸಿರು ಮತ್ತು ತುಂಗಾ ನದಿಯಂಥ ಸದಾಕಾಲ ಹರಿಯುವ ನದಿಗಳಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ನೈಸರ್ಗಿಕ ಸೌಂದರ್ಯಕ್ಕೇನು ಕೊರತೆಯಿಲ್ಲ. ಇಲ್ಲಿನ ಜನತೆ ದಶಕಗಳ ಕಾಲ ಕಿರಿದಾದ ರಸ್ತೆಗಳು ಮತ್ತು ತಗ್ಗು ಪ್ರದೇಶದ ಸೇತುವೆಗಳನ್ನೇ ಅವಲಂಬಿಸಿದ್ದರು. ಮಕ್ಕಳು ಶಾಲೆಗೆ ಹೋಗಬೇಕೆಂದರೆ, ಸ್ಥಳೀಯರು ಪಟ್ಟಣಕ್ಕೆ ಹೋಗಬೇಕೆಂದರೆ, ವೃದ್ಧರು ಆಸ್ಪತ್ರೆಗೆ ಹೋಗಬೇಕೆಂದರೆ ಅಥವಾ ಯಾವುದಾದರೂ ತುರ್ತು ಪರಿಸ್ಥಿತಿ ಎದುರಾಗಿ ಪೇಟೆಗೆ ಹೋಗಬೇಕಿದ್ದರೂ ಪರದಾಡುವ ಪರಿಸ್ಥಿತಿಯಿತ್ತು. ಮಳೆಗಾಲದಲ್ಲಿ ಈ ಹಳೆಯ ಮಾರ್ಗಗಳು ಸಂಚಾರಕ್ಕೆ ಯೋಗ್ಯವಾಗಿರುತ್ತಿರಲಿಲ್ಲ. ಇದೀಗ ನಿರ್ಮಾಣವಾಗಿರುವ ಹೊಸ ಸೇತುವೆ ಈ ಭಾಗದ ಜನರ ಸುಗಮ ಸಂಚಾರ ಮತ್ತು ಸುರಕ್ಷತೆಯಲ್ಲಿ ಹೊಸ ಅಧ್ಯಾಯವನ್ನು ಬರೆದಿದೆ.

ಸುಲಭವಾದ ಸಂಚಾರ

ಹೊನ್ನೇಕೊಡಿಗೆ ಭಾಗದ ಜನರಿಗೆ ಅಲ್ಲಿಂದ ಪೇಟೆಗೆ ಬರಬೇಕೆಂದರೆ ಸುಮಾರು 23 ಕಿಮೀ ದೂರ ಪ್ರಯಾಣ ಮಾಡಬೇಕಿತ್ತು. ಆದರೆ, ಈ ಸೇತುವೆ ಆಗಿರುವುದರಿಂದ ಕೇವಲ 3 ಕಿಮೀ ದೂರ ಪ್ರಯಾಣ ಮಾಡಿದರೆ ಸಾಕು. ಈ ಸೇತುವೆ ನಿರ್ಮಾಣವಾಗಲು ಮುಖ್ಯ ಕಾರಣ ಎಂ. ಶ್ರೀನಿವಾಸ್. ಅವರು ಅದೇ ಜಾಗದಲ್ಲಿ ಹುಟ್ಟಿ ಬೆಳೆದಿದ್ದರಿಂದ ಅಲ್ಲಿನ ಕಷ್ಟಗಳನ್ನು ತಿಳಿದುಕೊಂಡಿದ್ದು, ನೇತೃತ್ವ ವಹಿಸಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಧನ ಸಹಾಯದ ಜತೆಗೆ ಎಲ್ಲ ಬೆಂಬಲವನ್ನು ಪಡೆಯಲು ಸಹಾಯ ಮಾಡಿದ್ದಾರೆ ಎನ್ನುವುದು ಅಲ್ಲಿನ ಜನರ ಹೆಮ್ಮೆಯ ಮಾತು. 38 ಕೋಟಿ ರು. ಅನುದಾನ ಈ ಸೇತುವೆ ನಿರ್ಮಾಣಕ್ಕೆ ಸಿಕ್ಕಿದೆ. ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಅಗತ್ಯವೂ ಇದ್ದಿದ್ದಕ್ಕೆ ಆರು ಕೋಟಿ ರು. ಖರ್ಚು ಮಾಡಿ ಹೊಸ ರಸ್ತೆ ನಿರ್ಮಿಸಲಾಗಿದೆ. ಹಾಗೆಯೇ ನರಸಿಂಹರಾಜಪುರದ ರಸ್ತೆ ಅಗಲೀಕರಣಕ್ಕೆ 60 ಕೋಟಿ ಹಣ ಮೀಸಲಿಡಲಾಗಿದೆ. ಸುಮಾರು 15-20 ವರ್ಷಗಳ ಸುದೀರ್ಘ ಹೋರಾಟ ಇದಾಗಿತ್ತು. 2017ರಲ್ಲಿ ಶುರುವಾದ ಈ ಕೆಲಸ ಈಗ ಪೂರ್ಣಗೊಳ್ಳುತ್ತಿದ್ದು, ಹೋರಾಟವು ಈಗ ಸಾರ್ಥಕತೆ ಕಂಡುಕೊಂಡಿದೆ. ಪೇಟೆಗೆ ಬಂದು ವಾಪಸ್ ಹೋಗುವುದೆಂದರೆ ಅದು ಒಂದು ಇಡೀ ದಿನದ ಕೆಲಸವಾಗಿತ್ತು. ಈಗ ಕೆಲವು ಗಂಟೆಗಳಲ್ಲಿ ಬಂದು ಹೋಗಬಹುದು. ಇದರ ಜತೆಗೆ ಲಕ್ಕುಂದ, ಸಾಲೂರು, ಬಿಳಲ್ಕೊಪ್ಪ ಸೇರಿದಂತೆ 7 ಗ್ರಾಮಗಳ 2000 ಜನಗಳಿಗೆ ಇದು ಅನುಕೂಲ ಆಗಿದೆ.

ಗೊತ್ತಿದೆಯೇ ಇತಿಹಾಸ?

ಈ ಭಾಗದ ಜನರಿಗೆ ಈ ಸೇತುವೆ ಯಾಕೆ ಇಷ್ಟು ಮಹತ್ವವಾದದ್ದು ಎಂದು ತಿಳಿಯಬೇಕಾದರೆ ಸಣ್ಣ ಕಥೆ ನೆನಪಿಸಿಕೊಳ್ಳಬೇಕಾಗುತ್ತದೆ. ಕರ್ನಾಟಕದ ಈ ಭಾಗದ ನದಿಗಳ ಹರಿವಿನ ಮೇಲೆ ಪ್ರಭಾವ ಬೀರಿದ ಪ್ರಮುಖ ಅಂಶವೆಂದರೆ 20ನೆಯ ಶತಮಾನದ ಮಧ್ಯಭಾಗದಲ್ಲಿ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಭದ್ರಾ ಅಣೆಕಟ್ಟು. ಇದರಿಂದ ಮೇಲ್ಭಾಗದ ಅರಣ್ಯ ಪ್ರದೇಶಗಳು ಮತ್ತು ವಸಾಹತುಗಳ ಮುಳುಗಡೆಗೆ ಕಾರಣವಾಯಿತು. ಇದು ಅನೇಕ ಸ್ಥಳೀಯರ ಸ್ಥಳಾಂತರಕ್ಕೂ ಕಾರಣವಾಯಿತು. ಇತ್ತೀಚಿನವರೆಗೂ ಇದನ್ನು ಮುಳುಗಡೆ ಪ್ರದೇಶ ಎಂದೇ ಕರೆಯಲಾಗುತ್ತದೆ. ಭಾರೀ ಮಳೆಯಾದಾಗಂತೂ, ರಸ್ತೆಗಳು ನೀರಿನ ಪ್ರವಾಹದಲ್ಲಿ ಕಣ್ಮರೆಯಾಗುತ್ತಿದ್ದವು. ನದಿ ತೀರದ ಕೃಷಿ ಭೂಮಿಗಳು ಆಗಾಗ ಜಲಾವೃತಗೊಳ್ಳುತ್ತಿದ್ದವು. ಇದು ಅಡಿಕೆ ಮತ್ತು ಭತ್ತದಂತಹ ಬೆಳೆಗಳಿಗೆ ಹಾನಿ ಮಾಡುತ್ತಿತ್ತು. ಸರಕುಗಳ ಸಾಗಾಣಿಕೆ ಅನಿಶ್ಚಿತವಾಗುತ್ತಿತ್ತು. ರೈತರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತಿತ್ತು. ಸ್ಥಳೀಯ ನಿವಾಸಿಗಳ ಹಿರಿಯ ತಲೆಮಾರಿನವರು ಈಗಲೂ ಸಹ ನೀರಿನ ಮಟ್ಟವು ಏರಿ ರಸ್ತೆಗಳನ್ನಷ್ಟೇ ಅಲ್ಲದೆ ತಗ್ಗು ಪ್ರದೇಶದ ಮನೆಗಳನ್ನು ಮುಳುಗಿಸಿದ ವರ್ಷಗಳನ್ನು ನೆನಪಿಸಿಕೊಳ್ಳುತ್ತಾರೆ. ಇದು ಎಷ್ಟರ ಮಟ್ಟಿಗೆ ಪರಿಣಾಮ ಬೀರಿತ್ತೆಂದರೆ ಅಲ್ಲಿನ ಕೆಲವು ಪ್ರದೇಶದ ಜನರಿಗೆ ವಿವಾಹಕ್ಕೂ ತೊಡಕುಂಟಾಗುತ್ತಿತ್ತು. ಹೆಣ್ಣುಕೊಡಬೇಕಿದ್ದರೂ ಜನ ಇದನ್ನು 'ಕಾಡೂರು' ಎಂದು ಹೀಯಾಳಿಸುತ್ತಿದ್ದರು. ಇಲ್ಲಿಗೆ ಒಂದೇ ಬಸ್ ಸಂಪರ್ಕ ಇದ್ದಿದ್ದು. ಅದು ಕೂಡ ಯಾವಾಗ ಬರುತ್ತಿತ್ತು ಎಂದು ಹೇಳುವುದು ಕಷ್ಟವಾಗಿತ್ತು. ಈಗ ಇವರಿಗೆಲ್ಲ ನಿಟ್ಟುಸಿರು ಬಿಡುವ ಸಂದರ್ಭ ಬಂದಿದೆ.

> ಈ ಸೇತುವೆ ನನ್ನ ಜೀವಮಾನದ ಸಾಧನೆ ಇದ್ದಂತೆ. ಇಲ್ಲಿನ ಕೆಲವು ಊರುಗಳು ಮುಳುಗಡೆ ಆದ ಬಳಿಕ ಹೊನ್ನೇಕೊಡಿಗೆಯವರು ಮಾತ್ರ ಇಲ್ಲಿದ್ದರು. ಅವರಿಗೆ ಪೇಟೆಗೆ ಬರುವ ದಾರಿ ಸುಲಭದ್ದಾಗಿರಲಿಲ್ಲ. ಈ ಸೇತುವೆಯಿಂದ ಅವರು ಸಲೀಸಾಗಿ ಓಡಾಡುವ ಹಾಗಾಗಿದೆ. ಇದರ ಎಲ್ಲ ಕ್ರೆಡಿಟ್ ಸಿದ್ದರಾಮಯ್ಯನವರಿಗೆ ಸಲ್ಲಬೇಕಾಗುತ್ತದೆ. ಎಡೆಹಳ್ಳಿಯಾಗಿದ್ದ ಊರಿಗೆ ನರಸಿಂಹರಾಜಪುರ ಒಡೆಯರ್ ಬಂದು ನರಸಿಂಹರಾಜಪುರ ಎಂಬ ಹೆಸರು ಕೊಟ್ಟರು. ಹಾಗೇ 100 ವರ್ಷಗಳ ಬಳಿಕ ಬಂದ ನೀವು ಈ ಊರಿಗೆ ಏನಾದರು ಕೊಡುಗೆ ಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೇಳಿದ್ದಕ್ಕೆ ಪ್ರೀತಿಯಿಂದ ಒಪ್ಪಿಕೊಂಡು ಈ ಸೇತುವೆ ನಿರ್ಮಾಣಕ್ಕೆ ನಾಂದಿ ಹಾಡಿದರು. ಶಂಕು ಸ್ಥಾಪನೆ ಕೂಡ ಮಾಡಿದರು. ಈಗ ಲೋಕಾರ್ಪಣೆ ಕೂಡ ಅವರೇ ಮಾಡುತ್ತಿದ್ದಾರೆ. ಹಾಗೆಯೇ ಅಲ್ಲೊಂದು ರೆಸಾರ್ಟ್ ಮಾಡಲು ಜಿಲ್ಲಾ ಡಿಸಿ ಮೀನಾ ಅವರಿಗೆ ಕೇಳಿದಾಗ 3 ಎಕರೆ ಜಾಗ ಕೂಡ ನೀಡಿದರು. ಅಮ್ಯೂಸ್ಮೆಂಟ್ ಪಾರ್ಕ್, ಥೀಮ್ ಪಾರ್ಕ್, ವಾಟರ್ ಪಾರ್ಕ್ ಮಾಡುವ ಆಸೆಯಿದೆ. ಇಲ್ಲಿ ಈಗಾಗಲೇ ಅಂಗಡಿಗಳು ಶುರುವಾಗಿವೆ. ಇದೊಂದು ದೊಡ್ಡ ಪ್ರವಾಸಿ ತಾಣವಾಗುತ್ತದೆ ಎಂದು ಅನೇಕರು ಹೇಳುವುದನ್ನು ಕೇಳಿದಾಗ ಖುಷಿಯಾಗುತ್ತದೆ. ಮುಂದೆ ಇಲ್ಲೊಂದು ಚೆಕ್ ಡ್ಯಾಮ್ ಕಟ್ಟಬೇಕಿದೆ. ಹಾಗೆಯೇ ಇದನ್ನು ಟೂರಿಸಂ ಸ್ಪಾಟ್ ಮಾಡೇ ಮಾಡುತ್ತೇನೆ. ಇವೆಲ್ಲವೂ ಹುಟ್ಟೂರಿನ ಋಣ ತೀರಿಸುವ ಪ್ರಯತ್ನ ಅಷ್ಟೇ! ಈ ಲೋಕಾರ್ಪಣೆ ಕಾರ್ಯಕ್ರಮಕ್ಕೆ ವಿಶ್ವೇಶ್ವರ ಭಟ್ ಅವರ ಸಲಹೆಗಳು ಸಾಕಷ್ಟಿವೆ. ನಮ್ಮ ನರಸಿಂಹರಾಜಪುರಕ್ಕೆ ಸಿದ್ದರಾಮಯ್ಯ ಬಿಟ್ಟು ಬೇರೆ ಯಾವ ಮುಖ್ಯಮಂತ್ರಿ ಇದುವರೆಗೂ ಬಂದೇ ಇಲ್ಲ.
>
> -ಎಂ. ಶ್ರೀನಿವಾಸ, ಅಧ್ಯಕ್ಷರು, ಕೆಎಸ್‌ಟಿಡಿಸಿ

ಸುದೀರ್ಘ ಹೋರಾಟ

ಒಂದು ಹೊಸ ಸೇತುವೆ ನಿರ್ಮಾಣ ಆದಾಗ ಅದರಿಂದ ಕೇವಲ ಸಂಪರ್ಕವೊಂದೇ ಸುಲಭವಾಗುವುದಿಲ್ಲ. ಕೆಲವು ಮಾತ್ರೆಗಳಿಗೆ ಸೈಡ್ ಎಫೆಕ್ಟ್ ಇದ್ದ ಹಾಗೆ ಇದಕ್ಕೂ ಇರುತ್ತವೆ. ಆದರೆ, ಈ ಸೈಡ್ ಎಫೆಕ್ಟ್ ಒಳ್ಳೆಯದನ್ನು ಮಾಡುತ್ತವೆ. ಇಲ್ಲಿನ ಸ್ಥಳೀಯರೊಬ್ಬರು ಹೇಳುವ ಪ್ರಕಾರ ಎನ್ ಆರ್ ಪುರ ಇತಿಹಾಸದಲ್ಲಿ ಇಷ್ಟು ದೊಡ್ಡ ಸೇತುವೆ ಅಭಿವೃದ್ಧಿಯಾಗಿದ್ದು ಇದೇ ಮೊದಲು. ಇದನ್ನು ನೋಡಲು ಎಂದೇ ಜನರು ಬರುವಷ್ಟು ಅದ್ಭುತವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಭೌಗೋಳಿಕ ಪರಿಸ್ಥಿತಿಯನ್ನು ಗಮನಿಸಿದಾಗ ಈ ಸೇತುವೆಯ ಪ್ರಾಮುಖ್ಯತೆ ಇನ್ನೂ ಸ್ಪಷ್ಟವಾಗಿ ಅರ್ಥವಾಗುತ್ತದೆ. ದಟ್ಟ ಅರಣ್ಯಗಳು, ಗುಡ್ಡಗಾಡು ಮತ್ತು ಅತಿ ಹೆಚ್ಚು ಮಳೆಯಾಗುವ ಈ ಪ್ರದೇಶ! ಇಲ್ಲಿ ಮೂಲಸೌಕರ್ಯ ಅಭಿವೃದ್ಧಿ ಮಾಡುವುದು ಅತ್ಯಂತ ಅಗತ್ಯವಾಗಿತ್ತು. ಸುಮಾರು ಹದಿನೈದು ವರ್ಷಗಳ ಕಾಲ ಇಲ್ಲಿ ಸೇತುವೆ ಆಗಬೇಕೆಂದು ಸ್ಥಳೀಯರು ಹೋರಾಟ ನಡೆಸಿದ್ದಾರೆ. ಅದು ಈಗ ಫಲ ಸಿಕ್ಕಂತಾಗಿದೆ. ಪ್ರಯಾಣದ ಸಮಯ ಕಡಿಮೆಯಾಗಿದ್ದು, ಸಂಚಾರವು ಹೆಚ್ಚು ಸುರಕ್ಷಿತವಾಗಿದೆ. ನಿರಂತರ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸಿರುವ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಗೆ ಈ ಅಭಿವೃದ್ಧಿಯು ಸ್ಥಿರತೆಯನ್ನು ತಂದುಕೊಟ್ಟಿದೆ.

ಪ್ರವಾಸೋದ್ಯಮಕ್ಕೂ ಪ್ರೋತ್ಸಾಹ

ಸೇತುವೆ ನಿರ್ಮಾಣ ಮಾಡಿದ್ದು ಗೊತ್ತಾದ ಬಳಿಕ ಅನೇಕರಿಗೆ ಈ ಹೊಸ ಸೇತುವೆ ಮೇಲೆ ಹೋಗುವುದು, ಅಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವುದು ಖುಷಿಯ ವಿಷಯವಾದರೆ ಇನ್ನೂ ಕೆಲವರಿಗೆ ಹೆಮ್ಮೆಯ ವಿಷಯ. ಇದಕ್ಕಾಗಿ ಇಲ್ಲಿಗೆ ಭೇಟಿ ಕೊಡುವ ಜನರ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಪ್ರವಾಸೋದ್ಯಮ ಬೆಳೆಯುವುದು ಒಂದು ವಿಧಾನವಾದರೆ, ವಿಶೇಷವಾಗಿ ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗಾಗಿಯೇ ಸರಕಾರ ಮೂರು ಎಕರೆ ಜಾಗವನ್ನು ಮೀಸಲಿಟ್ಟಿದೆ. ಬಸ್ತಿ ಮಠ, ದೇವಸ್ಥಾನ ಬಿಟ್ಟು ಬೇರೇನು ಇಲ್ಲಿರಲಿಲ್ಲ. ಈಗ ಸೇತುವೆ ನೋಡಲು ಸಾವಿರಾರು ಜನ ಬರುತ್ತಿದ್ದಾರೆ. ಇನ್ನು ನರಸಿಂಹರಾಜಪುರ ಮತ್ತು ಅದರ ಸುತ್ತಮುತ್ತಲಿನ ನದಿಗಳು, ಜಲಪಾತಗಳು ಮತ್ತು ಅರಣ್ಯ ಮಾರ್ಗಗಳು ಪ್ರಕೃತಿ ಪ್ರೇಮಿಗಳನ್ನು ಕೈಬೀಸಿ ಕರೆಯುತ್ತವೆ. ಅಲ್ಲೆಲ್ಲ ಈಗ ಜನರಿಗೆ ತಲುಪುವುದು ಸುಲಭವಾಗಿದೆ. ಹೊಸ ಸೇತುವೆ ಮೇಲೆ ಸಾಗುತ್ತ ಕಾರ್ ಕಿಟಕಿ ತೆಗೆದು ಸುತ್ತಲಿನ ಪ್ರಕೃತಿಯನ್ನು ನೋಡುತ್ತಾ, ತಂಪು ಗಾಳಿಗೆ ಮುಖ ಒಡ್ಡುತ್ತಾ ಹೋಗುವಾಗ ಸಿಗುವ ಆನಂದ ಇನ್ನೆಲ್ಲೂ ಸಿಗುವುದಿಲ್ಲ!

ಹಲವು ಲಾಭಗಳು

ಈ ಸೇತುವೆ ನಿರ್ಮಾಣ ಹೊನ್ನೇಕೊಡಿಗೆ ಪಂಚಾಯಿತಿಗೆ ಬಹಳ ಸಹಕಾರಿಯಾಗಿದೆ. ಇಲ್ಲೇ ಸಮೀಪದಲ್ಲಿ ಹಳೆಯ ಚಿಕ್ಕಮಗಳೂರು ರಸ್ತೆಯಿದೆ. ಅದು ಚಿಕ್ಕಮಗಳೂರಿಗೆ ಸೇರುತ್ತದೆ. ಅಲ್ಲಿ ತಡಸ ಸೇತುವೆಯಿತ್ತು. ಅದರಲ್ಲಿ ರಸ್ತೆ ಮತ್ತು ರೈಲ್ವೆ ಹಳಿ ಎರಡೂ ಇದ್ದಿದ್ದು ವಿಶೇಷ. ಆ ರಸ್ತೆಗಳೆಲ್ಲ ಮುಳುಗಡೆ ಆದ ಬಳಿಕ ಬದಲಿ ವ್ಯವಸ್ಥೆ ಮಾಡಬೇಕಿತ್ತು. ಆದರೆ, ಆಗಿಲ್ಲ. ಸಮೀಪದ ಊರಿನವರನ್ನೆಲ್ಲಾ ಸ್ಥಳಾಂತರಿಸಲಾಯಿತು. ಉಳಿದ ಕೆಲವು ಊರುಗಳು ಪಟ್ಟಣದಿಂದ ದೂರವಿರುವುದರಿಂದ ಓಡಾಡಲು ಸಮಸ್ಯೆ ಎದುರಿಸುತ್ತಿದ್ದವು. ಈಗ ಈ ಸೇತುವೆ ಆಗಿರುವುದರಿಂದ ಪಟ್ಟಣಕ್ಕೆ ಸಂಪರ್ಕ ಮಾಡುವುದು ಸುಲಭವಾಗಿದೆ. ಮಲೆನಾಡು ಪ್ರದೇಶ ಕಾಫಿ, ಅಡಿಕೆ ಮತ್ತು ಮಸಾಲೆ ಪದಾರ್ಥಗಳ ಕೃಷಿಗೆ ಪ್ರಸಿದ್ಧಿ ಹೊಂದಿರುವ ಜಾಗ. ರೈತರು ತಮ್ಮ ಬೆಳೆಗಳನ್ನು ಸಾಗಿಸಲು ಹರಸಾಹಸ ಪಡಬೇಕಾಗುತ್ತಿತ್ತು. ಹೊಸ ಸೇತುವೆಯಿಂದಾಗಿ ಬೆಳೆ ಸಾಗಾಣಿಕೆ ಸುಲಭವಾಗಿದೆ. ರೈತರಿಗೆ ಈಗ ನಷ್ಟದ ಭೀತಿ ದೂರವಾಗಿದೆ. ಕೇವಲ ಸೌಕರ್ಯದ ದೃಷ್ಟಿಯಿಂದಷ್ಟೇ ಅಲ್ಲದೆ, ಈ ಸೇತುವೆಯು ಗ್ರಾಮೀಣ ಕರ್ನಾಟಕದ ಅಭಿವೃದ್ಧಿಗೂ ಪೂರಕವಾಗಲಿದೆ. ಪಶ್ಚಿಮ ಘಟ್ಟಗಳ ಪರಿಸರಕ್ಕೆ ಯಾವುದೇ ಸಮಸ್ಯೆ ಉಂಟಾಗದಂತೆ ಮೂಲಸೌಕರ್ಯಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ಈ ಸೇತುವೆ ಸಾಕ್ಷಿ! ದೀರ್ಘಕಾಲದ ಸಂಪರ್ಕ ಮತ್ತು ಸುರಕ್ಷತೆಯ ಸವಾಲುಗಳನ್ನು ಮೆಟ್ಟಿ ನಿಂತಿರುವ ಈ ಎನ್.ಆರ್. ಪುರ ಸೇತುವೆಯು ಇಡೀ ಊರಿನಲ್ಲಿ ಅರ್ಥಪೂರ್ಣ ಬದಲಾವಣೆ ತಂದಿದೆ.

ಹಲವು ಲಾಭಗಳು

ಈ ಸೇತುವೆ ನಿರ್ಮಾಣ ಹೊನ್ನೇಕೊಡಿಗೆ ಪಂಚಾಯಿತಿಗೆ ಬಹಳ ಸಹಕಾರಿಯಾಗಿದೆ. ಇಲ್ಲೇ ಸಮೀಪದಲ್ಲಿ ಹಳೆಯ ಚಿಕ್ಕಮಗಳೂರು ರಸ್ತೆಯಿದೆ. ಅದು ಚಿಕ್ಕಮಗಳೂರಿಗೆ ಸೇರುತ್ತದೆ. ಅಲ್ಲಿ ತಡಸ ಸೇತುವೆಯಿತ್ತು. ಅದರಲ್ಲಿ ರಸ್ತೆ ಮತ್ತು ರೈಲ್ವೆ ಹಳಿ ಎರಡೂ ಇದ್ದಿದ್ದು ವಿಶೇಷ. ಆ ರಸ್ತೆಗಳೆಲ್ಲ ಮುಳುಗಡೆ ಆದ ಬಳಿಕ ಬದಲಿ ವ್ಯವಸ್ಥೆ ಮಾಡಬೇಕಿತ್ತು. ಆದರೆ, ಆಗಿಲ್ಲ. ಸಮೀಪದ ಊರಿನವರನ್ನೆಲ್ಲಾ ಸ್ಥಳಾಂತರಿಸಲಾಯಿತು. ಉಳಿದ ಕೆಲವು ಊರುಗಳು ಪಟ್ಟಣದಿಂದ ದೂರವಿರುವದರಿಂದ ಓಡಾಡಲು ಸಮಸ್ಯೆ ಎದುರಿಸುತ್ತಿದ್ದವು. ಈಗ ಈ ಸೇತುವೆ ಆಗಿರುವುದರಿಂದ ಪಟ್ಟಣಕ್ಕೆ ಸಂಪರ್ಕ ಮಾಡುವುದು ಸುಲಭವಾಗಿದೆ. ಮಲೆನಾಡು ಪ್ರದೇಶ ಕಾಫಿ, ಅಡಿಕೆ ಮತ್ತು ಮಸಾಲೆ ಪದಾರ್ಥಗಳ ಕೃಷಿಗೆ ಪ್ರಸಿದ್ಧಿ ಹೊಂದಿರುವ ಜಾಗ. ರೈತರು ತಮ್ಮ ಬೆಳೆಗಳನ್ನು ಸಾಗಿಸಲು ಹರಸಾಹಸ ಪಡಬೇಕಾಗುತ್ತಿತ್ತು. ಹೊಸ ಸೇತುವೆಯಿಂದಾಗಿ ಬೆಳೆ ಸಾಗಾಣಿಕೆ ಸುಲಭವಾಗಿದೆ. ರೈತರಿಗೆ ಈಗ ನಷ್ಟದ ಭೀತಿ ದೂರವಾಗಿದೆ. ಕೇವಲ ಸೌಕರ್ಯದ ದೃಷ್ಟಿಯಿಂದಷ್ಟೇ ಅಲ್ಲದೆ, ಈ ಸೇತುವೆಯು ಗ್ರಾಮೀಣ ಕರ್ನಾಟಕದ ಅಭಿವೃದ್ಧಿಗೂ ಪೂರಕವಾಗಲಿದೆ. ಪಶ್ಚಿಮ ಘಟ್ಟಗಳ ಪರಿಸರಕ್ಕೆ ಯಾವುದೇ ಸಮಸ್ಯೆ ಉಂಟಾಗದಂತೆ ಮೂಲಸೌಕರ್ಯಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ಈ ಸೇತುವೆ ಸಾಕ್ಷಿ! ದೀರ್ಘಕಾಲದ ಸಂಪರ್ಕ ಮತ್ತು ಸುರಕ್ಷತೆಯ ಸವಾಲುಗಳನ್ನು ಮೆಟ್ಟಿ ನಿಂತಿರುವ ಈ ಎನ್.ಆರ್. ಪುರ ಸೇತುವೆಯು ಇಡೀ ಊರಿನಲ್ಲಿ ಅರ್ಥಪೂರ್ಣ ಬದಲಾವಣೆ ತಂದಿದೆ.



"ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಇಡೀ ಊರೇ ಸಂತೋಷದ ಸಾಗರದಲ್ಲಿ ಮುಳುಗಿದೆ. ಮನೆ-ಮನೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಅದರಲ್ಲಿಯೂ ಎನ್‌ಆರ್ ಪುರಕ್ಕೆ ಸಿದ್ದರಾಮಯ್ಯನವರು ಮೂರನೇ ಬಾರಿಗೆ ಬರುತ್ತಿರುವುದು ಖುಷಿಯ ವಿಷಯ. ಈ ಕಾರ್ಯಕ್ರಮ ಆದಷ್ಟು ಅದ್ಧೂರಿಯಾಗಿ ಮಾಡಬೇಕು ಎಂದುಕೊಂಡಿದ್ದೇನೆ. ಈ ಸಮಯದಲ್ಲಿ ನಾನು ನನ್ನ ಆತ್ಮೀಯರಾದ ವಿಶ್ವೇಶ್ವರ ಭಟ್ಟರನ್ನು ನೆನಪಿಸಿಕೊಳ್ಳಬೇಕು. ಈ ಕಾರ್ಯಕ್ರಮದ ವಿಷಯದಲ್ಲಿ ಅವರು ತುಂಬಾ ಸಲಹೆಗಳನ್ನು ನೀಡಿದ್ದಾರೆ."

-ಎಂ. ಶ್ರೀನಿವಾಸ್, ಅಧ್ಯಕ್ಷರು, ಕೆಎಸ್‌ಟಿಡಿಸಿ

ಸಿದ್ದರಾಮಯ್ಯನವರಿಂದ ಹುಟ್ಟೂರಿಗೆ ಸೇತುವೆ

ಹೊನ್ನೇಕೂಡಿಗೆ ಸೇತುವೆ ನಿರ್ಮಾಣದ ಹಿಂದೆ ಸಿದ್ದರಾಮಯ್ಯ ಶ್ರಮ ಅಪಾರ

ಹುಟ್ಟೂರಿಗೆ ಶಾಶ್ವತ ಕೊಡುಗೆ ನೀಡಿದ ಸಂತೃಪ್ತಿ, ಹೆಮ್ಮೆ ನನಗಿದೆ

ತಂದೆ-ತಾಯಿಯ ಋಣ, ಗುರುವಿನ ಋಣ, ಹುಟ್ಟೂರಿನ ಋಣ ತೀರಿಸಲು ಯಾವುದೇ ವ್ಯಕ್ತಿಯಿಂದ ಸಾಧ್ಯವಿಲ್ಲ. ಆದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಾಯದಿಂದ ನಮ್ಮೂರಿಗೆ ಇಂದು ದಶಕಗಳ ಸೇತುವೆಯ ಕನಸು ಈಡೇರಿದೆ. 30 ಕಿಮೀ ಸುತ್ತುವ ಜಾಗದಲ್ಲಿ ಮೂರೇ ಕಿಮೀ ಕ್ರಮಿಸುವಂತೆ ಮಾಡಿ ನಮ್ಮೂರಿನ ಬಹುದೊಡ್ಡ ಸಮಸ್ಯೆ ಈಡೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚಿರಋಣಿ ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ. ಶ್ರೀನಿವಾಸ್ ಹೇಳಿದ್ದಾರೆ.

ನರಸಿಂಹರಾಜಪುರ-ಹೊನ್ನೇಕೂಡಿಗೆ ನಡುವಿನ ಸೇತುವೆ ಕಾಮಗಾರಿ ಪೂರ್ಣಗೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಉದ್ಘಾಟಿಸಲಿದ್ದಾರೆ. ಈ ಸಮಯದಲ್ಲಿ ವಿಶ್ವವಾಣಿಯೊಂದಿಗೆ ಮಾತನಾಡಿರುವ ಎಂ. ಶ್ರೀನಿವಾಸ್ ಅವರ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

● ಹೊನ್ನೇಕೂಡಿಗೆ ಸೇತುವೆ ಪೂರ್ಣಗೊಂಡಿರುವ ಬಗ್ಗೆ ಏನನಿಸುತ್ತಿದೆ?

ಪ್ರತಿಯೊಬ್ಬರು ತಾನು ಹುಟ್ಟಿದ ಊರಿಗೆ ಏನಾದರೂ ಮಾಡಬೇಕೆಂಬ ಹಂಬಲವಿರುತ್ತದೆ. ಅದೇ ರೀತಿ ನನಗೆ ದಶಕಗಳಿಂದ ಈ ಸೇತುವೆಯ ಕನಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಈ ಕನಸು ನನಸಾಗಿದ್ದು, ಇದೇ ಭಾನುವಾರ ಲೋಕಾರ್ಪಣೆಯೂ ಆಗಲಿದೆ. ಹಾಗೆ ನೋಡಿದರೆ, ಈ ಸೇತುವೆಯಾಗಿರೋದು ಒಂದು ಜೀವಮಾನ ಸಾಧನೆಯೆಂದು ಹೇಳಬಹುದು. ಆದ್ದರಿಂದ ಈ ಕಾಮಗಾರಿ ನನಗೆ ವೈಯಕ್ತಿಕ ತುಂಬಾ ಸಂತೋಷ ಕೊಟ್ಟಿದೆ. ಈ ಸಂತೋಷಕ್ಕೆ ಐದು ದಶಕಗಳ ಇತಿಹಾಸವನ್ನು ನೋಡಬೇಕಾಗುತ್ತದೆ. 1958ರಲ್ಲಿ ಭದ್ರಾ ಜಲಾಶಯ(ಲಕ್ಕವಳ್ಳಿ) ಜಲಾಶಯ ಕಟ್ಟಿದಾಗ ನಮ್ಮ ಎಲ್ಲ ಹಳ್ಳಿಗಳು ಮುಳುಗಡೆಯಾದವು. ಈ ಸಮಯದಲ್ಲಿ ನಮ್ಮೆಲ್ಲ ರೈತರು ಮನೆ, ಮಠ, ನೀರಾವರಿ ಜಮೀನು ಕಳೆದುಕೊಂಡು ಬೀದಿಗೆ ಬಂದರು. ಈ ಸಮಯದಲ್ಲಿ ಸುತ್ತಮುತ್ತಲಿನ ಬಹುತೇಕ ಊರುಗಳ ರೈತರು ಅಕ್ಕ-ಪಕ್ಕದ ಊರುಗಳಿಗೆ ಹೋಗಿ ನೆಲೆಯೂರಿದರು. ಆದರೆ ಹೊನ್ನೇಕೂಡಿಗೆ ಸುತ್ತಮುತ್ತಲಿನ 10ರಿಂದ 15 ಗ್ರಾಮಸ್ಥರು ಇಲ್ಲಿಯೇ ಜೀವನ ಸಾಗಿಸಲು ಇಚ್ಛಿಸಿದರು. ಮುಳುಗಡೆಯ ಹೊರತಾಗಿಯೂ ಎನ್‌ಆರ್ ಪುರದಲ್ಲಿಯೇ ಮುಂದುವರೆಯಲು ಇಷ್ಟಪಟ್ಟರು. ಆದ್ದರಿಂದ ಹಾಗಾಗಿ ಹೊನ್ನೇಕೂಡಿಗೆ ಜನಪ್ರಿಯವಾಯಿತು.

ಗ್ರಾಮಕ್ಕೆ ಜನಪ್ರಿಯತೆ ಬಂದರೂ, ಜಲಾಶಯದ ಹಿನ್ನೀರಿನಿಂದ ನರಸಿಂಹರಾಜಪುರಕ್ಕೆ ಸುಮಾರು 30 ಕಿಮೀ ಸುತ್ತಿಕೊಂಡು ಬರಬೇಕಾದ ಅನಿವಾರ್ಯತೆಯಿಂದ ಅನೇಕ ರೀತಿಯ ಸಮಸ್ಯೆಗಳು ಎದುರಿಸಬೇಕಾಗಿತ್ತು. ಮಕ್ಕಳು ಶಾಲೆಗೆ ಹೋಗಬೇಕೆಂದರೆ, ವಯಸ್ಸಾದವರು ಆಸ್ಪತ್ರೆಗೆ ಬರಬೇಕು ಎಂದರೂ ಸುಮಾರು 30 ಕಿಲೋಮೀಟರ್ ಸುತ್ತಿಕೊಂಡು ಬರಬೇಕಿತ್ತು. ಇದು ಅನೇಕರಿಗೆ ತುಂಬಾ ಕಷ್ಟವಾಗುತ್ತಿತ್ತು. ಇದರೊಂದಿಗೆ ನಮ್ಮಲ್ಲಿರುವ ಅನೇಕರು ಬ್ಯುಸಿನೆಸ್‌ಮೆನ್‌ಗಳು ಬೆಳಗ್ಗೆ ಹೋದರೆ 30 ಕಿಮೀ ಸುತ್ತಿಕೊಂಡು ಬರುವ ಬದಲು ಮನೆಯಲ್ಲಿಯೇ ಇರುವುದರಿಂದ ನಂತರ ತುಂಬಾ ಜನ ವಾಣಿಜ್ಯದಲ್ಲಿ ಇದ್ದಾರೆ ನರಸಿಂಹರಾಜಪುರದಲ್ಲಿ, ಅವರು ಮನೆಗೆ ಹೋಗ್ಬೇಕು ಅಂದ್ರೆ, ಊಟಕ್ಕೆ ಹೋಗಲಿಕ್ಕಾಗಲ್ಲ, ತಿಂಡಿಗೆ ಹೋಗಲಿಕ್ಕಾಗಲ್ಲ. ಬೆಳಗ್ಗೆ ಬಂದು ರಾತ್ರಿ ಹೋಗಬೇಕಿತ್ತು, ಈ ರೀತಿ ಬಾರಿ ತೊಂದರೆ ಅನುಭವಿಸುತ್ತಾ ಇದ್ದರು. ಆದರೀಗ ಈ ಎಲ್ಲ ಸಮಸ್ಯೆಗಳಿಗೆ ಮುಕ್ತಿ ಸಿಕ್ಕಿದೆ.

● ಈ ಸೇತುವೆ ನಿರ್ಮಾಣವನ್ನು ಹೇಗೆಂದು ನೆನಪಿಸಿಕೊಳ್ಳುವಿರಿ?

ಸೇತುವೆಯ ಕನಸು ದಶಕಗಳಿದ್ದರೂ, ಇದಕ್ಕೆ ಕನಸಿಗೆ ಮೊಳಕೆ ಒಡೆದಿದ್ದು ಮಾತ್ರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿ. 2016ರಲ್ಲಿ ಸಿದ್ದರಾಮಯ್ಯನವರು ಹೊನ್ನೇಕೂಡಿಗೆ ಇದು ಕಡಗಿನಬೈಲು ಏತ ನೀರಾವರಿ ಲೋಕಾರ್ಪಣೆ ಮಾಡುವುದಕ್ಕೆ ನರಸಿಂಹರಾಜಪುರಕ್ಕೆ ಬಂದರು. ಅದು ಈ ಭಾಗದ ಮೊದಲ ಏತ ನೀರಾವರಿ ಕೊಟ್ಟಿದ್ದರು. ಅವರು ಬಂದಾಗ, ನಾನು, ಜಲಾಶಯ ನಿರ್ಮಾಣಕ್ಕೆ ಈ ರೈತರು ತುಂಬಾ ತ್ಯಾಗ ಮಾಡಿದ್ದಾರೆ. ಅವರಿಗೆ ಏನಾದರೂ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಹೇಳಿ ಈ ಸೇತುವೆಯ ಬಗ್ಗೆ ಅವರ ಬಳಿಕ ಪ್ರಸ್ತಾಪಿಸಿದ್ದೆ. ನನ್ನ ಮಾತಿಗೆ ಒಪ್ಪಿಗೆ, ಅಂದು ಸಿದ್ದರಾಮಯ್ಯ ಅವರು ತೆಗೆದುಕೊಂಡ ತೀರ್ಮಾನದಿಂದಲೇ ಇಂದು ಸೇತುವೆ ತಲೆ ಎತ್ತಿರುವುದನ್ನು ನೋಡಬಹುದಾಗಿದೆ. ಇಂದು ಆಗಿರುವ ಪ್ರತಿಯೊಂದು ಕೆಲಸಕ್ಕೂ ನಾವು ಸಿದ್ದರಾಮಯ್ಯನವರಿಗೆ ಇದರ ಎಲ್ಲಾ ಕ್ರೆಡಿಟ್ ಕೊಡಬೇಕು. ಹಾಗೇ ನೋಡಿದರೆ, ಸಿದ್ದರಾಮಯ್ಯ ಅವರು ಅಂದು ಉದ್ಘಾಟಿಸಿದ ಕಡಗಿನಬೈಲು ಏತ ನೀರಾವರಿ ಸುಮಾರು 69 ಕೆರೆಗಳಿಗೆ ನೀರು ತುಂಬುತ್ತಾ ಇದೆ. ಹಾಗಾಗಿ ಅಲ್ಲಿ ರೈತರ ಬಾಳೆಲ್ಲಾ ತುಂಬಾ ಹಸನಾಯ್ತು.ಅಲ್ಲಿ ತುಂಬಾ ಕಷ್ಟ ಪಡುತ್ತಿದ್ದರು. ಹಾಗಾಗಿ ಅಂತಹ ಒಂದು ಭಗೀರಥರಾದರು ನಮ್ಮ ಸಿದ್ದರಾಮಯ್ಯನವರು ಎಂದರೆ ತಪ್ಪಾಗುವುದಿಲ್ಲ.

ಈಗಲೇ ಸೇತುವೆ ಪ್ರವಾಸಿ ತಾಣವಾಗಿದೆ; ಮುಂದಿನ ಆಲೋಚನೆ ಏನಿದೆ?

ಸೇತುವೆ ನಿರ್ಮಾಣದ ಸಮಯದಿಂದಲೂ ಅಲ್ಲಿಗೆ ಹೋಗಿ ನೋಡುತ್ತಿದೆ. ನೂರಾರು ಜನರು ಬರುತ್ತಿರುವುದನ್ನು ನೋಡಿ, ಇಲ್ಲಿ ಒಂದು ರೆಸಾರ್ಟ್ ಮಾಡಿದರೆ ಹೇಗೆ ಎನ್ನುವ ಆಲೋಚನೆ ತಲೆಗೆ ಬಂತು. ಏಕೆಂದರೆ, ಒಳ್ಳೆಯ ಪರಿಸರವಿದೆ, ಮಲೆನಾಡಿನ ಗುಡ್ಡ ಬೆಟ್ಟಗಳು, ಹಸಿರು ವಾತಾವರಣವಿದೆ. ಇದೇ ವಿಷಯವನ್ನು ನಮ್ಮ ಜಿಲ್ಲಾಧಿಕಾರಿಯಾಗಿದ್ದ ಮೀನಾ ನಾಗರಾಜ್ ಅವರ ಬಳಿ ಪ್ರಸ್ತಾಪಿಸಿ, ಒಂದು ರೆಸಾರ್ಟ್ ಮಾಡಬಹುದು. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ ಎಂದಿದ್ದೆ. ಆ ಕಂದಾಯ ಇಲಾಖೆಯ ಬಳಿಯಿದ್ದ ಮೂರು ಎಕರೆ ಭೂಮಿಯನ್ನು ನೀಡುವುದಾಗಿ ಹೇಳಿ, ವಾರದೊಳಗೆ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಿದರು. ಇದೀಗ ಕೆಎಸ್‌ಟಿಡಿಸಿ ವತಿಯಿಂದ ಇಲ್ಲೊಂದು ಅಮ್ಯೂಸ್ಮೆಂಟ್ ಪಾರ್ಕ್, ಥೀಮ್ ಪಾರ್ಕ್, ವಾಟರ್ ಪಾರ್ಕ್ ಮಾಡಬೇಕು ಎನ್ನುವ ಆಸೆಯಿದೆ.

ಈ ಯೋಜನೆಗಳು ಪೂರ್ಣಗೊಳ್ಳುವ ಮೊದಲೇ ವಾರಾಂತ್ಯದಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಈಗಾಗಲೇ ಈ ಭಾಗದಲ್ಲಿ ಎಲ್ಲಾ ಅಂಗಡಿಗಳು ಶುರುವಾಗಿಬಿಟ್ಟಿದೆ, ಬೀಡಾ ಅಂಗಡಿ, ಐಸ್ ಕ್ರೀಮ್ ಅಂಗಡಿ, ಕಡಲೆಕಾಯಿ ಅಂಗಡಿ ಎಲ್ಲಾ ಶುರುವಾಗಿಬಿಟ್ಟಿದೆ ಅಲ್ಲಿ ಅಷ್ಟು ಜನ. ಇಂತ ಒಂದು ಒಳ್ಳೆ ಪ್ರಾಪರ್ಟಿ ಮಾಡಿದ್ದೀವಲ್ಲ ಅಂತ ಹೇಳಿ ನನಗೆ ಹೆಮ್ಮೆ, ಸಂತೋಷವಿದೆ. ಮುಂದಿನ ದಿನದಲ್ಲಿ ಈ ಭಾಗದಲ್ಲಿ ಒಂದು ಒಂದು ಚೆಕ್ ಡ್ಯಾಂ ಮಾಡಬೇಕು ಎನ್ನುವ ಆಲೋಚನೆಯಿದೆ. ಚೆಕ್ಕ ಡ್ಯಾಮ್ ನಿರ್ಮಿಸಿದರೆ ಸುಮಾರು 500ರಿಂದ 600 ಎಕರೆನಲ್ಲಿ ನೀರು ನಿಲ್ಲುತ್ತೆ. 600 ಎಕರೆ ನೀರು ನಿಂತರೆ ನಾವು ಒಳ್ಳೆಯ ವಾಟರ್ ಸ್ಪೋರ್ಟ್ಸ್, ಸ್ಕೀಯಿಂಗ್ ಅಂಡ್ ಬೋಟಿಂಗ್, ವಾಟರ್ ಜೆಟ್ಸ್ ಸೇರಿದಂತೆ ಹಲವು ರೀತಿಯಲ್ಲಿ ಅಭಿವೃದ್ಧಿ ಮಾಡಬಹುದು. ಈ ವಿಷಯದ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದು, ಪಿಪಿಪಿ ಮಾದರಿಯಲ್ಲಿ ನಿರ್ಮಿಸುವಲು ಸಲಹೆ ನೀಡಿದ್ದಾರೆ. ಜಮೀನು ನಮ್ಮದಿದೆ, ಪಿಪಿಪಿ ಮಾಡೆಲ್‌ನಲ್ಲಿ ಬಂದು ನಾವು ಅದನ್ನು ಖಂಡಿತ ಮಾಡೇ ಮಾಡುತ್ತೇನೆ. ಇದನ್ನು ಅದ್ಭುತ ಪ್ರವಾಸಿ ತಾಣವನ್ನಾಗಿ ಮಾಡಿಯೇ ತೀರುತ್ತೇನೆ. ಕೆಎಸ್‌ಟಿಡಿಸಿ ಅಧ್ಯಕ್ಷನಾಗಿ, ನರಸಿಂಹರಾಜಪುರದವನಾಗಿ, ಈ ಯೋಜನೆಯೊಂದು ಪೂರ್ಣಗೊಂಡರೆ ನನಗೆ ಮತ್ತಷ್ಟು ಖುಷಿ ಸಿಗುತ್ತದೆ.

● ಸೇತುವೆಯ ಹಿಂದಿನ ಇತಿಹಾಸವೇನು?

ಸಿದ್ದರಾಮಯ್ಯ ಅವರು ಬಂದಾಗ ಈಗ 110 ವರ್ಷದ ಹಿಂದೆ ನರಸಿಂಹರಾಜ ಒಡೆಯರ್ ಬಂದು ನರಸಿಂಹರಾಜಪುರಕ್ಕೆ, ಇದು ಎಡೆಯಹಳ್ಳಿ ಅಂತ ಹೆಸರಿತ್ತು ಮೊದಲು, ನರಸಿಂಹರಾಜಪುರ ಅಂತ ಹೆಸರಿಟ್ಟು ಹೋದ್ದರು. 100 ವರ್ಷ ಆದ ನಂತರ ನೀವು ಅದೇ ಊರಿನಲ್ಲಿ ಅದೇ ಸ್ಥಾನದಲ್ಲಿರುವವರು ಬಂದಿದ್ದೀರಾ, ನಮಗೇನಾದರೂ ಕೊಡುಗೆ ಕೊಟ್ಟು ಹೋಗಿ ಅಂತ ಕೇಳಿದೆ. ಆಗ ಸಿದ್ದರಾಮಯ್ಯನವರು ನಿಮಗೆ ಏನು ಬೇಕು? ಅಂತ ಕೇಳಿದರು. ನಾನು ಹೇಳಿದೆ, ಈ ಸೇತುವೆ ಕಟ್ಟಿಕೊಡಿ, ಜನ ತುಂಬಾ ಕಷ್ಟ ಪಡುತ್ತಿದ್ದಾರೆ. ಮಾಡಿಕೊಟ್ಟರೆ ಅವರಿಗೆ ತುಂಬಾ ಸಹಾಯ ವಾಗುತ್ತದೆ. ಅವರು ತುಂಬಾ ತ್ಯಾಗ ಮಾಡಿದ್ದಾರೆ ಜೀವನದಲ್ಲಿ, ಅವರಿಗೂ ತ್ಯಾಗಕ್ಕೂ ನಾವೊಂದು ಗೌರವ ನೀಡಿದ ಹಾಗಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟಿದೆ. ಅದಕ್ಕೆ ಒಪ್ಪಿ, ಸಿದ್ದರಾಮಯ್ಯ ಅವರು, 2017ರಲ್ಲಿ ಬಂದು ಸೇತುವೆಗೆ ಶಂಕುಸ್ಥಾಪನೆ ಮಾಡಿದ್ದರು. ಆದರೆ ಆಮೇಲೆ ಕಾರಣಾಂತರಗಳಿಂದ ಕಾಮಗಾರಿಗೆ ವೇಗ ಸಿಗಲಿಲ್ಲ. ಅದಾದ ಬಳಿಕ ವಿವಿಧ ಕಾರಣಕ್ಕೆ ಮುಂದಕ್ಕೆ ಹೋಯಿತು. ಕರೋನಾ ಕಾಲದಿಂದಾಗಿ ಕೆಲಸಗಾರರು ಊರಿಗೆ ಹೋದವರು ವಾಪಾಸು ಬರಲಿಲ್ಲ, ಅದಾದ ಬಳಿಕ ಅತಿವೃಷ್ಟಿ ಕಾಮಗಾರಿ ಕೈಗೆತ್ತಿಕೊಳ್ಳಲು ಆಗಲೇ ಇಲ್ಲ. 2023ರಲ್ಲಿ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಈ ಕಾಮಗಾರಿಗೆ ಮತ್ತೆ ವೇಗ ಸಿಕ್ಕು, ಈಗ ಲೋಕಾರ್ಪಣೆಗೆ ಸಜ್ಜಾಗಿದೆ.

● ಜಿಲ್ಲೆಯಲ್ಲಿ ಅಭಿವೃದ್ಧಿಯ ವಿಷಯದಲ್ಲಿ ನಿಮ್ಮ ಮಾತು?

ನಾನು ವಿಧಾನಪರಿಷತ್ ಸದಸ್ಯನಾಗಿದ್ದ ಸುಮಾರು 12 ವರ್ಷ ಚಿಕ್ಕಮಗಳೂರನ್ನು ನೋಡಲ್ ಡಿಸ್ಟ್ರಿಕ್ ಆಗಿ ತೆಗೆದುಕೊಂಡಿದ್ದೆ. ಈ ಅವಧಿಯಲ್ಲಿ ಸರ್ವಧರ್ಮಕ್ಕೂ ಸಮ ಪಾಲು ನೀಡಬೇಕು ಎನ್ನುವುದು ನನ್ನ ಆಲೋಚನೆಯಾಗಿತ್ತು. ಆದ್ದರಿಂದ ಚರ್ಚ್, ಮಸೀದಿ, ದೇವಾಲಯಗಳಿಗೆ ಅಗತ್ಯವಿರುವಷ್ಟು ಅನುದಾನ ನೀಡುವ ಕಾರ್ಯವನ್ನು ಮಾಡಿದ್ದೇನೆ. ದೇವಸ್ಥಾನದಿಂದ ಜನರ ಹೊಟ್ಟೆ ತುಂಬುತ್ತದೆ ಎಂದು ನಾನು ಹೇಳುತ್ತಿಲ್ಲ. ಆದರೆ ಅವರ ಭಾವನೆಗಳಿಗೆ ನಾವು ಸ್ಪಂದಿಸಿದ್ದೇವೆ. ನಾನು ಇದೇ ಜಿಲ್ಲೆಯಲ್ಲಿ ಹುಟ್ಟಿದ್ದರಿಂದ ಇಲ್ಲಿಯ ಜನರ ಮನಸ್ಥಿತಿ, ಧಾರ್ಮಿಕ ನಂಬಿಕೆಗಳ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಇದರೊಂದಿಗೆ ಜಿಲ್ಲೆಯಲ್ಲಿದ್ದ ಬಡವರ ಶ್ರೇಯೋಭಿವೃದ್ಧಿಗೆ ಕೆಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಆ ಕಾರಣಕ್ಕಾಗಿಯೇ, ಜಿಲ್ಲೆ, ಊರಿಗೆ ಏನಾದರೂ ಮಾಡಬೇಕು ಎನಿಸಿತ್ತು.

ಈಗಲೂ ಜನರು ನನ್ನನ್ನು ನೋಡಿದರೆ ಭಾವುಕರಾಗುತ್ತಾರೆ. ಶ್ರೀನಿವಾಸಣ್ಣ ಅಂತಾನೇ ಕರೆಯೋದು, ಈ ಮೂಲಕ ಇಡೀ ಊರಿಗೆ ಅಣ್ಣನ ಸ್ಥಾನ ಕೊಟ್ಟಿದ್ದಾರೆ. ಆದ್ದರಿಂದ ವಯಸ್ಸು ಸಾಕಷ್ಟಾದರೂ ಕೈಲಾದ ಕೆಲಸ ಮಾಡುತ್ತಿದ್ದೇನೆ. ದೇವರು ಶಕ್ತಿ ಕೊಟ್ಟಿರುವಷ್ಟು ದಿನ ಈ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತೇನೆ. ಇದು ನನ್ನ ಹುಟ್ಟೂರು ಆಗಿರುವುದರಿಂದ ನರಸಿಂಹರಾಜಪುರಕ್ಕೆ ಕೆಲಸ ಮಾಡೋದು ನನ್ನ ಭಾಗ್ಯ. ಹೆಮ್ಮೆಯ ಪುತ್ರನೆಂದು ಕೇವಲ ಬೋರ್ಡ್ ಹಾಕಿಸಿಕೊಳ್ಳುವುದಲ್ಲ. ಅದಕ್ಕೆ ಸರಿಯಾಗಿ ನಾನು ಬಾಳಬೇಕು ಅಂತ ಹೇಳಿ ಕೆಲಸ ಮಾಡುತ್ತಿದ್ದೇನೆ. ಊರಿನ ಋಣ ತೀರಿಸುತ್ತೇನೆ ಎಂದು ಹೇಳಲು ಆಗುವುದಿಲ್ಲ. ಯಾರಾದರಾಗಲಿ ತಂದೆ ತಾಯಿ ಋಣ ಯಾವತ್ತೂ ತೀರಿಸಲಿಕ್ಕೆ ಸಾಧ್ಯನಾ? ಅದೇ ರೀತಿ ಹುಟ್ಟೂರಿನ ಋಣ ತೀರಿಸೋದು ಬಾರಿ ಕಷ್ಟ. ದೇವರು ಒಂದು ಅಧಿಕಾರ, ಅವಕಾಶ ಕೊಟ್ಟಾಗ ಕೈಲಾದಷ್ಟು ಮಾಡಬೇಕು ಅಂತ ನನಗೆ ತುಂಬಾ ಆಸೆ ಇದೆ.

● ಈ ಸಮಯದಲ್ಲಿ ಸಿದ್ದರಾಮಯ್ಯ ಅವರನ್ನು ಹೇಗೆ ನೆನಪಿಸಿಕೊಳ್ಳುತ್ತೀರಾ?

ಎನ್‌ಆರ್ ಪುರದ ಅಭಿವೃದ್ಧಿಗೆ ಸಿದ್ದರಾಮಯ್ಯ ಅವರ ಕೊಡುಗೆ ಅಪಾರ. ಅವರು ಅಧಿಕಾರಕ್ಕೆ ಬಂದ ಬಳಿಕ ಪಟ್ಟಣದ ರಸ್ತೆ ಅಗಲೀಕರಣಕ್ಕೆ 60 ಕೋಟಿ ರು. ನೀಡಿದ್ದಾರೆ. ಸುಮಾರು 130 ವರ್ಷದ ಹಿಂದೆ ಆಗಿದ್ದ ರಸ್ತೆ, ಅಗಲೀಕರಣ ಆಗಿರಲೆ ಇಲ್ಲ. ಆ ಕಾರಣಕ್ಕಾಗಿಯೇ ಸಿದ್ದರಾಮಯ್ಯನವರು 60 ಕೋಟಿ ನೀಡಿದ್ದಾರೆ. ಈ ಪ್ರಮಾಣದಲ್ಲಿ ಅನುದಾನ ನೀಡಿದ್ದಕ್ಕೆ ಸಚಿವ ಸಂಪುಟದಲ್ಲಿ ಕೆಲವರು ವಿರೋಧಿಸಿದ್ದರು. ಆದರೂ ಅನುಮೋದನೆ ನೀಡಿದರು. ಇದರೊಂದಿಗೆ ಈ ಸೇತುವೆಯ ನಿರ್ಮಾಣದಿಂದ ಮಕ್ಕಳು-ವಯಸ್ಸಾದವರು 30 ಕಿಮೀ ಸುತ್ತಬೇಕಿಲ್ಲ. ಕೇವಲ ಮೂರು ಕಿಮೀನಲ್ಲಿ ಜನರು ಪಟ್ಟಣಕ್ಕೆ ಬರಬಹುದಾಗಿದೆ. ಇಷ್ಟು ಸುಲಭ ಮಾಡಿದ್ದಕ್ಕೆ ಇಡೀ ಗ್ರಾಮದ ಜನರು 'ಏನಪ್ಪಾ ಪುಣ್ಯಾತ್ಮ ನೀನು ನಮಗೆ ಒಂದು ಅವಕಾಶ ಮಾಡಿಕೊಟ್ಟೆ' ಎಂದು ಸಂತೃಪ್ತಿಯ ಮಾತುಗಳನ್ನು ಆಡುತ್ತಿದ್ದಾರೆ. ಆ ಕಾರಣಕ್ಕೆ, ಈ ಉದ್ಘಾಟನಾ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಮಾಡಲು ತೀರ್ಮಾನಿಸಲಾಗಿದೆ.

"ನರಸಿಂಹರಾಜಪುರದ ಹಾಗೂ ಹೊನ್ನೇಕೂಡಿಗೆ ಜನಗಳ ಮಹತ್ತರ ಕನಸು ಈ ಸೇತುವೆ. ಗ್ರಾಮಸ್ಥರಿಗೆ ಪಟ್ಟಣಕ್ಕೆ ಬರಲು 23 ಕಿ.ಮೀ. ದೂರ ಸಾಗಬೇಕಾದ ಪರಿಸ್ಥಿತಿ ಇಂದು ಈ ಸೇತುವೆಯ ಕಾರಣದಿಂದ ಕೇವಲ ಮೂರು ಕಿ.ಮೀ. ನಲ್ಲಿ ತಲುಪಲು ಸಾಧ್ಯವಾಗಿದೆ. ಇದರಿಂದ ಶಾಲಾ ಮಕ್ಕಳಿಗೆ,ವೃದ್ಧರಿಗೆ ,ಆಸ್ಪತ್ರೆಗೆ ತೆರಳುವ ರೋಗಿಗಳಿಗೆ, ತುರ್ತು ಸಂದರ್ಭಗಳಿಗೆ ಅನುಕೂಲವಾಗಿದೆ. ಸೇತುವೆಯ ನಿರ್ಮಾಣಕ್ಕೆ ಕಾರಣಾದ ಎಂ.ಶ್ರೀನಿವಾಸ್ ಅವರಿಗೆ ಧನ್ಯವಾದ ಗಳು,2017ರಲ್ಲಿ ಶುರುವಾಗಿ ಇದೇ ಏ.30 ರಂದು ಈ ಸೇತುವೆ ಉದ್ಘಾಟನೆಯಾಗಲಿದೆ.ಸುಮಾರು 38.5 ಕೋಟಿ ಸೇತುವೆಯ ನಿರ್ಮಾಣಕ್ಕೆ ತಗುಲಿದ್ದು. 15 ವರ್ಷದ ಹೋರಾಟದ ಫಲ ಇಂದು ಸಾಕಾರ ಗೊಂಡಿರುವುದುವ ಎಲ್ಲರಿಗೂ ಸಂತಸ ತಂದಿದೆ.

-ವೆಂಕಟೇಶ್, ಸ್ಥಳೀಯರು

"ಹೊನ್ನೇಕೂಡಿಗೆ ಗ್ರಾಮದಿಂದ ಎನ್.ಆರ್.ಪುರಕ್ಕೆ ತಲುಪಲು ಈ ಸೇತುವೆಯು ತುಂಬಾ ಅನುಕೂಲವಾಗಲಿದೆ. ಈ ಹಿಂದೆ ಒಂದು ದಿನದ ಪ್ರಯಾಣ ಈಗ ಕೇವಲ ಹತ್ತು ನಿಮಿಷದ ಪ್ರಯಾಣವಾಗಿ ಮಾರ್ಪಟ್ಟಿದೆ. ಹೊನ್ನೇಕೂಡಿಗೆ ಗ್ರಾಮದ ಜತೆಗೆ ಸುಮಾರು 7 ಗ್ರಾಮಗಳಿಗೆ ಈ ಸೇತುವೆ ಸಹಕಾರಿಯಗಿದ್ದು, ಸುಮಾರು 2000 ಜನಗಳು ಇದರ ಅನುಕೂಲ ಪಡೆಯಲಿದ್ದಾರೆ.

-ದಾನಪ್ಪ, ಸ್ಥಳೀಯರು"

ಸೇತುವೆಯಿಂದ ಹೊನ್ನೆಕುಡಿಗೆ ಪಂಚಾಯಿತಿ ವ್ಯಾಪ್ತಿಗೆ ಅನುಕೂಲವಾಗಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದರ ಶಂಕು ಸ್ಥಾಪನೆ ನೆರವೇರಿಸಿದ್ದರು ಈಗ ಉದ್ಘಾಟನೆಯು ಸಹ ಅವರೇ ಮಾಡಲಿರುವುದು ಸಂತಸ ತಂದಿದೆ. ಅಲ್ಲದೇ ಹಳೇ ಚಿಕ್ಕಮಗಳೂರು ರಸ್ತೆ ಮುಳುಗಡೆಯಾಗಿದೆ, ಇದರ ಬದಲಿ ವ್ಯವಸ್ಥೆ ಮಾಡಬೇಕಿತ್ತು. ಈಗ ಈ ಸೇತುವೆಯಿಂದ ಸಂಪರ್ಕ ಸಹಕಾರಿಯಾಗಿದೆ ಅಂದೂರು, ಬಿಳಾಲ್ ಕೊಪ್ಪ ಹಾಗೂ ಹೊನ್ನೇಕೂಡಿಗೆ ಜನರಿಗೆ ಈ ಸೇತುವೆ ಸಂತಸ ತಂದಿದೆ. ಹಳೇ ಚಿಕ್ಕಮಗಳೂರಿಗೆ ಮತ್ತೊಂದು ಸೇತುವೆ ಆಗಬೇಕಾಗಿದೆ ಆ ಕಾರ್ಯವು ನೆರವೇರಿದರೆ ಲಕ್ಕೊಳ್ಳಿ ಮತ್ತು ತರಿಕೆರೆಗೆ ಅನುಕೂಲವಾಗಲಿದೆ. ಜತೆಗೆ ಜಿಲ್ಲಾ ಕೇಂದ್ರಕ್ಕೂ ಅನುಕೂಲವಾಗಿ ಆಡಳಿತ ಕಾರ್ಯ ಸರಾಗವಾಗಲಿದೆ.

-ಕಿರಣ, ಸ್ಥಳೀಯರು"

ಉದ್ಯೋಗ, ಕೈಗಾರಿಕೆ ಸ್ಥಾಪನೆ ನಿಮ್ಮ ಅಭಿಪ್ರಾಯ?

ಚಿಕ್ಕಮಗಳೂರು ಸೇರಿದಂತೆ ಮಲೆನಾಡಿನ ಭಾಗದಲ್ಲಿ ಕಾರ್ಮಿಕರ ಸಮಸ್ಯೆ ಭಾರಿಯಿದೆ. ಕೆಲಸ ಮಾಡಲು ಜನ ಸಿಗುತ್ತಿಲ್ಲ. ಅಡಿಕೆ ತೋಟಗಳು ಇರುವುದರಿಂದ ಎಲ್ಲರೂ ಅದರಲ್ಲಿಯೇ ತೊಡಗಿಸಿಕೊಂಡಿದ್ದಾರೆ. ಆದರೆ ಓದಿದ ಯುವಕರಿಗೆ ಕೆಲಸ ಇಲ್ಲ. ಅವರು ಬೆಂಗಳೂರಿಗೋ ಅಥವಾ ಮಂಗಳೂರಿಗೋ ಹೋಗ್ಬೇಕಾಗುತ್ತೆ. ಹಾಗಾಗಿ ಅಲ್ಲಿ ಒಂದು ಸಣ್ಣ ಕೈಗಾರಿಕಾ ಪ್ರದೇಶ ಮಾಡಬೇಕು ಅಂತ ಪ್ಲಾನ್ ಮಾಡಿದ್ದೀವಿ.